ಗುರುವಾರ, ಆಗಸ್ಟ್ 1, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 213 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ರೈಲ್ವೆ ಇಲಾಖೆಯಲ್ಲಿ 7,386 ಜೂನಿಯರ್ ಎಂಜಿನಿಯರ್ ಹುದ್ದೆಗಳ ಭರ್ತಿಗೆ ಅವಕಾಶ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,741	24,951	₹71,460 (ಬೆಂಗಳೂರು)	₹85,600 (ಬೆಂಗಳೂರು)	83.72

ವಯನಾಡ್ ಭೂಕುಸಿತ ದುರಂತ: ಮೃತರ ಸಂಖ್ಯೆ 200ಕ್ಕೆ ಏರಿಕೆ • ರಕ್ಷಣಾ ಕಾರ್ಯ ಚುರುಕು

ಕೊಚ್ಚಿಹೋದ ಬದುಕು, ಕನಸು ಸಮಾಧಿ

ಪ್ರಜಾವಾಣಿ ವಾರ್ತೆ/ಪಿಟಿಐ

ವಯನಾಡ್: ಪ್ರಕೃತಿ ಮುನಿಸಿನಿಂದಾಗಿ ನಿಂತ ನೆಲವೇ ಕುಸಿದ 'ದೇವರ ನಾಡಿ'ನಲ್ಲಿ ಈಗ ಚಿಂತೆಯೇ ಗುಡ್ಡವಾಗುತ್ತಿದೆ. ಎಲ್ಲವನ್ನೂ ಆಪೋಶನ ಪಡೆದು ತಣ್ಣಗೆ, ಆದರೆ ರಭಸದಿಂದ ಹರಿಯುತ್ತಿರುವ ನದಿ ದಂಡೆಯಗುಂಟ ಎತ್ತ ಹೆಜ್ಜೆ ಹಾಕಿದರೂ ನೋವಿನ ನೋಟಗಳೇ ಕಣ್ಣಿಗೆ ಬೀಳುತ್ತಿವೆ. ಬೆಟ್ಟದ ಜೀವಗಳ ಆಕ್ರಂದನದ ಸದ್ದು, ರಭಸದಿಂದ ಹರಿಯುತ್ತಿರುವ ನೀರಿನ ಭೋರ್ಗರೆತವನ್ನೂ ಮೀರಿ ಕೇಳಿಸುತ್ತಿದೆ.

ಇದು ಪ್ರಕೃತಿಯ ಸೊಬಗನ್ನೇ ಹೊದ್ದುಕೊಂಡಿದ್ದ ಕೇರಳದ ವಯನಾಡ್ ಜಿಲ್ಲೆಯ, ಈಗ ಬಹುತೇಕ ನಾಮಾವಶೇಷವೇ ಆಗಿರುವ ನಾಲ್ಕು ಗ್ರಾಮಗಳ ಸದ್ಯದ ಚಿತ್ರಣ. ಬಹು ಹಂತದಲ್ಲಿ ಕುಸಿದ ಗುಡ್ಡಗಳ ನಡುವೆ ಹಲವರ ಬದುಕು, ಅವರ ಕನಸುಗಳು ಸಮಾಧಿಯಾಗಿವೆ. ಉಳಿದದ್ದು ಬಯಲು ಮಾತ್ರ.

ದುರಂತ ಸಂಭವಿಸಿದ 36 ಗಂಟೆಗಳ ನಂತರವೂ ರಕ್ಷಣಾ ಕಾರ್ಯಾಚರಣೆ ಬಿರುಸಿನಿಂದ ಸಾಗುತ್ತಿದೆ. ಅಷ್ಟೇ ಬಿರುಸಾಗಿ ಹರಿಯುತ್ತಿರುವ ನದಿ, ರಕ್ಷಣಾ ಸಿಬ್ಬಂದಿಗೆ ಹೆಚ್ಚಿನ ಸವಾಲೊಡ್ಡುತ್ತಿದೆ. ರಕ್ಷಣೆಗೆ ಸೇನೆ, ನೌಕಾಪಡೆ ನೆರವು ಪಡೆಯಲಾಗಿದೆ. ಎನ್‌ಡಿಆರ್‌ಎಫ್ ತಂಡವೂ ಜೊತೆಗೂಡಿದೆ. ಸ್ಥಳೀಯರು ಸಹ ಕೈಜೋಡಿಸಿದ್ದಾರೆ.

12ನೇ ಪುಟ ನೋಡಿ



ಭೂಕುಸಿತ ಬಾಧಿತ ಚೂರಲ್‌ಮಲ ಪ್ರದೇಶದಲ್ಲಿ ಬುಧವಾರ ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು–ಪಿಟಿಐಚಿತ್ರ

5,500 ಬಾಧಿತ ಗ್ರಾಮಗಳಿಂದ ರಕ್ಷಿಸಲಾದ ಜನರ ಸಂಖ್ಯೆ

8,000 ನಿರಾಶ್ರಿತ ಶಿಬಿರಗಳಲ್ಲಿ ಇರುವ ಜನರ ಸಂಖ್ಯೆ

82 ನಿರಾಶ್ರಿತ ಶಿಬಿರಗಳ ಸಂಖ್ಯೆ

ಭೂಕುಸಿತ ಸಾಧ್ಯತೆ ಕುರಿತು ಕೇರಳ ಸರ್ಕಾರಕ್ಕೆ ಜುಲೈ 23ರ ನಂತರ ನಾಲ್ಕು ಬಾರಿ ಎಚ್ಚರಿಕೆ ಸಂದೇಶ ನೀಡಲಾಗಿತ್ತು. ಆದರೆ, ಸರ್ಕಾರ ಮುನ್ನೆಚ್ಚರಿಕೆ ವಹಿಸಲಿಲ್ಲ
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಐಎಂಡಿ ಜುಲೈ 30ರವರೆಗೆ ಆರೆಂಜ್ ಅಲರ್ಟ್ ನೀಡಿತ್ತು. ಎರಡು ದಿನದಲ್ಲಿ 115-204 ಮಿ.ಮೀ ಮಳೆ ಆಗಬಹುದು ಎಂದೂ ಅಂದಾಜಿಸಿತ್ತು. ವಾಸ್ತವವಾಗಿ 572 ಮಿ.ಮೀ. ಮಳೆ ಸುರಿದಿದೆ
ಪಿಣರಾಯಿ ವಿಜಯನ್, ಕೇರಳ ಸಿ.ಎಂ

ಇನ್ನಷ್ಟು ಸುದ್ದಿಗಳು 12,7

ಸಿ.ಎಂ.ಗೆ ರಾಜ್ಯಪಾಲರ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಬದಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅನುಮತಿ ಕೋರಿರುವ ಅರ್ಜಿಯಲ್ಲಿ ಆರೋಪಗಳ ಕುರಿತು ವಿವರಣೆ ನೀಡುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸಿದ್ದರಾಮಯ್ಯ ಅವರಿಗೆ ನೋಟಿಸ್ ನೀಡಿದ್ದಾರೆ.

ಜುಲೈ 27ರಂದೇ ನೋಟಿಸ್ ಕಳುಹಿಸಲಾಗಿದೆ. ಗುರುವಾರ ಬೆಳಿಗ್ಗೆ 11 ಗಂಟೆಗೆ ಸಚಿವ ಸಂಪುಟ ಸಭೆ ನಡೆಯಲಿದೆ. ನೋಟಿಸ್‌ಗೆ ವಿವರಣೆ ನೀಡುವ ಬಗ್ಗೆ ಹಾಗೂ ಸರ್ಕಾರದ ಮುಂದಿನ ಹೆಜ್ಜೆಯ ಬಗ್ಗೆ ಸಭೆಯಲ್ಲಿ ಚರ್ಚೆಯಾಗಲಿದೆ. ನೋಟಿಸ್‌ಗೆ ಸಂಬಂಧಿಸಿದ ಚರ್ಚೆಯ ಸಂದರ್ಭದಲ್ಲಿ ಸಿದ್ದರಾಮಯ್ಯ ಹೊರಗುಳಿಯಲಿದ್ದಾರೆ. ಹಿರಿಯ ಸಚಿವರೊಬ್ಬರು ಅಧ್ಯಕ್ಷತೆ ವಹಿಸಲಿದ್ದಾರೆ. ಬಳಿಕ, ಸರ್ಕಾರದ ತೀರ್ಮಾನ ಹೊರಬೀಳಲಿದೆ.

ಸಿದ್ದರಾಮಯ್ಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು (ಪ್ರಾಸಿಕ್ಯೂಷನ್) ಅನುಮತಿ ಕೋರಿ ವಕೀಲ ಟಿ.ಜೆ. ಅಬ್ರಹಾಂ ಅವರು 22 ಪುಟಗಳ ಅರ್ಜಿಯನ್ನು ಜುಲೈ 26ರಂದು ರಾಜ್ಯಪಾಲರಿಗೆ ಸಲ್ಲಿಸಿದ್ದರು.

'ಮುಖ್ಯಮಂತ್ರಿ ಅಧಿಕಾರ ದುರುಪಯೋಗ ಪಡಿಸಿಕೊಂಡು ಅಕ್ರಮ ನಡೆಸಿದ್ದಾರೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ₹55.80 ಕೋಟಿ ನಷ್ಟವಾಗಿದೆ. ಈ ಬಗ್ಗೆ ತನಿಖೆಗಾಗಿ ಅವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯ 7, 9, 11, 12 ಮತ್ತು 13ನೇ ಸೆಕ್ಷನ್‌ಗಳ ಅಡಿಯಲ್ಲಿ ಮತ್ತು ಭಾರತೀಯ ನ್ಯಾಯಸಂಹಿತೆಯ (ಬಿಎನ್‌ಎಸ್) ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸುವ ಅಗತ್ಯವಿದೆ' ಎಂದು ಅರ್ಜಿಯಲ್ಲಿ ಅಬ್ರಹಾಂ ವಿವರಿಸಿದ್ದರು.

6ನೇ ಪುಟ ನೋಡಿ



ಗೆಹಲೋತ್



ಸಿದ್ದರಾಮಯ್ಯ

ಸರ್ಕಾರದ ಮುಂದಿನ ನಡೆಯ ಕುತೂಹಲ

ರಾಜ್ಯಪಾಲರ ನೋಟಿಸ್‌ಗೆ ಸ್ಪಷ್ಟನೆ ನೀಡುವ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ಚರ್ಚೆ ನಡೆಯಲಿದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಹಸ್ತಕ್ಷೇಪ ಮಾಡಿಲ್ಲ. ಬಿಜೆಪಿ ಅಧಿಕಾರದಲ್ಲಿದ್ದಾಗ ನಡೆದ ಪ್ರಕರಣ ಇದಾಗಿದ್ದು, ಅಧಿಕಾರ ದುರುಪಯೋಗದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹೀಗಾಗಿ, ನೋಟಿಸ್ ವಾಪಸ್ ಪಡೆಯುವಂತೆ ರಾಜ್ಯಪಾಲರನ್ನು ಕೋರುವ ನಿರ್ಣಯ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಉತ್ತರ ನೀಡುವುದು ಅನಿವಾರ್ಯವಾದರೆ, ಅದರಲ್ಲಿ ಏನೆಲ್ಲ ವಿಷಯ ಪ್ರಸ್ತಾಪಿಸಬೇಕು; ಮುಖ್ಯಮಂತ್ರಿಯವರನ್ನು ಯಾವ ರೀತಿ ಸಮರ್ಥಿಸಿಕೊಳ್ಳಬೇಕು ಹಾಗೂ ಕಾನೂನಿನ ಆಯಾಮಗಳೇನು ಎಂಬ ಬಗ್ಗೆಯೂ ಚರ್ಚೆ ನಡೆಸಲಾಗುತ್ತದೆ. 'ವಿರೋಧ ಪಕ್ಷಗಳಾದ ಬಿಜೆಪಿ–ಜೆಡಿಎಸ್ ನಾಯಕರು ರಾಜಭವನವನ್ನು ಬಳಸಿ ಸರ್ಕಾರವನ್ನು ಉರುಳಿಸುವ ಷಡ್ಯಂತ್ರ ನಡೆಸುತ್ತಿದ್ದಾರೆ. ಅನೇಕ ರಾಜ್ಯಗಳಲ್ಲಿ, ಬಿಜೆಪಿ ಇಂತಹ ಮಾರ್ಗ ಹಿಡಿದಿದೆ. ನೋಟಿಸ್ ವಾಪಸ್‌ಗೆ ಮನವಿ ಮಾಡುವ ಬದಲು, ಅವರ ನಡೆಗೆ ಸಡ್ಡು ಹೊಡೆದು, ಕಾನೂನು ಹೋರಾಟ ನಡೆಸುವ ಬಗ್ಗೆಯೂ ಚರ್ಚೆ ನಡೆಯಲಿದೆ ಎಂದು ಮೂಲಗಳು ಹೇಳಿವೆ.

'ಯಾವ ಆಧಾರದಲ್ಲಿ ಅನುಮತಿ ಕೊಡುತ್ತಾರೆ?'

'ರಾಜ್ಯಪಾಲರು ಯಾವ ಆಧಾರದಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡುತ್ತಾರೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

'ಯಾವುದೇ ದಾಖಲೆಗಳಿಲ್ಲದೆ ಸ್ಪಷ್ಟನೆ ಕೊಡಿ ಎಂದು ರಾಜ್ಯಪಾಲರು ಈ ಹಿಂದೆ ಕೇಳಿರುವ ಉದಾಹರಣೆಗಳು ಇಲ್ಲ. ಬಲವಾದ ದಾಖಲೆಗಳಿದ್ದಾಗ ಕ್ರಮ ತೆಗೆದುಕೊಂಡಿದ್ದಾರೆ. ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಲು ಬಲವಾದ ಕಾರಣ ಇರಬೇಕಲ್ಲವೇ? ಈ ಪ್ರಕರಣದಲ್ಲಿ ಯಾವ ದಾಖಲೆಯಿದೆ ಹೇಳಿ' ಎಂದರು.


'ಮಹಾರಾಷ್ಟ್ರದಲ್ಲಿ ಬೆಳಿಗ್ಗೆ 5 ಗಂಟೆಗೆ ಪ್ರಮಾಣ ವಚನಕ್ಕೆ ರಾಜ್ಯಪಾಲರು ಅವಕಾಶ ಮಾಡಿಕೊಟ್ಟಿದ್ದರು. ಪಶ್ಚಿಮ ಬಂಗಾಳ ಸೇರಿದಂತೆ ಕೆಲವು ಕಡೆ ರಾಜ್ಯಪಾಲರಿಂದ ಸಾಂವಿಧಾನಿಕ ಸ್ಥಾನ ದುರ್ಬಳಕೆ ಆಗುತ್ತಿದೆ' ಎಂದು ಟೀಕಿಸಿದರು.

'ರಾಜ್ಯಪಾಲರ ಮೂಲಕ ಸರ್ಕಾರ ಉರುಳಿಸಲು ಯತ್ನ'

ಹಾಸನ: 'ಪ್ರತಿಪಕ್ಷಗಳು ರಾಜ್ಯಪಾಲರ ಕಚೇರಿ ದುರುಪಯೋಗ ಪಡಿಸಿಕೊಂಡು ರಾಜ್ಯ ಸರ್ಕಾರವನ್ನು ಬುಡಮೇಲು ಮಾಡಲು ಯತ್ನಿಸಿದರೆ, ನಾವು ಸುಪ್ರೀಂ ಕೋರ್ಟ್‌ನಲ್ಲಿ ಹೋರಾಟ ನಡೆಸಲಿದ್ದೇವೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಎಚ್ಚರಿಕೆ ನೀಡಿದರು.

'ರಾಜ್ಯಪಾಲರಿಗೆ ಅರ್ಜಿಗಳನ್ನು ಕೊಟ್ಟು, ಸರ್ಕಾರಕ್ಕೆ ಪತ್ರಗಳನ್ನು ಬರೆಸಿ, ಏನಾದರೂ ಮಾಡಿ ಕಾಂಗ್ರೆಸ್ ಸರ್ಕಾರವನ್ನು ಉರುಳಿಸಲು ಯತ್ನ ನಡೆಯುತ್ತಿದೆ. ಮುಖ್ಯಮಂತ್ರಿ ಅವರನ್ನು ವಿವಾದಗಳಲ್ಲಿ ಸಿಲುಕಿಸಿ, ಸರ್ಕಾರ ಬುಡಮೇಲು ಮಾಡಲು ವಿಪಕ್ಷಗಳು ಹೊರಟಿವೆ' ಎಂದರು. 'ರಾಜ್ಯಪಾಲರ ಕಚೇರಿ ದುರುಪಯೋಗ ಮಾಡಿ, ಸರ್ಕಾರದ ಮೇಲೆ ಪಿತೂರಿ ಮಾಡಿದರೆ ನಾವು ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ' ಎಂದರು.

ಚಿನಕುರುಳಿ
ಪ್ರಕಾಶ್ ಶೆಟ್ಟಿ



'ಗೌಡರ ಕುಟುಂಬಕ್ಕೆ ವಿಷ ಇಟ್ಟವನ ಜತೆ ವೇದಿಕೆ ಹಂಚಿಕೊಳ್ಳಲು ಸಾಧ್ಯವೇ?'

ಪ್ರಜಾವಾಣಿ ವಾರ್ತೆ

ನವದೆಹಲಿ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಪ್ರಕರಣದ ವಿರುದ್ಧ ಬೆಂಗಳೂರಿನಿಂದ ಮೈಸೂರಿಗೆ ಬಿಜೆಪಿ ಹಮ್ಮಿಕೊಂಡಿರುವ ಪಾದಯಾತ್ರೆಗೆ ಜೆಡಿಎಸ್ ನೈತಿಕ ಬೆಂಬಲವನ್ನೂ ನೀಡುವುದಿಲ್ಲ ಎಂದು ಕೇಂದ್ರ ಭಾರಿ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರಕಟಿಸಿದರು.

ಪಾದಯಾತ್ರೆ ಪೂರ್ವ ಸಿದ್ಧತಾ ಸಭೆಗೆ ಹಾಸನದ ಮಾಜಿ ಶಾಸಕ ಪ್ರೀತಂಗೌಡ ಅವರನ್ನು ಕರೆಸಿದ್ದ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಅವರು, 'ದೇವೇಗೌಡರ ಕುಟುಂಬಕ್ಕೆ ವಿಷ ಇಟ್ಟವನೊಂದಿಗೆ ವೇದಿಕೆ ಹಂಚಿಕೊಳ್ಳಲು ಸಾಧ್ಯವೇ' ಎಂದು ಕುಮಾರಸ್ವಾಮಿ ಅವರು ಪ್ರಶ್ನಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ದೇವೇಗೌಡರ ಕುಟುಂಬವನ್ನು ನಾಶ ಮಾಡಲು ಹೊರಟ ಪ್ರೀತಂಗೌಡನನ್ನು ಸಭೆಯಲ್ಲಿ ಕೂರಿಸಿಕೊಂಡು, ನನ್ನನ್ನು ಸಭೆಗೆ ಕರೆಯುತ್ತೀರಾ? ಚುನಾವಣಾ ಮೈತ್ರಿಯೇ ಬೇರೆ. ರಾಜಕೀಯವೇ ಬೇರೆ' ಎಂದು ಕಿಡಿಕಾರಿದರು.

10ನೇ ಪುಟ ನೋಡಿ



ಪಾದಯಾತ್ರೆಗೆ ಯಾವ ಕಾರಣಕ್ಕಾಗಿ ನಾವು ಬೆಂಬಲ ಕೊಡಬೇಕು ಎಂಬುದು ಪ್ರಶ್ನೆ. ಈ ಪ್ರೀತಂಗೌಡ ಯಾರು? ಹಾಸನದಲ್ಲಿ ಹಾದಿಬೀದಿಯಲ್ಲಿ ಪೆನ್ ಡ್ರೈವ್‌ಗಳನ್ನು ಹಂಚಿದವರು ಯಾರೆಂಬುದು ಗೊತ್ತಿದೆ. ದೇವೇಗೌಡರ ಕುಟುಂಬಕ್ಕೆ ವಿಷ ಇಟ್ಟವನು ಈ ವ್ಯಕ್ತಿ. ಅಂತಹ ವ್ಯಕ್ತಿಯ ಜತೆಯಲ್ಲಿ ನಾವು ವೇದಿಕೆ ಮೇಲೆ ಕೂರಲು ಸಾಧ್ಯವೇ ಇಲ್ಲ.
ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಭಾರಿ ಕೈಗಾರಿಕೆ ಹಾಗೂ ಉಕ್ಕು ಸಚಿವ

ವಾಹನ ಬಾಡಿಗೆ: ಶಾಸಕರ ವೇತನದಲ್ಲೇ ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರು ಮತ್ತು ಮಾಜಿ ಶಾಸಕರ ಬಳಕೆಗೆ ಬಾಡಿಗೆ ಆಧಾರದಲ್ಲಿ ಒದಗಿಸಲಾಗುವ ಶಾಸಕರ ಭವನದ ವಾಹನಗಳ ಬಾಡಿಗೆಯನ್ನು, ಶಾಸಕರ ವೇತನದಲ್ಲೇ ಕಡಿತ ಮಾಡಿಕೊಳ್ಳುವ ವ್ಯವಸ್ಥೆ ಜಾರಿಗೆ ತರಲಾಗಿದೆ.

ಈವರೆಗೆ ಇದ್ದ ವ್ಯವಸ್ಥೆಯಲ್ಲಿ ವಾಹನ ಬಳಕೆಯ ನಂತರ ನಗದು ರೂಪದಲ್ಲಿ ಬಾಡಿಗೆ ಪಾವತಿ ಮಾಡಲಾಗುತ್ತಿತ್ತು. ನೂತನ ವ್ಯವಸ್ಥೆಯು ಆಗಸ್ಟ್ 1ರಿಂದ ಜಾರಿಗೆ ಬರಲಿದೆ ಎಂದು ಕರ್ನಾಟಕ ವಿಧಾನಸಭೆ ಸಚಿವಾಲಯ ತಿಳಿಸಿದೆ.

ನೂತನ ವ್ಯವಸ್ಥೆ ಅಡಿ ವಾಹನದ ಬಳಕೆಯ ನಂತರ ಶಾಸಕರು ಮತ್ತು ಮಾಜಿ ಶಾಸಕರು ಟ್ರಿಪ್ ಶೀಟ್‌ನಲ್ಲಿ ಸಹಿ ಮಾಡಬೇಕು. ಅದರ ಆಧಾರದಲ್ಲಿ ಬಾಡಿಗೆ ಮೊತ್ತ, ನಿರೀಕ್ಷಣಾ ಶುಲ್ಕ ಮತ್ತು ಶೇ 18ರಷ್ಟು ಜಿಎಸ್‌ಟಿ ಒಳಗೊಂಡ ಬಿಲ್ ಅನ್ನು ಸಿದ್ಧಪಡಿಸಲಾಗುತ್ತದೆ. ಶಾಸಕರ ವೇತನ ಮತ್ತು ಮಾಜಿ ಶಾಸಕರ ನಿವೃತ್ತಿ ವೇತನದಲ್ಲಿ ಹಾಗೂ ರೈಲು ಭತ್ಯೆಯಲ್ಲಿ ಬಿಲ್ ಮೊತ್ತವನ್ನು ಕಡಿತ ಮಾಡಿಕೊಳ್ಳಲಾಗುತ್ತದೆ ಎಂದು ಸಚಿವಾಲಯ ಹೇಳಿದೆ.

ಸಂಕ್ಷಿಪ್ತ ಸುದ್ದಿ

ವಿದ್ಯುತ್ ತಂತಿ ತುಳಿದು ಕುರಿಗಾಹಿ ಸಾವು

ಬೆಂಗಳೂರು: ತಲಘಟ್ಟಪುರ ಪೊಲೀಸ್ ಠಾಣಾ ವ್ಯಾಪ್ತಿಯ ಚಿಕ್ಕೇಗೌಡನ ಪಾಳ್ಯದಲ್ಲಿ ಮಂಗಳವಾರ ರಾತ್ರಿ ವಿದ್ಯುತ್ ತಂತಿ ತುಳಿದು ಕುರಿಗಾಹಿ ಯೊಬ್ಬರು ಮೃತಪಟ್ಟಿದ್ದಾರೆ.

ಕುರಿ ಮೇಯಿಸಲು ಹೋಗಿದ್ದ ವೇಳೆ ವಿದ್ಯುತ್ ತಂತಿ ಪ್ರವಹಿಸಿ ಬನಶಂಕರಿ 6ನೇ ಹಂತದ ಚಿಕ್ಕೇಗೌಡನ ಪಾಳ್ಯದ ಶಿವಣ್ಣ (65) ಸಾವಿಗೀಡಾಗಿದ್ದಾರೆ. ವಿದ್ಯುತ್ ತಂತಿ ದುರಸ್ತಿ ಮಾಡುವಂತೆ ಎರಡು ತಿಂಗಳ ಹಿಂದೆ ಬೆಸ್ಕಾಂ ಅಧಿಕಾರಿಗಳಿಗೆ ಸ್ಥಳೀಯರು ಹಲವು ಬಾರಿ ದೂರು ನೀಡಿದ್ದರು. ಕಿಮ್ಸ್‌ನಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬದ ಸದಸ್ಯರಿಗೆ ಹಸ್ತಾಂತರಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಟಿಇಟಿ ಕೀ ಉತ್ತರ ಪ್ರಕಟ

ಬೆಂಗಳೂರು: ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯ (ಟಿಇಟಿ) ಕೀ ಉತ್ತರಗಳನ್ನು ಶಾಲಾ ಶಿಕ್ಷಣ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕ ಬುಧವಾರ ಪ್ರಕಟಿಸಿದೆ.

ಇದೇ ಜೂನ್ 30ರಂದು ಪರೀಕ್ಷೆ ನಡೆಸಲಾಗಿತ್ತು. ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್ www.schooleducation.kar.nic.in ನಲ್ಲಿ ವೀಕ್ಷಿಸಬಹುದು.

ಆರೋಪಿ ಕಾಲಿಗೆ ಗುಂಡೇಟು

ಆನೇಕಲ್: ಪುರಸಭೆ ಸದಸ್ಯ ರವಿ ಕೊಲೆ ಪ್ರಕರಣದ ಆರೋಪಿ ಕಾರ್ತಿಕ್ ಅಲಿಯಾಸ್ ಜಿಕೆ ಕಾಲಿಗೆ ಪೊಲೀಸರು ಬುಧವಾರ ಬೆಳಗ್ಗೆ ಮೈಸೂರಮ್ಮನ ದೊಡ್ಡಿಯ ಬಳಿ ಗುಂಡು ಹೊಡೆದಿದ್ದಾರೆ.

ಜುಲೈ 24ರಂದು ರವಿ ಕೊಲೆ ಯಾಗಿತ್ತು. ಇಬ್ಬರು ಆರೋಪಿಗಳು ಬೆಂಗಳೂರಿನ ನ್ಯಾಯಾಲಯಕ್ಕೆ ಶರಣಾಗಿದ್ದರು. ಪ್ರಕರಣದ ಮತ್ತೊಬ್ಬ ಆರೋಪಿ ಕಾರ್ತಿಕ್ ತಲೆಮರೆಸಿಕೊಂಡಿದ್ದ. ಆರೋಪಿ ಬಂಧನಕ್ಕಾಗಿ ಎರಡು ತಂಡ ರಚಿಸಿ ಪೊಲೀಸರು ಕಾರ್ಯಾಚರಣೆಗೆ ಇಳಿದಿದ್ದರು.

'ತಾಲ್ಲೂಕಿನ ಮೈಸೂರಮ್ಮನ ದೊಡ್ಡಿಯಲ್ಲಿ ಆರೋಪಿ ಅಡಗಿರುವ ಮಾಹಿತಿ ಮೇರೆಗೆ ಬುಧವಾರ ಬೆಳಗ್ಗೆ ದಾಳಿ ನಡೆಸಿದಾಗ ಆರೋಪಿ ತಪ್ಪಿಸಿಕೊಳ್ಳಲು ಯತ್ನಿಸಿದ. ಎರಡು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಲಾಯಿತು. ಆರೋಪಿಯನ್ನು ಹಿಡಿಯಲು ಹೋದ ಪೊಲೀಸ್ ಕಾನ್‌ಸ್ಟೆಬಲ್ ಸುರೇಶ್ ಮೇಲೆ ಕಾರ್ತಿಕ್ ಹಲ್ಲೆ ನಡೆಸಲು ಮುಂದಾದ' ಎಂದು ಪೊಲೀಸರು ತಿಳಿಸಿದ್ದಾರೆ.

ಆನೇಕಲ್ ಇನ್‌ಸ್ಪೆಕ್ಟರ್ ತಿಪ್ಪೇಸ್ವಾಮಿ ಅವರು ಆರೋಪಿಯ ಬಲಗಾಲಿಗೆ ಗುಂಡು ಹಾರಿಸಿದರು. ಬಳಿಕ ಆತನನ್ನು ವಶಕ್ಕೆ ಪಡೆದು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಯಿತು.

ಆರೋಪಿ ವಿರುದ್ಧ ಆನೇಕಲ್, ಅತ್ತಿಬೆಲೆ, ಕುಂಬಳಗೋಡು, ಬನ್ನೇರುಘಟ್ಟ ಸೇರಿದಂತೆ ವಿವಿಧ ಪೊಲೀಸ್ ಠಾಣೆಯಲ್ಲಿ 13 ಪ್ರಕರಣ ದಾಖಲಾಗಿವೆ. ಆತನ ವಿರುದ್ಧ ಈ ಎಲ್ಲಾ ಠಾಣೆಗಳಲ್ಲಿಯೂ ರೌಡಿಶೀಟರ್ ತೆರೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಎಎಸ್‌ಪಿ ನಾಗರಾಜು, ಡಿವೈಎಸ್‌ಪಿ ಮೋಹನ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿದ್ದರು.

PUBLIC NOTICE

Our clients are desirous of purchasing all that piece and parcel of conjoint lands situated at Sanne Amanikere Village and Upparahalli Village, both in Kasaba Hobli, Devanahalli Taluk, Bangalore Rural District, in all measuring about 23 Acres 38.75 Guntas, exclusive of 17 Guntas of kharab, which are more fully set out in Item No.1 to Item No.52 of Schedule - I below and sites totally measuring 18,300 Sq. feet morefully which are more fully set out in Item No.1 to Item No.8 of the Schedule – II below, Schedule – I and Schedule – II are hereinafter referred to as **"Schedule Property"**, from its present owners whose names are set out against the respective Items **("Owners")** detailed in the table herein below.

Any person or persons asserting any right, title, interest or claim in the Schedule Property or any part thereof, in any manner whatsoever or having any claim against the Schedule Property or the documents thereof or against the Owner or objecting to such transaction with our clients, should write to the undersigned within **fifteen days** (15 days) from the date of issuance of this notice with all documentary proof on which they are basing and asserting their rights with regard to Schedule Property or any part thereof, after which period our clients shall proceed on the basis that there are no claims of whatsoever nature with regard to the Schedule Property.

SCHEDULE-I

ITEM NOS.	NAME OF THE OWNERS	SY. NOS.	ACTUAL EXTENT		EXCLUDING KHARAB EXTENT IN GUNTAS	EAST	WEST	NORTH	SOUTH
			A	G					
SANNE AMANIKERE VILLAGE:									
1.	Narayanaswamy	45/1	0	6	0	Sy No 45/6 & 45/3	Private Land	Remaining portion of Sy No 45/1	Kaluve
2.	Ramaiah Lakshmaiah	45/4	0	7	0	Sy No. 46/4	Sy No. 45/6	Sy. No. 45	Kaluve
3.	Muninagarathnamma w/o. Jogappa	45/6	0	5.5	0	Sy. No. 45/4	Sy. No. 45/1	Sy. No. 45/3 & Sy. No. 45/12	Kaluve
4.	Lakshminarayan s/o. Ramaswamappa	46/4	0	31	2	Sy. No. 46/8 & 46/7	Sy. No. 45/4	Sy. No. 46/1 & 46/2	Kaluve
5.	M. Chethan s/o. Manjunath	46/7	0	8	0	Sy. No. 48/3	Sy. No. 46/4	Sy. No. 46/8	Kaluve
6.	Chandrasudarshan s/o. Selvamani	48/3	1	3	0	Sy. No. 49/1 & 49/2	Sy. No. 46/7, 46/8,46/9, 46/10, 46/11, 46/12 & 46/13.	Sy. No. 48/2	Kaluve
7.	Rukmini w/o late A. Raju	61/1	0	12	1	Survey No. 61/2	Survey No. 62/1	Survey No. 65/4	Survey Nos. 91/5 & 91/6
8.		61/2	0	11	0	Survey No. 60	Survey No. 61/1	Survey No. 65/5	Survey No. 91/6
9.		62/1	0	11	1	Sy No.61	SyNos.62/2 & 63	Sy No.65	Sy No.91
10.	A.C.Lokesh s/o Chikka Basappa Rukmini w/o late A.Raju	62/2	0	1	1	Sy No.62/1	Sy No.91	Sy No.63	Sy No.91
11.	A.C.Lokesh s/o Chikka Basappa	63/1	0	11.5	0.5	Sy No 63/2	Sy No. 64	Sy No. 65/2	Sy No. 91/2
12.	Rukmini w/o late A.Raju	63/2	0	11.5	0.5	Sy No. 62/1	Sy No. 63/1	Sy No. 65/9	Sy No. 91/10 & 62/2
13.	Rukmini w/o late A.Raju	64	0	18	1	Sy No.63/1	Sy No.69/1D & 69/1C	Sy No.65/1	Sy No.91/1
14.	Rukmini w/o late A.Raju	65/1	0	8	1	Sy No.65/2	Sy No.66	Kaluve	Sy Nos.64 & 63
15.		65/3	0	6	0	Sy No.65/4	Sy No.65/2	Kaluve	Sy Nos.63, 62 & 61
16.		65/4	0	6	0	Sy No.65/5	Sy No.65/3	Kaluve	Sy Nos.60 & 61
17.		65/5	0	6	0	Sy No.65/6	Sy No.65/4	Kaluve	Sy Nos.60 & 61
18.	A.C.Lokesh s/o Chikka Basappa	65/2	0	5.5	0	Sy No.65/9	Sy No.65/1	Kaluve	Sy Nos.63
19.	Rukmini w/o late A.Raju	65/9	0	5.5	1	Sy No.65/3	Sy No.65/2	Kaluve	Sy Nos.63
20.	A.C.Lokesh s/o Chikka Basappa Rukmini w/o late A.Raju	66	0	3	0	Sy No.65/1	Sy No.67	Kaluve	Sy No.69/1D
21.		67	0	1.5	0	Sy No. 66	Sy No.68/3	Kaluve	Sy No. 69/1D & 69/2
22.		68/2	0	18.5	1	Sy No.68/3	Sy No. 68/4 , 68/5 & 68/1.	Kaluve	Sy No.69/2
23.	D V Venkateshappa s/o late Venkataswamy	69/1A	0	27	0	Sy No. 69/1D & 69/1C	Nala	Sy No. 69/2	Sy No.69/1B
24.	Chandra- Muniyappa	69/1B	0	27	0	Sy No. 69/1C	Nala	Sy No. 69/1A	Sy No. 69/1C
25.	N Muniyappa s/o Narayanappa	69/1C	1	1	2	Sy No.64 & 91/1	Nala	Sy No. 69/1D & 69/1C	Sy No. 71/6, 71/7, 70/1, 70/3 & 70/4
26.	Uma w/o late C Murthy	69/2	1	0	1	Sy No. 69/1D & 69/1C	Nala	Sy No.68/1, 68/2, 68/3 & 67	Sy No. 69/1A
27.	Arun Kumar s/o late Puttarajappa	90/1	0	3	0	Sy No.90/3	Sy No.70	Sy No.91	Sy No.90/4
28.	A.C.Sathish s/o Chikka Basappa	90/2	0	25	0	Sy No.92 & 97	Sy Nos. 90/3 & 90/4	Survey No. 90/3	Survey No. 89
29.	M.P.Tanuja w/o M.R.Narayan	90/3	0	28	0	Sy No. 92	Sy No. 91	Sy No. 91	Sy Nos. 90/2 & 90/4
30.	Gopinath D.C.s/o late Chinnaswamappa	90/4	1	25	1	Sy No.90/2	Sy No.70	Sy Nos.90/1 & 90/3	Sy No.89
31.	G. V. Rekha Venugopal wife of G. N. Venugopal	91/1	0	7	0	Survey No. 91/2	Survey Nos. 69/1C & 70/4	Survey No. 64	Survey Nos. 70/4 & 91/3
32.	A C Lokesh son of Chikkabasappa	91/2	0	5	0	Survey No. 91/10	Survey No. 91/1	Survey Nos. 63/1 & 64	Survey No. 91/3
33.	Rukmini wife of late A Raju	91/10	0	5	0	Survey No. 91/5	Survey No. 91/2	Survey Nos. 63/1 & 63/2	Survey Nos. 91/3 & 91/4
34.	P. Arun Kumar son of late A Puttarajappa	91/3	0	4.5	0	Survey No.91/4	Survey Nos. 70/4 & 90/1	Survey Nos. 91/1,91/2, 91/10	Survey No. 90/1
35.	Chikkabasappa	91/4	0	3.25	0	Survey No. 91/11	Survey Nos. 91/3 & 91/10	Survey No. 91/10	Survey No. 90/1
36.	Rukmini wife of late A Raju	91/11	0	3.25	0	Survey No. 90/3	Survey No. 91/4	Survey No. 91/5	Survey No. 90/1
37.	Rukmini wife of late A Raju	91/5	0	4	0	Survey No. 91/6	Survey No. 91/10	Survey Nos. 62/1 & 61/1	Survey Nos. 90/3 & 91/11
38.	Rukmini wife of late A Raju	91/6	0	5.25	0	Survey No.91/7	Survey No. 91/5	Survey Nos. 61/1 & 61/2	Survey No. 90/3
39.	N Choodamani s/o R Rajagopal Rao	98	0	19	0	Railway Road	Sy Nos.99/3 & 89	Sy No.97/3	Survey No.100
40.		99/1	0	2	0	Survey No. 99/2	Survey No. 89	Survey No. 89	Village Boundary of Chikkanne
41.		99/2	1	8	0	Survey No. 99/3	Survey No. 99/1	Survey No. 89	SurveyNo.100 & Village Boundary of Chikkanne
42.		99/3	0	7	0	Survey No. 98	Survey No. 99/2	Survey Nos. 89 & 98	Survey No. 100
43.	Channamma w/o late Chikkananjundappa	70/1	0	22	0	Survey Nos. 70/2 & 70/3	Survey Nos. 71/6 & 71/5	Survey No. 69/1C	Survey Nos. 70/2 & 87/8
44.	Jayamma w/o late R. Srinivas	70/2	0	6	0	Survey No. 70/3	Survey No. 70/1	Survey No. 70/1	Survey No. 87/8
45.	R. Srinivas s/o Ramaiah	70/3	1	3	0.5	Survey No. 70/4	Survey Nos. 70/1 & 70/2	Survey No. 69/1C	Survey No. 89
46.	R. Munikrishnappa s/o late Ramaiah	70/4	1	3	0.5	Survey Nos. 90/1, 90/4, 91/1 & 91/3	Survey No. 70/3	Survey Nos. 69/1C & 91	Survey No. 89
47.	N Chudamani	89/1	04	28	2	Sy No.97/2, 97/3, 99/1 & Sy No.98	Sy No.87/8 & Sy No.88	Sy No.70/3, 70/4,Sy No.90/4, & Sy No.90/2	Sy No.99/1, 99/2, & 99/3 and Village boundary of Chikkanne
48.	Shashikanth Shambulal Jariwal	89/2							
49.	Shashikanth Shambulal	89/3							
50.	Munirathnamma Akamma w/o late Hanumappa	89/4							
51.	N Choodamani s/o late Rajgopal	89/5							
52.	Sathiprabhakar	49/1	1	11	0	Private Property	Sy Nos.48/3 & 48/2	Sy No.49/2	Nala

SCHEDULE-II

1.	Purva Blue Home Ventures Private Limited	5	2400	Road	Site No.12	Site No.4	Site No.6
2.	K.Lakappa & others	9	2400	Site No.8	Road	Site No.10	Road
3.	K.Lakappa & others	10	2400	Site No.7	Road	Site No.11	Site No.9
4.	B.Sathish Bhat	11	2400	Site No.6	Road	Site No.12	Site No.10
5.	Damodar Kasargod Pai	12	2400	Site No.5	Road	Site No.13	Site No.11
6.	Purva Blue Home Ventures Private Limited	24	2400	Road	Site No.25	Site No.23	Road
7.	K.N.Hemanth Kumar & ors	25	2400	Site No.24	Road	Site No.26	Road
8.	Purva Blue Home Ventures Private Limited	41	1500	Road	Road	Site No.40	Road

Date: August 1, 2024
Place: Bangalore

(R. Sunitha)
IndusLaw, #101, 1st Floor, Embassy Classic, #11, Vittal Mallya Road, Bangalore 560 001
Phone No.080 40726600.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-22/939/2024–25 ದಿನಾಂಕ: 30.07.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಕೈಗಾರಿಕ (ಹೈಟೆಕ್) ವಲಯದಿಂದ ವಸತಿ ಉಪಯೋಗ ಮತ್ತು ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	M/s. Manar Developers Pvt. Ltd., Rep. by its Managing Director Mr. Mohammed Mahaboob Khan Durrani and Others, No. 60, 31st Main, BTM 2nd Stage, Bengaluru-560076.	ಬೆಂಗಳೂರು ದಕ್ಷಿಣ	ಬೇಗೂರು	ಪರಪ್ಪನ ಅಗ್ರಹಾರ	90/1	0A-05G	ಕೈಗಾರಿಕ (ಹೈಟೆಕ್) ವಲಯ	ವಸತಿ
					90/2 ಪೈಕಿ	04A-30G		
					90/3 ಪೈಕಿ	0A-23.25G		
					90/4 ಪೈಕಿ	0A-12.50G		
					100/1 ಪೈಕಿ	0A-20G		
					100/2 ಪೈಕಿ	0A-20.25G		
					100/7 ಪೈಕಿ	0A-9.75G		
					Total	**3A-0.75G**		
					90/3 ಪೈಕಿ	0A-5.75G	ಕೈಗಾರಿಕ (ಹೈಟೆಕ್) ವಲಯ	ವಾಣಿಜ್ಯ
					90/4 ಪೈಕಿ	0A-2.5G		
					100/2 ಪೈಕಿ	0A-2.25G		
					100/7 ಪೈಕಿ	0A-1.75G		
					Total	**0A-12.25G**		
					ಒಟ್ಟು	**3A-13G**		

ಷರಾ: ಅರ್ಜಿದಾರರು ಭೂಉಪಯೋಗ ಬದಲಾವಣೆ ಮಾಡಿ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಪ್ರದೇಶದ ಸಾರ್ವಜನಿಕರಿಗೆ ಉದ್ಯೋಗ ಕಲ್ಪಿಸಿದಂತಾಗುತ್ತದೆ ಹಾಗೂ ಸುತ್ತಮುತ್ತಲಿನ ಪ್ರದೇಶವು ಅಭಿವೃದ್ಧಿ ಹೊಂದುವುದಲ್ಲದೆ ಇತರೆ ಸಾರ್ವಜನಿಕ ಸಣ್ಣ ಸಣ್ಣ ಉದ್ಯಮಗಳು ಅಭಿವೃದ್ಧಿ ಹೊಂದಲು ಸಹಾಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ಕೈಗಾರಿಕೆ (ಹೈಟೆಕ್) ವಲಯ' ದಿಂದ 'ವಸತಿ ವಲಯ ಹಾಗೂ ವಾಣಿಜ್ಯ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395
ನೋಂದಾಯಿತ ಕಚೇರಿ: 315 ವರ್ಕ್ ಅವೆನ್ಯೂ ಕ್ಯಾಂಪಸ್, ಅಸೆಂಟ್ ಬಿಲ್ಡಿಂಗ್, ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560095, ಕರ್ನಾಟಕ, ಭಾರತ.
E-MAIL: corporateaffairs@teamlease.com | WEBSITE: https://group.teamlease.com/

30ನೇ ಜೂನ್ 2024ಕ್ಕೆ ಕೊನೆಯಾದ ತ್ರೈಮಾಸಿಕಕ್ಕೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕೆಗಳು ಕೋಟಿ ರೂಪಾಯಿಗಳಲ್ಲಿ)

ವಿವರಗಳು	ಏಕಿಕೃತ		ಕ್ರೋಢೀಕೃತ	
	30.06.2024ಕ್ಕೆ ಕೊನೆಯಾದ 3 ತಿಂಗಳಿಗೆ	ಹಿಂದಿನ ಅವಧಿಯ 3 ತಿಂಗಳಿಗೆ ಕೊನೆಯಾದ 30.06.2023ಕ್ಕೆ	30.06.2024ಕ್ಕೆ ಕೊನೆಯಾದ 3 ತಿಂಗಳಿಗೆ	ಹಿಂದಿನ ಅವಧಿಯ 3 ತಿಂಗಳಿಗೆ ಕೊನೆಯಾದ 30.06.2023ಕ್ಕೆ
	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
ಕಾರ್ಯಾಚರಣೆಗಳಿಂದ ಒಟ್ಟು ಆದಾಯ	2,400.03	1,971.99	2,593.93	2,185.64
ಸದರಿ ಅವಧಿಗೆ ನಿವ್ವಳ ಲಾಭ / (ನಷ್ಟ) (ತೆರಿಗೆಗೆ ಮುನ್ನ, ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು)	26.56	27.99	20.19	25.83
ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ ಅಥವಾ ಅಸಾಧಾರಣ ಐಟಂಗಳ ನಂತರ)	26.68	27.41	19.37	25.76
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)]	26.46	27.24	19.06	25.71
ಪೇಯ್ಡ್-ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	16.77	16.77	16.77	16.77
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)–ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಶೀಟ್ ಪ್ರಕಾರ	745.51	760.38	781.25	790.53
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕಿಕರಣಗೊಂಡಿಲ್ಲ)				
(ಎ) ಮೂಲ (ರೂ.)	15.91	16.12	12.40	15.53
(ಬಿ) ಡೈಲ್ಯೂಟೆಡ್ (ರೂ.)	15.91	16.12	12.40	15.53

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, 30ನೇ ಜೂನ್, 2024ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಅಪರಿಶೋಧಿತ ಏಕಿಕೃತ ಮತ್ತು ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (https://group.teamlease.com/) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ 30ನೇ ಜೂನ್, 2024ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಲಿಯು 31ನೇ ಜುಲೈ, 2024ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್‌ನ ನಿರ್ದೇಶಕ ಮಂಡಲಿಗಾಗಿ, ಮತ್ತು ಅದರ ಪರವಾಗಿ
ಸಹಿ/–
ಅಶೋಕ್ ಕುಮಾರ್ ನೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814

ದಿನಾಂಕ: 31ನೇ ಜುಲೈ, 2024
ಸ್ಥಳ: ಬೆಂಗಳೂರು

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿ ನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110.

ಸಂಖ್ಯೆ:ಬಿಐಎಪಿಎ/ಟಿಪಿ/ಎಂಐಎಸ್/ಅನಧಿಕೃತ /03/2020–21/24–25/953 ದಿನಾಂಕ: 31.07.2024

ಸಾರ್ವಜನಿಕ ಪ್ರಕಟಣೆ

ವಿಷಯ: ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಅನಧಿಕೃತ ಅಭಿವೃದ್ಧಿಗಳನ್ನು ತಡೆಯುವ ಕುರಿತು.

****

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾಕಾಯ್ದೆ, 1961 ರ ಕಲಂ 4–ಎ(1) ರನ್ವಯ ಸರ್ಕಾರದ ಆದೇಶ ಸಂ. ಹೆಚ್‌ಯುಡಿ 142 ಎಂಎನ್‌ಎಲ್ 95 ದಿನಾಂಕ : 12/01/1996 ರಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಸಿ) ರನ್ವಯ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಯುಡಿ 142 ಎಂಎನ್‌ಎಲ್ 95 ದಿನಾಂಕ : 12/01/1996 ರಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ಅದರಂತೆ, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಲ್ಲಿ ದೇವನಹಳ್ಳಿ ತಾಲ್ಲೂಕಿನ, ಕಸಬಾ, ವಿಜಯಪುರ, ಕುಂದಾಣ ಮತ್ತು ಚನ್ನರಾಯಪಟ್ಟಣ ಹೋಬಳಿಗಳ ಒಟ್ಟು 188 ಗ್ರಾಮಗಳು ಮತ್ತು ಯಲಹಂಕ ತಾಲ್ಲೂಕು, ಜಾಲ ಹೋಬಳಿಯ 35 ಗ್ರಾಮಗಳು ಸೇರಿ ಪ್ರಸ್ತುತ ಈ ಪ್ರಾಧಿಕಾರವು ಒಟ್ಟು 223 ಗ್ರಾಮಗಳನ್ನು ಒಳಗೊಂಡಿದ್ದು, 430.70 ಚ.ಕಿ.ಮೀ ವಿಸ್ತೀರ್ಣದ ವ್ಯಾಪ್ತಿಯ ಪ್ರದೇಶವನ್ನು ಹೊಂದಿರುತ್ತದೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 157 ಬಿಎಂಆರ್ 2005, ಬೆಂಗಳೂರು, ದಿನಾಂಕ: 27/01/2009 ಹಾಗೂ ತಿದ್ದುಪಡಿ ಆದೇಶ ದಿನಾಂಕ: 29/01/2009 ರಲ್ಲಿ ಮಹಾಯೋಜನೆ–2021 (ಅಂತಿಮ) ಅನ್ನು ಅನುಮೋದಿಸಲಾಗಿದ್ದು, ಸದರಿ ಮಹಾಯೋಜನೆಯಂತೆ ಭೂ ಉಪಯೋಗಗಳು ಹಾಗೂ ವಲಯ ನಿಯಮಾವಳಿಗಳು ಚಾಲ್ತಿಯಲ್ಲಿರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಅನುಸಾರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕೈಗೊಳ್ಳಬೇಕಾಗಿದ್ದಲ್ಲಿ ಕೆ.ಟಿ.ಸಿ.ಪಿ ಕಾಯ್ದೆ 1961 ರಡಿಯಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸಿರುವ ಬಡಾವಣೆಗಳಲ್ಲಿ ಸಾರ್ವಜನಿಕರು ನಿವೇಶನ ಖರೀದಿಸುವ ಮೊದಲು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಿಂದ ಕೆ.ಟಿ.ಸಿ.ಪಿ ಕಾಯ್ದೆಯಡಿ ಬಡಾವಣೆ ನಕ್ಷೆಗೆ ಅನುಮೋದನೆ ಪಡೆದಿರುವ ಹಾಗೂ ನಿವೇಶನಗಳನ್ನು ನೋಂದಣಿಗೆ ಬಿಡುಗಡೆ ಆಗಿರುವ ಮತ್ತು ವಸತಿ ಸಮುಚ್ಚಯ/ ವಾಣಿಜ್ಯ ಸಮುಚ್ಚಯ/ ಕೈಗಾರಿಕಾ / ವೇರ್‌ಹೌಸ್ ಕಟ್ಟಡಗಳಿಗೆ ನಕ್ಷೆ ಅನುಮೋದನೆ ಪಡೆದಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರ ಖರೀದಿಸಲು ತಿಳಿಸಲಾಗಿದೆ.

ಈ ಕಛೇರಿಯಿಂದ ಅನುಮೋದನೆ ಪಡೆಯದೇ ಅನಧಿಕೃತವಾಗಿ ನಿರ್ಮಿಸಿರುವ ವಿನ್ಯಾಸ / ಬಡಾವಣೆಗಳಲ್ಲಿನ ನಿವೇಶನ ಮತ್ತು ವಸತಿ ಸಮುಚ್ಚಯ/ ವಾಣಿಜ್ಯ ಸಮುಚ್ಚಯ/ ಕೈಗಾರಿಕಾ /ವೇರ್‌ಹೌಸ್ ಕಟ್ಟಡಗಳನ್ನು ಖರೀದಿಸಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಅನಧಿಕೃತ ವಸತಿ ವಿನ್ಯಾಸ / ಬಡಾವಣೆಗಳಲ್ಲಿ ಖರೀದಿಸಿದಂತಹ ನಿವೇಶನಗಳಿಗೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ವತಿಯಿಂದ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಅನುಮೋದನೆ / ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ನೀಡಲಾಗುವುದಿಲ್ಲ ಹಾಗೂ ಕಟ್ಟಡ ನಿರ್ಮಾಣ ಇತ್ಯಾದಿಗಳಿಗೆ ಸರ್ಕಾರದ ವತಿಯಿಂದ ದೊರೆಯಬಹುದಾದ ಸೌಲಭ್ಯಗಳು ಲಭ್ಯವಾಗುವುದಿಲ್ಲ. ಅಲ್ಲದೆ, ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಬಡಾವಣೆಗಳಲ್ಲಿ ಎಲ್ಲಾ ರೀತಿಯ ಮೂಲ ಸೌಲಭ್ಯಗಳನ್ನು ಅಭಿವೃದ್ಧಿದಾರರೇ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಒದಗಿಸಬೇಕಾಗಿರುತ್ತದೆ ಹಾಗೂ ಸದರಿ ಮೂಲ ಸೌಲಭ್ಯಗಳನ್ನು ಕಾಲಕಾಲಕ್ಕೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತದೆ ಎಂಬ ಮಾಹಿತಿಯನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಾಧಿಕಾರವು ತರಬಯಸುತ್ತದೆ ಹಾಗೂ ಅನಧಿಕೃತ ಬಡಾವಣೆಗಳಲ್ಲಿ ನಿರ್ಮಿಸಲಾದ ಬಡಾವಣೆಯಲ್ಲಿನ ನಿವೇಶನಗಳನ್ನು ಮತ್ತು ಅನಧಿಕೃತವಾಗಿ ನಿರ್ಮಿಸಲಾದ ವಸತಿ ಸಮುಚ್ಚಯ/ ವಾಣಿಜ್ಯ ಸಮುಚ್ಚಯ/ ಕೈಗಾರಿಕಾ ನಿವೇಶನಗಳಲ್ಲಿ ಕಟ್ಟಲಾದ ಕಟ್ಟಡಗಳನ್ನು ಖರೀದಿಸಬಾರದು ಮತ್ತು ಭೋಗ್ಯ / ಬಾಡಿಗೆ ಇತ್ಯಾದಿಗಳ ಮೂಲಕ ಸ್ವಾಧೀನಕ್ಕೆ ಪಡೆಯಬಾರದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಿದೆ. ಒಂದು ವೇಳೆ ಸಾರ್ವಜನಿಕರು ಖರೀದಿಸಿ ಮೋಸ ಹೋದಲ್ಲಿ ಇದರಿಂದ ಉಂಟಾಗುವ ನಷ್ಟ / ತೊಂದರೆಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಲ್ಲವೆಂದು ಸ್ಪಷ್ಟವಾಗಿ ತಿಳಿಯಪಡಿಸಲಾಗಿದೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಭೂ ಮಾಲೀಕರು / ಅಭಿವೃದ್ಧಿದಾರರು ಕೆ.ಟಿ.ಸಿ.ಪಿ ಕಾಯ್ದೆ, 1961 ಕಲಂ 17 ರಡಿಯಲ್ಲಿ ಈ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದೇ ಬಡಾವಣೆಯನ್ನು ಅನಧಿಕೃತವಾಗಿ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು ಕಂಡುಬಂದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಡಿಯಲ್ಲಿ ವಿನ್ಯಾಸದ ಮಾಲೀಕರು/ ಅಭಿವೃದ್ಧಿದಾರರು/ ಜಿ.ಪಿ.ಎ. ದಾರರು / ಜಮೀನಿನ ಮಾಲೀಕರ ಮೇಲೆ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳುವಳಿಕೆ ನೀಡಲಾಗಿದೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ

ಸಹಿ/– ಅಧ್ಯಕ್ಷರು,
ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ವಾಸಾಸಂಇ/ವಾ.ಪ್ರ./1195/2024–25

ನೈಋತ್ಯ ರೈಲ್ವೆ

ಇ–ಪ್ರೊಕ್ಯೂರ್‌ಮೆಂಟ್ (ಐಆರ್‌ಇಪಿಎಸ್) ಟೆಂಡರು ಸೂಚನೆ ಸಂ. H-GS-UBL-05-2024-25, ದಿನಾಂಕ: 26.07.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ–ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ	ಸಲ್ಲಿಸಲು ಕೊನೆಯ ದಿನಾಂಕ & ಸಮಯ
1	**ಉಪ–ಕಾಮಗಾರಿ–1:** ಹುಬ್ಬಳ್ಳಿ ವಿಭಾಗದಲ್ಲಿ 1) ಭಾಣಾಪುರ – ಕೊಪ್ಪಳದ ನಡುವೆ ಕಿಮೀ. 108/300–400 ರಲ್ಲಿ ಎಲ್‌ಸಿ ಸಂ. 59, ಹೊಸಪೇಟೆ – ವ್ಯಾಸನಕೇರಿ ನಡುವೆ ಕಿಮೀ. 1/900–2/000 ರಲ್ಲಿ ಎಲ್‌ಸಿ ಸಂ. 5, ಬಳ್ಳಾರಿ–ಓಬಳಾಪುರಂ ನಡುವೆ ಕಿಮೀ. 3/200–300 ರಲ್ಲಿ ಎಲ್‌ಸಿ ಸಂ. 3 ರಲ್ಲಿ 80,000 ಕ್ಕಿಂತಲೂ ಹೆಚ್ಚು ಟಿವಿಯು ಗಳಿರುವ ಕಡೆಗಳಲ್ಲಿ ಮಿಡ್–ಸೆಕ್ಷನ್‌ನ ಎಲ್‌ಸಿ ಗೇಟ್‌ಗಳ ಇಂಟರ್‌ಲಾಕಿಂಗ್ ವ್ಯವಸ್ಥೆ. **ಉಪ–ಕಾಮಗಾರಿ–2:** ಹುಬ್ಬಳ್ಳಿ ವಿಭಾಗದಲ್ಲಿ (13 ಎಲ್‌ಸಿ ಗೇಟ್‌ಗಳು) ಟ್ರಾಫಿಕ್ ಇಂಟರ್‌ಲಾಕಿಂಗ್ ಆದ ಎಲ್‌ಸಿ ಗೇಟ್‌ಗಳಲ್ಲಿ ಮೆಕ್ಯಾನಿಕಲ್ ಆಗಿ ಚಾಲನೆಯಲ್ಲಿರುವ ಲಿಫ್ಟಿಂಗ್ ಬ್ಯಾರಿಯರ್‌ಗಳನ್ನು ವಿದ್ಯುತ್ ಚಾಲಿತ ಲಿಫ್ಟಿಂಗ್ ಬ್ಯಾರಿಯರ್‌ಗಳನ್ನಾಗಿ ಪರಿವರ್ತನೆ ಮಾಡುವುದು. (ಸಂಯುಕ್ತ ಕಾಮಗಾರಿ)	ರೂ. 4,57,59,327	19.08.2024, 11:00 ಗಂಟೆಯವರೆಗೆ
2	ಹುಬ್ಬಳ್ಳಿ ವಿಭಾಗದಲ್ಲಿರುವ ಗತಿಶಕ್ತಿ ಘಟಕಕ್ಕೆ ಸಾಮಾನ್ಯ ಕನ್ಸಲ್‌ಟೆಂಟ್ (ಜಿಸಿ) ರ ನೇಮಕಾತಿಗಾಗಿ ಪ್ರಸ್ತಾವನೆಯ ಕೋರಿಕೆಯಾಗಿದೆ (ಆರ್‌ಎಫ್‌ಪಿ)	ರೂ. 2,89,69,461/-	02.09.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/312/AAF/PRB/SWR/2024-25 ಉಪ ಮುಖ್ಯ ಯೋಜನಾ ವ್ಯವಸ್ಥಾಪಕರು/ಎಸ್&ಟಿ/ಗತಿ ಶಕ್ತಿ/ಹುಬ್ಬಳ್ಳಿ

South Western Railway - SWR | SWRRLY | SWRRLY

Ministry of Culture Government of India

ಸಾಹಿತ್ಯ ಅಕಾಡೆಮಿ ಯುವ ಪುರಸ್ಕಾರ್–2025

ಸಾಹಿತ್ಯ ಅಕಾಡೆಮಿಯು ತಾನು ಅಂಗೀಕರಿಸಿದ 24 ಭಾರತೀಯ ಭಾಷೆಗಳಲ್ಲಿ ಪ್ರಧಾನ ಮಾಡುವ ಯುವ ಪುರಸ್ಕಾರ್–2025 ಪ್ರಶಸ್ತಿಗಾಗಿ ಆಸಕ್ತ ಪ್ರಕಾಶಕರು ಹಾಗೂ ಯುವ ಸಾಹಿತಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಈ ಪ್ರಶಸ್ತಿಯು ರೂ. 50,000/– ನಗದನ್ನು ಒಳಗೊಂಡಿರುತ್ತದೆ. 1 ಜನವರಿ 2025ಕ್ಕೆ 35 ವರ್ಷ ವಯಸ್ಸು ಮೀರದ ಯುವ ಸಾಹಿತಿಗಳು ತಮ್ಮ ಜನ್ಮ ದೃಢೀಕರಣ ಪತ್ರದ ಜೊತೆಗೆ ಪುಸ್ತಕಗಳನ್ನು ದಿನಾಂಕ: **31 ಆಗಸ್ಟ್, 2024 ರೊಳಗೆ ಸಲ್ಲಿಸಬೇಕಾಗಿ ಕೋರಿದೆ. ಜನ್ಮ ದೃಢೀಕರಣ ಪತ್ರವಿಲ್ಲದ ಪುಸ್ತಕಗಳನ್ನು ಪರಿಗಣಿಸಲಾಗುವುದಿಲ್ಲ.** ಈ ಪ್ರಶಸ್ತಿಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಾಹಿತ್ಯ ಅಕಾಡೆಮಿ ವೆಬ್‌ಸೈಟ್ **www.sahitya.akademi.gov.in** ನ್ನು ದಯವಿಟ್ಟು ವೀಕ್ಷಿಸಿ.

ಸಹಿ/– ಕಾರ್ಯದರ್ಶಿ,
ಸಾಹಿತ್ಯ ಅಕಾಡೆಮಿ, ನವದೆಹಲಿ

CBC 09104/12/0002/2425

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395
315 ವರ್ಕ್ ಅವೆನ್ಯೂ ಕ್ಯಾಂಪಸ್, ಅಸೆಂಟ್ ಬಿಲ್ಡಿಂಗ್, ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560095, ಕರ್ನಾಟಕ, ಭಾರತ.
ದೂರವಾಣಿ: + 91 80 6824 3333 / ಫ್ಯಾಕ್ಸ್: + 91 80 6824 3001
corporateaffairs@teamlease.com | https://group.teamlease.com

ವಿಡಿಯೋ ಕಾನ್ಫರೆನ್ಸಿಂಗ್ ಅಥವಾ ಇತರ ಶ್ರವಣ–ದೃಶ್ಯ ವಿಧಾನಗಳ ಮೂಲಕ ನಡೆಸಲಾಗುವ ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್‌ನ ಇಪ್ಪತ್ತನಾಲ್ಕನೇ (24ನೇ) ವಾರ್ಷಿಕ ಸರ್ವಸದಸ್ಯರ ಸಭೆಗೆ ಸಂಬಂಧಿಸಿದ ಮಾಹಿತಿ

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್ (ಟೀಮ್‌ಲೀಸ್/ ಕಂಪನಿ)ಯು ತನ್ನ ಎಜಿಎಮ್‌ನ ಸೂಚನೆಯಲ್ಲಿ ಹೇಳಿರುವಂತಹ ವ್ಯವಹಾರವನ್ನು ನಡೆಸುವ ಸಲುವಾಗಿ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹಾಗೂ ಸೆಕ್ಯೂರಿಟೀಸ್ ಎಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಹೊರಡಿಸಿರುವ, ಅನ್ವಯವಾಗುವ ಸುತ್ತೋಲೆಗಳ ಪ್ರಕಾರ ತನ್ನ ಇಪ್ಪತ್ತನಾಲ್ಕನೇ (24ನೇ) ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಶುಕ್ರವಾರ, ಸೆಪ್ಟೆಂಬರ್ 20, 2024ರಂದು ಭಾ.ಕಾ. ಮಧ್ಯಾಹ್ನ 03:00 ಗಂಟೆಗೆ ವಿಡಿಯೋ ಕಾನ್ಫರೆನ್ಸಿಂಗ್ (ವಿ.ಸಿ.) ಅಥವಾ ಇತರ ಶ್ರವಣ–ದೃಶ್ಯ ವಿಧಾನಗಳ (ಓ.ಎ.ವಿ.ಎಮ್.) ಮೂಲಕ ನಡೆಸಲು ಉದ್ದೇಶಿಸುತ್ತಿದೆ ಎಂದು ಈ ಮೂಲಕ ಎಲ್ಲ ಷೇರುದಾರರಿಗೂ ಸೂಚನೆ ನೀಡಲಾಗುತ್ತಿದೆ.

ಯಾರೆಲ್ಲ ಷೇರುದಾರರ ಇಮೇಲ್ ಐಡಿಗಳು ಕಂಪನಿಯೊಂದಿಗೆ / ನ್ಯಾಶನಲ್ ಸೆಕ್ಯೂರಿಟೀಸ್ ಡಿಪಾಸಿಟರೀಸ್ ಲಿಮಿಟೆಡ್ ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ ("ಡಿಪಾಸಿಟರಿಗಳು") ಗಳೊಂದಿಗೆ ನೋಂದಾಯಿತವಾಗಿವೆಯೋ ಅಂತಹವರಿಗೆ ಸದರಿ ಸುತ್ತೋಲೆಗಳ ನಿಬಂಧನೆಗಳ ಅನುಸಾರ, ಆರ್ಥಿಕ ವರ್ಷ 23–24 ಸಾಲಿನ ವಾರ್ಷಿಕ ವರದಿಯ ಜೊತೆಯಲ್ಲಿ ಕಂಪನಿಯ ಇಪ್ಪತ್ತನಾಲ್ಕನೇ (24ನೇ) ವಾರ್ಷಿಕ ಸರ್ವಸದಸ್ಯರ ಸಭೆಯ ನೊಟೀಸನ್ನು, ಕೇವಲ ಇಲೆಕ್ಟ್ರಾನಿಕ್ ವಿಧಾನದಲ್ಲಿ ಮಾತ್ರವೇ ಕಳುಹಿಸಲಾಗುವುದು. ಎಜಿಎಮ್ ನೊಟೀಸಿನ ಒಂದು ಪ್ರತಿ ಹಾಗೂ 2023–24 ಆರ್ಥಿಕ ವರ್ಷದ ವರದಿಯು ಕಂಪನಿಯ ವೆಬ್‌ಸೈಟಾದ https://group.teamlease.com ಹಾಗೂ ಸ್ಟಾಕ್ ಎಕ್ಸ್‌ಚೇಂಜುಗಳ ಎಂದರೆ ಅನುಕ್ರಮವಾಗಿ ಬಿಎಸ್‌ಇ ಲಿಮಿಟೆಡ್ ಹಾಗೂ ನ್ಯಾಶನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾದ ವೆಬ್‌ಸೈಟುಗಳಾದ www.bseindia ಮತ್ತು www.nseindia.com ಗಳಲ್ಲಿ ಮತ್ತು ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ (ಆರ್‌ಟಿಎ) ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ನ ವೆಬ್‌ಸೈಟಾದ https://ris.kfintech.com ದಲ್ಲಿ ಕೂಡ ಲಭ್ಯವಿರುತ್ತವೆ.

ಷೇರುದಾರರು ವಿ.ಸಿ./ಓ.ಎ.ವಿ.ಎಮ್ ಸೌಲಭ್ಯದ ಮೂಲಕವಷ್ಟೇ ಎಜಿಎಮ್‌ಗೆ ಹಾಜರಾಗಬಹುದು/ಭಾಗವಹಿಸಬಹುದು. ಕಂಪನಿಯ ಇಪ್ಪತ್ತನಾಲ್ಕನೆಯ (24ನೆಯ) ಎಜಿಎಮ್ ನೋಟೀಸಿನಲ್ಲಿ ವಿ.ಸಿ./ಓ.ಎ.ವಿ.ಎಮ್ ಸೌಲಭ್ಯದ ಮೂಲಕ ಎಜಿಎಮ್ ನಲ್ಲಿ ಹಾಜರಾಗುವುದಕ್ಕೆ ವಿವರವಾದ ಸೂಚನೆಗಳಿವೆ.

ಷೇರುದಾರರು ಈ ಕೆಳಗಿನ ಅಂಶಗಳನ್ನು ಗಮನಿಸಬೇಕೆಂದು ಕೋರುತ್ತೇವೆ:

1. ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯಲ್ಲಿ/ಡಿಪಾಸಿಟರಿಯಲ್ಲಿ ಇನ್ನೂ ನೋಂದಾಯಿಸಿರದ ಅಥವಾ ಅಪ್‌ಡೇಟ್ ಮಾಡಿರದ ಎಲ್ಲ ಷೇರುದಾರರೂ ಈ ಸಾರ್ವಜನಿಕ ಜಾಹೀರಾತಿನ ಮೂರು ದಿನಗಳ ಒಳಗಾಗಿ ನೋಂದಾಯಿಸಿಕೊಳ್ಳುವಂತೆ/ಅಪ್‌ಡೇಟ್ ಮಾಡುವಂತೆ ವಿನಂತಿ. ಇದರಿಂದ, ಷೇರುದಾರರಿಗೆ ಎಲ್ಲ ಅವಶ್ಯಕ ದಾಖಲೆಗಳನ್ನೂ ಇಮೇಲ್ ಮೂಲಕ ಕಳುಹಿಸಲು ಕಂಪನಿಗೆ ಸಾಧ್ಯವಾಗುತ್ತದೆ.

ಇಮೇಲ್ ವಿಳಾಸದ ನೋಂದಾವಣೆಯ ಪ್ರಕ್ರಿಯೆ ಈ ಕೆಳಗಿನಂತಿರುತ್ತದೆ:

ಎ. ಷೇರುಗಳು ಡಿಮ್ಯಾಟ್ ರೂಪದಲ್ಲಿದ್ದರೆ: ತಮ್ಮ ಇಮೇಲ್‌ಗಳನ್ನು ಇನ್ನೂ ನೋಂದಾಯಿಸಿಲ್ಲದ ಷೇರುದಾರರು ತಮ್ಮ ವಿವರಗಳನ್ನು ಡಿಪಾಸಿಟರಿ ಪಾರ್ಟಿಸಿಪೆಂಟರಿಗೆ ಸಲ್ಲಿಸುವ ಮೂಲಕ ನೋಂದಾಯಿಸಿಕೊಳ್ಳಬಹುದು.

ಬಿ. ಷೇರುಗಳು ಭೌತಿಕ ರೂಪದಲ್ಲಿದ್ದರೆ: ತಮ್ಮ ಇಮೇಲ್‌ಗಳನ್ನು ಇನ್ನೂ ನೋಂದಾಯಿಸಿಲ್ಲದ ಷೇರುದಾರರು ತಮ್ಮ ವಿವರಗಳನ್ನು ನಮ್ಮ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ (ಆರ್‌ಟಿಎ) ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ಗೆ einward.ris@kfintech.com ನಲ್ಲಿ ಸಲ್ಲಿಸುವ ಮೂಲಕ ನೋಂದಾಯಿಸಿಕೊಳ್ಳಬಹುದು.

2. ಪ್ಲಾಟ್‌ಫಾರ್ಮ್‌ನಲ್ಲಿನ ಮತದಾನದ ಪ್ರಕ್ರಿಯೆ ಹಾಗೂ ಮತದಾನಕ್ಕಾಗಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಎ.ಜಿ.ಎಮ್. ನೋಟೀಸಿನ ಜೊತೆಯಲ್ಲಿ ಇಮೇಲ್ ಮೂಲಕ ನೀಡಲಾಗುವುದು. ಇಮೇಲ್‌ನಲ್ಲಿ ನೀಡಲಾಗುವ ಸೂಚನೆಗಳನ್ನು ಅನುಸರಿಸಿ ಷೇರುದಾರರು ವಿ.ಸಿ. ಮೂಲಕ ಸಭೆಗೆ ಹಾಜರಾಗಬಹುದು ಮತ್ತು ಮತದಾನ ಮಾಡಬಹುದು.
3. ಸಭೆಗೆ ಸೇರಿಕೊಳ್ಳುವ ಸೌಲಭ್ಯವನ್ನು ನಿಗದಿತ ಸಮಯಕ್ಕೆ ಕನಿಷ್ಠ 15 ನಿಮಿಷ ಮುಂಚಿತವಾಗಿ ತೆರೆದಿಡಲಾಗುವುದು, ಮತ್ತು ನಿಗದಿತ ಸಮಯ ಮುಗಿದ ನಂತರ 15 ನಿಮಿಷಗಳು ಮುಗಿಯುವವರೆಗೂ ತೆರೆದೇ ಇರುತ್ತದೆ.
4. ವಿಸಿ/ಓಎವಿಎಂ ವಿಧಾನದಲ್ಲಿ ಎಜಿಎಂ ನಲ್ಲಿ ಹಾಜರಾಗುವ ಬಗ್ಗೆ ಏನಾದರೂ ಪ್ರಶ್ನೆಗಳಿದ್ದರೆ ಮತ್ತು/ಅಥವಾ ನೆರವು ಬೇಕಿದ್ದರೆ ಷೇರುದಾರರು https://evoting.kfintech.com ನಲ್ಲಿರುವ Help & Frequently Asked Questions (FAQs) ಮತ್ತು ಡೌನ್‌ಲೋಡ್ ಭಾಗದಲ್ಲಿರುವ ಯೂಸರ್ ಮ್ಯಾನ್ಯುಯಲ್ ನೋಡಬಹುದು ಅಥವಾ corporateaffairs@teamlease.com ನಲ್ಲಿ ಸಂಪರ್ಕಿಸಬಹುದು ಅಥವಾ ಇವರನ್ನು ಸಂಪರ್ಕಿಸಬಹುದು: ಮಿಸ್ ರಜಿತಾ ಚೊಲ್ಲೆಟ್ಟಿ / ಶ್ರೀ ಪ್ರೇಮಕುಮಾರ್ ನಾಯರ್ – ಕಾರ್ಪೊರೇಟ್ ರಿಜಿಸ್ಟ್ರಿ, ಕೆಫಿನ್‌ಟೆಕ್, ಸೆಲೆನಿಯಮ್ ಟವರ್ ಬಿ, ಪ್ಲಾಟ್ ನಂ. 31–32, ಗಚ್ಚಿಬೌಲಿ, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರಮಗುಡ, ಹೈದರಾಬಾದ್, ತೆಲಂಗಾಣ – 500 032 ಅಥವಾ ಇಮೇಲ್ ವಿಳಾಸ: einward.ris@kfintech.com ಗೆ ಬರೆಯಬಹುದು ಅಥವಾ ಕೆಫಿನ್‌ಟೆಕ್ ನ ಶುಲ್ಕರಹಿತ ಸಂಖ್ಯೆಗೆ ಕರೆ ಮಾಡಬಹುದು: 1–800–309–4001.
5. ಎಜಿಎಮ್‌ನ ಸೂಚನೆಯಲ್ಲಿ ಹೇಳಲಾಗಿರುವ ಎಲ್ಲ ನಿರ್ಣಯಗಳ ಮೇಲೆ ಎಲ್ಲ ಷೇರುದಾರರೂ ತಮ್ಮ ಮತಗಳನ್ನು ಇಲೆಕ್ಟ್ರಾನಿಕ್ ವಿಧಾನದಲ್ಲಿ ಹಾಕಲಾಗುವಂತೆ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಲು ಕಂಪನಿಯು ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ನ ಸೇವೆಯನ್ನು ಗೊತ್ತುಪಡಿಸಿದೆ. ಡಿಮ್ಯಾಟ್/ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿದ್ದು ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸಿಕೊಂಡಿರದ ಷೇರುದಾರರು ರಿಮೋಟ್ ಇ–ವೋಟಿಂಗ್‌ನ ಮೂಲಕ ಮತದಾನ ಮಾಡುವುದರ ಬಗ್ಗೆ ಎಜಿಎಮ್ ನಲ್ಲಿ ಸೂಚನೆಗಳನ್ನು ನೀಡಲಾಗಿದೆ, ಮತ್ತು ಸದರಿ ವಿವರಗಳು ಕಂಪನಿಯ ವೆಬ್‌ಸೈಟಾದ https://group.teamlease.com ಮತ್ತು ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ನ ವೆಬ್‌ಸೈಟಾದ https://ris.kfintech.com ಗಳಲ್ಲಿಯೂ ಲಭ್ಯವಿರುತ್ತವೆ.
6. ರಿಮೋಟ್ ಇ–ವೋಟಿಂಗ್ ಮಂಗಳವಾರ, ಸೆಪ್ಟೆಂಬರ್ 17, 2024 ಬೆಳಗ್ಗೆ 09.00 ಕ್ಕೆ (ಭಾ.ಕಾ) ಪ್ರಾರಂಭವಾಗಿ ಗುರುವಾರ, ಸೆಪ್ಟೆಂಬರ್ 19, 2024 ಸಂಜೆ 05.00 ಕ್ಕೆ (ಭಾ.ಕಾ.) ಮುಕ್ತಾಯಗೊಳ್ಳುತ್ತದೆ. ಅದರ ನಂತರ ಕೆಫಿನ್ ಟೆಕ್ನಾಲಜಿಸ್ ಲಿಮಿಟೆಡ್ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಸ್ಥಗಿತಗೊಳಿಸುತ್ತದೆ.

ಈ ಮೇಲಿನ ಮಾಹಿತಿಯನ್ನು ಎಮ್.ಸಿ.ಎ. ಹೊರಡಿಸಿರುವ ಸಂಬಂಧಿತ ಸುತ್ತೋಲೆಗಳ ಅನುಸಾರ ಕಂಪನಿಯ ಎಲ್ಲ ಸದಸ್ಯರ ಲಾಭಕ್ಕಾಗಿ ನೀಡಲಾಗುತ್ತಿದೆ.

ಈ ಮಾಹಿತಿಯು ಕಂಪನಿಯ ವೆಬ್‌ಸೈಟಾದ https://group.teamlease.com/investors/newspaper-publication/ ನಲ್ಲಿ ಕೂಡ ಲಭ್ಯವಿರುತ್ತದೆ.

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್
ಸಹಿ/–
ಅಲಕಾ ಚಂದ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್
(M. No F10911)

ದಿನಾಂಕ: ಜುಲೈ 31, 2024
ಸ್ಥಳ : ಬೆಂಗಳೂರು

ಒಟಿಎಸ್ ಯೋಜನೆ ಕೊನೆ ದಿನ ಹೆಚ್ಚಾದ ಸರ್ವರ್ ಸಮಸ್ಯೆ; ಅವಧಿ ವಿಸ್ತರಿಸಲು ಮತ್ತೆ ಮನವಿ

ಬಿಬಿಎಂಪಿ: ಆಸ್ತಿ ತೆರಿಗೆ ಪಾವತಿಗೆ ಸಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆ ಪಡೆಯಲು ಕಡೆ ದಿನವಾಗಿದ್ದ ಬುಧವಾರ, ಆಸ್ತಿ ತೆರಿಗೆ ಪಾವತಿ ಮಾಡಲು ನಾಗರಿಕರು ಸಾಲುಗಟ್ಟಿ ನಿಂತಿದ್ದರು. ಪಾಲಿಕೆ ಕಂದಾಯ ಕಚೇರಿಗಳಲ್ಲೂ ಸರ್ವರ್ ಸಮಸ್ಯೆಯಿಂದಾಗಿ ಹೆಚ್ಚಿನ ಸಮಯ ಕಾಯಬೇಕಾಯಿತು.

ಒಟಿಎಸ್ ಯೋಜನೆ ಅಂತ್ಯವಾಗುವುದರಿಂದ ಗುರುವಾರದಿಂದ (ಆಗಸ್ಟ್ 1) ಬಡ್ಡಿ ಹಾಗೂ ದಂಡವನ್ನು ಪಾವತಿಸಬೇಕಾಗುತ್ತದೆ. ಇವೆಲ್ಲವನ್ನೂ ಸೇರಿಸಿದರೆ, ಹಲವು ಆಸ್ತಿಗಳಿಗೆ ಮೂರು ಪಟ್ಟು ಹೆಚ್ಚಿನ ಆಸ್ತಿ ತೆರಿಗೆ ಕಟ್ಟಬೇಕಾಗುತ್ತದೆ. ಹೀಗಾಗಿ ಆಸ್ತಿ ಮಾಲೀಕರು ಬುಧವಾರ ಬೆಳಿಗ್ಗೆಯಿಂದಲೇ ಪಾಲಿಕೆ ಕಚೇರಿಗಳಿಗೆ ಬಂದಿದ್ದರು.

ಆನ್‌ಲೈನ್‌ನಲ್ಲೂ ಸಾಕಷ್ಟು ಜನರು ಪಾವತಿ ಮಾಡುತ್ತಿದ್ದರಿಂದ, ಸರ್ವರ್ ಆಗಾಗ್ಗೆ ಕೈಕೊಡುತ್ತಿತ್ತು. ಪಾಲಿಕೆ ಕಚೇರಿ ಸಿಬ್ಬಂದಿ ಹಲವು ಪ್ರಯತ್ನ ಮಾಡಿದರೂ, ಪ್ರಕ್ರಿಯೆ ನಿಧಾನಗತಿಯಲ್ಲಿರುತ್ತಿತ್ತು. ಲಾಗ್ ಇನ್ ಆಗಿರುವುದು ಅದಾಗಿಯೇ ಲಾಗ್‌ಔಟ್ ಆಗಿಬಿಡುತ್ತಿತ್ತು. ಪ್ರಕ್ರಿಯೆಯನ್ನು ಮತ್ತೆ ಮೊದಲಿನಿಂದ ಪ್ರಾರಂಭಿಸಬೇಕಾಗಿತ್ತು. ಇದರಿಂದ ಸಾಲಿನಲ್ಲಿ ಜನರ ಸಂಖ್ಯೆ ಹೆಚ್ಚಾಗುತ್ತಿತ್ತು.

ಬುಧವಾರ ರಾತ್ರಿ 9ರವರೆಗೆ ಪಾಲಿಕೆ ಕಚೇರಿಗಳು ತೆರೆದಿದ್ದು, ಆಸ್ತಿ ತೆರಿಗೆ ಪಾವತಿಗೆ ಅವಕಾಶ ಮಾಡಿಕೊಡಲಾಗಿತ್ತು. ರಾತ್ರಿ 8ರ ವೇಳೆಯಲ್ಲೂ ಸಾಲು ಉದ್ದವಾಗಿತ್ತು.



ಎಚ್‌ಬಿಆರ್ ಲೇಔಟ್ 2ನೇ ಬ್ಲಾಕ್‌ನಲ್ಲಿರುವ ಬಿಬಿಎಂಪಿ ಕಂದಾಯ ಕಚೇರಿಯಲ್ಲಿ ಬುಧವಾರ ರಾತ್ರಿ 9ರ ವೇಳೆಯಲ್ಲೂ ತೆರಿಗೆ ಪಾವತಿಗೆ ಕಾಯುತ್ತಿದ್ದ ನಾಗರಿಕರು

ಹಲವು ಕಡೆ ಪಾಲಿಕೆ ಸಿಬ್ಬಂದಿ ತುಸು ಹೆಚ್ಚಿನ ಅವಧಿಯೇ ಕೆಲಸ ಮಾಡಿ ನಾಗರಿಕರು ಆಸ್ತಿ ತೆರಿಗೆ ಪಾವತಿಸಲು ಅನುವು ಮಾಡಿಕೊಟ್ಟರು.

ಜುಲೈ 29ರ ಅಂತ್ಯಕ್ಕೆ 2.87 ಲಕ್ಷ ಆಸ್ತಿಗಳಿಂದ ಒಟ್ಟು ₹831 ಕೋಟಿ ಆಸ್ತಿ ತೆರಿಗೆ ಪಾವತಿಯಾಗಬೇಕಿತ್ತು. ಜುಲೈ 30 ಹಾಗೂ 31ರಂದು ಬಹಳಷ್ಟು ಸಂಖ್ಯೆಯಲ್ಲೇ ಆಸ್ತಿ ತೆರಿಗೆ ಪಾವತಿಯಾಗಿದೆ.

'ಸಾಕಷ್ಟು ಗೊಂದಲವಿದೆ. ಬೇಡಿಕೆ ಪತ್ರದಲ್ಲಿ ಹೆಚ್ಚಾಗಿ ನಮೂದಿಸಲಾಗಿದೆ. ಈ ಬಗ್ಗೆ ಮಾಹಿತಿ ಬೇಕಿತ್ತು. ಆದರೆ, ಇಂದೇ ಕೊನೆ ದಿನವಾಗಿರುವುದರಿಂದ ವಿವರಣೆ ಪಡೆಯಲು ಸಾಧ್ಯವಾಗುತ್ತಿಲ್ಲ. ಇನ್ನಷ್ಟು ದಿನ ಯೋಜನೆ ವಿಸ್ತರಿಸಬೇಕಿತ್ತು' ಎಂದು ಹಲವು ನಾಗರಿಕರು ಅಭಿಪ್ರಾಯಪಟ್ಟರು.

ಒಟಿಎಸ್ ವಿಸ್ತರಣೆ : ಸಚಿವ ಸಂಪುಟದಲ್ಲಿ ನಿರ್ಧಾರ?

'ಒಟಿಎಸ್ ಯೋಜನೆಯನ್ನು ಮತ್ತಷ್ಟು ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರ ಚಿಂತನೆ ನಡೆಸಿದ್ದು, ಈ ಬಗ್ಗೆ ಗುರುವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ' ಎಂದು ಮೂಲಗಳು ತಿಳಿಸಿವೆ.

ಒಟಿಎಸ್ ಯೋಜನೆ ಫೆಬ್ರುವರಿಯಿಂದಲೇ ಜಾರಿಯಲ್ಲಿತ್ತು. ಇದರ ಪ್ರಯೋಜನ ಹೆಚ್ಚಿನ ನಾಗರಿಕರು ಪಡೆದುಕೊಂಡಿದ್ದು, ಹೆಚ್ಚಿನ ಮೊತ್ತವೂ ಪಾವತಿಯಾಗಿತ್ತು. ಎಫ್‌ಕೆಸಿಸಿಐ ಸೇರಿದಂತೆ ಹಲವು ಸಂಸ್ಥೆ, ನಾಗರಿಕರು ಯೋಜನೆಯನ್ನು ವಿಸ್ತರಿಸಲು ಮನವಿ ಮಾಡಿದ್ದರು. ಆದ್ದರಿಂದ, ಇನ್ನಷ್ಟು ಸಮಯ ವಿಸ್ತರಿಸಿದರೆ ಎಲ್ಲರಿಗೂ ಅನುಕೂಲವಾಗುವ ಕಾರಣದಿಂದ ಆ ಬಗ್ಗೆ ಸಚಿವ ಸಂಪುಟದಲ್ಲಿ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂಬ ಮಾಹಿತಿ ಲಭ್ಯವಾಗಿದೆ.

ಸಚಿವ ಜಾರ್ಜ್ ಜೊತೆ ಸಿ.ಎಂ ಎರಡು ತಾಸು ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ರಾತ್ರಿ ಇಂಧನ ಸಚಿವ ಕೆ.ಜೆ. ಜಾರ್ಜ್ ನಿವಾಸಕ್ಕೆ ತೆರಳಿ ಸುಮಾರು ಎರಡು ತಾಸು ಚರ್ಚೆ ನಡೆಸಿದ್ದಾರೆ.

ಮುಡಾ ನಿವೇಶನ ಹಂಚಿಕೆಯಲ್ಲಿ ಅಧಿಕಾರ ದುರ್ಬಳಕೆ ಆರೋಪದಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಕುರಿತಂತೆ ರಾಜ್ಯಪಾಲರು ವಿವರಣೆ ಕೇಳಿರುವ ವಿಚಾರ ಗುರುವಾರ ಮಧ್ಯಾಹ್ನ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಗೆ ಬರಲಿದೆ. ಹೀಗಾಗಿ, ಜಾರ್ಜ್ ಅವರ ನಿವಾಸದಲ್ಲಿ ಕಾನೂನು ತಜ್ಞರ ಜೊತೆ ಮುಖ್ಯಮಂತ್ರಿ ಸಮಾಲೋಚನೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ದೆಹಲಿಯಿಂದ ಬೆಂಗಳೂರಿಗೆ ಬಂದ ಕೆಲವೇ ಸಮಯದಲ್ಲಿ ಜಾರ್ಜ್ ಮನೆಗೆ ಮುಖ್ಯಮಂತ್ರಿ ತೆರಳಿದ್ದಾರೆ. ಈ ವೇಳೆ ವಸತಿ ಸಚಿವ ಜಮೀರ್ ಅಹ್ಮದ್ ಕೂಡಾ ಇದ್ದರು.

ಸಚಿವರ ಮೌಲ್ಯಮಾಪನ: ಕಾಂಗ್ರೆಸ್ ಹೈಕಮಾಂಡ್ ನಾಯಕರು ಇದೇ 4ರಂದು ರಾಜ್ಯದ ಸಚಿವರ ಕಾರ್ಯವೈಖರಿಯ ಮೌಲ್ಯಮಾಪನ ನಡೆಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸಚಿವ ಬಿ. ನಾಗೇಂದ್ರ ಅವರ ಬಂಧನವಾಗಿದೆ. ಈ ಹಿನ್ನೆಲೆಯಲ್ಲಿ ಸಚಿವರ ಮೌಲ್ಯಮಾಪನಕ್ಕೆ ವರಿಷ್ಠರು ಮುಂದಾಗಿದ್ದಾರೆ ಎನ್ನಲಾಗಿದೆ.

ಶನಿವಾರ (ಆಗಸ್ಟ್ 3) ಸಂಜೆ ನಗರಕ್ಕೆ ಬರಲಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಮರುದಿನ ಸಚಿವರ ಜೊತೆ ಚರ್ಚೆ ನಡೆಸಲಿದ್ದಾರೆ.

ಸರ್ಕಾರಕ್ಕೆ ವರ್ಷ ತುಂಬುತ್ತಿದ್ದಂತೆ ಭ್ರಷ್ಟಾಚಾರದ ಆರೋಪ ಕೇಳಿಬಂದಿದೆ. ಈ ಕಳಂಕದಿಂದ ಪಕ್ಷ ಮುಜುಗರ ಅನುಭವಿಸುವಂತಾಗಿದೆ. ಹೀಗಾಗಿ, ಮುಂದಿನ ದಿನಗಳಲ್ಲಿ ಸಚಿವರು ಯಾವ ರೀತಿ ಕಾರ್ಯನಿರ್ವಹಿಸಬೇಕು ಎಂದು ವರಿಷ್ಠರು ಸಲಹೆ, ಸೂಚನೆಗಳನ್ನು ನೀಡುವ ಜೊತೆಗೆ ಎಚ್ಚರಿಕೆ ಮಾತುಗಳನ್ನು ಹೇಳಲಿದ್ದಾರೆ ಎಂದು ಗೊತ್ತಾಗಿದೆ.

ಪ್ರತಿ ವರ್ಷ 20 ಸಾವಿರ ವಿದ್ಯಾರ್ಥಿಗಳಿಗೆ ಅವಕಾಶ, ₹12 ಕೋಟಿ ಬಿಡುಗಡೆ

ಸರ್ಕಾರಿ ಕಾಲೇಜಿನಲ್ಲೂ ನೀಟ್ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಉತ್ತೀರ್ಣರಾದ ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ಸಿಇಟಿ, ನೀಟ್ ಸೇರಿದಂತೆ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅಗತ್ಯವಾದ ತರಬೇತಿ ನೀಡಲು ರಾಜ್ಯ ಸರ್ಕಾರ ₹12 ಕೋಟಿ ಬಿಡುಗಡೆ ಮಾಡಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಖಾಸಗಿ ಶಾಲೆಗಳ ವಿದ್ಯಾರ್ಥಿಗಳು ನೀಟ್, ಜೆಇಇ ಮತ್ತಿತರ ಪ್ರವೇಶ ಪರೀಕ್ಷೆಗಳಿಗೆ ಪ್ರತ್ಯೇಕ ಶುಲ್ಕ ಪಾವತಿಸಿ ಕಾಲೇಜು ಹಂತದಲ್ಲೇ ತರಬೇತಿ ಪಡೆಯುತ್ತಾರೆ. ಇಲ್ಲವೇ ಖಾಸಗಿ ಕೋಚಿಂಗ್ ಸೆಂಟರ್‌ಗಳಲ್ಲಿ ಸಿದ್ಧತೆ ನಡೆಸುತ್ತಾರೆ. ಸರ್ಕಾರಿ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೂ ತರಬೇತಿ ದೊರಕಬೇಕು ಎನ್ನುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿ ವರ್ಷ ಕನಿಷ್ಠ 20 ಸಾವಿರ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಕುರಿತು ಬಜೆಟ್‌ನಲ್ಲೇ ಘೋಷಣೆ ಮಾಡಿದ್ದರು ಎಂದು ಮಾಹಿತಿ ನೀಡಿದರು.

ಸರ್ಕಾರ ಹಣ ಬಿಡುಗಡೆ ಮಾಡಿದೆ. ತರಬೇತಿ ಸಂಸ್ಥೆಗಳನ್ನು ಆಯ್ಕೆ ಮಾಡಲಾಗುತ್ತಿದೆ. ಹೆಚ್ಚಿನ ವಿದ್ಯಾರ್ಥಿಗಳಿಂದ ಬೇಡಿಕೆ ಬಂದರೆ ಕಾಲೇಜು ಹಂತಗಳಲ್ಲೇ ಕಿರು ಪರೀಕ್ಷೆ ನಡೆಸಿ, ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು ಎಂದರು.

ಶಾಲೆಗಳಲ್ಲಿ ಶಿಕ್ಷಕರ ಕೊರತೆ ನೀಗಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ವಿಳಂಬವಾಗಿದ್ದ 13,500 ಶಿಕ್ಷಕರ ನೇಮಕಾತಿ ಪೂರ್ಣಗೊಳಿಸಿ, ಅತಿಥಿ ಶಿಕ್ಷಕರನ್ನು ಬಳಸಿಕೊಳ್ಳಲಾಗಿದೆ. ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಬಿಜೆಪಿ ಸರ್ಕಾರ 950 ಕೋಟಿ ಘೋಷಣೆ ಮಾಡಿತ್ತು. ಆದರೆ, ನೀಡಿದ ಮೊತ್ತ ಕಡಿಮೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ 2023–24ರಲ್ಲಿ ₹109 ಕೋಟಿ, ಈ ಸಾಲಿನಲ್ಲಿ ₹291 ಕೋಟಿ ನೀಡಲಾಗಿದೆ. 8,311 ಕೊಠಡಿಗಳಲ್ಲಿ ನನೆಗುದಿಗೆ ಬಿದ್ದಿದ್ದ 316 ಕೊಠಡಿಗಳ ನಿರ್ಮಾಣಕ್ಕೆ ಆಯಾ ಶಾಸಕರಿಂದ ಕ್ರಿಯಾ ಯೋಜನೆ ತರಿಸಿಕೊಳ್ಳಲಾಗಿದೆ. ಮಳೆಯಿಂದ ಹಾನಿಯಾದ ಕಟ್ಟಡಗಳನ್ನು ತಕ್ಷಣ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಈ ವರ್ಷ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಪೂರ್ವ ಪ್ರಾಥಮಿಕ ಶಾಲೆಗಳನ್ನು ಆರಂಭಿಸಲಾಗುತ್ತಿದೆ ಎಂದರು.

ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮರು ಪ್ರವೇಶ

ಶಾಲೆ ತೊರೆಯುವ ಮಕ್ಕಳ ಸಂಖ್ಯೆ ತಗ್ಗಿಸಲು ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯು ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಶಾಲೆ ಹಾಗೂ ಕಾಲೇಜಿಗೆ ಮರು ದಾಖಲಾಗಲು ಅವಕಾಶ ಕಲ್ಪಿಸಲಾಗಿದೆ ಎಂದು ಮಧು ಬಂಗಾರಪ್ಪ ಹೇಳಿದರು.



ಎಸ್‌ಎಸ್‌ಎಲ್‌ಸಿಗೆ ಮರು ದಾಖಲಾಗುವ ಮಕ್ಕಳಿಗೆ ಇತರೆ ಮಕ್ಕಳಂತೆ ಸಮವಸ್ತ್ರ, ಪಠ್ಯಪುಸ್ತಕ, ಶೂ, ಸಾಕ್ಸ್, ಮಧ್ಯಾಹ್ನದ ಬಿಸಿಯೂಟದ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದರು.

ಪ್ರಸ್ತುತ ಪ್ರೌಢಶಾಲಾ ಮಕ್ಕಳ ದಾಖಲಾತಿ ಪ್ರಮಾಣ ಶೇ 95.38 ಇದೆ. 10ನೇ ತರಗತಿಯ ನಂತರ ಶೇ 79.79 ಹಾಗೂ ಉನ್ನತ ಶಿಕ್ಷಣದಲ್ಲಿ ಶೇ 56.6 ಇದೆ. ಕರ್ನಾಟಕದಲ್ಲಿ ಪ್ರತಿ ವರ್ಷ ಸುಮಾರು 8.21 ಲಕ್ಷ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಾರೆ. ಸುಮಾರು 90 ಸಾವಿರ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಾರೆ. ಮೂರೂ ಪರೀಕ್ಷೆಗಳಲ್ಲೂ ತೇರ್ಗಡೆಯಾಗದೆ ಒಂದು ವರ್ಷ ಮನೆಯಲ್ಲೇ ಉಳಿಯುವ ವಿದ್ಯಾರ್ಥಿಗಳಿಗೆ ಮರು ದಾಖಲು ಮಾಡಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ವಿವರ ನೀಡಿದರು.

5 ವರ್ಷಗಳ ಖಾಲಿ ಹುದ್ದೆ ಭರ್ತಿ

ಖಾಸಗಿ ಅನುದಾನಿತ ಶಾಲೆಗಳಲ್ಲಿ 2015ರಿಂದ 20ರವರೆಗಿನ ಅವಧಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಬೋಧಕ ಹಾಗೂ ಬೋಧಕೇತರ ಹುದ್ದೆಗಳ ಭರ್ತಿಗೆ ಅಗತ್ಯವಾದ ಅನುದಾನ ನೀಡಲಾಗುತ್ತಿದೆ ಎಂದು ಮಧು ಬಂಗಾರಪ್ಪ ಹೇಳಿದರು.

ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಅನುದಾನಿತ ಶಿಕ್ಷಣ ಸಂಸ್ಥೆಗಳನ್ನು ಸಂಪೂರ್ಣ ಕಡೆಗಣಿಸಿತು. ಬಹುತೇಕ ಶಾಲೆಗಳು ಕನ್ನಡ ಮಾಧ್ಯಮದ ಶಾಲೆಗಳಾಗಿದ್ದು, ಸರ್ಕಾರದ ನಿರ್ಧಾರದಿಂದ ಅವುಗಳ ಬಲವರ್ಧನೆಗೆ ಸಹಕಾರಿಯಾಗಲಿದೆ ಎಂದರು.

ಶ್ವಾಸಕೋಶ ಕ್ಯಾನ್ಸರ್ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧೂಮಪಾನ, ವಾಯು ಮಾಲಿನ್ಯದಿಂದ ಶ್ವಾಸಕೋಶ ಸಂಬಂಧಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ರಾಜ್ಯದಲ್ಲಿ ಕಳೆದ ವರ್ಷ ವರದಿಯಾದ ಒಟ್ಟು ಕ್ಯಾನ್ಸರ್ ಪ್ರಕರಣಗಳಲ್ಲಿ ಶೇ 5.9 ರಷ್ಟು ಪ್ರಕರಣಗಳು ಶ್ವಾಸಕೋಶ ಕ್ಯಾನ್ಸರ್' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ತಿಳಿಸಿದೆ.



ಆಗಸ್ಟ್ 1ರಂದು ವಿಶ್ವ ಶ್ವಾಸಕೋಶ ಕ್ಯಾನ್ಸರ್ ದಿನದ ಪ್ರಯುಕ್ತ ಸಂಸ್ಥೆಯು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ.

'ರಾಜ್ಯದಲ್ಲಿ 2023ರಲ್ಲಿ 88,873 ಕ್ಯಾನ್ಸರ್ ಪ್ರಕರಣಗಳು ವರದಿಯಾಗಿವೆ. ಈ ಪ್ರಕರಣಗಳಲ್ಲಿ 5,272 ಪ್ರಕರಣಗಳು ಶ್ವಾಸಕೋಶ ಕ್ಯಾನ್ಸರ್. ಬೆಂಗಳೂರಿನಲ್ಲಿ ಸರಾಸರಿ 900ಕ್ಕೂ ಅಧಿಕ ಶ್ವಾಸಕೋಶ ಕ್ಯಾನ್ಸರ್ ಪ್ರಕರಣಗಳು ಹೊಸದಾಗಿ ವರದಿಯಾಗುತ್ತಿವೆ. ಪುರುಷರಲ್ಲಿ ಶೇ 9.6 ರಷ್ಟು ಹಾಗೂ ಮಹಿಳೆಯರಲ್ಲಿ ಶೇ 3.2 ರಷ್ಟು ಪ್ರಕರಣಗಳು ಈ ಮಾದರಿಯ ಕ್ಯಾನ್ಸರ್ ಪ್ರಕರಣಗಳಾಗಿವೆ' ಎಂದು ಸಂಸ್ಥೆ ತಿಳಿಸಿದೆ.

'ಧೂಮಪಾನ ಮಾಡುವವರಲ್ಲಿ ಹೆಚ್ಚಾಗಿ ಶ್ವಾಸಕೋಶ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ವಾಯು ಮಾಲಿನ್ಯದಿಂದಲೂ ಈ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚಿದೆ. ಇದು ಬರದಂತೆ ತಡೆಯಲು ಮುಂಜಾಗ್ರತಾ ಕ್ರಮವಾಗಿ ತಂಬಾಕು ಉತ್ಪನಗಳ ಸೇವನೆ ಮತ್ತು ಧೂಮಪಾನ ತ್ಯಜಿಸಬೇಕು' ಎಂದು ಹೇಳಿದೆ.

'ಸಂಸ್ಥೆಯಲ್ಲಿ 2023ರಲ್ಲಿ 721 ಶ್ವಾಸಕೋಶ ಕ್ಯಾನ್ಸರ್ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ದೀರ್ಘಕಾಲದ ಕೆಮ್ಮು, ಕೆಮ್ಮಿನಲ್ಲಿ ರಕ್ತ ಅಥವಾ ಕಫ ಕಾಣಿಸಿಕೊಳ್ಳುವುದು, ಉಸಿರಾಟ ತೊಂದರೆ, ಎದೆನೋವು, ಧ್ವನಿಯಲ್ಲಿ ಒರಟುತನ ಹೆಚ್ಚುವುದು, ಬಳಲಿಕೆ ಮತ್ತು ನಿಶ್ಯಕ್ತಿ, ಹಸಿವು ಮತ್ತು ತೂಕ ನಷ್ಟ ಶ್ವಾಸಕೋಶ ಕ್ಯಾನ್ಸರ್‌ನ ಲಕ್ಷಣಗಳಾಗಿವೆ. ಇದರ ಬಗ್ಗೆ ಅರಿವು ಮೂಡಿಸಲು ಶಾಲಾ–ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ' ಎಂದು ತಿಳಿಸಿದೆ.

'ಕ್ಯಾನ್ಸರ್ ಹೊಸ ಪ್ರಕರಣಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆ. 2025ಕ್ಕೆ ರಾಜ್ಯದಲ್ಲಿ ಹೊಸ ಪ್ರಕರಣಗಳ ಸಂಖ್ಯೆ 91,622ಕ್ಕೆ ತಲುಪುವ ಸಂಭವವಿದೆ. ಬೆಂಗಳೂರಿನಲ್ಲಿ 20,098 ಪ್ರಕರಣಗಳು ವರದಿಯಾಗಬಹುದು' ಎಂದು ಸಂಸ್ಥೆ ಅಂದಾಜಿಸಿದೆ.

ಎಚ್‌ಎಸ್‌ಆರ್‌ಪಿ ನಕಲಿ ಪೋರ್ಟಲ್: ₹95 ಸಾವಿರ ವಂಚನೆ

ಬೆಂಗಳೂರು: ಎಚ್‌ಎಸ್‌ಆರ್‌ಪಿ ನೋಂದಣಿ ಸಂಖ್ಯೆ ಪಡೆಯಲು ನಕಲಿ ಪೋರ್ಟಲ್‌ನ ಲಿಂಕ್ ಕ್ಲಿಕ್ಕಿಸಿದ ವ್ಯಕ್ತಿಯೊಬ್ಬರು ₹95 ಸಾವಿರ ಕಳೆದುಕೊಂಡಿದ್ದಾರೆ.

ಈ ಕುರಿತು ಬಾಗಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. '42 ವರ್ಷದ ವ್ಯಕ್ತಿಯೊಬ್ಬರು ಜುಲೈ 9ರಂದು ಅಂತರ್ಜಾಲದ ಮೂಲಕ 'ಬುಕ್ ಮೈ ಎಚ್‌ಎಸ್‌ಆರ್‌ಪಿ.ನೆಟ್' ಎಂಬ ವೈಬ್‌ಸೈಟ್‌ನಲ್ಲಿ ಎಚ್‌ಎಸ್‌ಆರ್‌ಪಿ ಸಂಖ್ಯೆಯನ್ನು ಬುಕ್ ಮಾಡಿದ್ದರು. ವಿಳಾಸ ಸರಿ ಇಲ್ಲದ ಕಾರಣ ನೀವು ಬುಕ್ ಮಾಡಿರುವ ಎಚ್‌ಎಸ್‌ಆರ್‌ಪಿ ಸಂಖ್ಯೆ ಉಗ್ರಾಣದಲ್ಲಿ ಉಳಿದುಕೊಂಡಿದೆ. ನಿಮಗೆ ಕಳಿಸಿರುವ ಸಂದೇಶದಲ್ಲಿನ ಲಿಂಕ್ ಒತ್ತಿ ಪೂರ್ಣ ವಿಳಾಸ ಹಾಕುವಂತೆ ಅಪರಿಚಿತರು ಜುಲೈ16ರಂದು ಮೇಲ್ ಕಳುಹಿಸಿದ್ದರು' ಎಂದು ಎಫ್‌ಐಆರ್‌ನಲ್ಲಿ ತಿಳಿಸಿದ್ದಾರೆ. 'ದೂರುದಾರರು ಲಿಂಕ್ ಅನ್ನು ಒತ್ತಿ ತಮ್ಮ ವಿಳಾಸ ಭರ್ತಿ ಮಾಡಿದ್ದರು. ಜುಲೈ 21ರಂದು ದೂರುದಾರರ ಕ್ರೆಡಿಟ್ ಕಾರ್ಡ್‌ನಿಂದ ಒಮ್ಮೆ ₹54,773.97 ಹಾಗೂ ಇನ್ನೊಮ್ಮೆ ₹41,080.48ರಂತೆ ಆರೋಪಿಗಳು ಒಟ್ಟು ₹95,857 ವರ್ಗಾವಣೆ ಮಾಡಿಕೊಂಡು ವಂಚಿಸಿದ್ದಾರೆ. ಈ ಬಗ್ಗೆ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಕೆಎಫ್‌ಡಿಸಿ: ಲೋಕಾಯುಕ್ತ ತನಿಖೆ ಎದುರಿಸುತ್ತಿದರೂ 'ಪವರ್‌ಫುಲ್'

ವರ್ಗವಾದರೂ ಕುರ್ಚಿ ಬಿಡದ ಎಂ.ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ಪ್ರಕರಣದಲ್ಲಿ ಲೋಕಾಯುಕ್ತ ತನಿಖೆ ಎದುರಿಸುತ್ತಿರುವ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಎ.ರಾಧಾದೇವಿ ಅವರನ್ನು ಇದೇ ತಿಂಗಳು ಎರಡು ಬಾರಿ ವರ್ಗಾವಣೆ ಮಾಡಿದ್ದರೂ ಆ ಹುದ್ದೆ ಬಿಟ್ಟು ಕದಲದ ಅವರು, ಮೂರನೇ ಆದೇಶದ ಮೂಲಕ ಹೆಚ್ಚುವರಿಯಾಗಿ ಅದೇ ಹುದ್ದೆಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ರಾಧಾದೇವಿ ಅವರನ್ನು ಇದೇ 6ರಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯಿಂದ ಪಿಸಿಸಿಎಫ್ (ಇಡಬ್ಲ್ಯುಪಿಆರ್‌ಟಿಸಿ ಅಂಡ್ ಸಿಸಿ), ಬೆಂಗಳೂರು ಈ ಹುದ್ದೆಗೆ ವರ್ಗಾವಣೆ ಮಾಡಲಾಗಿತ್ತು. ಆದರೆ ಹುದ್ದೆ ಬಿಟ್ಟು ಕದಲಲಿಲ್ಲ.

ಆ ವರ್ಗಾವಣೆ ಆದೇಶವನ್ನು ರದ್ದುಪಡಿಸಿ ಇದೇ 25ರಂದು ಅವರನ್ನು ಪಿಸಿಸಿಎಫ್ ಆಗಿ ಕ್ಯಾಂಪಾ ವರ್ಗಾವಣೆ ಮಾಡಲಾಯಿತು. ಆಗಲೂ ಅವರು ಆ ಹುದ್ದೆ ಬಿಟ್ಟು ಹೋಗಲಿಲ್ಲ. ಬುಧವಾರ (ಜುಲೈ 31ಕ್ಕೆ) ಹೊಸ ಆದೇಶ ಪಡೆದ ಅವರು ಕ್ಯಾಂಪಾ ಜತೆಗೆ ಕೆಎಫ್‌ಡಿಸಿ ವ್ಯವಸ್ಥಾಪಕ ನಿರ್ದೇಶಕಿ ಹುದ್ದೆಯನ್ನೂ ಹೆಚ್ಚುವರಿಯಾಗಿ ಪಡೆದಿದ್ದಾರೆ.

ರಬ್ಬರ್ ವಿಭಾಗ ದಿವಾಳಿ ಅಂಚಿಗೆ: 'ನಿಗಮದ ರಬ್ಬರ್ ವಿಭಾಗವನ್ನು ರಾಧಾದೇವಿ ದಿವಾಳಿ ಅಂಚಿಗೆ ಒಯ್ದಿದ್ದಾರೆ. ಅಲ್ಲದೇ, ಟೆಂಡರ್, ರಬ್ಬರ್ ಉತ್ಪನ್ನಗಳ ಮಾರಾಟ, ಖರೀದಿ, ಕಾಮಗಾರಿಗಳಿಗೆ ವರದಿ ಸಲ್ಲಿಸುವುದು, ಶಿಫಾರಸು, ಮಂಜೂರಾತಿ ಈ ಎಲ್ಲ ಕಾರ್ಯವನ್ನು ಏಕಾಂಗಿಯಾಗಿಯೇ ನಿರ್ವಹಿಸುತ್ತಿದ್ದಾರೆ. ತಮ್ಮ ಕೆಳಹಂತದ ಅಧಿಕಾರಿಗಳಿಗೆ ಕಿರುಕುಳ ನೀಡಿ ಬಿಟ್ಟು ಹೋಗುವಂತೆ ಮಾಡುತ್ತಿದ್ದಾರೆ. ಎಲ್ಲ ಹಂತಗಳಲ್ಲೂ ಅವ್ಯವಹಾರ, ಕಳಪೆ ಕಾಮಗಾರಿ, ಅಧಿಕ ಬೆಲೆಗೆ ಕಳಪೆ ಗುಣಮಟ್ಟದ ವಸ್ತುಗಳ ಖರೀದಿ ಮಾಡಿದ್ದಾರೆ' ಎಂದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಮೂರು ಕಾರ್ಮಿಕ ಸಂಘಗಳ ಜಂಟಿ ಸಮಿತಿ ಅರಣ್ಯ ಸಚಿವ ಈಶ್ವರ ಖಂಡ್ರೆ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ದೂರು ನೀಡಿದೆ.

'ಕಳೆದ 2 ವರ್ಷಗಳಿಂದ ರಬ್ಬರ್ ಮರಗಳ ಬುಡಕ್ಕೆ ರಸಗೊಬ್ಬರ ಹಾಕದ ಕಾರಣ ನಿಗಮವೇ ನಿಗದಿಪಡಿಸಿದ್ದ ಇಳುವರಿಗಿಂತ 500 ಮೆಟ್ರಿಕ್ ಟನ್ ಇಳುವರಿ ಕಡಿಮೆ ಆಗಿದೆ. ಇದರ ಪರಿಣಾಮ ₹5 ಕೋಟಿಯಿಂದ ₹7 ಕೋಟಿಗಳಷ್ಟು ನಷ್ಟವಾಗಿದೆ. ಅಲ್ಲದೇ, ಮಿಲ್ಲಿಂಗ್ ಮಶೀನ್ ಮುಂತಾದ ಉಪಕರಣ ಗಳನ್ನು ಕಳೆದ ಒಂದು ವರ್ಷದಿಂದ ದುರಸ್ತಿ ಮಾಡಿರಲಿಲ್ಲ. ಇದರಿಂದ ಕಚ್ಚಾ ರಬ್ಬರನ್ನು ಸಂಸ್ಕರಣೆಗೆ ಒಳಪಡಿಸದೇ ಹಾಗೆಯೇ ಮಾರಾಟ ಮಾಡುತ್ತಿರುವುದರಿಂದಲೂ ನಷ್ಟ ಉಂಟಾಗುತ್ತಿದೆ' ಎಂದೂ ಆರೋಪಿಸಿದೆ.

'ಸಂಸ್ಕರಿಸಿದ ರಬ್ಬರ್ ಹಾಲು ಮತ್ತು ಕಚ್ಚಾ ಸ್ಕ್ರ್ಯಾಪ್ ರಬ್ಬರನ್ನು ಮಾರುಕಟ್ಟೆಯ ಆಯಾ ದಿನದ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ. ಇದರಿಂದ ನಿಗಮವು ತೀವ್ರ ನಷ್ಟದ ಹಾದಿಯಲ್ಲಿ ಸಾಗಲು ಕಾರಣವಾಗಿದೆ. ಉದಾಹರಣೆಗೆ ಮಾರುಕಟ್ಟೆ ದರ ₹120 ಇದ್ದರೂ ₹50ರಿಂದ ₹60 ನಂತೆ ನೂರಾರು ಟನ್ ಉತ್ಪನ್ನಗಳನ್ನು ಮಾರಾಟ ಮಾಡಲಾಗಿದ್ದು, ಇದರಿಂದ ನಿಗಮಕ್ಕೆ ಅಪಾರ ಪ್ರಮಾಣದಲ್ಲಿ ನಷ್ಟವಾಗಿದೆ' ಎಂದು ಹೇಳಿದೆ.

ಸುಳ್ಯದ ತೋಟ ತೊಳಿಲಾಲರ್ ಸಂಘ, ಜನರಲ್ ಎಂಪ್ಲಾಯೀಸ್ ಯೂನಿಯನ್ ಮತ್ತು ಕರ್ನಾಟಕ ಪ್ಲಾಂಟೇಷನ್ ಆ್ಯಂಡ್ ಇಂಡಸ್ಟ್ರಿಯಲ್ ವರ್ಕರ್ಸ್ ಟ್ರೇಡ್ ಯೂನಿಯನ್ 'ಕಾರ್ಮಿಕ ಸಂಘಗಳ ಜಂಟಿ ಸಮಿತಿ'ಯ ಅಂಗ ಸಂಘಟನೆಗಳಾಗಿವೆ. 'ಅಧಿಕಾರಿ ವಿರುದ್ಧ ಕ್ರಮ ತೆಗೆದುಕೊಳ್ಳದೇ ಇದ್ದರೆ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ' ಎಂದು 'ಕಾರ್ಮಿಕ ಸಂಘಗಳ ಜಂಟಿ ಸಮಿತಿ'ಯ ಪ್ರತಿನಿಧಿಗಳು 'ಪ್ರಜಾವಾಣಿ'ಗೆ ತಿಳಿಸಿದರು.

ಈ ಕುರಿತಂತೆ ಪ್ರತಿಕ್ರಿಯೆ ಪಡೆಯಲು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ದೂರವಾಣಿ ಕರೆ ಮಾಡಿದರೂ ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ಜೀವಭಯದಲ್ಲಿ ಕಾರ್ಮಿಕರು

ರಬ್ಬರ್ ತೋಟಗಳ ಕಾರ್ಮಿಕರ ವಾಸ್ತವ್ಯಕ್ಕೆ ಹಂಚಿಕೆಯಾದ ವಸತಿಗಳು ರಿಪೇರಿ ಮಾಡದ ಕಾರಣ ಛಾವಣಿ ಮತ್ತು ಗೋಡೆಗಳು ಕುಸಿಯುವ ಹಂತದಲ್ಲಿವೆ. ಕಾರ್ಮಿಕ ಕುಟುಂಬಗಳು ಜೀವಭಯದಲ್ಲೇ ಜೀವನ ನಡೆಸಬೇಕಾಗಿದೆ ಎಂದು ಸಮಿತಿ ಹೇಳಿದೆ.

ನಿಗಮದಲ್ಲಿ ₹100 ಕೋಟಿಗೂ ಅಧಿಕ ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿ ಇರಿಸಲಾಗಿದೆ. ಶೇ 20ರಷ್ಟು ಬೋನಸ್ ನೀಡುವಂತೆ ಕಾರ್ಮಿಕ ಸಂಘಗಳು ಕೋರಿಕೆ ಸಲ್ಲಿಸಲಾಗಿದೆ. ನಿಗಮವು ನಷ್ಟದಲ್ಲಿದೆ ಬೋನಸ್ ನೀಡಲು ಸಾಧ್ಯವಿಲ್ಲ ಎಂದು ವ್ಯವಸ್ಥಾಪಕ ನಿರ್ದೇಶಕಿ ಅರಣ್ಯ ಸಚಿವರ ಮೂಲಕ ವಿಧಾನಮಂಡಲದಲ್ಲಿ ತಪ್ಪು ಉತ್ತರ ಕೊಡಿಸಿದ್ದಾರೆ ಎಂದು ಸಮಿತಿ ದೂರಿದೆ.

ಅಂಗವೈಕಲ್ಯ: ಶೇ 40ಕ್ಕಿಂತ ಕಡಿಮೆಯಿದ್ದರೂ ಪ್ರಮಾಣ ಪತ್ರ

ಬೆಂಗಳೂರು: ಯಾವುದೇ ವ್ಯಕ್ತಿ ಶೇ 40ಕ್ಕಿಂತ ಕಡಿಮೆ ಅಂಗವಿಕಲತೆ ಹೊಂದಿದ್ದರೂ ಅವರಿಗೆ ಅಂಗವೈಕಲ್ಯ ಪ್ರಮಾಣ ಪತ್ರ ಹಾಗೂ ಯುಡಿಐಡಿ ಕಾರ್ಡ್ (ಅಂಗವಿಕಲರ ವಿಶಿಷ್ಟ ಗುರುತಿನ ಚೀಟಿ) ವಿತರಣೆ ಮಾಡಬಹುದು ಎಂದು ಆರೋಗ್ಯ ಇಲಾಖೆ ಸೂಚನೆ ನೀಡಿದೆ.

ಈ ಕುರಿತು ಸುತ್ತೋಲೆ ಹೊರಡಿಸಿರುವ ಇಲಾಖೆಯ ಆಯುಕ್ತ ಡಿ. ರಂದೀಪ್, 'ಅಧಿಸೂಚಿತ ವೈದ್ಯಕೀಯ ಅಧಿಕಾರಿಗಳು ಅಂಗವೈಕಲ್ಯ ಪ್ರಮಾಣ ಪತ್ರಗಳು ಹಾಗೂ ಯುಡಿಐಡಿ ಕಾರ್ಡ್‌ಗಳನ್ನು ಯುಡಿಐಡಿ ಪೋರ್ಟಲ್ ಮೂಲಕವೇ ನೀಡಬೇಕು' ಎಂದು ತಿಳಿಸಿದ್ದಾರೆ.

2016ರ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ ಪ್ರಕಾರ, ಯುಡಿಐಡಿ ಕಾರ್ಡ್ ನೀಡಲು ಶೇ 40ಕ್ಕಿಂತ ಕಡಿಮೆ ಅಂಗವಿಕಲತೆ ಇರಬಾರದೆಂಬ ಯಾವುದೇ ಷರತ್ತುಗಳಿಲ್ಲ. ಹಾಗಾಗಿ, ಶೇ 40ಕ್ಕಿಂತ ಕಡಿಮೆ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳಿಗೂ ಪ್ರಮಾಣ ಪತ್ರ ಹಾಗೂ ಯುಡಿಐಡಿ ಕಾರ್ಡ್‌ಗಳನ್ನು ನೀಡಬೇಕು ಎಂದು ಎಲ್ಲ ವೈದ್ಯಕೀಯ ಪ್ರಾಧಿಕಾರಗಳ ಅಸ್ಪತ್ರೆಗಳಿಗೆ ನಿರ್ದೇಶನ ನೀಡಲಾಗಿದೆ.

ಮಸೂದೆ ಜಾರಿಗೊಳಿಸುವಂತೆ ಸಾಹಿತಿಗಳು, ಕನ್ನಡ ಪರ ಹೋರಾಟಗಾರರ ಆಗ್ರಹ

'ಕನ್ನಡಿಗರಿಗೆ ಮೀಸಲಾತಿ: ವಿಶೇಷ ಅಧಿವೇಶನ ನಡೆಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ಮಸೂದೆಯನ್ನು ಸರ್ಕಾರ ತಾತ್ಕಾಲಿಕವಾಗಿ ತಡೆ ಹಿಡಿದಿರುವುದು ವಿಷಾದನೀಯ. ಕೂಡಲೇ ವಿಧಾನ ಮಂಡಲದ ವಿಶೇಷ ಅಧಿವೇಶನ ಕರೆದು, ಈ ಮಸೂದೆಯನ್ನು ಜಾರಿ ಮಾಡಬೇಕು' ಎಂದು ಸಾಹಿತಿಗಳು, ಕನ್ನಡ ಪರ ಹೋರಾಟಗಾರರು ಆಗ್ರಹಿಸಿದ್ದಾರೆ.

ಮೈಸೂರಿನ ಕನ್ನಡ ಕ್ರಿಯಾ ಸಮಿತಿ, ಇಲ್ಲಿನ ಕನ್ನಡ ಗೆಳೆಯರ ಬಳಗ ಹಾಗೂ ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡ ಸುದ್ದಿಗೋಷ್ಠಿಯಲ್ಲಿ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಮಸೂದೆ ಜಾರಿಗೆ ಒತ್ತಾಯಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಈ ಬಗ್ಗೆ ಚರ್ಚಿಸುವುದಾಗಿ ತಿಳಿಸಿದರು.



ಸಾಹಿತಿ ಹಂ.ಪ. ನಾಗರಾಜಯ್ಯ ಮಾತನಾಡಿ, 'ಬೇರೆಯವರಿಗೆ ಉದ್ಯೋಗ ನೀಡಬೇಡಿ ಎನ್ನುವುದು ನಮ್ಮ ಹೋರಾಟದ ಆಶಯವಲ್ಲ. ಮಸೂದೆಯಲ್ಲಿ 'ಕನ್ನಡ ನಾಡಿನಲ್ಲಿ ಹುಟ್ಟಿದ, 15 ವರ್ಷಗಳಿಗಿಂತ ಹೆಚ್ಚು ಕಾಲದಿಂದ ನೆಲೆಸಿರುವ, ಕನ್ನಡ ಓದಲು ಬರೆಯಲು ಬಲ್ಲ ವ್ಯಕ್ತಿ ಕನ್ನಡಿಗ' ಎಂದು ವಿವರಿಸಲಾಗಿದೆ. ಹೀಗಾಗಿ, ಈ ಮಸೂದೆ ಜಾರಿಯಿಂದ ಯಾರಿಗೂ ಅನ್ಯಾಯ ಆಗುವುದಿಲ್ಲ. ನಮ್ಮ ಅಸ್ಮಿತೆಯನ್ನು ಉಳಿಸುವ ಹೋರಾಟ ಇದಾಗಿದೆ' ಎಂದರು.

ಕವಿ ಎಲ್. ಹನುಮಂತಯ್ಯ ಮಾತನಾಡಿ, 'ಪ್ರಾದೇಶಿಕತೆ ಇಲ್ಲದೆಯೇ ಭಾರತೀಯತೆ ಮಾತನಾಡುವುದು ಸರಿಯಲ್ಲ. ಸರ್ಕಾರ ಕೂಡಲೇ ಮಸೂದೆಯನ್ನು ಜಾರಿಗೆ ತರಬೇಕು. ಇಲ್ಲಿನ ಉದ್ದಿಮೆದಾರರು ಬೆಂಬಲ ನೀಡಬೇಕು. ಒಂದು ವೇಳೆ ಅಪಸ್ವರ ಎತ್ತಿದರೆ ಅವರೊಂದಿಗೆ ಮಾತುಕತೆ ನಡೆಸಿ, ಮುಂದಿನ ಕ್ರಮವಹಿಸಬೇಕು' ಎಂದು ಆಗ್ರಹಿಸಿದರು.

ನ್ಯಾಯ ಸಿಗಬೇಕು: 'ಉದ್ದಿಮೆಗಳು ತಮ್ಮ ಶಕ್ತಿ ಬಳಸಿ ಮಸೂದೆ ಜಾರಿಗೆ ಅಡ್ಡಿಪಡಿಸಿವೆ. ಸರ್ಕಾರ ಉದ್ದಿಮೆದಾರರ ಲಾಬಿಗೆ ಮಣಿಯಬಾರದು. ಆಯಾ ರಾಜ್ಯದಲ್ಲಿ ಆಯಾ ಭಾಷಿಕರಿಗೆ ನ್ಯಾಯ ಸಿಗಬೇಕು. ಆಗ ದೇಶ ಸಂಮೃದ್ಧವಾಗುತ್ತದೆ. ಆದ್ದರಿಂದ ತಕ್ಷಣ ಅಧಿವೇಶನ ಕರೆಯಬೇಕು' ಎಂದು ಲೇಖಕಿ ಬಿ.ಟಿ. ಲಲಿತಾ ನಾಯಕ್ ಒತ್ತಾಯಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, 'ಉದ್ದಿಮೆಗಳಲ್ಲಿ ಸ್ಥಳೀಯರಿಗೆ ಪ್ರಾತಿನಿಧ್ಯ ನೀಡಬೇಕು. ಆಗ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ನೂರಕ್ಕೆ ನೂರರಷ್ಟು ಅಲ್ಲದಿದ್ದರೂ ಶೇ 75 ರಷ್ಟಾದರೂ ಕನ್ನಡಿಗರಿಗೆ ಮೀಸಲಾತಿ ನೀಡಬೇಕು. ಬಂಡವಾಳಶಾಹಿಗಳು ಹಾಗೂ ಕನ್ನಡ ವಿರೋಧಿಗಳ ಒತ್ತಡಕ್ಕೆ ಸರ್ಕಾರ ಮಣಿಯಬಾರದು' ಎಂದರು.

ಮೈಸೂರಿನ ಕನ್ನಡ ಕ್ರಿಯಾ ಸಮಿತಿಯ ಸ.ರ. ಸುದರ್ಶನ, 'ಶಿಕ್ಷಣ ಅಥವಾ ಉದ್ಯೋಗ ಸಂಬಂಧ ಪಾಶ್ಚಾತ್ಯ ದೇಶಗಳಿಗೆ ತೆರಳುವವರು ಗೇಟ್, ಟೊಫೆಲ್ ಎಂಬ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಇದನ್ನು ಒಪ್ಪಿಕೊಳ್ಳುವ ಉದ್ಯಮಿಗಳು, ಬುದ್ಧಿಜೀವಿಗಳು ಕನ್ನಡ ಪರೀಕ್ಷೆ ನಿರಾಕರಿಸುವುದು ಗುಲಾಮಿ ಮನೋಭಾವ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕಾನೂನಾತ್ಮಕ ವಿಷಯವಾಗಬೇಕು'

'ಮಸೂದೆಯನ್ನು ಮೋಹನದಾಸ್ ಪೈ ಅಂತಹವರು ವಿರೋಧಿಸಿರುವುದು ಖಂಡನೀಯ. ಕನ್ನಡಿಗರಲ್ಲಿ ಕೌಶಲ ಇಲ್ಲವೆ? ಇದು ಭಾವನಾತ್ಮಕ ವಿಷಯ ಆಗಿರದೆ, ಕಾನೂನಾತ್ಮಕ ವಿಷಯ ಆಗಬೇಕು. ಸಾಂವಿಧಾನಿಕವಾಗಿ ಭಾಷಾವಾರು ರಾಜ್ಯಗಳನ್ನು ರಚಿಸಿದ ಮೇಲೆ, ಅದಕ್ಕೆ ಸಲ್ಲಬೇಕಾದ ಸವಲತ್ತುಗಳನ್ನು ಒದಗಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಟಿ.ಎಸ್. ನಾಗಾಭರಣ ಆಗ್ರಹಿಸಿದರು. ಕನ್ನಡ ಪರ ಹೋರಾಟಗಾರರಾದ ರಾ.ನಂ. ಚಂದ್ರಶೇಖರ, ವ.ಚ. ಚನ್ನೇಗೌಡ, 'ಭಾಷಾವಾರು ಪ್ರಾಂತ್ಯ ರಚನೆಯಾದ ಮೇಲೆ ಸಂವಿಧಾನದಲ್ಲಿ ಬದಲಾವಣೆಯಾಗಿಲ್ಲ. ಇದರಿಂದ ಸಮಸ್ಯೆ ಎದುರಾಗುತ್ತಿದ್ದು, ಸಂವಿಧಾನದಲ್ಲಿ ತಿದ್ದುಪಡಿ ತರಬೇಕು. ಆಗ ಶಿಕ್ಷಣ ಮತ್ತು ಉದ್ಯೋಗದಲ್ಲಿ ನ್ಯಾಯ ಸಿಗುತ್ತದೆ' ಎಂದರು.



ಓಕಳಿಪುರ ಬಳಿಯ ರೈಲ್ವೆ ಅಂಡರ್‌ಪಾಸ್‌ನಲ್ಲಿ ಬುಧವಾರ ಸುರಿದ ಮಳೆಯಿಂದ ನೀರು ತುಂಬಿ ವಾಹನ ಸವಾರರು ಪರದಾಡಿದರು ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್



ಎಸ್‌.ಜೆ.ಪಿ ರಸ್ತೆಯಲ್ಲಿ ನಿಂತ ಮಳೆ ನೀರಿನಲ್ಲಿ ಮಗುವಿನೊಂದಿಗೆ ಸಾಗಿದ ಮಹಿಳೆ ಪ್ರಜಾವಾಣಿ ಚಿತ್ರ/ ಎಂ.ಎಸ್‌.ಮಂಜುನಾಥ್



ಬ್ರಿಗೇಡ್ ಜಲಪಾತ... ನಗರದಲ್ಲಿ ಬುಧವಾರ ಸಂಜೆ ಸುರಿದ ಮಳೆಯ ಸಮಯದಲ್ಲಿ ಬ್ರಿಗೇಡ್ ರಸ್ತೆಯಲ್ಲಿ ನಡೆಯುತ್ತಿರುವ ಒಳಚರಂಡಿ ಕಾಮಗಾರಿಯ ದೊಡ್ಡ ಹೊಂಡದಲ್ಲಿ ಸೃಷ್ಟಿಯಾದ 'ಜಲಪಾತ' ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಹಲವು ರಸ್ತೆಗಳು ಜಲಾವೃತ; ಮರಬಿದ್ದು ವಾಹನಗಳು ಜಖಂ

ನಗರದ ಹಲವೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಂಜೆ ವೇಳೆಗೆ ಆರಂಭವಾದ ಮಳೆಯಿಂದಾಗಿ ವಾಹನಗಳ ಸಂಚಾರಕ್ಕೆ ಅಡಚಣೆ
- ಹಲವು ಪ್ರದೇಶಗಳಲ್ಲಿ ಮಧ್ಯ ರಾತ್ರಿವರೆಗೂ ಮುಂದುವರಿದ ಮಳೆ
- ಎಚ್‌ಎಎಲ್, ಮಾರತ್ತಹಳ್ಳಿ ಸೇರಿ ವಿವಿಧೆಡೆ ಮೂರು ಸೆಂ.ಮೀನಷ್ಟು ಮಳೆ

ಬೆಂಗಳೂರು: ನಗರದ ಹಲವು ಭಾಗಗಳಲ್ಲಿ ಬುಧವಾರ ಸಂಜೆ ಬಿರುಸಿನ ಮಳೆ ಸುರಿಯಿತು. ಹಲವು ರಸ್ತೆಗಳಲ್ಲಿ ನೀರು ನಿಂತಿದ್ದರಿಂದ ಸಂಚಾರಕ್ಕೆ ಅಡಚಣೆ ಉಂಟಾಯಿತು.

ಹೆಬ್ಬಾಳ ಪೊಲೀಸ್ ಠಾಣೆ ಬಳಿಯ ರಸ್ತೆಗಳಲ್ಲಿ ಹೆಚ್ಚಿನ ನೀರು ನಿಂತಿದ್ದರಿಂದ ವಿಮಾನ ನಿಲ್ದಾಣದ ಕಡೆಗೆ ವಾಹನ ಸಂಚಾರ ನಿಧಾನಗತಿಯಲ್ಲಿತ್ತು. ಸಂಜೆ ಆರಂಭವಾದ ಮಳೆ ಹಲವು ಪ್ರದೇಶಗಳಲ್ಲಿ ಮಧ್ಯರಾತ್ರಿಯವರೆಗೂ ಮುಂದುವರಿದಿತ್ತು.

ಸಂಜಯನಗರ ಕ್ರಾಸ್, ಕಸ್ತೂರಿನಗರ ಡೌನ್ ರ್‍ಯಾಂಪ್, ಜಯಮಹಲ್ ರಸ್ತೆ, ವೀರಣ್ಣಪಾಳ್ಯ, ಕ್ವೀನ್ಸ್ ಜಂಕ್ಷನ್, ಅನಿಲ್ ಕುಂಬ್ಳೆ ವೃತ್ತ, ನಾಗವಾರ ಜಂಕ್ಷನ್, ಟ್ಯಾನರಿ ರಸ್ತೆ ಸೇರಿದಂತೆ ಸುತ್ತಮುತ್ತಲ ಪ್ರದೇಶದ ರಸ್ತೆಗಳಲ್ಲಿ ಮಳೆ ನೀರು ನಿಂತು ಸಂಚಾರಕ್ಕೆ ಅಡಚಣೆಯಾಯಿತು. ಸಂಜೆ ವೇಳೆ ವಾಹನಗಳು ಹೆಚ್ಚಾಗಿದ್ದರಿಂದ, ಸಂಚಾರ ನಿಧಾನಗತಿಯಲ್ಲಿತ್ತು.

ಮರ ಬಿದ್ದು ವಾಹನ ಜಖಂ: ಅಲಿ ಅಸ್ಕರ್ ರಸ್ತೆಯಲ್ಲಿ ಮರ ಬಿದ್ದು, ಎರಡು ಕಾರು ಹಾಗೂ ಒಂದು ಆಟೊ ಜಖಂಗೊಂಡವು. ಇದರಿಂದಾಗಿ ಈ ಮಾರ್ಗದಲ್ಲಿ ದೀರ್ಘ ಕಾಲ ವಾಹನ ದಟ್ಟಣೆ ಉಂಟಾಗಿತ್ತು. ಬಿಬಿಎಂಪಿ ಸಿಬ್ಬಂದಿ ಮರ ತೆರವುಗೊಳಿಸಿದರು. ಈ ರಸ್ತೆಗೆ ಪರ್ಯಾಯವಾಗಿ ಎಲ್‌ಆರ್‌ಡಿಇ ರಸ್ತೆಯಲ್ಲಿ ಸಂಚಾರಕ್ಕೆ ಸಂಚಾರ ಪೊಲೀಸರು ಅನುವು ಮಾಡಿಕೊಟ್ಟರು.

ಕೊಡಿಗೆಹಳ್ಳಿ, ಚೌಡೇಶ್ವರಿ ವಾರ್ಡ್, ಯಲಹಂಕ, ಬಸವೇಶ್ವರನಗರ, ವನ್ನಾರ್‌ಪೇಟೆ, ನಾಗಪುರ, ಕೊನೇನ ಅಗ್ರಹಾರ, ನಂದಿನಿ ಲೇಔಟ್, ದೊಡ್ಡನೆಕ್ಕುಂದಿ, ಎಚ್‌ಎಎಲ್ ವಿಮಾನ ನಿಲ್ದಾಣ, ಮಾರತ್ತಹಳ್ಳಿ, ವಿದ್ಯಾರಣ್ಯಪುರ, ವಿ. ನಾಗೇನಹಳ್ಳಿ ಸುತ್ತಮುತ್ತ ಮೂರು ಸೆಂ.ಮೀಟರ್‌ನಷ್ಟು ಮಳೆಯಾಗಿದೆ.

ಕೋರಮಂಗಲ, ಮಾರುತಿ ಮಂದಿರ, ಪೀಣ್ಯ ಕೈಗಾರಿಕೆ ಪ್ರದೇಶ, ಜಕ್ಕೂರು, ವಿದ್ಯಾಪೀಠ, ಪುಲಕೇಶಿನಗರ, ಸಂಪಂಗಿರಾಮನಗರ, ಬಾಣಸವಾಡಿ, ಶೆಟ್ಟಿಹಳ್ಳಿ, ಹೇರೋಹಳ್ಳಿ, ವಿಶ್ವೇಶ್ವರಪುರ, ಎಚ್‌ಎಸ್‌ಆರ್ ಲೇಔಟ್, ಕಾಟನ್ ಪೇಟೆ, ಹೊರಮಾವು, ಹೊಯ್ಸಳನಗರ, ಹಂಪಿನಗರ, ಬಿಟಿಎಂ ಲೇಔಟ್, ರಾಜಮಹಲ್ ಗುಟ್ಟಹಳ್ಳಿ, ಬಾಗಲಗುಂಟೆ, ಬೆಳ್ಳಂದೂರು, ರಾಮಮೂರ್ತಿನಗರದ ಸುತ್ತಮುತ್ತ ಪ್ರದೇಶದಲ್ಲಿ ಎರಡು ಸೆಂ.ಮೀನಷ್ಟು ಮಳೆಯಾಗಿದೆ.

ನಾಯಂಡಹಳ್ಳಿ, ಕೆಂಗೇರಿ, ರಾಜರಾಜೇಶ್ವರಿನಗರ, ವಿಜ್ಞಾನನಗರ, ಜ್ಞಾನಭಾರತಿ, ಅರೆಕೆರೆ, ದೊಡ್ಡಬಿದರಕಲ್ಲು, ದೊರೆಸಾನಿಪಾಳ್ಯ, ರಾಜಾಜಿನಗರ, ಮನೋರಾಯನಪಾಳ್ಯ, ಗೊಟ್ಟಿಗೆರೆ, ಹಗದೂರು ಸುತ್ತಮುತ್ತ ಒಂದು ಸೆಂ.ಮೀಟರ್‌ಗೂ ಹೆಚ್ಚಿನ ಮಳೆಯಾಯಿತು.

ದೆಹಲಿಯಲ್ಲೂ ಭಾರಿ ಮಳೆ

ನವದೆಹಲಿ(ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಬುಧವಾರ ಭಾರಿ ಮಳೆಯಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.

ಆಗಸ್ಟ್ 5ರ ವರೆಗೆ ನಗರದಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಶಾಲೆಗಳಿಗೆ ಗುರುವಾರ ರಜೆ ಘೋಷಿಸಲಾಗಿದೆ. ಹಲವೆಡೆ ಮಳೆ ನೀರು ನಿಂತ ಪರಿಣಾಮ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಯಿತು.

ನಗರದ ಹಲವು ಪ್ರದೇಶಗಳಲ್ಲಿ ಮನೆಗಳೂ ಕುಸಿದಿವೆ. ಜನರು ಮನೆಯಿಂದ ಹೊರಬರಬಾರದು. ಬಾಗಿಲುಗಳು ಹಾಗೂ ಕಿಟಕಿಗಳನ್ನು ಭದ್ರವಾಗಿ ಹಾಕಿಕೊಳ್ಳಬೇಕು. ಅನಗತ್ಯ ಪ್ರಯಾಣ ಕೈಗೊಳ್ಳದಂತೆಯೂ ಇಲಾಖೆ ಸಲಹೆ ನೀಡಿದೆ.

ಪರಿಹಾರ ಕಾರ್ಯ ಸೇರಿದಂತೆ ಸಂಕಷ್ಟದಲ್ಲಿರುವ ಜನರಿಗೆ ನೆರವು ನೀಡುವುದಕ್ಕಾಗಿ ಎಲ್ಲ ಅಧಿಕಾರಿಗಳು ಸನ್ನದ್ಧರಿರಬೇಕು ಎಂದು ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಸೂಚಿಸಿದ್ದಾರೆ.

ಮಾರ್ಗ ಬದಲು: ಭಾರಿ ಮಳೆ ಕಾರಣ, ಕನಿಷ್ಠ 10 ವಿಮಾನಗಳ ಸಂಚಾರ ಮಾರ್ಗವನ್ನು ಬದಲಾಯಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಪ್ರತಿಕೂಲ ಹವಾಮಾನ ಕಾರಣ ಸಂಜೆ 7.30ರ ನಂತರ ವಿಮಾನಗಳ ಮಾರ್ಗಗಳ ಬದಲಾವಣೆ ಮಾಡಲಾಯಿತು. ಜೈಪುರನತ್ತ 8 ಹಾಗೂ ಲಖನೌನತ್ತ ಎರಡು ವಿಮಾನಗಳನ್ನು ಕಳುಹಿಸಲಾಯಿತು' ಎಂದು ಅಧಿಕಾರಿಗಳು ಹೇಳಿದ್ದಾರೆ.



ಮಳೆ ಕಾರಣ ದೆಹಲಿಯ ರಾಜೆಂದರ್ ನಗರದಲ್ಲಿ ನೀರು ನಿಂತಿದ್ದ ಪ್ರದೇಶವನ್ನು ವಿದ್ಯಾರ್ಥಿಗಳು ಬುಧವಾರ ಪರಸ್ಪರ ಕೈಹಿಡಿದುಕೊಂಡು ದಾಟಿದರು –ಪಿಟಿಐ ಚಿತ್ರ

ಮದ್ಯ ಸೇವಿಸಿ ಚಾಲನೆ: 6,283 ಪ್ರಕರಣ

ಹೆಚ್ಚುತ್ತಿರುವ ವ್ಹೀಲಿ ಉಪಟಳ: ವಾಹನಗಳ ನೋಂದಣಿ ಅಮಾನತಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮದ್ಯ ಸೇವಿಸಿ ವಾಹನ ಚಾಲನೆ ಮಾಡುವವರ ವಿರುದ್ಧ ಸತತ ಕಾರ್ಯಾಚರಣೆ ನಡೆಸುತ್ತಿರುವ ಸಂಚಾರ ವಿಭಾಗದ ಪೊಲೀಸರು, ಪ್ರಸಕ್ತ ವರ್ಷದ ಜನವರಿ ಆರಂಭದಿಂದ ಜೂನ್ ಅಂತ್ಯದವರೆಗೆ 6,283 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

'2023ರಲ್ಲಿ ಮದ್ಯಸೇವಿಸಿ ವಾಹನ ಚಾಲನೆ ಮಾಡಿದ 7,053 ಮಂದಿ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಸಂಚಾರ ನಿಯಮ ಉಲ್ಲಂಘನೆಗೆ ಕಡಿವಾಣ ಹಾಕುವ ಉದ್ದೇಶದಿಂದ ವಿಶೇಷ ಕಾರ್ಯಾಚರಣೆ ನಡೆಯುತ್ತಿದ್ದು, ಈ ವರ್ಷ ಪ್ರಕರಣಗಳ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಿದೆ' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್ ಹೇಳಿದ್ದಾರೆ.

ಪೊಲೀಸರು 1,263 ಸವಾರರ ಚಾಲನಾ ಪರವಾನಗಿಯನ್ನು ವಶಕ್ಕೆ ಪಡೆದಿದ್ದಾರೆ. ಮದ್ಯ ಸೇವಿಸಿ ವಾಹನ ಚಾಲನೆ ಮಾಡಿದ ಪ್ರಕರಣಗಳಲ್ಲಿ ನೋಂದಣಿ ಪ್ರಮಾಣಪತ್ರಗಳನ್ನು (ಆರ್.ಸಿ) ಅಮಾನತುಗೊಳಿಸಲು ಶಿಫಾರಸು ಮಾಡಲಾಗುತ್ತಿದೆ. ಐದು ಆರ್.ಸಿ ಗಳನ್ನು ಅಮಾನತು ಮಾಡಲು ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ ಕಳುಹಿಸಿದ್ದಾರೆ.

ವ್ಹೀಲಿ ಉಪಟಳ ಹೆಚ್ಚಳ: ಸಂಚಾರ ವಿಭಾಗದ ಪೊಲೀಸರ ಅಂಕಿ ಅಂಶಗಳ ಪ್ರಕಾರ, 2023ರಲ್ಲಿ ನಗರದಲ್ಲಿ 216 ವ್ಹೀಲಿ ಪ್ರಕರಣಗಳು ದಾಖಲಾಗಿದ್ದವು. ಈ ವರ್ಷ ವ್ಹೀಲಿ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. ವ್ಹೀಲಿ ಮಾಡುತ್ತಿದ್ದ 225 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. 93 ವಾಹನ ಸವಾರರ ಪೈಕಿ 26 ಆರ್.ಸಿಗಳನ್ನು ಅಮಾನತುಗೊಳಿಸಲಾಗಿದೆ.

ವ್ಹೀಲಿ ನಡೆಸಿದ ಒಂಬತ್ತು ವಾಹನ ಸವಾರರ ಚಾಲನಾ ಪರವಾನಗಿಯನ್ನು (ಡಿ.ಎಲ್) ಸಹ ಅಮಾನತುಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವ್ಹೀಲಿ: ಐವರ ಬಂಧನ

ಬೆಂಗಳೂರು: ನಗರದ ವಿವಿಧೆಡೆ ವ್ಹೀಲಿ ಮಾಡುತ್ತಿದ್ದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿ, ಪ್ರಕರಣ ದಾಖಲಿಸಿದ್ದಾರೆ.

ತಲಘಟ್ಟಪುರದ 80 ಅಡಿ ರಸ್ತೆಯಲ್ಲಿ ಇಬ್ಬರು ಯುವಕರು ವ್ಹೀಲಿ ಮಾಡುತ್ತಿದ್ದರು. ಸಾರ್ವಜನಿಕರ ದೂರಿನ ಮೇರೆಗೆ ಇಬ್ಬರನ್ನೂ ಪೊಲೀಸರು ಪತ್ತೆ ಹಚ್ಚಿ, ವಾಹನವನ್ನು ಜಪ್ತಿ ಮಾಡಿದರು.

'ಇಬ್ಬರು ಆರೋಪಿಗಳು ಮಾದಕವಸ್ತು ಸೇವಿಸಿರುವುದು ದೃಢಪಟ್ಟಿದೆ, ಇಬ್ಬರ ವಿರುದ್ದವೂ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಭಟ್ಟರಹಳ್ಳಿ ಜಂಕ್ಷನ್ ಬಳಿ ವ್ಹೀಲಿ ಮಾಡುತ್ತಿದ್ದ ಯುವಕನನ್ನು ಪೊಲೀಸರು ಬಂಧಿಸಿ, ವಾಹನ ವಶಕ್ಕೆ ಪಡೆದಿದ್ದಾರೆ.

ಕೆ.ಜಿ.ಹಳ್ಳಿ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವ್ಹೀಲಿ ಮಾಡುತ್ತಿದ್ದ ಬಾಲಕನನ್ನು ಪತ್ತೆ ಮಾಡಿ, ಆತನ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ. ಆತನ ಪೋಷಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಬನಶಂಕರಿ ಎರಡನೇ ಹಂತದ ಯಾರಬ್ ನಗರದ ಮುಖ್ಯ ರಸ್ತೆಯಲ್ಲಿ ವ್ಹೀಲಿ ಮಾಡುತ್ತಿದ್ದ ಸೈಯದ್ ಸಲ್ಮಾನ್ (24) ಎಂಬಾತನ ವಿರುದ್ಧ ಬನಶಂಕರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಉದ್ಯೋಗದ ಆಮಿಷ ₹9.44 ಲಕ್ಷ ವಂಚನೆ

ಬೆಂಗಳೂರು: ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ಆಮಿಷವವೊಡ್ಡಿ ಆಕಾಂಕ್ಷಿಯೊಬ್ಬರಿಂದ ₹9.44 ಲಕ್ಷ ವಂಚಿಸಲಾಗಿದೆ. ಈ ಬಗ್ಗೆ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಗರದ 48 ವರ್ಷದ ಮಹಿಳೆಯೊಬ್ಬರು ಸರ್ಜಾಪುರದ ನಿವಾಸಿ ಸಾಯಿ ನಾರಾಯಣ ಎಂಬುವವರ ವಿರುದ್ಧ ದೂರು ನೀಡಿದ್ದಾರೆ. ಆರೋಪಿ ದೂರುದಾರರ ಮನೆಗೆ ಹೋಗಿ, 'ನಿಮ್ಮ ಮಗನಿಗೆ ಸರ್ಕಾರಿ ಉದ್ಯೋಗ ಕೊಡಿಸುತ್ತೇನೆ. ಇದಕ್ಕೆ ಹಣ ನೀಡಬೇಕು' ಎಂದಿದ್ದ. ಅದಕ್ಕೆ ಒಪ್ಪಿದ್ದ ದೂರುದಾರರು ಹಂತ–ಹಂತವಾಗಿ ₹9.44 ಲಕ್ಷ ಹಣ ನೀಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿಯು ದೂರುದಾರರಿಂದ ಹಣದ ಜೊತೆಗೆ ಅವರ ಮಗನ ಶೈಕ್ಷಣಿಕ ದಾಖಲೆಗಳನ್ನು ಪಡೆದು. ಅವುಗಳನ್ನು ವಾಪಸ್ ನೀಡದೇ ಮೋಸ ಮಾಡಿದ್ದಾನೆ. ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ (ಐಪಿಸಿ) ಸೆಕ್ಷನ್ 406 (ನಂಬಿಕೆ ದ್ರೋಹ), 420 (ವಂಚನೆ) ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರೆಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪುನೀತ್ ಮೇಲೆ ದೌರ್ಜನ್ಯದ ಆರೋಪ: ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಬಂಧಿತನಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುವ ರಾಷ್ಟ್ರ ರಕ್ಷಣಾ ಪಡೆ ಮುಖಂಡ ಪುನೀತ್ ಕೆರೆಹಳ್ಳಿ ಅವರ ಮೇಲೆ ಎಸಿಪಿ ಚಂದನ್ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಬಿಜೆಪಿ ಮುಖಂಡರು ಬಸವೇಶ್ವರ ನಗರ ಪೊಲೀಸ್ ಠಾಣೆ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಹರೀಶ್ ಪೂಂಜ ಮತ್ತು ಮಾಜಿ ಸಂಸದ ಪ್ರತಾಪ ಸಿಂಹ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಪುನೀತ್ ಕೆರೆಹಳ್ಳಿ ಕೂಡ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಅನುಮತಿ ಇಲ್ಲದೇ ಪ್ರತಿಭಟನೆ ನಡೆಸಿದ ಕಾರಣಕ್ಕಾಗಿ ಪುನೀತ್ ಹಾಗೂ ಬೆಂಬಲಿಗರನ್ನು ವಶಕ್ಕೆ ಪಡೆದ ಪೊಲೀಸರು, ಕೆಲವು ಸಮಯದ ಬಳಿಕ ಬಿಡುಗಡೆ ಮಾಡಿದರು.

'ಘಟನೆ ವೇಳೆ ಸ್ಥಳಕ್ಕೆ ಬಂದಿದ್ದ ಅಬ್ದುಲ್ ರಜಾಕ್ ಮೇಲೆ ಯಾವುದೇ ಪ್ರಕರಣ ದಾಖಲಿಸಿಲ್ಲ. ಆದರೆ, ಸಾರ್ವಜನಿಕರ ಹಿತದೃಷ್ಟಿಯಿಂದ ಅಲ್ಲಿಗೆ ಭೇಟಿ ನೀಡಿದ ಕಾರ್ಯಕರ್ತರನ್ನು ಠಾಣೆಗೆ ಕರೆದುಕೊಂಡು ಬಂದು ಹಲ್ಲೆ ಮಾಡಲಾಗಿದೆ. ಅಬ್ದುಲ್ ರಜಾಕ್ ಅವರನ್ನು ಇನ್ನೂ ಏಕೆ ಬಂಧಿಸಿಲ್ಲ? ಪುನೀತ್ ಬಟ್ಟೆ ಬಿಚ್ಚಿಸೋಕೆ ಕಾನೂನಿನಲ್ಲಿ ಅವಕಾಶವಿದೆಯೆ? ಅವರ ಬಟ್ಟೆ ಬಿಚ್ಚಿಸಲು ಪೊಲೀಸ್ ಇಲಾಖೆಯಲ್ಲಿ ಯಾರಾದರೂ ಸಲಿಂಗ ಕಾಮಿಗಳು ಇದ್ದಾರಾ' ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದರು.

ಶಾಸಕ ಹರೀಶ್ ಪೂಂಜ ಮಾತನಾಡಿ, 'ಕಾಂಗ್ರೆಸ್ ಸರ್ಕಾರ ಹಿಂದೂ ಕಾರ್ಯಕರ್ತರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಪ್ರತಾಪ ಸಿಂಹ ಮತ್ತು ಪುನೀತ್ ಕೆರೆಹಳ್ಳಿ ಅವರು ಎಸಿಪಿ ಚಂದನ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಒತ್ತಾಯಿಸಿ ಹೆಚ್ಚುವರಿ ಪೊಲೀಸ್ ಕಮಿಷನರ್ ಸತೀಶ್ ಬಾಬು ಅವರಿಗೆ ಮನವಿ ಸಲ್ಲಿಸಿದರು.

ಪ್ರತಾಪ್ ಸಿಂಹ ವಿರುದ್ಧ ದೂರು: ಪುನೀತ್ ಕೆರೆಹಳ್ಳಿ ಬಂಧನ ಪ್ರಕರಣದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಎಸಿಪಿ ಚಂದನ್ ಅವರಿಗೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ಪ್ರತಾಪ ಸಿಂಹ ವಿರುದ್ಧ ಆಮ್ ಆದ್ಮಿ ಪಕ್ಷದ ರಾಜ್ಯ ಯುವ ಘಟಕದ ಅಧ್ಯಕ್ಷ ಜಿ.ಎಚ್.ಲೋಹಿತ್ ಕುಮಾರ್ ಅವರು ಪಶ್ಚಿಮ ವಿಭಾಗದ ಡಿಸಿಪಿ ಎಸ್. ಗಿರೀಶ್ ಅವರಿಗೆ ದೂರು ನೀಡಿದ್ದಾರೆ.

ಪ್ರಕರಣ ದಾಖಲು: ಠಾಣೆ ಮುಂದೆ ಅನುಮತಿ ಪಡೆಯದೇ ಪ್ರತಿಭಟನೆ ನಡೆಸಿದ್ದಕ್ಕೆ ಪುನೀತ್ ಕೆರೆಹಳ್ಳಿ, ಪ್ರತಾಪ ಸಿಂಹ, ಹರೀಶ್ ಪೂಂಜ, ಜಯಣ್ಣ ಹಾಗೂ ಸೇರಿದಂತೆ ಹಲವರ ವಿರುದ್ಧ ಬಸವೇಶ್ವರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನಗರದಲ್ಲಿ ಇಂದು

ವ್ಯಸನಮುಕ್ತ ದಿನಾಚರಣೆ: ಮೌರ್ಯ ವೃತ್ತದ ಗಾಂಧಿ ಪ್ರತಿಮೆಯಿಂದ ಗಾಂಧಿ ಭವನದವರೆಗೆ ಜಾಥಾ, ಬೆಳಿಗ್ಗೆ 8.30ಕ್ಕೆ ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಶೋಭಾ ಕರಂದ್ಲಾಜೆ, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಉಪನ್ಯಾಸ: ಡಾ.ಸಿ.ಆರ್. ಚಂದ್ರಶೇಖರ್, ಆಯೋಜನೆ: ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30ಕ್ಕೆ

ಎಂ.ಕೆ. ಕೆಂಪೇಗೌಡ ಅನುವಾದಿಸಿದ 'ಲಾಲ್ ಬಹದ್ದೂರ್ ಶಾಸ್ತ್ರಿ' ಪುಸ್ತಕ ಬಿಡುಗಡೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಸಿ. ನಾರಾಯಣಸ್ವಾಮಿ, ಪುಸ್ತಕದ ಕುರಿತು: ಎಂ. ಕೃಷ್ಣೇಗೌಡ, ಅತಿಥಿಗಳು: ಡಿ.ಆರ್. ಪಾಟೀಲ, ಪ್ರಮೋದ ಹೆಗಡೆ, ವಿ.ವೈ. ಘೋರ್ಪಡೆ, ಆಯೋಜನೆ: ವಿಸ್ಮಯ ಬುಕ್‌ಹೌಸ್, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4

'ಕನ್ನಡ ನೆಲ ಮೂಲದ ಶರಣ ಚಳವಳಿ' ಉಪನ್ಯಾಸ: ಶ್ರೀಶೈಲ ಜಿ. ಮಸೂತೆ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ದಾಸರ ಪದಗಳ ಗಾಯನ: ಕೆ.ಎಂ. ಅಮಿತ್ ಕೇಶವ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ನಾಟ್ಯ ಭೈರವಿ ಕಲಾ ಕುಟೀರದ ವಿದ್ಯಾರ್ಥಿಗಳು, ನಿರ್ದೇಶನ: ಎಲ್. ಮಂಜು ಭೈರವಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ ಐದನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.

nagaradalli_indu@prajavani.co.in


ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದ ಸ್ಥಳೀಯ ವಿಧಾನಸಭಾ ಕ್ಷೇತ್ರ ಹಾಗೂ ದಾಸನಪುರ ಹೋಬಳಿಯ ಒಕ್ಕಲಿಗ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಗಸ್ಟ್ 15 ರೊಳಗೆ ಪಟ್ಟಣದ ಮುತ್ತಯ್ಯ ಬಡಾವಣೆಯಲ್ಲಿರುವ ಕಚೇರಿಯಲ್ಲಿ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ: 9449638143, 9731056555 ಸಂಪರ್ಕಿಸಬಹುದು ಎಂದು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷ ಎಂ.ಕೆ.ನಾಗರಾಜು ತಿಳಿಸಿದ್ದಾರೆ.

ನಿಧನ ವಾರ್ತೆ

ಗಿರೀಶ್ ಪರಂಗೋಡು



ಬೆಂಗಳೂರು: ಮದ್ದಳೆ ವಾದಕ ಗಿರೀಶ್ ಪರಂಗೋಡು (51) ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ.

ಅವರಿಗೆ ತಂದೆ ಸುಬ್ರಹ್ಮಣ್ಯ ಪರಂಗೋಡು, ಪತ್ನಿ ಕೀರ್ತಿ ಬದಿಯಡ್ಕ, ಪುತ್ರ ನಮನ್ ಕಶ್ಯಪ್ ಹಾಗೂ ಇಬ್ಬರು ಸಹೋದರಿಯರು ಇದ್ದಾರೆ.

ಇಲ್ಲಿನ ಕೋಣನಕುಂಟೆಯ ಶ್ರೀನಿಧಿ ಬಡಾವಣೆಯ ನಿವಾಸಿ ಯಾದ ಗಿರೀಶ್, ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗ ಮಾಡುತ್ತಿದ್ದರು. ಕುಟುಂಬದ ಸದಸ್ಯರೊಂದಿಗೆ ಗೋವಾ ಪ್ರವಾಸದಲ್ಲಿದ್ದಾಗ ಅವರಿಗೆ ಜುಲೈ 28ರಂದು ಹೃದಯಾಘಾತವಾಗಿದೆ. ಜುಲೈ 29ರಂದು ಮಧ್ಯಾಹ್ನ ಮೂರು ಗಂಟೆ ವೇಳೆಗೆ ಇಲ್ಲಿನ ಬನಶಂಕರಿ ಚಿತಾಗಾರದಲ್ಲಿ ಅವರ ಅಂತ್ಯಸಂಸ್ಕಾರ ನಡೆಸಲಾಗಿದೆ.

ಅವರು ಶ್ರೀರಾಮ ಯಕ್ಷಕಲಾ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು.

ಮನೆ ಊಟ ಕೋರಿ ನಟ ದರ್ಶನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್

‘ಕೈದಿಗಳ ಮಧ್ಯೆ ಬಡವ–ಶ್ರೀಮಂತ ಭೇದ ಬೇಡ’

ಪ್ರಜಾವಾಣಿ ವಾರ್ತೆ



ನ್ಯಾಯಮೂರ್ತಿ ಎಂ.ನಾಗಪ್ರಸನ್ನ

ಬೆಂಗಳೂರು: ‘ಜೈಲಿನಲ್ಲಿರುವ ಎಲ್ಲಾ ಕೈದಿಗಳ ಬಗ್ಗೆಯೂ ನಾವೂ ಅಗತ್ಯ ಮಾನವೀಯತೆ ಹೊಂದಿರಬೇಕು. ಶ್ರೀಮಂತ, ಬಡವ, ಪ್ರಭಾವಿ ಎಂದು ಕೈದಿಗಳ ಮಧ್ಯೆ ಭೇದವಿರಕೂಡದು. ಅಂತೆಯೇ, ಸೆಲೆಬ್ರಿಟಿ ವ್ಯಕ್ತಿಯೊಬ್ಬರು ಜೈಲಿನಲ್ಲಿದ್ದಾರೆ ಎಂದಾಕ್ಷಣ ಅಂತಹ ವ್ಯಕ್ತಿಗಳಿಗೆ ಕಾಯ್ದೆಯಿಂದ ಹೊರತಾದ ನಿಯಮಗಳೇನೂ ಇರುವುದಿಲ್ಲ’ ಎಂದು ಹೈಕೋರ್ಟ್ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಮನೆಯಿಂದ ಊಟ, ಬಟ್ಟೆ ಮತ್ತು ಹಾಸಿಗೆ ತರಿಸಿಕೊಳ್ಳಲು ಅನುಮತಿ ನೀಡುವಂತೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧೀಕ್ಷಕರಿಗೆ ನಿರ್ದೇಶಿಸಬೇಕು’ ಎಂದು ಕೋರಿ ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ದರ್ಶನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, ‘ಜೈಲಿನ ಅಧಿಕಾರಿ ನೀಡಿರುವ ಪ್ರಮಾಣ ಪತ್ರದಲ್ಲಿ ದರ್ಶನ್ ಅವರಿಗೆ ಪೌಷ್ಟಿಕಾಂಶ ಯುಕ್ತ ಆಹಾರದ ಅಗತ್ಯವಿದೆ ಎಂದಿದ್ದಾರೆ. ಜೈಲು ಕೈಪಿಡಿಯಲ್ಲಿ ಮನೆಯೂಟ ಪಡೆಯಬಾರದು ಎಂದು ಎಲ್ಲೂ ಹೇಳಿಲ್ಲ. ಆಹಾರ ಪದ್ಧತಿ ಬಗ್ಗೆ ಮಾತ್ರವೇ ಹೇಳಲಾಗಿದೆ. ಕಾಯ್ದೆಯ ನಿಬಂಧನೆಗಳಿಗೆ ಅನುಗುಣವಾಗಿ ಜೈಲು ಕೈಪಿಡಿಯನ್ನು ನೋಡಬೇಕು’ ಎಂದರು.

‘ದರ್ಶನ್ ಮನೆಯೂಟವನ್ನು ಹಕ್ಕಾಗಿ ಕೇಳುತ್ತಿಲ್ಲ. ಬದಲಿಗೆ ಮನವಿ ಮಾಡುತ್ತಿದ್ದಾರೆ. ಕರ್ನಾಟಕ ಕಾರಾಗೃಹ ಕಾಯ್ದೆಯಲ್ಲಿ ವಿಚಾರಣಾಧೀನ ಮತ್ತು ಸಜಾ ಬಂದಿಗಳು ಎಂದು ಮಾತ್ರ ಪ್ರತ್ಯೇಕಿಸಲಾಗಿದೆ. ಕಲಂ 30ರ ಪ್ರಕಾರ ವಿಚಾರಣಾಧೀನ ಕೈದಿ ಖಾಸಗಿಯಾಗಿ ಆಹಾರ ತರಿಸಿಕೊಳ್ಳಬಹುದು. ಸರ್ಕಾರ ಇದನ್ನು ಪ್ರಶ್ನಿಸಿರುವುದರಿಂದ ನ್ಯಾಯಾಲಯದ ಗಮನಕ್ಕೆ ತಂದಿದ್ದೇವೆ. ಮುಂದೆಯೂ ಇದು ನಮ್ಮ ಮನವಿಯೇ ಆಗಿರಲಿದೆ. ದರ್ಶನ್‌ಗೆ ಬೆನ್ನು ನೋವಿದೆ. ವೈರಲ್ ಜ್ವರ ಇದೆ. ಅವರ ಆರೋಗ್ಯ ಸರಿಯಿಲ್ಲ. ಆದ್ದರಿಂದ, ಅಗತ್ಯವಾದ ಊಟ ನೀಡಲು ಅನುಮತಿಸಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ನಾಗಪ್ರಸನ್ನ ಅವರು, ‘ದರ್ಶನ್ ಆರೋಗ್ಯ ನಿಜಕ್ಕೂ ಕ್ಷೀಣಿಸಿದ್ದರೆ ಜೈಲಿನಲ್ಲಿ ವೈದ್ಯರಿದ್ದಾರೆ. ಅವರು ಸೂಕ್ತ ಚಿಕಿತ್ಸೆಗೆ ವ್ಯವಸ್ಥೆ ಮಾಡಲಿದ್ದಾರೆ. ದೇಶದ ಜೈಲುಗಳಲ್ಲಿ ಕೋಟ್ಯಂತರ ವಿಚಾರಣಾಧೀನ ಕೈದಿಗಳಿದ್ದು, ಅವರಿಗೆ ಉತ್ತಮ ಆಹಾರ ಪದ್ಧತಿ ಅನ್ವಯವೇ ಊಟ ದೊರೆಯಬೇಕಿದೆ’ ಎಂದರು.

ಇದಕ್ಕೆ ಪ್ರಾಸಿಕ್ಯೂಷನ್ ಪರ ಹಾಜರಿದ್ದ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್–1 ಬಿ.ಎ.ಬೆಳ್ಳಿಯಪ್ಪ, ‘ಮನೆ ಊಟಕ್ಕಾಗಿ ದರ್ಶನ್ ಮನವಿ ಸಲ್ಲಿಸಿದ್ದರೆ ಅದನ್ನು ಕಾನೂನಿನ ಅನ್ವಯವೇ ಪರಿಗಣಿಸಲಾಗುವುದು’ ಎಂದರು.

ಇದನ್ನು ಪರಿಗಣಿಸಿದ ನ್ಯಾಯಮೂರ್ತಿಗಳು, ‘ಈ ಸಂಬಂಧ ಜೈಲು ಅಧಿಕಾರಿಗಳು ಮುಂದಿನ 10 ದಿನಗಳ ಒಳಗೆ ಸೂಕ್ತ ತೀರ್ಮಾನ ಕೈಗೊಂಡು ಕೋರ್ಟ್‌ಗೆ ತಿಳಿಸಬೇಕು’ ಎಂದು ಸೂಚಿಸಿ ಇದೇ 20ಕ್ಕೆ ವಿಚಾರಣೆ ಮುಂದೂಡಿದರು. ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ನೋಟಿಸ್ ಸ್ವೀಕರಿಸಿದರು. ದರ್ಶನ್ ಪರ ಹೈಕೋರ್ಟ್ ವಕೀಲೆ ಸಂಜೀವಿನಿ ಪಿ.ನಾವದಗಿ ವಕಾಲತ್ತು ವಹಿಸಿದ್ದಾರೆ.

ಮುದ್ದೆ ಗೋಡೆಗೆ ಹೊಡೆದರೆ ವಾಪಸು ಬರುತ್ತೆ..!

‘ಹಿಂದೊಮ್ಮೆ, ಜೈಲಿನಲ್ಲಿ ನಮಗೆ ನೀಡಲಾಗುತ್ತಿರುವ ರಾಗಿ ಮುದ್ದೆಯನ್ನು ಗೋಡೆಗೆ ಹೊಡೆದರೆ ಹಿಂದಿರುಗಿ ಬರುತ್ತದೆ ಎಂದು ಕೈದಿಯೊಬ್ಬ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ. ಬಹುಶಃ ನೀವೇನಾದರೂ ಅಂತಹ ಆಹಾರ ನೀಡುತ್ತಿದ್ದೀರಾ’ ಎಂದು ನ್ಯಾಯಮೂರ್ತಿ ನಾಗಪ್ರಸನ್ನ ಅವರು ಪ್ರಾಸಿಕ್ಯೂಷನ್ ಪರ ವಕೀಲರನ್ನು ಕುಟುಕಿದರು.



ಬೆಂಗಳೂರಿನ ನವ ಸಹಯೋಗ ಫೌಂಡೇಷನ್ ತುಮಕೂರಿನ ಮಹಾತ್ಮ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ತುಮಕೂರು ತಾಲ್ಲೂಕು ಮಟ್ಟದ ಕೊಕ್ಕೊ ಮತ್ತು ಕಬಡ್ಡಿ ಪಂದ್ಯಾವಳಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ನಿತ್ಯಶ್ರೀ, ಇಂಚರಾ, ಭಾವನಾ, ಜಯಂತ್, ಹರ್ಷವರ್ಧನ್, ನಿಖಿಲ್, ರಂಜಿತ್, ಕುಶಾಲ್, ಕುಸುಮಾ ಅವರಿಗೆ ಬಹುಮಾನ ವಿತರಿಸಲಾಯಿತು. ಸಿದ್ದಗಂಗಾ ಮಠದ ಶಿವಸಿದ್ದೇಶ್ವರ ಸ್ವಾಮೀಜಿ, ಪ್ರಜಾ ಪ್ರಗತಿಯ ನಾಗಣ್ಣ, ಸುನಿಲ್ ಕಾಮತ್, ಎಸ್‌ವಿಪಿ ಬೆಂಗಳೂರಿನ ಸೈರಾ ಸ್ಟೆಫನ್ಸ್, ಅಬ್ರಾಹಂ ಸ್ಟೆಫನ್ಸ್, ಲಯನ್ಸ್ ಕ್ಲಬ್ ಅಧ್ಯಕ್ಷ ನಟರಾಜ್, ವೈದ್ಯವಾಹಿನಿಯ ವಿನಯ್ ಉಪಸ್ಥಿತರಿದ್ದರು

ಆ. 8, 15ಕ್ಕೆ ರೈಲುಗಳ ಸಂಚಾರ ರದ್ದತಿ ಇಲ್ಲ

ಬೆಂಗಳೂರು: ನಿಟ್ಟೂರು ಮತ್ತು ಸಂಪಿಗೆ ನಡುವಿನ ಲೆವೆಲ್ ಕ್ರಾಸಿಂಗ್–64ರಲ್ಲಿ ಸಿಮೆಂಟ್ ತೊಲೆ (ಗರ್ಡರ್) ಅಳವಡಿಕೆ ಮತ್ತು ತೆಗೆದು ಹಾಕುವ ನಿರ್ವಹಣಾ ಕಾರ್ಯಕ್ಕಾಗಿ ಆ.8 ಮತ್ತು 15ರಂದು ರೈಲುಗಳ ಸಂಚಾರವನ್ನು ರದ್ದುಪಡಿಸಲು ನಿರ್ಧರಿಸಲಾಗಿತ್ತು. ಇದೀಗ ನಿರ್ವಹಣಾ ಕಾರ್ಯವನ್ನು ಮುಂದಕ್ಕೆ ಹಾಕಿರುವುದರಿಂದ ಅಂದು ಯಾವುದೇ ರೈಲುಗಳ ವ್ಯತ್ಯಯ ಇರುವುದಿಲ್ಲ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ರದ್ದು ಮಾಡಲಾಗಿದ್ದ ತುಮಕೂರು-ಚಾಮರಾಜನಗರ ಪ್ಯಾಸೆಂಜರ್ ರೈಲು, ಚಾಮರಾಜನಗರ- ಮೈಸೂರು ಪ್ಯಾಸೆಂಜರ್, ಚಿಕ್ಕಮಗಳೂರು-ಯಶವಂತಪುರ- ಚಿಕ್ಕಮಗಳೂರು ಎಕ್ಸ್‌ಪ್ರೆಸ್, ತುಮಕೂರು- ಕೆಎಸ್‌ಆರ್ ಬೆಂಗಳೂರು-ತುಮಕೂರು ಮೆಮು, ಯಶವಂತಪುರ- ಶಿವಮೊಗ್ಗ–ಯಶವಂತಪುರ ಇಂಟರ್‌ಸಿಟಿ ಎಕ್ಸ್‌ಪ್ರೆಸ್ ಎಂದಿನಂತೆ ಸಂಚರಿಸಲಿವೆ.

ಭಾಗಶಃ ರದ್ದು ಮಾಡಲಾಗಿದ್ದ ಕೆಎಸ್‌ಆರ್ ಬೆಂಗಳೂರು- ತುಮಕೂರು–ಕೆಎಸ್‌ಆರ್ ಬೆಂಗಳೂರು ಮೆಮು, ತಾಳಗುಪ್ಪ- ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್, ಧಾರವಾಡ- ಕೆಎಸ್‌ಆರ್ ಬೆಂಗಳೂರು– ಧಾರವಾಡ ಸಿದ್ದಗಂಗಾ ಎಕ್ಸ್‌ಪ್ರೆಸ್ ರೈಲು ಎಂದಿನಂತೆ ಇರಲಿದೆ.

ಮಾರ್ಗ ಬದಲಾಯಿಸಲಾಗಿದ್ದ ವಾಸ್ಕೋಡ ಗಾಮಾ- ಯಶವಂತಪುರ ಎಕ್ಸ್‌ಪ್ರೆಸ್, ಮೈಸೂರು-ವಾರಾಣಸಿ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್, ಯಶವಂತಪುರ-ಜೈಪುರ ಎಕ್ಸ್‌ಪ್ರೆಸ್, ಮೈಸೂರು-ಉದಯಪುರ ಸಿಟಿ ಎಕ್ಸ್‌ಪ್ರೆಸ್, ಮೈಸೂರು-ಬೆಳಗಾವಿ ವಿಶ್ವಮಾನವ ಡೈಲಿ ಎಕ್ಸ್‌ಪ್ರೆಸ್ ರೈಲು ಸಾಮಾನ್ಯ ಮಾರ್ಗದಲ್ಲಿ ಸಂಚರಿಸಲಿವೆ.

ಮಾರ್ಗ ಮಧ್ಯೆಯೇ ಕೆಲವು ನಿಮಿಷಗಳಷ್ಟು ನಿಯಂತ್ರಿಸಲಾಗಿದ್ದ ರೈಲುಗಳು, ಮರು ನಿಗದಿಪಡಿಸಲಾದ ರೈಲುಗಳು ವೇಳಾಪಟ್ಟಿಯಂತೆಯೇ ಸಂಚರಿಸಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಡಿ: ಭಾರತ– ಚೀನಾ ಮಾತುಕತೆ

ನವದೆಹಲಿ(ಪಿಟಿಐ): ಕಳೆದ ನಾಲ್ಕು ವರ್ಷಗಳಿಂದ ಲಡಾಖ್‌ನ ಪೂರ್ವದಲ್ಲಿನ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಉದ್ದಕ್ಕೂ ಉದ್ಭವಿಸಿರುವ ಸಂಘರ್ಷ ಶಮನ ಮಾಡುವ ಸಂಬಂಧ ಚೀನಾ ಮತ್ತು ಭಾರತ ಬುಧವಾರ ರಾಜತಾಂತ್ರಿಕ ಮಟ್ಟದ ಮಾತುಕತೆ ನಡೆಸಿದವು.

‘ಗಡಿಯಲ್ಲಿ ಶಾಂತಿ ಮತ್ತು ಸಹಜ ಸ್ಥಿತಿ ಮರುಸ್ಥಾಪನೆಗಾಗಿ ರಚನಾತ್ಮಕ ಮಾತುಕತೆ ನಡೆಸಲಾಯಿತು’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

ಲಾವೋಸ್‌ನಲ್ಲಿ ಇತ್ತೀಚೆಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಹಾಗೂ ಚೀನಾ ಸಚಿವ ವಾಂಗ್ ಯಿ ಸಭೆ ನಡೆಸಿದ್ದರು. ಇದರ ಬೆನ್ನಲ್ಲೇ, ದೆಹಲಿಯಲ್ಲಿ ಮತ್ತೊಂದು ಸುತ್ತಿನ ಮಾತುಕತೆ ನಡೆಯಿತು ಎಂದು ಸಚಿವಾಲಯ ತಿಳಿಸಿದೆ.



ಬನ್ನೇರುಘಟ್ಟದಲ್ಲಿ ಆಪರೇಷನ್ ಮಕ್ನಾ ಯಶಸ್ವಿಯಾದ ಹಿನ್ನೆಲೆಯಲ್ಲಿ ಕುಮ್ಕಿ ಆನೆಗಳಿಗೆ ಬೀಳ್ಕೊಡುಗೆ ನೀಡಲಾಯಿತು

ಕಾಡಾನೆ ಸೆರೆ ಕಾರ್ಯಾಚರಣೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಆನೇಕಲ್: ‘ಒಂಟಿ ಕೋಳಿ’ ಪುಂಡಾನೆ ಇರುವ ನಿಗದಿತ ಜಾಗದ ಸುಳಿವು ದೊರೆಯದ ಕಾರಣ ಸೆರೆ ಕಾರ್ಯಾಚರಣೆಯನ್ನು ಬುಧವಾರ ಸ್ಥಗಿತಗೊಳಿಸಲಾಗಿದೆ.

ದುಬಾರೆ ಮತ್ತು ಮತ್ತಿಗೋಡು ಆನೆ ಶಿಬಿರದಿಂದ ಕಾರ್ಯಾಚರಣೆಗೆ ಕರೆಸಲಾಗಿದ್ದ ಎಂಟು ಕುಮ್ಕಿ ಆನೆಗಳು (ತರಬೇತಿ ಪಡೆದು ಪಳಗಿಸಿದ ಆನೆಗಳು), ಮಾವುತರು, ಕಾವಾಡಿಗಳು ಮತ್ತು ನುರಿತ ಸಿಬ್ಬಂದಿಯನ್ನು ಬುಧವಾರ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಅಧಿಕಾರಿಗಳು ಬೀಳ್ಕೊಟ್ಟರು.

‘ಒಂಟಿ ಕೋಳಿ ಕಾಡಾನೆ ಸೆರೆ ಕಾರ್ಯಾಚರಣೆ ಮುಂದುವರಿದಿತ್ತು. ಆದರೆ, ಆನೆ ಇರುವ ನಿರ್ದಿಷ್ಟ ಜಾಗದ ಸುಳಿವು ಸಿಗದ ಕಾರಣ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದೇವೆ. ಹಾಗಾಗಿ ಕುಮ್ಕಿ ಆನೆಗಳ ತಂಡ ಮತ್ತು ಸಿಬ್ಬಂದಿಯನ್ನು ಮರಳಿ ಕಳಿಸಲಾಗಿದೆ’ ಎಂದು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಭಾಕರ್ ಪ್ರಿಯದರ್ಶಿ ತಿಳಿಸಿದ್ದಾರೆ.

ಇಬ್ಬರ ಸಾವಿಗೆ ಕಾರಣವಾಗಿದ್ದ ಮಕ್ನಾ ಆನೆ ಹಾಗೂ ಒಂಟಿ ಕೋಳಿ ಆನೆ ಸೆರೆಗೆ ಜುಲೈ 29ರಂದು ಕಾರ್ಯಾಚರಣೆ ಆರಂಭಿಸಲಾಗಿತ್ತು. ಅದೇ ದಿನ ಮಕ್ನಾ ಆನೆಯನ್ನು ಸೆರೆ ಹಿಡಿಯಲಾಗಿತ್ತು.

ಜುಲೈ 27ರಿಂದ 31ರವರೆಗೆ ದುಬಾರೆ ಮತ್ತು ಮತ್ತಿಗೋಡು ಆನೆ ಶಿಬಿರದಿಂದ ಬಂದಿದ್ದ ಎಂಟು ಕುಮ್ಕಿ ಆನೆಗಳು ಮತ್ತು ನುರಿತ ಸಿಬ್ಬಂದಿ ನೆರವಿನಿಂದ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಬಳಿ ಓಡಾಡುತ್ತಿದ್ದ ಮಕ್ನಾ ಆನೆಯನ್ನು ಸೆರೆ ಹಿಡಿದು ಕ್ರಾಲ್‌ಗೆ ಬಿಡಲಾಗಿದೆ ಎಂದು ಹೇಳಿದರು.

‘ರಾಜಸ್ಥಾನದಿಂದ ಪೂರೈಕೆ ಆಗಿದ್ದು ಕುರಿ ಮಾಂಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಸ್ಥಾನದ ಜೈಪುರದಿಂದ ರೈಲಿನಲ್ಲಿ ಬೆಂಗಳೂರಿಗೆ ಪೂರೈಕೆಯಾಗಿರುವುದು ನಾಯಿ ಮಾಂಸವಲ್ಲ, ಅದು ಕುರಿ ಮಾಂಸ ಎನ್ನುವುದು ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ’ ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಆಯುಕ್ತ ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜುಲೈ 26ರ ರಾತ್ರಿ ಜೈಪುರ-ಮೈಸೂರು ಎಕ್ಸ್‌ಪ್ರೆಸ್ ರೈಲಿನಲ್ಲಿ ನಗರಕ್ಕೆ ಸುಮಾರು 4,500 ಕೆ.ಜಿ.ಯಷ್ಟು ಮಾಂಸ ತರಲಾಗಿತ್ತು. ಇದನ್ನು ಅಬ್ದುಲ್ ರಜಾಕ್ ಎಂಬುವರು ತರಿಸಿದ್ದರು. ಇದು ನಾಯಿ ಮಾಂಸ ಎಂದು ರಾಷ್ಟ್ರ ರಕ್ಷಣಾ ಪಡೆಯ ಕಾರ್ಯಕರ್ತರು ಆರೋಪಿಸಿದ್ದರು. ಬಳಿಕ ಮಾಂಸದ ಮಾದರಿಗಳನ್ನು ಪರೀಕ್ಷೆಗಾಗಿ ಹೈದರಾಬಾದ್‌ನ ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್) ಅಧೀನದಲ್ಲಿರುವ ರಾಷ್ಟ್ರೀಯ ಮಾಂಸ ಸಂಶೋಧನಾ ಸಂಸ್ಥೆಯ (ಎನ್‌ಎಂಆರ್‌ಐ) ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಅಲ್ಲಿ ನಡೆಸಲಾದ ಪರೀಕ್ಷೆಯ ವರದಿ ಬಂದಿದ್ದು, ಅದರಲ್ಲಿ ಎಲ್ಲವೂ ಕುರಿ ಮಾಂಸ ಎನ್ನುವುದು ಖಚಿತಪಟ್ಟಿದೆ’ ಎಂದು ಹೇಳಿದರು.

‘ಮಾಂಸದ ಶುಚಿತ್ವ ಮತ್ತು ಅದರಲ್ಲಿ ಬ್ಯಾಕ್ಟೀರಿಯಾ ಬೆಳವಣಿಗೆಗೆ ಸಂಬಂಧಿಸಿದಂತೆಯೂ ಮಾದರಿಗಳನ್ನು ಸೂಕ್ಷ್ಮಾಣು ಜೀವವಿಜ್ಞಾನ ಪ್ರಯೋಗಾಲಯಕ್ಕೆ ಪರೀಕ್ಷೆಗೆ ನೀಡಲಾಗಿದೆ. ಈ ಪರೀಕ್ಷೆಯ ವರದಿ ಬರಬೇಕಿದೆ. ಬಳಿಕ ಈ ಮಾಂಸ ತಿನ್ನಲು ಯೋಗ್ಯವೇ? ರಾಸಾಯನಿಕಗಳನ್ನು ಬಳಸಲಾಗಿದೆಯೆ? ಎಂಬುದರ ಬಗ್ಗೆ ಸ್ಪಷ್ಟತೆ ದೊರೆಯಲಿದೆ. ಈ ವರದಿ ಎರಡರಿಂದ ಮೂರು ದಿನಗಳಲ್ಲಿ ದೊರೆಯಬಹುದು’ ಎಂದು ತಿಳಿಸಿದರು.

‘ಈ ಮಾಂಸ ತರಿಸಿದ್ದ ಅಬ್ದುಲ್ ರಜಾಕ್ ಅವರು ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎಐ) ಮಾರ್ಗಸೂಚಿ ಅನ್ವಯ ಅಗತ್ಯ ದಾಖಲೆ ಹೊಂದಿದ್ದಾರೆ. ಪಶ್ಚಿಮ ಬಂಗಾಳ, ಗುಜರಾತ್, ರಾಜಸ್ಥಾನದಿಂದ ಇಲ್ಲಿಗೆ ಮಾಂಸ ತರಿಸಲಾಗುತ್ತಿದೆ. ರಾಜಸ್ಥಾನದಿಂದ ಮಾಂಸ ತರಿಸಲು ಒಂಬತ್ತು ಮಂದಿ ಪರವಾನಗಿ ಹೊಂದಿದ್ದಾರೆ. ಬೇರೆ ರಾಜ್ಯಗಳಿಂದ ಮಾಂಸ ತರಿಸಲು ಎಷ್ಟು ಮಂದಿ ಪರವಾನಗಿ ಪಡೆದಿದ್ದಾರೆ ಎಂಬ ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದು ಹೇಳಿದರು.

ಸರ್ಕಾರಿ ಜಮೀನು ಉಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಆದೂರು ಗ್ರಾಮದಲ್ಲಿ ಪ್ರಭಾವಿಗಳು ಅತಿಕ್ರಮಣ ಮಾಡಿಕೊಂಡಿರುವ ಸರ್ಕಾರಿ ಗೋಮಾಳ, ಖರಾಬು ಹಾಗೂ ರಾಜ ಕಾಲುವೆಗಳಲ್ಲಿನ ಒತ್ತುವರಿ ತೆರವುಗೊಳಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಮತ್ತು ಕರ್ನಾಟಕ ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ಕಾರ್ಯಕರ್ತರು ದಾಖಲೆ ಹಿಡಿದು ಪ್ರತಿಭಟನೆ ನಡೆಸಿದರು.

‘ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಆದೂರು ಗ್ರಾಮದ ಸರ್ವೆ ನಂಬರ್ 135 ಮತ್ತು 85 ರಲ್ಲಿರುವ ಕೋಟ್ಯಂತರ ರೂಪಾಯಿ ಬೆಲೆಬಾಳುವ ಸರ್ಕಾರಿ ಜಮೀನನ್ನು ಬಲಾಢ್ಯರು ಒತ್ತುವರಿ ಮಾಡಿಕೊಂಡಿದ್ದಾರೆ. ಸರ್ಕಾರಕ್ಕೆ ನಷ್ಟ ಉಂಟು ಮಾಡಿದ್ದಾರೆ’ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

‘ಆದೂರು ಗ್ರಾಮದಲ್ಲಿನ ಸರ್ಕಾರಿ ಜಾಗದಲ್ಲಿ ಕಾಂಪೌಂಡ್ ನಿರ್ಮಿಸಿ ಅನಧಿಕೃತವಾಗಿ ಬಡಾವಣೆ ನಿರ್ಮಾಣ ಮಾಡಲಾಗುತ್ತಿದೆ. ಇಷ್ಟೆಲ್ಲ ಅಕ್ರಮಗಳು ನಡೆಯುತ್ತಿದ್ದರೂ ಬಿದರಹಳ್ಳಿ ಗ್ರಾಮ ಪಂಚಾಯತಿ ಅಧಿಕಾರಿಗಳು ಬಡಾವಣೆ ನಿರ್ಮಾಣ ನಕ್ಷೆಗೆ ಅನುಮೋದನೆ ನೀಡಿದ್ದಾರೆ’ ಎಂದು ಗ್ರಾಮದ ನಿವಾಸಿ ಆದೂರು ಮಂಜುನಾಥ್ ದೂರಿದರು.

‘ಕೆ.ಆರ್.ಪುರ ಪೂರ್ವ ತಾಲ್ಲೂಕು ತಹಶೀಲ್ದಾರ್ ಅವರು ಖುದ್ದು ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಬೇಕು. ಕರ್ತವ್ಯ ಲೋಪ ಎಸಗಿದ ಅಧಿಕಾರಿಗಳನ್ನು ತಕ್ಷಣವೇ ಅಮಾನತುಗೊಳಿಸಬೇಕು’ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಬೆಂಗಳೂರು ನಗರ ಜಿಲ್ಲಾ ಪ್ರಧಾನ ಸಂಚಾಲಕ ಮುನಿನಂಜಪ್ಪ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಡಿಎಸ್‌ಎಸ್ ಬೆಂಗಳೂರು ವಿಭಾಗೀಯ ಸಂಚಾಲಕ ಮಣಿಪಾಲ್ ರಾಜಪ್ಪ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೆಎಎಸ್ ಪ್ರಿಲಿಮ್ಸ್ ಸ್ಪೆಷಲ್



ರೈಲ್ವೆಯಲ್ಲಿ ನೇಮಕಾತಿ

ಮಂಜುನಾಥ್ ಭದ್ರಶೆಟ್ಟಿ

ರೈಲ್ವೆ ಸಚಿವಾಲಯ ಮತ್ತೊಂದು ದೊಡ್ಡ ನೇಮಕಾತಿಗೆ ಚಾಲನೆ ನೀಡಿದೆ. ಜನವರಿಯಲ್ಲಿ ಪ್ರಾರಂಭಿಸಲಾಗಿದ್ದ 5,696 ಸಹಾಯಕ ಲೊಕೊ ಪೈಲಟ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಸದ್ಯ ಚಾಲ್ತಿಯಲ್ಲಿದೆ.

ಇದೀಗ ಎಲ್ಲ 'ರೈಲ್ವೆ ನೇಮಕಾತಿ ಮಂಡಳಿ'ಗಳ (RRBs) ವ್ಯಾಪ್ತಿಯಲ್ಲಿ 7,386 ಜೂನಿಯರ್ ಎಂಜಿನಿಯರ್ ಹುದ್ದೆಗಳ ಭರ್ತಿಗೆ ಸಚಿವಾಲಯ ಹಸಿರು ನಿಶಾನೆ ತೋರಿಸಿದ್ದು, ಜುಲೈ 30ರಿಂದ ಅರ್ಜಿ ಸಲ್ಲಿಕೆ ಪ್ರಾರಂಭವಾಗಿದೆ. ಆಗಸ್ಟ್ 30 ಕಡೆಯ ದಿನ.

7,386 ಜೂನಿಯರ್ ಎಂಜಿನಿಯರ್ ಹುದ್ದೆಗಳ ಭರ್ತಿಗೆ ನಿಶಾನೆ

ಅರ್ಹ ಪುರುಷ, ಮಹಿಳೆ, ಲಿಂಗತ್ವ ಅಲ್ಪಸಂಖ್ಯಾತರು ಅರ್ಜಿ ಸಲ್ಲಿಸಬಹುದು. ಸಾಮಾನ್ಯ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ ₹500, ಎಸ್.ಸಿ/ಎಸ್‌ಟಿ, ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹250 ಶುಲ್ಕವಿದೆ.

18 ರಿಂದ 36 ವರ್ಷ ವಯೋಮಾನದವರು ಅರ್ಜಿ ಸಲ್ಲಿಸಲು ಅರ್ಹರು. ಎಸ್.ಸಿ, ಎಸ್‌ಟಿ, ಒಬಿಸಿ, ಇತರೆ ಅಭ್ಯರ್ಥಿಗಳಿಗೆ ವಯೋಮಾನದಲ್ಲಿ ಸಡಿಲಿಕೆ ಇದೆ. ಮೂರು ವರ್ಷದ ತಾಂತ್ರಿಕ ಡಿಪ್ಲೊಮಾ ಅಥವಾ ಎಂಜಿನಿಯರಿಂಗ್ ಪದವಿಯನ್ನು ನಿಗದಿತ ವಿಷಯಗಳಲ್ಲಿ (ಅಧಿಸೂಚನೆ ಪರಿಶೀಲಿಸಿ) ಪಡೆದವರು ಅರ್ಜಿ ಸಲ್ಲಿಸಲು ಅರ್ಹ.

ದೇಶದಲ್ಲಿರುವ ಒಟ್ಟು 21 ರೈಲ್ವೆ ನೇಮಕಾತಿ ಮಂಡಳಿಗಳು ಒಟ್ಟಾರೆ ಹುದ್ದೆಗಳಲ್ಲಿನ ತಮ್ಮ ವ್ಯಾಪ್ತಿಯ ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆ ನಡೆಸುತ್ತವೆ. ಅಭ್ಯರ್ಥಿಗಳು ತಮ್ಮ ಇಷ್ಟದ ಮಂಡಳಿಯ ಅಧಿಕೃತ ವೆಬ್‌ಸೈಟ್‌ನಲ್ಲಿ, ಒಬ್ಬ ಅಭ್ಯರ್ಥಿ ಒಂದು ಕಡೆಗೆ ಮತ್ತು ಒಂದು ಅರ್ಜಿ ಮಾತ್ರ ಸಲ್ಲಿಸಬಹುದು. ಇದಕ್ಕಾಗಿ ಎಲ್ಲ ಮಂಡಳಿಗಳಿಗೂ ಅನ್ವಯವಾಗುವಂತೆ ಏಕೀಕೃತ ವಿವರಾಣಾತ್ಮಕ ಅಧಿಸೂಚನೆ ಹೊರಡಿಸಲಾಗಿದೆ.



- ಬೆಂಗಳೂರು ಆರ್‌ಆರ್‌ಬಿಯಲ್ಲಿ 384 ಜೂನಿಯರ್ ಎಂಜಿನಿಯರ್ ಹುದ್ದೆಗಳಿವೆ.
- ಬೆಂಗಳೂರು ಆರ್‌ಆರ್‌ಬಿ ವೆಬ್‌ಸೈಟ್ www.rrbbnc.gov.in
- ಒಟ್ಟು ನಾಲ್ಕು ಹಂತಗಳಲ್ಲಿ ಈ ನೇಮಕಾತಿ ಪ್ರಕ್ರಿಯೆ ನಡೆಯಲಿದೆ.

ಮತ್ತಷ್ಟು ಹುದ್ದೆಗಳು

ಜೂನಿಯರ್ ಎಂಜಿನಿಯರ್ ಹುದ್ದೆಗಳ ಜತೆಗೆ ಡಿಪೊ ಮಟಿರಿಯಲ್ ಸುಪರಿಟೆಂಡೆಂಟ್ (398), ಕೆಮಿಕಲ್ ಆ್ಯಂಡ್ ಮೆಟಲರ್ಜಿಕಲ್ ಅಸಿಸ್ಟಂಟ್ (150) ಮತ್ತು ಕೆಮಿಕಲ್ ಸೂಪರ್‌ವೈಸರ್, ಮೆಟಲರ್ಜಿಕಲ್ ಸೂಪರ್‌ವೈಸರ್ (17) ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ. ಬಿ.ಎಸ್ಸಿ (ರಸಾಯನವಿಜ್ಞಾನ, ಭೌತವಿಜ್ಞಾನ) ಮತ್ತು ಎಂಜಿನಿಯರಿಂಗ್ ಪದವಿ ಹೊಂದಿರುವವರು ಅರ್ಜಿ ಸಲ್ಲಿಸಬಹುದು. ಈ ಹುದ್ದೆಗಳಿಗೂ ಜೂನಿಯರ್ ಎಂಜಿನಿಯರ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯೇ ಅನ್ವಯವಾಗುತ್ತದೆ.

21 ರೈಲ್ವೆ ನೇಮಕಾತಿ ಮಂಡಳಿಗಳು

ಭಾರತೀಯ ರೈಲ್ವೆಯ 17 ವಲಯಗಳಲ್ಲಿ ಒಟ್ಟು 21 ರೈಲ್ವೆ ನೇಮಕಾತಿ ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು, ಅಜ್ಮೀರ್, ಅಹಮದಾಬಾದ್, ಭೋಪಾಲ್, ಭುವನೇಶ್ವರ, ಬಿಲಾಸ್‌ಪುರ, ಚಂಡೀಗಢ, ಚೆನ್ನೈ, ಗೋರಖಪುರ, ಗುವಾಹಟಿ, ಜಮ್ಮು, ಶ್ರೀನಗರ, ಕೋಲ್ಕತ್ತ, ಮಾಲ್ಡಾ, ಮುಂಬೈ, ಮುಜಾಫರ್‌ಪುರ, ಪಟ್ನಾ, ಪ್ರಯಾಗರಾಜ್, ರಾಂಚಿ, ಸಿಕಂದರಾಬಾದ್, ಸಿಲಿಗುರಿ, ತಿರುವನಂತಪುರ.

ನೇಮಕಾತಿ ಪ್ರಕ್ರಿಯೆ ಹೇಗಿದೆ?

CBT–1: ಮೊದಲಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆ–1 ನಡೆಯಲಿದೆ. ಇದರಲ್ಲಿ 100 ಪ್ರಶ್ನೆಗಳಿಗೆ 100 ಅಂಕಗಳ 90 ನಿಮಿಷ ಅವಧಿಯ ಒಂದೇ ಪತ್ರಿಕೆ ಇರುತ್ತದೆ. ಇದು ಸಾಮಾನ್ಯ ಜ್ಞಾನದ ಪತ್ರಿಕೆಯಾಗಿರುತ್ತದೆ. ತಲಾ 4 ತಪ್ಪು ಉತ್ತರಗಳಿಗೆ ಒಂದು ಅಂಕ ಕಳೆಯಲಾಗುತ್ತದೆ. ಮುಂದಿನ ಹಂತಕ್ಕೆ ಹೋಗಬೇಕಾದರೆ ಇದರಲ್ಲಿ ಕನಿಷ್ಠ (ಶೇ. 40) ಅಂಕಗಳನ್ನು ಪಡೆಯಲೇಬೇಕು. 1:15 ಅನುಪಾತದಂತೆ ಮುಂದಿನ ಹಂತಕ್ಕೆ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆ ಹೊಂದಿರುತ್ತದೆ.

CBT–2: ಇದರಲ್ಲಿ 150 ಪ್ರಶ್ನೆಗಳಿಗೆ 150 ಅಂಕಗಳ 120 ನಿಮಿಷ ಅವಧಿಯ ಒಂದೇ ಪತ್ರಿಕೆ ಇರುತ್ತದೆ. ಇದು ವಿಷಯಾಧಾರಿತ ಪತ್ರಿಕೆಯಾಗಿರುತ್ತದೆ. ತಲಾ 4 ತಪ್ಪು ಉತ್ತರಗಳಿಗೆ ಒಂದು ಅಂಕ ಕಳೆಯಲಾಗುತ್ತದೆ. ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆ ಹೊಂದಿರುತ್ತದೆ.

3 ಮತ್ತು 4ನೇ ಹಂತ: ಸಿಬಿಟಿ ಎರಡರಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳಿಗೆ ಮೂರನೇ ಹಂತದಲ್ಲಿ ಮೂಲ ದಾಖಲೆಗಳ ಪರಿಶೀಲನೆ ನಡೆಯಲಿದೆ. ನಾಲ್ಕನೇ ಹಂತದಲ್ಲಿ ವಿವರವಾದ ವೈದ್ಯಕೀಯ ಪರೀಕ್ಷೆ ಇರಲಿದೆ. ನಂತರ ಅಂತಿಮ ಆಯ್ಕೆ ಪಟ್ಟಿ ಪ್ರಕಟವಾಗಲಿದೆ.

ಆಸಕ್ತ ಅಭ್ಯರ್ಥಿಗಳು ತಮ್ಮ ವ್ಯಾಪ್ತಿಯ ರೈಲ್ವೆ ಮಂಡಳಿ ವೆಬ್‌ಸೈಟ್‌ಗೆ ಭೇಟಿ ನೀಡಿ ಹುದ್ದೆಗಳ ವರ್ಗೀಕರಣ, ಪರೀಕ್ಷಾ ಪಠ್ಯಕ್ರಮ ಹಾಗೂ ಇತರೆ ಹೆಚ್ಚಿನ ಮಾಹಿತಿಗೆ ವಿವರವಾದ ಅಧಿಸೂಚನೆ ನೋಡಿಕೊಂಡು ಅರ್ಜಿ ಸಲ್ಲಿಸಬೇಕು. ❖

ಐಟಿಬಿಪಿಯಲ್ಲಿ 128 ವಿವಿಧ ಹುದ್ದೆಗಳು

ಇಂಡೊ ಟಿಬೆಟಿಯನ್ ಬಾರ್ಡರ್ ಪೊಲೀಸ್ ಪಡೆಯಲ್ಲಿ (ITBP) ಹೆಡ್ ಕಾನ್‌ಸ್ಟೆಬಲ್ ವೆಟೆರಿನರಿ, ಕಾನ್‌ಸ್ಟೆಬಲ್ ಅನಿಮಲ್ ಟ್ರಾನ್ಸ್‌ಪೋರ್ಟ್ ಮತ್ತು ಕಾನ್‌ಸ್ಟೆಬಲ್ ಕೆನಲ್‌ಮೆನ್ (ಶ್ವಾನ ಪಡೆ) ಎಂಬ 128 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಹೆಡ್ ಕಾನ್‌ಸ್ಟೆಬಲ್ ವೆಟೆರಿನರಿ (ಪುರುಷ–ಮಹಿಳೆ) 9, ಕಾನ್‌ಸ್ಟೆಬಲ್ ಅನಿಮಲ್ ಟ್ರಾನ್ಸ್‌ಪೋರ್ಟ್ (ಪುರುಷ–ಮಹಿಳೆ) 115, ಕಾನ್‌ಸ್ಟೆಬಲ್ ಕೆನಲ್‌ಮೆನ್ (ಪುರುಷರಿಗೆ ಮಾತ್ರ) 4 ಹುದ್ದೆ.

ಹೆಡ್ ಕಾನ್‌ಸ್ಟೆಬಲ್ ವೆಟೆರಿನರಿ, ಕಾನ್‌ಸ್ಟೆಬಲ್ ಕೆನಲ್‌ಮೆನ್ ಹುದ್ದೆಗಳಿಗೆ ಕನಿಷ್ಠ 18 ಹಾಗೂ ಗರಿಷ್ಠ 27 ವರ್ಷ ವಯಸ್ಸು ಮೀರಿರಬಾರದು. ಕಾನ್‌ಸ್ಟೆಬಲ್ ಅನಿಮಲ್ ಟ್ರಾನ್ಸ್‌ಪೋರ್ಟ್ ಹುದ್ದೆಗಳಿಗೆ ಕನಿಷ್ಠ 18 ಹಾಗೂ ಗರಿಷ್ಠ 25

ಹೆಡ್ ಕಾನ್‌ಸ್ಟೆಬಲ್ ವೆಟೆರಿನರಿ ಹುದ್ದೆಗಳಿಗೆ 12 ನೇ ತರಗತಿ ಉತ್ತೀರ್ಣ ಜೊತೆಗೆ ವೆಟೆರಿನರಿ ಡಿಪ್ಲೋಮಾ ಅಥವಾ ಪ್ಯಾರಾ ವೆಟೆರಿನರಿ ಕೋರ್ಸ್ ಹೊಂದಿರಬೇಕು. ಕಾನ್‌ಸ್ಟೆಬಲ್ ಅನಿಮಲ್ ಟ್ರಾನ್ಸ್‌ಪೋರ್ಟ್, ಕಾನ್‌ಸ್ಟೆಬಲ್ ಕೆನಲ್‌ಮೆನ್ ಹುದ್ದೆಗಳಿಗೆ 10 ನೇ ತರಗತಿ ಪಾಸಾಗಿರಬೇಕು. ಈ ಎಲ್ಲ ಹುದ್ದೆಗಳಿಗೆ ದೈಹಿಕ ಪರೀಕ್ಷೆ, ಲಿಖಿತ ಪರೀಕ್ಷೆ ಮತ್ತು ವೈದ್ಯಕೀಯ ಪರೀಕ್ಷೆ ಇರಲಿದೆ.

ಆಗಸ್ಟ್ 12ರಿಂದ ಅರ್ಜಿ ಸಲ್ಲಿಕೆ ಆರಂಭವಾಗಲಿದ್ದು ಸೆಪ್ಟೆಂಬರ್ 10 ಕಡೆಯ ದಿನ. ಶುಲ್ಕ ₹100. ವಿವರವಾದ ಅಧಿಸೂಚನೆಗೆ ಹಾಗೂ ಆನ್‌ಲೈನ್ ಅರ್ಜಿ ಸಲ್ಲಿಸಲು **recruitment.itbpolice.nic.in** ವೆಬ್‌ಸೈಟ್ ಪರಿಶೀಲಿಸಬೇಕು.

ಆರ್ಥಿಕ ಸಮೀಕ್ಷೆ

ಮುಂಬರಲಿರುವ ಕೆಎಎಸ್ ಪೂರ್ವಭಾವಿ ಪರೀಕ್ಷೆಗೆ ಅವಶ್ಯಕವಿರುವ ಕೆಲವೊಂದು ಯೋಜನೆಗಳ ಬಗ್ಗೆ ಕಿರುಮಾಹಿತಿ ನೀಡಲಾಗಿದೆ.

ಯು.ಟಿ. ಆಯಿಷಾ ಫರ್ಝಾನ

ಕುರುಬರ ಸುರಕ್ಷಾ ಯೋಜನೆ/ಕುರುಬರಿಗೆ ಅನುಗ್ರಹ ಕೊಡುಗೆ

20ನೇ ಜಾನುವಾರು ಗಣತಿಯ ಪ್ರಕಾರ ರಾಜ್ಯದಲ್ಲಿ 110.51 ಲಕ್ಷ ಕುರಿಗಳು ಮತ್ತು 61.69 ಲಕ್ಷ ಮೇಕೆಗಳಿವೆ. ರಾಜ್ಯ ಸರ್ಕಾರವು ಕುರುಬರಿಗೆ ಕುರುಬರ ಸುರಕ್ಷಾ ಯೋಜನೆ/ಅನುಗ್ರಹ ಕೊಡುಗೆ ಯೋಜನೆ ಜಾರಿಗೊಳಿಸಿದ್ದು, ಆಕಸ್ಮಿಕವಾಗಿ ಕುರಿ, ಮೇಕೆಗಳು ಮೃತಪಟ್ಟರೆ ಈ ಯೋಜನೆಯ ಮೂಲಕ ಪರಿಹಾರ ನೀಡಲಾಗುತ್ತಿದೆ. 6 ತಿಂಗಳ ಮೇಲ್ಪಟ್ಟ ಕುರಿ ಮತ್ತು ಮೇಕೆಗಳು ಮೃತಪಟ್ಟರೆ ತಲಾ ₹5,000 ಪಾವತಿಸಲಾಗುತ್ತದೆ ಮತ್ತು 3 ರಿಂದ 6 ತಿಂಗಳ ನಡುವಿನ ವಯಸ್ಸಿನ ಕುರಿ ಮತ್ತು ಮೇಕೆಗಳಿಗೆ ₹ 3,500 ಪಾವತಿಸಲಾಗುತ್ತದೆ.

ಸಸ್ಯಸಿರಿ

ರೈತರು ಮತ್ತು ನಾಗರಿಕರಿಗೆ ನೆರವಾಗಲೆಂದು ಸಸ್ಯಸಿರಿ (ಇ-ಪೋರ್ಟಲ್) ಹೊಸ ವೆಬ್‌ಸೈಟ್ ಲೋಕಾರ್ಪಣೆಗೊಳಿಸಲಾಗಿದೆ. ತೋಟಗಳು ಮತ್ತು ನರ್ಸರಿಗಳಲ್ಲಿ ಲಭ್ಯವಾಗುವ ಕಸಿಗಳು, ಮೊಳಕೆ ಸಸಿಗಳು ಮತ್ತು ಜೈವಿಕ ಗೊಬ್ಬರಗಳ ಲಭ್ಯತೆಯ ಬಗ್ಗೆ ಮಾಹಿತಿ ನೀಡುತ್ತದೆ ಈ ವೆಬ್‌ಸೈಟ್.

ರೈತ ಸಿರಿ ಯೋಜನೆ

ರಾಜ್ಯದಲ್ಲಿ ಸಿರಿಧಾನ್ಯ ಕೃಷಿಯನ್ನು ಉತ್ತೇಜಿಸಲು ರೈತ ಸಿರಿ ಯೋಜನೆಯು ಸಾವಯವ ಮತ್ತು ಸಾಂಪ್ರದಾಯಿಕವಾಗಿ ಬೆಳೆದ ಸಿರಿಧಾನ್ಯಗಳನ್ನು ಬೆಳೆಯಲು ಪ್ರೋತ್ಸಾಹಿಸುತ್ತದೆ.

ಬೆಳೆ ಸಮೀಕ್ಷೆಯ ಆಧಾರದ ಮೇಲೆ, ಈ ಕಿರುಧಾನ್ಯಗಳನ್ನು ಬೆಳೆಯುವ ರೈತರಿಗೆ ಪ್ರೋತ್ಸಾಹ ಧನ ಪ್ರತಿ ಹೆಕ್ಟೇರ್‌ಗೆ ₹ 10,000 ನೇರ ಲಾಭ ವರ್ಗಾವಣೆ (DBT) ಮೂಲಕ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾಯಿಸಲಾಗುತ್ತದೆ. ಯೋಜನೆಯು 2023-24 ರಲ್ಲಿಯೂ ಮುಂದುವರಿಯುತ್ತದೆ.

- ಹೆಚ್ಚುವರಿಯಾಗಿ, ಸಿರಿಧಾನ್ಯಗಳ ಸಂಸ್ಕರಣೆ, ಗ್ರೇಡಿಂಗ್, ಮೌಲ್ಯವರ್ಧನೆ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಅನ್ನು ಉತ್ತೇಜಿಸಲು ಸಿರಿಧಾನ್ಯಸಂಸ್ಕರಣಾ ಯಂತ್ರಗಳಿಗೆ ಶೇ 50 ಸಬ್ಸಿಡಿ ಅಥವಾ ಗರಿಷ್ಠ ₹ 10 ಲಕ್ಷ ರೂಪಾಯಿ ಒದಗಿಸಲಾಗುತ್ತದೆ. 2023-24ರ ಅವಧಿಯಲ್ಲಿ 46,736 ಹೆಕ್ಟೇರ್ ಪ್ರದೇಶದಲ್ಲಿ 45,715 ರೈತರು ಈ ಯೋಜನೆಯ ಲಾಭ ಪಡೆದಿದ್ದಾರೆ.
- ಸಿರಿಧಾನ್ಯಗಳು ಹಳೆಯ ಆಹಾರಗಳಲ್ಲಿ ಒಂದಾಗಿದೆ. ಸಿಂಧೂ ಕಣಿವೆ ನಾಗರಿಕತೆಯ ಅವಧಿಯಲ್ಲಿ ಅವುಗಳ ಬಳಕೆಯನ್ನು ಸೂಚಿಸುವ ಹಲವು ಪುರಾವೆಗಳು ಲಭ್ಯವಾಗಿದ್ದು ಭಾರತದಲ್ಲಿ ಬೆಳೆಯುತ್ತಿದ್ದ ಪ್ರಾರಂಭದ ಬೆಳೆಗಳಲ್ಲಿ ಸಿರಿಧಾನ್ಯಗಳು ಸೇರಿವೆ. ರಾಗಿ, ಜೋಳ, ಸಜ್ಜೆ, ನವಣೆ, ಬರಗು, ಸಾಮೆ, ಊದಲು, ಅರ್ಕ ಮತ್ತು ಕೊರಲೆ ನಮ್ಮ ರಾಜ್ಯದಲ್ಲಿ ಬೆಳೆಯುವ ಸಿರಿಧಾನ್ಯಗಳಾಗಿವೆ.

'ಮುಖ್ಯಮಂತ್ರಿ ರೈತ ವಿದ್ಯಾ ನಿಧಿ'

ಉನ್ನತ ಶಿಕ್ಷಣ ಪಡೆಯುವಂತೆ ರೈತ ಮಕ್ಕಳನ್ನು ಪ್ರೋತ್ಸಾಹಿಸಲು 'ಮುಖ್ಯಮಂತ್ರಿ ರೈತ ವಿದ್ಯಾ ನಿಧಿ' ಪರಿಚಯಗೊಂಡಿದೆ. ಇದರ ಮೂಲಕ 8, 9 ಮತ್ತು 10ನೇ ತರಗತಿಗಳಲ್ಲಿ ಓದುತ್ತಿರುವ ರೈತ ಕುಟುಂಬಗಳ ಹೆಣ್ಣುಮಕ್ಕಳಿಗೆ ಮತ್ತು 10ನೇ ತರಗತಿ ಪೂರ್ಣಗೊಳಿಸಿದ ಮತ್ತು ರಾಜ್ಯದ ಯಾವುದೇ ನೋಂದಾಯಿತ ಶಿಕ್ಷಣ ಸಂಸ್ಥೆ ಅಥವಾ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಕೋರ್ಸ್‌ಗಳಿಗೆ ದಾಖಲಾದ ರೈತ ಕುಟುಂಬಗಳ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತದೆ. ಈ ವಿದ್ಯಾರ್ಥಿ ವೇತನವನ್ನು ನೇರ ಲಾಭ ವರ್ಗಾವಣೆ ಮೂಲಕ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗುತ್ತದೆ.

2022-23ರ ಸಾಲಿನಲ್ಲಿ 11,86,885 ವಿದ್ಯಾರ್ಥಿಗಳಿಗೆ ಡಿಬಿಟಿ ಮೂಲಕ ₹ 578.57 ಕೋಟಿ ವರ್ಗಾಯಿಸಲಾಗಿದೆ. ಹೆಚ್ಚುವರಿಯಾಗಿ 2022-23ನೇ ಶೈಕ್ಷಣಿಕ ವರ್ಷದಿಂದ ಭೂರಹಿತ ಕೃಷಿ ಕಾರ್ಮಿಕರ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲು ಮುಖ್ಯಮಂತ್ರಿ ರೈತ ವಿದ್ಯಾ ನಿಧಿ ಕಾರ್ಯಕ್ರಮವನ್ನು ವಿಸ್ತರಿಸಲಾಗಿದೆ. ಈ ವಿಸ್ತರಣೆಯ ಅಡಿಯಲ್ಲಿ 60,938 ವಿದ್ಯಾರ್ಥಿಗಳಿಗೆ ಒಟ್ಟು₹19.67 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ರೈತ ವಿದ್ಯಾ ನಿಧಿ ಕಾರ್ಯಕ್ರಮದ ಅನುಷ್ಠಾನವು 2023-24ನೇ ಹಣಕಾಸು ವರ್ಷಕ್ಕೆ ಮುಂದುವರಿಯುತ್ತಿದೆ.

ಪುಣ್ಯಕೋಟಿ ದತ್ತು ಯೋಜನೆ

ಡಿಸೆಂಬರ್ 2023ರ ಅಂತ್ಯದ ವೇಳೆಗೆ, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ನಿರ್ವಹಿಸುವ ಪುಣ್ಯಕೋಟಿ ದತ್ತು ಯೋಜನೆಯು, ವೆಬ್ ಪೋರ್ಟಲ್ www.punyakoti.karahvs.in ಮೂಲಕ 209 ನೋಂದಾಯಿತ ಗೋಶಾಲೆಗಳಿಂದ ಒಟ್ಟು 2075 ಜಾನುವಾರುಗಳನ್ನು ದತ್ತು ಪಡೆದಿದೆ.

- ಪ್ರತಿ ಜಾನುವಾರನ್ನು ದತ್ತು ಪಡೆಯಲು ವರ್ಷಕ್ಕೆ ₹ 11,000 ನೀಡಬೇಕಾಗುತ್ತದೆ ಹಾಗೂ ಈ ಸಲುವಾಗಿ ನೀಡಲ್ಪಟ್ಟ ಒಟ್ಟು ದೇಣಿಗೆ ಮೊತ್ತ ₹ 228.25 ಲಕ್ಷ. ಈ ದೇಣಿಗೆಯ ಮೊತ್ತದಲ್ಲಿ ದತ್ತು ಪಡೆದ ಜಾನುವಾರುಗಳನ್ನು ಒಂದು ವರ್ಷದ ಅವಧಿಗೆ ನೋಡಿಕೊಳ್ಳಬಹುದು.

ರಾಜ್ಯದ ಒಟ್ಟು ದೇಶೀಯ ಉತ್ಪನ್ನದಲ್ಲಿ (GSDP) ಪಶುಸಂಗೋಪನೆಯ ಪಾಲು ಶೇ 3.78. 2022-23ರಲ್ಲಿ ಹಸು ಮತ್ತು ಎಮ್ಮೆ ಹಾಲು ಉತ್ಪಾದನೆಯಲ್ಲಿ ಭಾರತವು ವಿಶ್ವದಲ್ಲಿ ಮೊದಲ ಸ್ಥಾನದಲ್ಲಿದೆ. ಕರ್ನಾಟಕವು ಭಾರತದ ರಾಜ್ಯಗಳಲ್ಲಿ ಹಾಲು ಉತ್ಪಾದನೆಯಲ್ಲಿ 9ನೇ ಸ್ಥಾನದಲ್ಲಿದೆ ಹಾಗೂ ಈ ಅವಧಿಯಲ್ಲಿ ಒಟ್ಟು 12.83 ಮಿಲಿಯನ್ ಮೆಟ್ರಿಕ್ ಟನ್ ಹಾಲು ಉತ್ಪಾದನೆಯಾಗಿದೆ.



ಸಮಗ್ರ ಗೋ ಸಂಕುಲ ಸಮೃದ್ಧಿ ಯೋಜನೆ

- 'ಸಮಗ್ರ ಗೋ ಸಂಕುಲ ಸಮೃದ್ಧಿ ಯೋಜನೆ'ಯು ಗಿರ್, ಸಾಹಿವಾಲ್, ಓಂಗೋಲ್, ಥಾರ್‌ಪಾರ್ಕರ್ ಮತ್ತು ದೇವನಿಯಂತಹ ಸ್ಥಳೀಯ ತಳಿಯ ಜಾನುವಾರುಗಳನ್ನು ಅಭಿವೃದ್ಧಿಪಡಿಸಲು ರೂಪುಗೊಳಿಸಲಾದ ಕಾರ್ಯಕ್ರಮವಾಗಿದೆ.
- ಈ ಕಾರ್ಯಕ್ರಮವು ವೀರ್ಯ ಉತ್ಪಾದನೆಗಾಗಿ ಇಲಾಖೆಯ ಘನೀಕೃತ ವೀರ್ಯ ಸಂಸ್ಕರಣಾ ಕೇಂದ್ರಗಳಿಗೆ ತಳಿ ಸಂತಾನೋತ್ಪತ್ತಿಗಾಗಿ ಉತ್ತಮ ಗುಣಮಟ್ಟದ ರಾಸುಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ. ಮತ್ತು ಅವುಗಳನ್ನು ರಾಜ್ಯದ ಆಸಕ್ತ ರೈತರಿಗೆ ಪರಿಚಯಿಸುತ್ತದೆ. 2023-24ರ ಆರ್ಥಿಕ ವರ್ಷದಲ್ಲಿ, ನವೆಂಬರ್ 2023 ರವರೆಗೆ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ₹ 1 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ₹ 78.72 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ


ಎಸ್ಸೆಸ್ಸೆಲ್ಸಿ - ಇಂಗ್ಲಿಷ್

Unit-2 PROSE

There's a Girl by the Tracks!

Read and respond

Task 1 : Look at the picture- 1 in column 'A'. Some statements are made in column 'B' about the actions as seen in 'A'. Some of the statements are wrong, and some of them are right. If they are wrong, correct them.If they are right mark(√)



1. A woman is walking alone. right( )/wrong ( ).
2. Some children are playing cricket. right ( ) / wrong ( )
3. Three cows are seen in the picture. right ( ) / wrong ( ).
4. The window pane is broken. right ( ) / wrong ( )
5. A child is holding a tree. right ( ) / wrong ( ).
6. There is a river in the picture. right ( ) / wrong ( ).
7. In the background, there is a forest. right ( ) / wrong ( ).

Ans:-1. A woman is walking alone. Right()/ Wrong(√)

Expln- A woman is walking with a child.

2.Some children are playing cricket. Right(√)/ Wrong( )

3.Three cows are seen in the picture. Right( )/Wrong (√).

Expln: There are two cows seen in the picture.

4. The window pane is broken. Right(√) /Wrong ( )
5. A child is holding a tree. Right (√) / Wrong ( ).
6. There is a river in the picture. Right( ) /Wrong (√).

Expln: There is no river in the picture.

7. In the background, there is a forest. Right( ) /Wrong (√).

Expln: In the back ground there are buildings and huts.

Task 2: Look at the picture -2. Try to describe what you can see in the picture. Some clues are given. One is done for you.



a. There/ many/people/ picture.

There are many people in the picture.

b. some people / march procession.
c. child/ draw/ bow
d. two/ women/chat
e. some / children/ run.
f. a man/ sell/ balloons.

Ans:-

a. There/ many/people/ picture.
Ans:- There are many people in the picture.
b. some people / march procession.
Ans:- Some people are marching in a procession.
c. child/ draw/ bow
Ans:- A child has drawn a bow.
d. two/ women/chat
Ans:- Two women are engrossed in a chat.
e. some / children/ run.
Ans:- Some children are running down the road.
f. a man/ sell/ balloons.
Ans:- A man is selling balloons.

Practice writing

Task 1 : Read the following letter written by a resident of Bangalore about a public problem in Bangalore.

G. Manjunath
#32 5th Cross, 3rd Main
Rajajinagar Bengaluru
12th July, 2024

To,
The Editor
English Daily, .Bangalore

Dear Sir,

Sub: Vehicles on roads.

The BBMP had done a good job by repairing the pavements and evicting vegetables vendors from the Gandhi Bazaar Road. However, some people have been parking their vehicles on the road now. The traffic authorities should take steps to prevent vehicles from being parked on the roadside.

Thank you

Yours faithfully
XXXXXXX

Task 2: Work in pairs and write a letter to the editor column focusing on the problems of your locality

S. Venkatesh
3, Veera Sadana
7th Cross, 12th Main
Vijaynagar Bangalore
12th July, 2024

To,
The Editor
English Daily, Bangalore

(Contd…….)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC CHEMISTRY

CHEMICAL KINETICS

33. What is first order reaction?

Ans:- A chemical reaction in which the rate is directly proportional to the first power of the molar concentration of the reactant is a first order reaction.

Eg:- (a) Decomposition of nitrogen pentoxide

The experimental rate equation is -

$v = k[N_2O_5]^1$. Hence the order = 1

(b) The decomposition of ammonium nitrite in the aqueous solution.

$NH_4NO_2 \rightarrow 2H_2O + N_2\uparrow$

The experimental rate equation is -

$v = k[NH_4NO_2]^1$. Hence the order = 1

34. Show that the order of a reaction can be a fraction.

Ans:- Consider formation of hydrogen bromide,

$H_2 + Br_2 \rightarrow 2HBr$

Experimental rate equation for this reaction is

$v = k[H_2]^1[Br_2]^{1/2}$.

Hence, order of reaction is $1 + \frac{1}{2} = \frac{3}{2}$

(b) Consider the decomposition of acetaldehyde into methane and carbon monoxide.

$CH_3CHO \rightarrow CH_4 + CO$

Experimental rate equation is

$v = k[CH_3CHO]^{3/2}$. Hence, order $= \frac{3}{2}$

From the above illustrations it is proved that the order can be a fraction.

35. Give some examples for the second order reactions.

Ans:- Some examples for 2nd order reactions are (a) Saponification of ethyl acetate

$CH_3COOC_2H_5 + NaOH \rightarrow CH_3COONa + C_2H_5OH$

The rate of the reaction is -

$v = k[CH_3COOC_2H_5][NaOH]$.

Hence the order = 1 + 1 = 2

(b) Formation of hydrogen iodide

$H_2 + I_2 \rightarrow 2HI$

The rate of the reaction is -

$v = k[H_2][I_2]$. Hence the order = 1 + 1 = 2

36. Give some examples for the third order reactions.

Ans:- Some examples for 3rd order reactions are-

(a) Oxidation of stannous chloride by ferric chloride

$2FeCl_3 + SnCl_2 \rightarrow 2FeCl_2 + SnCl_4$

The rate of the reaction is -

$v = k[SnCl_2]^1[FeCl_3]^2$.

Hence the order = 1 + 2 = 3

(b) Reaction between nitric oxide and oxygen

$2NO + O_2 \rightarrow 2NO_2$

The rate of the reaction is –

$v = k[NO]^2[O_2]^1$. Hence order = 1+2=3

37. Mention some of the differences between the order and the molecularity of a reaction.

Ans:- Some of the differences between the order and the molecularity of a reaction are –

Order of a reaction	*Molecularity of a reaction*
It is the sum of the coefficients of the reacting species involved in the rate equation.	It is the number of reacting species involved in simultaneous collisions in an elementary reaction.
It is experimentally determined value.	It is a theoretical value.
It is derived from the rate equation.	It is derived from mechanism of reaction.
It depends upon pressure and temperature.	It is independent of pressure and temperature.
Order can be zero, a fraction or a whole number.	It is only a whole number.
The overall order of the multistep reaction is given by the slowest step only.	In a multistep reaction, the molecularities of all the steps are determined.

38. Mention the characteristics of the third order reaction?

Ans:- The characteristics of the third order reaction are as follows –

(a) The rate of the reaction increases 2^3 times when the concentration of each of the reactant is doubled

(b) The half life $(t_{1/2})$ of the third order reaction is inversely proportional to the square of the initial concentration, if there is only one reactant or the concentration of all the reactants is in the ratio found in the stoichiometric equation.

$t_{1/2} = \frac{3}{2a^2k}$ (or) $t_{1/2} \alpha \frac{1}{a^2}$

39. What is Activation energy (E_a)?

Ans:- The minimum extra energy that the (average) normal reacting molecule *(Contd…)*

ಮೇಲ್ಸೇತುವೆ: ಭೂಸ್ವಾಧೀನ ಪ್ರಕ್ರಿಯೆಗೆ ಭದ್ರತೆ– ಪೊಲೀಸ್ ಇಲಾಖೆಗೆ ಪತ್ರ

‘ಈದ್ಗಾ’ ಕಾಂಪೌಂಡ್ ತೆರವಿಗೆ ಕ್ರಮ

● ನಾಗರಾಜ್ ಬಿ.ಎನ್.

ಹುಬ್ಬಳ್ಳಿ: ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಮೇಲ್ಸೇತುವೆ ಕಾಮಗಾರಿಗೆ ರಾಣಿ ಚನ್ನಮ್ಮ ವೃತ್ತದ ಬಳಿಯಿರುವ ಈದ್ಗಾ ಮೈದಾನ ಆವರಣದ ಕಾಂಪೌಂಡ್ ಭಾಗಶಃ ತೆರವು ಆಗಲಿದೆ.

ತೆರವು ಕಾರ್ಯಕ್ಕೆ ಅನುಮತಿ ಹಾಗೂ ಭದ್ರತೆ ಕೋರಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಅಧಿಕಾರಿಗಳು ಮಹಾನಗರ ಪಾಲಿಕೆ ಮತ್ತು ಪೊಲೀಸ್ ಇಲಾಖೆಗೆ ಜುಲೈ 23ರಂದು ಪತ್ರ ಬರೆದಿದ್ದಾರೆ. ಈ ಪ್ರತಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ. ಮೊದಲ ಹಂತದ ₹300 ಕೋಟಿ ವೆಚ್ಚದ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸುವ ಹಿನ್ನೆಲೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ಎನ್‌ಎಚ್‌ಎಐ ಅಧಿಕಾರಿಗಳು ಮುಂದಾಗಿದ್ದಾರೆ.

‘ಚನ್ನಮ್ಮ ವೃತ್ತದಿಂದ ಕೋರ್ಟ್ ವೃತ್ತದ ಕಡೆ ಮತ್ತು ಚನ್ನಮ್ಮ ವೃತ್ತದಿಂದ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ತೆರಳುವ ಈದ್ಗಾ ಮೈದಾನದ ಅಕ್ಕಪಕ್ಕ ಅಂದಾಜು ಶೇ 10–15ರಷ್ಟು ಭಾಗ ತೆರವು ಆಗಲಿದೆ. ಮೇಲ್ಸೇತುವೆಗೆ ಕಾಮತ್ ಹೋಟೆಲ್ ಎದುರು ಬೃಹತ್ ಪಿಲ್ಲರ್, ಸಂಗೊಳ್ಳಿ ರಾಯಣ್ಣ ವೃತ್ತದ ಹೈಮಾಸ್ಟ್ ಕಂಬದ ಬಳಿ ಒಂದು ಪಿಲ್ಲರ್ ನಿರ್ಮಾಣ ಆಗಲಿದೆ. ಈ ಕಾಮಗಾರಿಗೆ ಉಪನಗರ ಪೊಲೀಸ್ ಠಾಣೆ ಕಟ್ಟಡದ ಶೇ 20ರಷ್ಟು ಭಾಗವೂ ತೆರವು ಆಗಲಿದೆ’ ಎಂದು ಎನ್‌ಎಚ್‌ಎಐ ಅಧಿಕಾರಿಗಳು ತಿಳಿಸಿದ್ದಾರೆ.

ಚನ್ನಮ್ಮ ವೃತ್ತದಿಂದ ಮಹಾನಗರ ಪಾಲಿಕೆ ಎದುರಿನ ಟೈಟಾನ್ ಐ ಶೋ ರೂಮ್‌ವರೆಗಿನ 350 ಮೀಟರ್ ಉದ್ದದ ಚತುಷ್ಪಥ ಮೇಲ್ಸೇತುವೆಯಲ್ಲಿ 300 ಮೀಟರ್ ಉದ್ದ ಸಾಲಿಡ್ ರ‍್ಯಾಂಪ್ ನಿರ್ಮಾಣವಾಗಲಿದೆ. ಉಳಿದ 50 ಮೀಟರ್ ಉದ್ದದ ಮಾರ್ಗದಲ್ಲಿ (ಕಾಮತ್ ಹೋಟೆಲ್ ಮತ್ತು ರಾಯಣ್ಣ ವೃತ್ತದ ಬಳಿ) ಪಿಲ್ಲರ್ ನಿರ್ಮಾಣವಾಗಲಿದೆ. ಪಿಲ್ಲರ್ ಎತ್ತರ ಕನಿಷ್ಠ 5.5 ಮೀಟರ್ ಎತ್ತರ ಇರಲಿದ್ದು, ತಳಭಾಗ ಆಧರಿಸಿ ಹೆಚ್ಚು ಕಡಿಮೆ ಆಗಲಿದೆ. ಎರಡೂ ಕಡೆ 7.50 ಮೀಟರ್ ಜಾಗವನ್ನು ಸರ್ವಿಸ್ ರಸ್ತೆ ಮತ್ತು ಪಾದಚಾರಿ ಮಾರ್ಗಕ್ಕೆ ಮೀಸಲಿಟ್ಟಿದ್ದು, ಅಕ್ಕಪಕ್ಕದ ಅಂಗಡಿ, ವಾಣಿಜ್ಯ ಮಳಿಗೆಗಳ ಮಾಲೀಕರಿಗೆ ಭೂಸ್ವಾಧೀನ ಕುರಿತು ನೋಟಿಸ್ ನೀಡಲಾಗಿದೆ.



ಹುಬ್ಬಳ್ಳಿ ಮೇಲ್ಸೇತುವೆಯ ನೀಲನಕ್ಷೆ

ಚನ್ನಮ್ಮ ವೃತ್ತವನ್ನು ಕೇಂದ್ರವಾಗಿರಿಸಿಕೊಂಡು ಮೊದಲ ಹಂತದಲ್ಲಿ ₹300 ಕೋಟಿ ವೆಚ್ಚದಲ್ಲಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ

-ಗಂಗಾಧರ್, ಎಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ಪತ್ರದಲ್ಲಿ ಏನಿದೆ?

‘ರಾಣಿ ಚನ್ನಮ್ಮ ವೃತ್ತ ಬಳಿಯ ಈದ್ಗಾ ಆವರಣದ ಎರಡೂ ಕಡೆಯ ಗೋಡೆಯನ್ನು ಭಾಗಶಃ ಒಡೆದು ಮೇಲ್ಸೇತುವೆ ಕಾಮಗಾರಿ ನಡೆಸಬೇಕಿದೆ. ಈ ಭಾಗದಲ್ಲಿ ಎರಡು ಪಿಲ್ಲರ್‌ಗಳು ನಿರ್ಮಾಣವಾಗಲಿದ್ದು, ಭೂಸ್ವಾಧೀನದ ಪ್ರಸ್ತಾವ ಅಂತಿಮ ಹಂತದಲ್ಲಿದೆ. ಈ ಕುರಿತು ಜುಲೈ 6ರಂದು ಜಿಲ್ಲಾಧಿಕಾರಿ, ಪೊಲೀಸ್ ಕಮಿಷನರ್ ಮತ್ತು ಹು-ಧಾ ಮಹಾನಗರ ಪಾಲಿಕೆ ಆಯುಕ್ತರ ಸಮ್ಮುಖದಲ್ಲಿ ಸಭೆ ನಡೆಸಿ, ನೀಲನಕ್ಷೆಯಂತೆ ಪಿಲ್ಲರ್ ನಿರ್ಮಿಸಲು ತೀರ್ಮಾನಿಸಲಾಗಿದೆ. ಈ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸಿದ್ದು, ಯೋಜನೆ ಅನುಷ್ಠಾನಕ್ಕೆ ಪೊಲೀಸ್ ಭದ್ರತೆ ನೀಡಬೇಕು’ ಎಂದು ರಾಷ್ಟ್ರೀಯ ಹೆದ್ದಾರಿ ಸಹಾಯಕ ಎಂಜಿನಿಯರ್, ಪೊಲೀಸ್ ಇಲಾಖೆಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಸಿಎಸ್ ಶಾಲಿನಿ ರಜನೀಶ್ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯ ಸರ್ಕಾರದ ನೂತನ ಮುಖ್ಯ ಕಾರ್ಯದರ್ಶಿಯಾಗಿ ಶಾಲಿನಿ ರಜನೀಶ್ ಅವರು ಬುಧವಾರ ಅಧಿಕಾರ ಸ್ವೀಕರಿಸಿದರು.

ಮುಖ್ಯಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾದ ರಜನೀಶ್ ಗೋಯೆಲ್ ಅವರು ಶಾಲಿನಿ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಇವರಿಬ್ಬರೂ ಪತಿ-ಪತ್ನಿ. ಶಾಲಿನಿ ಅವರು ಮುಂದಿನ ಎರಡೂವರೆ ವರ್ಷ ಅಧಿಕಾರದಲ್ಲಿ ಇರಲಿದ್ದಾರೆ.

ಅಲ್ಲದೇ, ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯಲ್ಲಿದ್ದ ಉಮಾ ಮಹಾದೇವನ್ ಅವರನ್ನು ಅಭಿವೃದ್ಧಿ ಆಯುಕ್ತರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಸರ್ಕಾರದ ಪ್ರಮುಖ ಎರಡೂ ಉನ್ನತ ಹುದ್ದೆಗಳಲ್ಲೂ ಮಹಿಳೆಯರೇ ಇರುವುದೂ ವಿಶೇಷ. ಅಲ್ಲದೇ, ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ (ಹೆಚ್ಚುವರಿ ಪ್ರಭಾರ) ಜವಾಬ್ದಾರಿಯನ್ನು ಉಮಾ ಅವರಿಗೆ ನೀಡಲಾಗಿದೆ.

ಗ್ರಾಮೀಣಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಅವರಿಗೆ, ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಪ್ರಭಾರ ನೀಡಿ ವರ್ಗಾವಣೆ ಮಾಡಲಾಗಿದೆ.

ತೋಟಗಾರಿಕಾ ಇಲಾಖೆ ನಿರ್ದೇಶಕ ಡಿ.ಎಸ್. ರಮೇಶ್‌ಗೆ ಮೈಸೂರು ಪ್ರಾದೇಶಿಕ ಆಯುಕ್ತರ ಹೆಚ್ಚುವರಿ ಪ್ರಭಾರ ನೀಡಲಾಗಿದೆ. ಪಂಚಾಯತ್ ರಾಜ್ ಆಯುಕ್ತೆ ಅರುಂಧತಿ ಚಂದ್ರಶೇಖರ್ ಅವರಿಗೆ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ನಿರ್ದೇಶಕಿಯ (ಹೆಚ್ಚುವರಿ ಪ್ರಭಾರ) ಹೊಣೆ ನೀಡಿ ವರ್ಗಾವಣೆ ಮಾಡಲಾಗಿದೆ.

ಗಾಂಜಾ ಮಾರಾಟ: ₹1.06 ಕೋಟಿ ಮೌಲ್ಯದ ವಸ್ತು ವಶ

ಹುಬ್ಬಳ್ಳಿ: ನಗರದಲ್ಲಿ ಗಾಂಜಾ ಮಾರಲು ಯತ್ನಿಸಿದ್ದ ರಾಜಸ್ಥಾನ ಮೂಲದ ಓಂಪ್ರಕಾಶ ಬಾರಮೇರ ಎಂಬುವವನನ್ನು ಬಂಧಿಸಿರುವ ಶಹರ ಠಾಣೆ ಪೊಲೀಸರು, ₹85 ಸಾವಿರ ಮೌಲ್ಯದ ಗಾಂಜಾ, ₹96.50 ಲಕ್ಷ ನಗದು, ಕಾರು ಸೇರಿ ಒಟ್ಟು ₹1.06 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಪ್ರವಾಹದಲ್ಲಿ ತೇಲಿ ಬಂದ ಶವ ● ಶಿವನಸಮುದ್ರ, ಹೊಗೇನಕಲ್ ಜಲಪಾತಕ್ಕೆ ಪ್ರವಾಸಿಗರ ಪ್ರವೇಶ ನಿರ್ಬಂಧ

ಕೊಡಗು: ದ್ವೀಪವಾದ ನಾಪೋಕ್ಲು



ಕೃಷ್ಣಾ ನದಿ ಪ್ರವಾಹದಿಂದ ಯಾದಗಿರಿ ಜಿಲ್ಲೆಯ ವಡಗೇರಾ ತಾಲ್ಲೂಕಿನ ಹೈಯಾಳ ಗ್ರಾಮದಲ್ಲಿ ವಿದ್ಯುತ್ ಪರಿವರ್ತಕ ಮುಳುಗಿದೆ



ತುಂಗಭದ್ರಾ ಅಣೆಕಟ್ಟೆಯಿಂದ ಬುಧವಾರ ಮತ್ತೆ 33 ಕ್ರಸ್ಟ್‌ಗೇಟ್‌ಗಳನ್ನು ತೆರೆದು ನೀರು ಹರಿಸಿದಾಗ ಕಂಡ ದೃಶ್ಯ – ಪ್ರಜಾವಾಣಿ ಚಿತ್ರ

ದೊಡ್ಡತಪ್ಪಲೆ ಬಳಿ ಮತ್ತೆ ಭೂಕುಸಿತ



ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಬಳಿ ಗುಡ್ಡ ಕುಸಿದು, ಸಕಲೇಶಪುರ–ಸುಬ್ರಹ್ಮಣ್ಯ ನಡುವಿನ ರೈಲು ಮಾರ್ಗದ ಮೇಲೆ ಮಣ್ಣು ಬಿದ್ದಿದೆ.

ಹಾಸನ: ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ–75 ರಲ್ಲಿ ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಬಳಿ ಬುಧವಾರ ಸಂಜೆ ಮತ್ತೆ ಭೂಕುಸಿತವಾಗಿದ್ದು, ಎರಡು ಕಂಟೈನರ್ ಲಾರಿ ಸೇರಿದಂತೆ ಹಲವು ವಾಹನಗಳು ಮಣ್ಣಿನಲ್ಲಿ ಸಿಲುಕಿಕೊಂಡಿವೆ. ಮತ್ತೆ ಈ ಮಾರ್ಗದಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿದೆ.

ಕುಸಿತದ ರಭಸಕ್ಕೆ ಒಂದು ಕಂಟೈನರ್ ಉರುಳಿ ಬಿದ್ದಿದೆ. ಮೂವರು ಚಾಲಕರನ್ನು ಪೊಲೀಸರು ಹಾಗೂ ಗುತ್ತಿಗೆದಾರ ಕಂಪನಿ ಸಿಬ್ಬಂದಿ ರಕ್ಷಿಸಿದ್ದಾರೆ. ಮಳೆ ಮುಂದುವರಿದಿದ್ದು, ಮತ್ತೆ ಗುಡ್ಡ ಕುಸಿಯುವ ಆತಂಕ ಹೆಚ್ಚಾಗಿದೆ. ರೈಲ್ವೆ ಹಳಿ ಮೇಲೆ ಹಾದು ಹೋಗಿರುವ ರಸ್ತೆಯ ತುದಿಯಲ್ಲಿಯೇ ಕಂಟೈನರ್ ನಿಂತಿದ್ದು, ಇನ್ನಷ್ಟು ಮಣ್ಣು ಕುಸಿದರೆ, ರೈಲ್ವೆ ಹಳಿ ಮೇಲೆ ಕಂಟೈನರ್ ಬೀಳಬಹುದು ಎಂದು ಹೇಳಲಾಗುತ್ತಿದೆ.

ಮಂಗಳವಾರ ಮಧ್ಯಾಹ್ನವೂ ಅದೇ ಸ್ಥಳದಲ್ಲಿ ಕುಸಿತವುಂಟಾಗಿ ನಾಲ್ಕು ವಾಹನಗಳು ಮಣ್ಣಿನಡಿ ಸಿಲುಕಿದ್ದವು. ರಾತ್ರಿಯಿಡೀ ಕಾರ್ಯಾಚರಣೆ ನಡೆಸಿ, ಮಣ್ಣು ತೆರವುಗೊಳಿಸಿ, ವಾಹನ ಸಂಚಾರ ಆರಂಭಿಸಲಾಗಿತ್ತು. ಮತ್ತೆ ಬುಧವಾರ ಕುಸಿತವಾಗಿದೆ.

ಹಳಿ ಮೇಲೂ ಮಣ್ಣು: ಭೂಕುಸಿತದ ಮಣ್ಣು, ಸಮೀಪದ ಮಂಗಳೂರು–ಬೆಂಗಳೂರು ರೈಲ್ವೆ ಮಾರ್ಗದ ಮೇಲೂ ಬಿದ್ದಿದೆ. ಯಡಕುಮೇರಿ–ಕಡಗರವಳ್ಳಿ ಮಧ್ಯೆ ಸಂಭವಿಸಿದ ಭೂಕುಸಿತದಿಂದಾಗಿ ಈ ಮಾರ್ಗದಲ್ಲಿ ರೈಲು ಸಂಚಾರ ಬಂದ್ ಆಗಿದೆ. ಈಗ ಆ ಹಳಿಯ ಮೇಲೂ ಮಣ್ಣು ಕುಸಿದಿರುವುದರಿಂದ, ಸಕಲೇಶಪುರದಿಂದ ಕಾಮಗಾರಿ ಸ್ಥಳಕ್ಕೆ ತಿಂಡಿ, ಊಟ ಹಾಗೂ ಸಾಮಗ್ರಿಗಳನ್ನು ಸಾಗಿಸುತ್ತಿದ್ದ ಗೂಡ್ಸ್ ರೈಲುಗಳ ಸಂಚಾರಕ್ಕೂ ತೊಂದರೆ ಎದುರಾಗಿದೆ.

ಬುಧವಾರ ಬೆಳಿಗ್ಗೆ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅದೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು. ಸಂಜೆ ಮಳೆ ಹೆಚ್ಚಾಗಿದ್ದರಿಂದ ಭಾರಿ ಪ್ರಮಾಣದಲ್ಲಿ ಮಣ್ಣು ಕುಸಿತವಾಗಿದೆ.

ಪ್ರಜಾವಾಣಿ ವಾರ್ತೆ

ಮೈಸೂರು/ಶಿವಮೊಗ್ಗ: ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ಕಬಿನಿ ಜಲಾಶಯದ ಹೊರಹರಿವು ಹೆಚ್ಚಾಗಿ ಏರ್ಪಟ್ಟ ಕಪಿಲಾ ನದಿ ಪ್ರವಾಹದಲ್ಲಿ ಬುಧವಾರ ಶವ ತೇಲಿ ಬಂದಿದೆ. ಮಲೆನಾಡಿನಲ್ಲಿ ಮಳೆ ಮುಂದುವರೆದಿದ್ದು ಭದ್ರಾ ನದಿಯ ಪ್ರವಾಹದ ನೀರು ಭದ್ರಾವತಿ ನಗರದೊಳಗೆ ನುಗ್ಗಿದೆ. ನಗರದ ಹೊಸ ಸೇತುವೆ ಮೇಲ್ಭಾಗದಲ್ಲಿ 2 ಅಡಿಗೂ ಹೆಚ್ಚು ನೀರು ಹರಿಯುತ್ತಿದೆ. ಸೇತುವೆ ಕಾಣದಂತಾಗಿದ್ದು, ವಾಹನ ಸಂಚಾರ ಸ್ಥಗಿತಗೊಂಡಿದೆ.

ತಲಕಾಡು– ತಿ. ನರಸೀಪುರ ನಡುವಿನ ಹೆಮ್ಮಿಗೆ ಸೇತುವೆ ಮುಳುಗಿದ್ದು, ಅಲ್ಲಿ ಶವ ಕಂಡು ಬಂದಿದೆ. ನಂಜನಗೂಡು ತಾಲ್ಲೂಕಿನ ಮಲ್ಲನಮೂಲೆ ಬಳಿ ಮೈಸೂರು–ಊಟಿ ಹೆದ್ದಾರಿಯಲ್ಲಿ 4 ಅಡಿ ನೀರು ನಿಂತಿದ್ದು, ಸಂಚಾರ ಬಂದ್ ಆಗಿದೆ.

ಕೊಡಗು ಜಿಲ್ಲೆಯ ನಾಪೋಕ್ಲು ರಸ್ತೆ ಸಂಪರ್ಕ ಕಳೆದುಕೊಂಡಿದ್ದು, ಅಗತ್ಯ ವಸ್ತುಗಳು ಪೂರೈಕೆಯಾಗುತ್ತಿಲ್ಲ. 4 ಕಾಳಜಿ ಕೇಂದ್ರಗಳಲ್ಲಿ 44 ಮಂದಿ ಇದ್ದಾರೆ. 53 ಕಂಬಗಳು ಮತ್ತೆ ಬಿದ್ದಿದ್ದು, ವಿದ್ಯುತ್ ಪೂರೈಕೆ ನಿಂತಿದೆ. ಲಕ್ಷ್ಮಣತೀರ್ಥ ನದಿಯ ಪ್ರವಾಹ ಕಡಿಮೆಯಾಗಿಲ್ಲ. ನದಿ ಪಾತ್ರದ ಗದ್ದೆಗಳು ಜಲಾವೃತಗೊಂಡಿವೆ. ಭಾಗಮಂಡಲದಲ್ಲಿ ನೀರು ರಸ್ತೆಗಳಿಗೆ ಬಂದಿದೆ. ಮಡಿಕೇರಿ ತಾಲ್ಲೂಕಿನ ಕುಂಜಿಲ, ಭೇತು ಬಳಿ ಮನೆಗಳ ಬಳಿ ಮಣ್ಣು ಕುಸಿದಿದೆ.

ಮಂಡ್ಯದ ಕೆಆರ್‌ಎಸ್ ಜಲಾಶಯದ ತಗ್ಗಿನಲ್ಲಿರುವ, ಶ್ರೀರಂಗಪಟ್ಟಣದ ತಾಲ್ಲೂಕಿನ ಚಿಕ್ಕಪಾಳ್ಯ ಸಮೀಪದ ಸ್ಮಶಾನ, ಗಂಜಾಂನ ಕಾವೇರಿ ನದಿ ತೀರದ ಸ್ಮಶಾನ ಜಲಾವೃತವಾಗಿದೆ. ನದಿಗೆ ಸಮೀಪದ ಎಣ್ಣೆಹೊಳೆ ಗ್ರಾಮದ 30ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ.

ಚಾಮರಾಜಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ 9 ಗ್ರಾಮಗಳಲ್ಲಿ ಮುಳುಗಡೆ ಭೀತಿ ಎದುರಾಗಿದೆ. ಮಹದೇಶ್ವರ ಹಾಸ್ಟೆಲ್‌ನ ಕಾಳಜಿ ಕೇಂದ್ರದಲ್ಲಿ 176 ಮಂದಿಯನ್ನಿರಿಸಲಾಗಿದೆ. ತಾಲ್ಲೂಕಿನ ವೆಸ್ಲಿ ಸೇತುವೆ, ಶಿವನಸಮುದ್ರ, ದರ್ಗಾ, ಭರಚುಕ್ಕಿ ಜಲಪಾತ ಹಾಗೂ ಹನೂರು ತಾಲ್ಲೂಕಿನ ಹೊಗೇನಕಲ್ ಜಲಪಾತಕ್ಕೆ ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಿದೆ.

ಶಿವಮೊಗ್ಗ ಜಿಲ್ಲೆಯ ಗಾಜನೂರು ಬಳಿಯ ತುಂಗಾ, ಲಕ್ಕವಳ್ಳಿ ಬಳಿಯ ಭದ್ರಾ ಹಾಗೂ ಕಾರ್ಗಲ್ ಬಳಿಯ ಲಿಂಗನಮಕ್ಕಿ ಜಲಾಶಯಗಳಿಗೆ ಭಾರಿ ಪ್ರಮಾಣದಲ್ಲಿ ನೀರು ಹರಿದುಬರುತ್ತಿದೆ. ತುಂಗಾ ಹಾಗೂ ಭದ್ರಾ ಜಲಾಶಯಗಳು ಭರ್ತಿ ಆಗಿರುವುದರಿಂದ ನದಿಗೆ ನೀರು ಹರಿಸಲಾಗುತ್ತಿದೆ. ಬುಧವಾರ ತುಂಗೆ–ಭದ್ರೆ ಅಪಾಯದ ಮಟ್ಟ ಮೀರಿ ಹರಿಯುತ್ತಿವೆ.

ಬೆಂಗಳೂರು–ಹೊನ್ನಾವರ (ಬಿ.ಎಚ್ ರಸ್ತೆ) ರಾಷ್ಟ್ರೀಯ ಹೆದ್ದಾರಿಯಲ್ಲೂ ನೀರು ಹರಿಯುತ್ತಿದೆ. ಭದ್ರಾವತಿಯ 60ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ. ಅಲ್ಲಿನ ನಿವಾಸಿಗಳನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಗಾಜನೂರಿನ ತುಂಗಾ ಜಲಾಶಯದಿಂದ ಬುಧವಾರ ಬೆಳಿಗ್ಗೆ ಹೊರಹರಿವು 83,000 ಕ್ಯುಸೆಕ್‌ಗೆ ಏರಿಕೆಯಾಗಿ ಶಿವಮೊಗ್ಗ ನಗರದಲ್ಲಿ ಪ್ರವಾಹದ ಭೀತಿ ಸೃಷ್ಟಿಯಾಗಿದೆ. ನಗರದ ಶಾಂತಮ್ಮ ಲೇಔಟ್, ಸೀಗೆಹಟ್ಟಿ ಕುಂಬಾರ ಗುಂಡಿ, ರಾಜೀವ್ ಗಾಂಧಿ ಬಡಾವಣೆ, ಆರ್.ಟಿ. ನಗರ, ನಿಸರ್ಗ ಬಡಾವಣೆ ಹಾಗೂ ವಿದ್ಯಾನಗರದ ಕೆಲವೆಡೆಯ ನಿವಾಸಿಗಳನ್ನು ಸುರಕ್ಷಿತ ಸ್ಥಳಕ್ಕೆ ತೆರಳಲು ಸೂಚಿಸಲಾಗಿತ್ತು. ಮಹಾನಗರ ಪಾಲಿಕೆಯಿಂದ ಕಾಳಜಿ ಕೇಂದ್ರ ಕೂಡ ತೆರೆಯಲಾಗಿತ್ತು. ಆದರೆ ಸಂಜೆ ವೇಳೆ ನೀರಿನ ಹರಿವು 72,000 ಕ್ಯುಸೆಕ್‌ಗೆ ಇಳಿದಿದ್ದು, ಪ್ರವಾಹದ ಆತಂಕ ತಗ್ಗಿತು.

ಲಿಂಗನಮಕ್ಕಿ ಜಲಾಶಯದಲ್ಲಿ ಒಳಹರಿವು 82,587 ಕ್ಯುಸೆಕ್ ಇದೆ. ಜಲಾಶಯ ಭರ್ತಿಯತ್ತ ಸಾಗಿರುವುದರಿಂದ ಗುರುವಾರದಿಂದ ನದಿಗೆ ನೀರು ಹರಿಸಲು ಯೋಜಿಸಲಾಗಿದೆ.

ಯಾದಗಿರಿ ವರದಿ: ಜಿಲ್ಲೆಯ ಹುಣಸಗಿ ತಾಲ್ಲೂಕಿನ ನಾರಾಯಣಪುರದ ಬಸವಸಾಗರ ಜಲಾಶಯದಿಂದ ಕೃಷ್ಣಾ ನದಿಗೆ ಬುಧವಾರ 3.22 ಲಕ್ಷ ಕ್ಯುಸೆಕ್ ನೀರು ಹರಿಸಿದ್ದರಿಂದ ನದಿ ಪಕ್ಕದ ಜಮೀನುಗಳಿಗೆ ನೀರು ನುಗ್ಗಿದ್ದು, ಬೆಳೆಗಳು ಜಲಾವೃತ್ತಗೊಂಡಿವೆ.

ನದಿ ಪಾತ್ರದ ಶಹಾಪುರ, ವಡಗೇರಾ ತಾಲ್ಲೂಕಿನ ಅಂಚಿನ ಗ್ರಾಮಗಳಲ್ಲಿ ಪ್ರವಾಹದ ನೀರು ಹತ್ತಿ, ಭತ್ತದ ಜಮೀನುಗಳಿಗೆ ನುಗ್ಗಿವೆ. ನಾಲ್ಕು ದಿನಗಳಿಂದ ಕೊಳ್ಳೂರು (ಎಂ) ಸೇತುವೆ ಮುಳುಗಡೆಯಾಗಿದೆ.

ಮಂಗಳೂರು ವರದಿ: ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಾದ್ಯಂತ ಬುಧವಾರ ಧಾರಾಕಾರ ಮಳೆಯಾಗಿದೆ. ಬೆಳಿಗ್ಗೆ ಬಿಟ್ಟು ಬಿಟ್ಟು ಮಳೆಯಾಗಿದ್ದು, ನಡು ನಡುವೆ ಬಿಸಿಲಿನ ವಾತಾವರಣವೂ ಇತ್ತು. ಮಧ್ಯಾಹ್ನದ ಬಳಿಕ ಪಶ್ಚಿಮಘಟ್ಟ ತಪ್ಪಲಿನ ಪ್ರದೇಶಗಳಲ್ಲಿ ಭಾರಿ ಮಳೆಯಾಗಿದೆ.

ಬಂಟ್ವಾಳ ತಾಲ್ಲೂಕಿನ ತುಂಬೆ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮೋರಿ ಪಕ್ಕದ ಮಣ್ಣು ಕುಸಿದು ಸುಮಾರು 2 ಮೀ ಅಗಲದಷ್ಟು ರಸ್ತೆಗೆ ಹಾನಿಯಾಗಿದೆ. ಗೋಣಿ ಚೀಲಗಳಲ್ಲಿ ಮರಳು ತುಂಬಿ ಮತ್ತಷ್ಟು ಹಾನಿ ಉಂಟಾಗದಂತೆ ವ್ಯವಸ್ಥೆ ಮಾಡಲಾಯಿತು. ಇದರಿಂದಾಗಿ ಬಿ.ಸಿ. ರೋಡ್– ಫರಂಗಿಪೇಟೆ ನಡುವೆ ಕೆಲ ಕಾಲ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಯಿತು. ಮಂಗಳವಾರ ಅಪಾಯದ ಮಟ್ಟ ಮೀರಿ ಹರಿದಿದ್ದ ನೇತ್ರಾವತಿ ನದಿಯಲ್ಲಿ ನೀರು ಹರಿವಿನ ಮಟ್ಟವು ಬುಧವಾರ 6.8 ಮೀಟರ್‌ಗೆ ತಗ್ಗಿದೆ.

ಪುತ್ತೂರು ತಾಲ್ಲೂಕಿನ ನೆಕ್ಕರೆಯಲ್ಲಿ ಕಾಲು ಸಂಕವೊಂದು ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿಕೊಂಡು ಹೋಗಿದ್ದು, ಈ ಪ್ರದೇಶದ ಸಂಪರ್ಕ ಕಡಿತಗೊಂಡಿದೆ. ಮಂಜೇಶ್ವರ-ಸುಬ್ರಹ್ಮಣ್ಯ ರಸ್ತೆಯ ಮಚ್ಚಿಮಲೆಯಲ್ಲಿ ರಸ್ತೆ ಬದಿಯ ಮಣ್ಣು ಕುಸಿದಿದೆ. ಕೆದಂಬಾಡಿ ಗ್ರಾಮದ ಮಠದಲ್ಲಿ ಚಂದ್ರಾವತಿ ರೈ ಅವರ ಕೋಳಿ ಸಾಕಾಣಿಕೆ ಕಟ್ಟಡದ ಮೇಲೆ ಮಣ್ಣು ಕುಸಿದು 5 ಸಾವಿರಕ್ಕೂ ಹೆಚ್ಚು ಕೋಳಿಗಳು ಸತ್ತಿವೆ.

ಬೆಳ್ತಂಗಡಿ ತಾಲ್ಲೂಕಿನ ಮುಂಡಾಜೆ ಗ್ರಾಮದ ಅಂಬಡ್ತ್ಯಾರು ಬಳಿ ಹಳ್ಳವು ಪಥ ಬದಲಾಯಿಸಿ ಚಂದ್ರಶೇಖರ ಅವರ ಮನೆಗೆ ಮಳೆ ನೀರು ಪ್ರವಾಹದ ರೀತಿಯಲ್ಲಿ ನುಗ್ಗಿದೆ.

ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮುಂಡ್ಕೂರು, ಮಿಯಾರು, ಮುಡಾರು, ಈದು ಗ್ರಾಮಗಳಲ್ಲಿ ಮನೆ ಮೇಲೆ ಮರಬಿದ್ದು ಹಾನಿಯಾಗಿದೆ. ಕುಂದಾಪುರ, ಬೈಂದೂರು, ಬ್ರಹ್ಮಾವರ, ಹೆಬ್ರಿ ವ್ಯಾಪ್ತಿಯಲ್ಲೂ ಧಾರಾಕಾರ ಮಳೆಯಾಗಿದೆ.



ಭದ್ರಾ ನದಿಯ ನೀರು ನುಗ್ಗಿದ್ದರಿಂದ ಭದ್ರಾವತಿಯ ಅಂಬೇಡ್ಕರ್ ನಗರದಲ್ಲಿ ಮನೆಗಳು ಜಲಾವೃತವಾದವು – ಪ್ರಜಾವಾಣಿ ಚಿತ್ರ/ಕಿರಣ್‌ಕುಮಾರ್

ಕೊಚ್ಚಿ ಹೋಗಿದ್ದ ವ್ಯಕ್ತಿಯ ಶವ ಪತ್ತೆ

ಬೆಳಗಾವಿ: ಕೃಷ್ಣಾ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದ ಕುಡಚಿಯ ನಿವಾಸಿ ಸಂತೋಷ ಸಿದ್ಧಪ್ಪ ಮೇತ್ರಿ (42) ಅವರ ಶವ ಬುಧವಾರ ಪತ್ತೆಯಾಗಿದೆ. ಸಂತೋಷ ಅವರ ಕುಟುಂಬ ಕಾಳಜಿ ಕೇಂದ್ರದಲ್ಲಿದೆ. ಜುಲೈ 29ರಂದು ಅವರು ಜಾನುವಾರು ನೋಡಿಕೊಂಡು ಬರಲು ಮನೆಗೆ ತೆರಳಿದ್ದ ಸಂದರ್ಭದಲ್ಲಿ ನೀರಿನ ಸೆಳವಿಗೆ ಸಿಲುಕಿ ಕಾಣೆಯಾಗಿದ್ದರು.

ಖಾನಾಪುರ ತಾಲ್ಲೂಕಿನ ಅಲಾತ್ರಿ ಹಳ್ಳದಲ್ಲಿ ತೇಲಿಹೋಗುತ್ತಿದ್ದ ವ್ಯಕ್ತಿ ಸಮಯ ಪ್ರಜ್ಞೆಯಿಂದ ಬದುಕುಳಿದಿದ್ದಾರೆ. ಹಳ್ಳದ ಮಧ್ಯದಲ್ಲಿದ್ದ ಮರವನ್ನು ಏರಿ ಕೂತ ವ್ಯಕ್ತಿಯನ್ನು ಪೊಲೀಸರು ರಕ್ಷಿಸಿದರು.

ತಗ್ಗಿದ ನದಿ ನೀರು: ಕೃಷ್ಣಾ ನದಿಯ ಜಲಾನಯನ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಮಳೆ ಬುಧವಾರ ಮತ್ತಷ್ಟು ಕಡಿಮೆ ಆಗಿದೆ. ಪ್ರವಾಹದ ನೀರು ತುಸು ತಗ್ಗಿದ್ದು ಮುಳುಗಡೆಯಾಗಿದ್ದ 44 ಸೇತುವೆಗಳ ಪೈಕಿ 6 ಸೇತುವೆ ಸಂಚಾರಕ್ಕೆ ಮುಕ್ತವಾಗಿವೆ. ಇನ್ನೂ 44 ಗ್ರಾಮಗಳನ್ನು ನೀರು ಸುತ್ತುವರಿದಿದೆ. 28 ಸಾವಿರ ಹೆಕ್ಟೇರ್ ಬೆಳೆ ನೀರಿನಲ್ಲಿ ನಿಂತಿದೆ.

ಹಳ್ಳದಲ್ಲಿ ಕೊಚ್ಚಿಹೋಗಿ ರೈತ ಸಾವು(ತೀರ್ಥಹಳ್ಳಿ ವರದಿ): ಕೃಷಿ ಕೆಲಸ ಮುಗಿಸಿ ಮನೆಗೆ ಮರಳುತ್ತಿದ್ದ ರೈತರೊಬ್ಬರು ಹಳ್ಳದ ಪ್ರವಾಹದಲ್ಲಿ ಕೊಚ್ಚಿಹೋಗಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ದೇವಂಗಿ ಗ್ರಾಮದ ಬಳಿ ಮಂಗಳವಾರ ಸಂಭವಿಸಿದೆ.

ಗ್ರಾಮದ ಕೃಷ್ಣಮೂರ್ತಿ ನಾಯ್ಕ (55) ಮಂಗಳವಾರ ಸಂಜೆ ಜಮೀನಿನಿಂದ ಮನೆಗೆ ಮರಳುವಾಗ ದೇವಂಗಿ ಬಳಿ ಭಾರಿ ಮಳೆಯಿಂದಾಗಿ ತುಂಬಿ ಹರಿಯುತ್ತಿದ್ದ ಉಂಟೂರು ಹಳ್ಳ ದಾಟುವಾಗ ಕೊಚ್ಚಿಹೋಗಿದ್ದರು.

ಮಳೆ ಹಾನಿ ಪರಿಹಾರ ಕಾರ್ಯಕ್ಕೆ ಶಾಸಕರ ನೇತೃತ್ವದಲ್ಲಿ ಕಾರ್ಯಪಡೆ ರಚಿಸಬೇಕು. ಕೊಚ್ಚಿ ಹೋದ ಮೋರಿ, ಹದಗೆಟ್ಟ ರಸ್ತೆ ದುರಸ್ತಿಗಾಗಿ ಶಾಸಕರಿಗೆ ತಲಾ ₹5 ಕೋಟಿ ಅನುದಾನ ಬಿಡುಗಡೆ ಮಾಡಬೇಕು

ಆರ್. ಅಶೋಕ, ಪ್ರತಿಪಕ್ಷ ನಾಯಕ

12 ದಿನಗಳಿಂದ ಜಲ ದಿಗ್ಬಂಧನ

ಶ್ರೀರಂಗಪಟ್ಟಣ ತಾಲ್ಲೂಕಿನ ರಾಂಪುರ ಸಮೀಪದ ಗೌತಮ ಕ್ಷೇತ್ರದಲ್ಲಿ ಗಜಾನನ ಸ್ವಾಮೀಜಿ, ಮಾತಾಜಿ ಮತ್ತು ರತ್ನಮ್ಮ 12 ದಿನಗಳಿಂದ ಜಲ ದಿಗ್ಬಂಧನದಲ್ಲಿಇದ್ದಾರೆ.

ಕಾವೇರಿ ನದಿಯ ನಡುಗಡ್ಡೆಯಲ್ಲಿರುವ ಕ್ಷೇತ್ರದ ಗುಹೆಯವರೆಗೂ ನೀರು ಬಂದಿದೆ. ಆಶ್ರಮದಿಂದ ಹೊರಗೆ ಹೋಗುವ ದಾರಿ ತಿಳಿಯದೆ ಅವರು ಕಂಗಾಲಾಗಿದ್ದಾರೆ. ‘ಅವರನ್ನು ಕರೆ ತರಲು ವ್ಯವಸ್ಥೆ ಮಾಡಲಾಗುವುದು’ ಎಂದು ತಹಶೀಲ್ದಾರ್ ಪರಶುರಾಮ ಸತ್ತಿಗೇರಿ ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.40	1,54,460	1,72,161
ಹಾರಂಗಿ	2,859	2,854.15	8,940	8,000
ಕಬಿನಿ	2,284.00	2,281.56	47,319	50,000
ಹೇಮಾವತಿ	2,922	2,919.75	61,273	74,875
ಲಿಂಗನಮಕ್ಕಿ	1,819	1,812.65	82,587	5,636
ಸೂಪಾ (ಮೀ)	564	553.60	45,741	-
ಮಾಣಿ	595	586.54	10,788	-
ತುಂಗಭದ್ರಾ	1,633	1,631.22	91,596	1,49,431
ಮಲಪ್ರಭಾ	2,079.5	2,075.30	21,222	5,894
ಘಟಪ್ರಭಾ	2175	2,71.41	39,006	26,608
ಭದ್ರಾ	186	184.6	61,042	62,121
ಆಲಮಟ್ಟಿ (ಮೀ)	519.6	515.48	3,23,259	3,25,504
ನಾರಾಯಣಪುರ (ಮೀ)	492.25	489.88	3,30000	3,22,788

* ನೆಲಮಟ್ಟದಿಂದ

ಮಳೆ: ‘ರೆಡ್ ಅಲರ್ಟ್’ ಮುಂದುವರಿಕೆ

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರವೂ ಭಾರಿ ಮಳೆ ಮುಂದುವರಿಯುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಐದು ಜಿಲ್ಲೆಗಳಿಗೆ ‘ರೆಡ್ ಅಲರ್ಟ್’ ಘೋಷಿಸಿದೆ.

ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗೆ ‘ರೆಡ್ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ನಿರಂತರ ಭಾರಿ ಗಾಳಿಯೊಂದಿಗೆ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಕನ್ನಡ ಹಾಗೂ ಹಾಸನ ಜಿಲ್ಲೆಗೆ ‘ಆರೆಂಜ್ ಅಲರ್ಟ್’, ಬೆಳಗಾವಿ ಮತ್ತು ಮೈಸೂರು ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಭಾರಿ ಮಳೆಯ ಜತೆಗೆ ಗಾಳಿಯ ವೇಗವು 30ರಿಂದ 40 ಕಿ.ಮೀ. ತಲುಪುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳ ಹಲವು ಸ್ಥಳಗಳಲ್ಲಿ ಹಾಗೂ ಉತ್ತರ ಒಳನಾಡಿನ ಉಳಿದ ಜಿಲ್ಲೆಗಳ ಕೆಲ ಸ್ಥಳಗಳಲ್ಲಿ ಗಾಳಿಯೊಂದಿಗೆ ಸಾಧಾರಣ ಮಳೆ ಸುರಿಯುವ ಸಂಭವವಿದೆ. ಕರಾವಳಿ ಉದ್ದಕ್ಕೂ ಬಿರುಗಾಳಿಯಿಂದ ಕೂಡಿದ ಹವಾಮಾನ ಇರಲಿದೆ. ಗಂಟೆಗೆ 35ರಿಂದ 55 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ, ಮೀನುಗಾರರು ಎಚ್ಚರಿಕೆ ವಹಿಸಬೇಕು ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ

‘ಖಾಸಗಿ ಕಾಲೇಜಿನ ಶೇ 40 ಸೀಟು ಸರ್ಕಾರಕ್ಕೆ’

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಹೊಸ ಖಾಸಗಿ ಕಾಲೇಜಿನಲ್ಲೂ ಶೇ 40ರಷ್ಟು ಸೀಟು ಸರ್ಕಾರಕ್ಕೆ ಸಿಗಲಿವೆ. ಕಡಿಮೆ ಶುಲ್ಕದಲ್ಲಿ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಪಡೆಯಬಹುದು’ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಹೇಳಿದರು.

ಜಿಲ್ಲೆಯ ಬಾಡಗಂಡಿಯಲ್ಲಿ ಬುಧವಾರ ಎಸ್.ಆರ್.ಪಾಟೀಲ ವೈದ್ಯಕೀಯ ಕಾಲೇಜು ಉದ್ಘಾಟಿಸಿ ಅವರು ಮಾತನಾಡಿದರು.

‘ರಾಜ್ಯದಲ್ಲಿ 71 ವೈದ್ಯಕೀಯ ಕಾಲೇಜುಗಳಿದ್ದು, ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ಗ್ರಾಮೀಣ ಭಾಗದಲ್ಲಿ ಕಾಲೇಜು ಸ್ಥಾಪನೆ ಸುಲಭವಲ್ಲ. ಎಸ್.ಆರ್. ಪಾಟೀಲ ಅವರ ಮಹತ್ವದ ಕಾರ್ಯದಿಂದ ಜನರಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದು ಹೇಳಿದರು.

630 ಹಾಸಿಗೆಗಳ ನವೀಕೃತ ಆಸ್ಪತ್ರೆ ಉದ್ಘಾಟಿಸಿದ ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಮಾತನಾಡಿ, ‘ಎಸ್. ಆರ್. ಪಾಟೀಲರ ಹೋರಾಟದ ಮನೋಭಾವ, ಛಲ, ಇಚ್ಛಾಶಕ್ತಿ ಫಲದಿಂದ ಕಾಲೇಜು ಆರಂಭವಾಗಿದೆ’ ಎಂದರು.

ಗೃಹ ಸಚಿವ ಜಿ.ಪರಮೇಶ್ವರ ಅವರು, ‘ಈ ವೈದ್ಯಕೀಯ ಕಾಲೇಜು ಗ್ರಾಮೀಣ ಪ್ರತಿಭೆಗಳಿಗೆ ವರದಾನವಾಗಲಿದೆ. ಕಾಲೇಜನ್ನು ವಿಶ್ವವಿದ್ಯಾಲಯ ಆಗಿಸುವುದು ಪಾಟೀಲ ಅವರ ಗುರಿ ಆಗಿದೆ’ ಎಂದರು.

ಶಿರಹಟ್ಟಿಯ ಫಕೀರದಿಂಗಾಲೇಶ್ವರ ಸ್ವಾಮೀಜಿ, ಎರೆಹೊಸಳ್ಳಿಯ ವೇಮನ ಸಂಸ್ಥಾನಮಠದ ವೇಮನಾಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.



ಬಾಗಲಕೋಟೆ ಜಿಲ್ಲೆಯ ಬಾಡಗಂಡಿಯಲ್ಲಿ ಬುಧವಾರ ಎಸ್‌ಆರ್‌ ಪಾಟೀಲ ವೈದ್ಯಕೀಯ ಕಾಲೇಜಿನ ಉದ್ಘಾಟನಾ ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಕಾಲೇಜಿನ ಡೀನ್ ಡಾ.ಧರ್ಮರಾಯ ಇಂಗಳೆ, ಸಚಿವ ಆರ್‌.ಬಿ. ತಿಮ್ಮಾಪುರ, ದಿನೇಶ ಗುಂಡೂರಾವ್‌, ಜಿ. ಪರಮೇಶ್ವರ, ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಎಸ್‌ಆರ್‌ ಪಾಟೀಲ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಪಾಲ್ಗೊಂಡಿದ್ದರು

ಹೊನ್ನಾಳಿಯ 49 ಮನೆಗಳು ಜಲಾವೃತ

ದಾವಣಗೆರೆ: ತುಂಗಾ ಮತ್ತು ಭದ್ರಾ ಜಲಾಶಯಗಳಿಂದ ಅಪಾರ ಪ್ರಮಾಣದ ನೀರು ಹೊರಬಿಟ್ಟಿದ್ದು ತುಂಗಭದ್ರಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಜಿಲ್ಲೆಯ ಹೊನ್ನಾಳಿ ಪಟ್ಟಣದ ಎರಡು ಬಡಾವಣೆಗಳಿಗೆ ನೀರು ನುಗ್ಗಿದ್ದು, 49 ಮನೆಗಳು ಜಲಾವೃತಗೊಂಡಿವೆ.

ಹೊನ್ನಾಳಿಯ ಬಾಲರಾಜ್ ಘಾಟ್‌ನ 23 ಹಾಗೂ ಬಂಬೂಬಜಾರ್‌ನ 26 ಮನೆಗಳು ಜಲಾವೃತಗೊಂಡಿದ್ದು, ನೂರಕ್ಕೂ ಹೆಚ್ಚು ಜನರಿಗೆ ಎರಡು ಕಾಳಜಿ ಕೇಂದ್ರದಲ್ಲಿ ಆಶ್ರಯ ಕಲ್ಪಿಸಲಾಗಿದೆ. ಹರಿಹರ ತಾಲ್ಲೂಕಿನ ಧಾರ್ಮಿಕ ಕ್ಷೇತ್ರ ಉಕ್ಕಡಗಾತ್ರಿ–ಪತ್ಯಾಪುರ– ನಂದಿಗೂಡಿ ಸಂಪರ್ಕ ಕಡಿತಗೊಂಡಿದೆ. ಸೇತುವೆ ಮುಳುಗಿದೆ. ಜಮೀನಿಗೆ ನೀರು ನುಗ್ಗಿ ಭತ್ತ, ಕಬ್ಬು, ಮೆಕ್ಕೆಜೋಳದ ಫಸಲು ಜಲಾವೃತಗೊಂಡಿವೆ.

ಸಿ.ಎಂಗೆ ರಾಜ್ಯಪಾಲರ ನೋಟಿಸ್

ಒಂದನೇ ಪುಟದಿಂದ...

ಅಬ್ರಹಾಂ ಅವರಿಂದ ಒಂದೂವರೆ ಗಂಟೆ ವಿವರಣೆ ಪಡೆದಿದ್ದ ರಾಜ್ಯಪಾಲರು, ಕೆಲವು ವಿಷಯಗಳಲ್ಲಿ ಮತ್ತಷ್ಟು ಸ್ಪಷ್ಟನೆ ಕೇಳಿದ್ದರು. ಪೂರಕ ದಾಖಲೆಯನ್ನು ಅಂದು ಸಂಜೆಯೊಳಗೆ ಸಲ್ಲಿಸಲು ಸೂಚಿಸಿದ್ದರು. ದಾಖಲೆಗಳನ್ನು ಕಾನೂನು ತಜ್ಞರಿಗೆ ಕಳುಹಿಸಿದ್ದ ರಾಜ್ಯಪಾಲರು, ಮುಂದೆ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಸಮಾಲೋಚಿಸಿದ್ದರು ಎನ್ನಲಾಗಿತ್ತು.

ಸಿದ್ದರಾಮಯ್ಯ ವಿರುದ್ಧ ಜುಲೈ 18ರಂದು ಮೈಸೂರು ಲೋಕಾಯುಕ್ತ ಪೊಲೀಸರ ಮುಂದೆ, ಅಬ್ರಹಾಂ ದೂರು ದಾಖಲಿಸಿದ್ದರು. ಕ್ರಿಮಿನಲ್ ಪ್ರಕರಣ ದಾಖಲಿಸಲು ಅನುಮತಿಗಾಗಿ ರಾಜ್ಯಪಾಲರ ಮೊರೆ ಹೋಗಿದ್ದರು.

‘ಮುಖ್ಯಮಂತ್ರಿ ವಿರುದ್ಧ ವೈಯಕ್ತಿಕವಾಗಿ ದೂರು ಸಲ್ಲಿಕೆಯಾದಾಗ, ಅದರ ಬಗ್ಗೆ ಪತ್ರ ಅಥವಾ ನೋಟಿಸ್ ಮೂಲಕ ವಿವರಣೆ ಕೇಳುವುದು ಸಾಮಾನ್ಯ. ಆ ಪ್ರಕ್ರಿಯೆ ಭಾಗವಾಗಿಯೇ, ಅರ್ಜಿಗಳಲ್ಲಿ ಉಲ್ಲೇಖಿಸಲಾದ ಆರೋಪಗಳಿಗೆ ಸ್ಪಷ್ಟನೆ ನೀಡುವಂತೆ ರಾಜ್ಯಪಾಲರು ಸೂಚಿಸಿದ್ದಾರೆ’ ಎಂದು ಗೊತ್ತಾಗಿದೆ. ಈ ಮಧ್ಯೆಯೇ, ಸಿದ್ದರಾಮಯ್ಯ ಅವರು ತಮ್ಮ ಸರ್ಕಾರಿ ನಿವಾಸ ‘ಕಾವೇರಿ’ಯಲ್ಲಿ ಗುರುವಾರ ಬೆಳಿಗ್ಗೆ 9 ಗಂಟೆಗೆ ಸಂಪುಟ ಸಹೋದ್ಯೋಗಿಗಳಿಗೆ ಉಪಾಹಾರ ಕೂಟ ಏರ್ಪಡಿಸಿದ್ದುಮುಡಾ ವಿಚಾರ, ರಾಜ್ಯಪಾಲರ ನಡೆಯ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆಯಿದೆ.

ಎರಡು ದಿನ ದೆಹಲಿಗೆ ಪ್ರವಾಸ ಕೈಗೊಂಡಿದ್ದ ಮುಖ್ಯಮಂತ್ರಿ, ಬುಧವಾರ ಸಂಜೆ ನಗರಕ್ಕೆ ವಾಪಸಾದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಪಕ್ಷದ ನಾಯಕರನ್ನು ಭೇಟಿಯಾದ ಸಿ.ಎಂ, ಮುಡಾ ವಿಚಾರವೂ ಸೇರಿ ರಾಜ್ಯ ರಾಜಕೀಯದ ಸದ್ಯದ ವಿದ್ಯಮಾನಗಳ ಕುರಿತು ಚರ್ಚೆ ನಡೆಸಿದ್ದರು.

ಮಸೀದಿಗೆ ಮದ್ಯದ ಬಾಟಲಿ ಎಸೆತ: 7 ಆರೋಪಿಗಳ ಬಂಧನ



ಸಿರವಾರದಲ್ಲಿ ಮಂಗಳವಾರ ಮಸೀದಿಗೆ ಬಾಟಲಿ ಎಸೆದ ಸ್ಥಳಕ್ಕೆ ಸಿಪಿಐ ಎಂ.ಶಶಿಕಾಂತ ಭೇಟಿ ನೀಡಿ ಪರಿಶೀಲಿಸಿದರು

ಪ್ರಜಾವಾಣಿ ವಾರ್ತೆ

ಸಿರವಾರ (ರಾಯಚೂರು ಜಿಲ್ಲೆ): ಪಟ್ಟಣದ ಬಸ್ ನಿಲ್ದಾಣದ ಪಕ್ಕದಲ್ಲಿರುವ ಮಸೀದಿಗೆ ಮಂಗಳವಾರ ರಾತ್ರಿ ಕಿಡಿಗೇಡಿಗಳು ಮದ್ಯದ ಬಾಟಲಿ ಎಸೆದಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಬಾಲಕ ಸೇರಿ ಏಳು ಮಂದಿಯನ್ನು ಬಂಧಿಸಲಾಗಿದೆ.

ಕಾನೂನು ಸಂಘರ್ಷಕ್ಕೆ ಒಳಗಾದ 16 ವರ್ಷದ ಬಾಲಕನನ್ನು ರಾಯಚೂರಿನ ಬಾಲಕರ ವೀಕ್ಷಣಾಲಯಕ್ಕೆ ಕಳುಹಿಸಲಾಗಿದೆ. ಉಳಿದ ಆರೋಪಿಗಳಾದ ಸಾಗರ ನಾಯಕ, ರಂಗನಾಥ, ಬಸವ, ವೀರೇಶ ಮಡ್ಡಿ, ವಿಜಯ ಕೊಲ್ಮಿ, ಸಾಬಯ್ಯ ನಾಯಕ ಎಂಬುವವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕುಡಿದ ಅಮಲಿನಲ್ಲಿ ಕೃತ್ಯ ಎಸೆಗಿರುವುದಾಗಿ ಆರೋಪಿಗಳು ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮಸೀದಿಗೆ ಬಾಟಲಿ ಎಸೆದಿದ್ದಾರೆ ಎಂಬ ವಿಷಯ ತಿಳಿಯುತ್ತಿದ್ದಂತೆ ಪೊಲೀಸ್ ಠಾಣೆ ಮುಂಭಾಗದಲ್ಲಿ ರಸ್ತೆ ತಡೆ ನಡೆಸಿದ ಮುಸ್ಲಿಂ ಯುವಕರು, ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದರು.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ, ಎಎಸ್ಪಿ ಶಿವಕುಮಾರ, ಡಿವೈಎಸ್ಪಿ ಬಿ.ಎಸ್. ತಳವಾರ, ಸಿಪಿಐ ಶಶಿಕಾಂತ, ಪಿಎಸ್‌ಐ ಗುರುಚಂದ್ರ ಯಾದವ್ ಭೇಟಿ ನೀಡಿ ಪರಿಶೀಲಿಸಿದರು. ಸಿರವಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಗಳಮುಖಿ ಬೆತ್ತಲೆಗೊಳಿಸಿ ಹಲ್ಲೆ

ವಿಜಯಪುರ: ನಗರದ ಕೇಂದ್ರ ಬಸ್ ನಿಲ್ದಾಣದ ಬಳಿ ಮಂಗಳಮುಖಿಯನ್ನು ಐದಕ್ಕೂ ಹೆಚ್ಚು ಮಂಗಳಮುಖಿಯರು ಜನರ ಎದುರೇ ಬೆತ್ತಲೆಗೊಳಿಸಿ, ಅಮಾನವೀಯವಾಗಿ ಥಳಿಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಬುಧವಾರ ಹರಿದಾಡಿದೆ.

ಮಂಗಳಮುಖಿಯನ್ನು ರಸ್ತೆ ಮೇಲೆ ಕೆಡವಿ, ಇತರೆ ಮಂಗಳಮುಖಿಯರು ಮನ ಬಂದಂತೆ ಥಳಿಸಿ, ಬಟ್ಟೆ ಹರಿದು ಬೆತ್ತಲೆಗೊಳಿಸಿ, ಕಾರದಪುಡಿ ಎರಚಿ ಅವಾಚ್ಯವಾಗಿ ನಿಂದಿಸಿದ್ದಾರೆ. ಹೊಡೆಯದಂತೆ ಪದೇ ಪದೇ ಕೋರಿದರೂ ರೊಚ್ಚಿಗೆದ್ದು ಹಲ್ಲೆ ನಡೆಸಿದ ದೃಶ್ಯಗಳಿವೆ. ಈ ಘಟನೆಗೆ ಕಾರಣವೇನು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಸಿಕ್ಕಿಲ್ಲ. ಯಾವುದೇ ದೂರು ಕೂಡ ದಾಖಲಾಗಿಲ್ಲ. ‘ಘಟನೆ ಬಗ್ಗೆ ತನಿಖೆಗೆ ತಂಡ ರಚಿಸಲಾಗಿದೆ. ಸಂತ್ರಸ್ತ ಮಂಗಳಮುಖಿ ಸೇರಿ ಹಲ್ಲೆ ನಡೆಸಿದವರನ್ನು ಪತ್ತೆ ಮಾಡಿ, ಪ್ರಕರಣ ದಾಖಲಿಸಿಕೊಳ್ಳಲಾಗುವುದು’ ಎಂದು ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ತಿಳಿಸಿದರು.

ನೈರುತ್ಯ ಮುಂಗಾರು ಮಳೆ ಅಬ್ಬರ ● ವಾಡಿಕೆಗಿಂತ ಶೇ 30ರಷ್ಟು ಹೆಚ್ಚು ವರ್ಷಧಾರೆ

2 ತಿಂಗಳಿನಲ್ಲಿ 45,397 ಹೆಕ್ಟೇರ್ ಬೆಳೆ ಹಾನಿ

● ರಾಜೇಶ್ ರೈ ಚಟ್ಲ

ಮಳೆ ಹಾನಿ (ಜೂನ್ 1ರಿಂದ ಜುಲೈ 31ರವರೆಗೆ)				
55	1,064	5,406	44,253 ಹೆಕ್ಟೇರ್	1,144 ಹೆಕ್ಟೇರ್
ಜೀವಹಾನಿ	ಮನೆ ಸಂಪೂರ್ಣ ಹಾನಿ	ಮನೆ ಭಾಗಶಃ ಹಾನಿ	ಕೃಷಿ ಬೆಳೆ ಹಾನಿ	ತೋಟಗಾರಿಕೆ ಬೆಳೆ ಹಾನಿ

ಬೆಂಗಳೂರು: ರಾಜ್ಯದ ಬಹುತೇಕ ಭಾಗಗಳಲ್ಲಿ ಈ ಬಾರಿ ನೈರುತ್ಯ ಮುಂಗಾರು ಮಳೆ ಅಬ್ಬರಿಸಿದ್ದು, ಪರಿಣಾಮ ಕಳೆದ ಎರಡು ತಿಂಗಳಲ್ಲಿ ತೋಟಗಾರಿಕೆ ಮತ್ತು ಕೃಷಿ ಸೇರಿ ಒಟ್ಟು 45,397 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಸಂಭವಿಸಿದೆ.

ಜೂನ್ 1ರಿಂದ ಜುಲೈ 31ರವರೆಗಿನ ಅವಧಿಯಲ್ಲಿ ಕೊಡಗು, ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮತ್ತು ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ, ಬೆಳಗಾವಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಬಿರುಗಾಳಿ ಸಹಿತ ವರ್ಷಧಾರೆಯಾಗಿದೆ.

ರಾಜ್ಯದಲ್ಲಿ ಸಂಭವಿಸಿರುವ ಮಳೆ ಹಾನಿ ಕುರಿತು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ ಕಂದಾಯ ಇಲಾಖೆಯ (ವಿಪತ್ತು ನಿರ್ವಹಣೆ) ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ‘ಕಳೆದ ಎರಡು ತಿಂಗಳಲ್ಲಿ ಮಳೆಯಿಂದಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅತೀ ಹೆಚ್ಚು 15 ಮಂದಿ ಸೇರಿ ಒಟ್ಟು 55 ಜನರು ಸಾವಿಗೀಡಾಗಿದ್ದಾರೆ. 18 ಮಂದಿ ನೀರಿನಲ್ಲಿ ಮುಳುಗಿ ಜೀವ ತೆತ್ತಿದ್ದಾರೆ. ಉಳಿದಂತೆ, ಗುಡ್ಡ ಕುಸಿತದಿಂದ 13, ಮನೆ, ಆವರಣ ಗೋಡೆ ಕುಸಿದುಬಿದ್ದು, ಸಿಡಿಲು ಬಡಿದು ಮತ್ತು ಮರ ಮುರಿದು ಮೈ ಮೇಲೆ ಬಿದ್ದು ತಲಾ ಎಂಟು ಜನ ಜೀವ ಕಳೆದುಕೊಂಡಿದ್ದಾರೆ. ಮೂರು ಮಂದಿ ನಾಪತ್ತೆಯಾಗಿದ್ದು, 35 ಮಂದಿಗೆ ಗಾಯಗಳಾಗಿವೆ’ ಎಂದಿದ್ದಾರೆ.



ಈ ಅವಧಿಯಲ್ಲಿ ಇಡೀ ರಾಜ್ಯದಲ್ಲಿ 611 ಮಿ.ಮೀ ಮಳೆಯಾಗಿದೆ. ಇದು ವಾಡಿಕೆಗಿಂತ (471 ಮಿ.ಮೀ) ಶೇ 30ರಷ್ಟು ಹೆಚ್ಚು. ಯಾದಗಿರಿ ಜಿಲ್ಲೆಯನ್ನು ಬಿಟ್ಟರೆ ಉಳಿದ ಎಲ್ಲ ಜಿಲ್ಲೆಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ಮಳೆ ಆಗಿದೆ. ಯಾದಗಿರಿಯಲ್ಲಿ ಶೇ 3ರಷ್ಟು ಮಳೆ ಕೊರತೆ ಆಗಿದೆ. ದಕ್ಷಿಣ ಒಳನಾಡಿನಲ್ಲಿ ವಾಡಿಕೆಗಿಂತ ಶೇ 41ರಷ್ಟು, ಉತ್ತರ ಒಳನಾಡಿನಲ್ಲಿ ಶೇ 31, ಮಲೆನಾಡಿನಲ್ಲಿ ಶೇ 30, ಕರಾವಳಿಯಲ್ಲಿ ಶೇ 27ರಷ್ಟು ಹೆಚ್ಚು ಮಳೆ ಆಗಿದೆ.

ಅತೀ ಹೆಚ್ಚಿನ ಪ್ರಮಾಣದಲ್ಲಿ ಜಲಾಶಯಗಳಿಗೆ ಮಳೆ ನೀರು ಹರಿದುಬಂದ ಕಾರಣ, ಬೆಳಗಾವಿ ಜಿಲ್ಲೆಯ ಗೋಕಾಕ, ಅಥಣಿ, ಹುಕ್ಕೇರಿ, ನಿಪ್ಪಾಣಿ, ಮೂಡಲಗಿ, ಚಿಕ್ಕೋಡಿ ತಾಲ್ಲೂಕುಗಳಲ್ಲಿ ಮತ್ತು ಬಾಗಲಕೋಟೆಯ ಕೆಲವು ಭಾಗಗಳಲ್ಲಿ ಭಾರಿ ಪ್ರವಾಹ ಉಂಟಾಗಿದೆ. ಕಾವೇರಿ ಜಲಾನಯನ ಪ್ರದೇಶಗಳ ಎಲ್ಲ ನಾಲ್ಕು ಅಣೆಕಟ್ಟುಗಳಿಗೂ ಹೆಚ್ಚಿನ ಪ್ರಮಾಣದಲ್ಲಿ ಒಳ ಹರಿವು ಉಂಟಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಅತೀ ಹೆಚ್ಚು 26,674 ಹೆಕ್ಟೇರ್ ಪ್ರದೇಶದಲ್ಲಿ, ಬಾಗಲಕೋಟೆಯಲ್ಲಿ 15,455 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಹಾನಿ ಉಂಟಾಗಿದೆ. ನಷ್ಟದ ಪ್ರಮಾಣವನ್ನು ಇನ್ನಷ್ಟೆ ಸಮೀಕ್ಷೆ ಮಾಡಬೇಕಿದೆ ಎಂದು ಅವರು ಮಾಹಿತಿ ನೀಡಿದರು.

196 ಕಾಳಜಿ ಕೇಂದ್ರದಲ್ಲಿ 23,642 ಮಂದಿ

ಮಳೆಯಿಂದ 212 ಗ್ರಾಮಗಳಲ್ಲಿ ಸಮಸ್ಯೆಯಾಗಿದೆ. ವಿವಿಧೆಡೆ 196 ಕಾಳಜಿ ಕೇಂದ್ರಗಳನ್ನು ಆರಂಭಿಸಲಾಗಿದ್ದು, ಅವುಗಳಲ್ಲಿ 23,642 ಜನರು ಆಶ್ರಯ ಪಡೆದಿದ್ದಾರೆ.

278 ಜಾನುವಾರುಗಳು ಬಲಿ ಆಗಿವೆ. 1,064 ಮನೆಗಳು ಸಂಪೂರ್ಣ, 5,406 ಮನೆಗಳು ಭಾಗಶಃ ಹಾನಿಯಾಗಿದೆ. ಚಿಕ್ಕಮಗಳೂರಿನಲ್ಲಿ ಅತೀ ಹೆಚ್ಚು 353, ಉತ್ತರ ಕನ್ನಡದಲ್ಲಿ 183, ಹಾಸನದಲ್ಲಿ 153, ಮನೆಗಳಿಗೆ ತೀವ್ರ ಹಾನಿಯಾಗಿದೆ. ಒಟ್ಟು 23,284 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ವಯನಾಡ್‌ನಲ್ಲಿ ಮೈಸೂರು ಭಾಗದ ಎಂಟು ಮಂದಿ ಸಾವು

ಕನ್ನಡಿಗರ ಪತ್ತೆ ಸವಾಲು

ಪ್ರಜಾವಾಣಿ ವಾರ್ತೆ

ಮೈಸೂರು: ವಯನಾಡ್ ದುರಂತದಲ್ಲಿ ಮೃತಪಟ್ಟವರು ಮತ್ತು ನಾಪತ್ತೆಯಾಗಿರುವ ಕನ್ನಡಿಗರ ಪತ್ತೆಯು ರಾಜ್ಯದ ಅಧಿಕಾರಿಗಳಿಗೆ ದೊಡ್ಡ ಸವಾಲಾಗಿ ಮಾರ್ಪಟ್ಟಿದೆ. ಇದುವರೆಗೆ ಮೈಸೂರು ಭಾಗದ ಒಟ್ಟು ಎಂಟು ಮಂದಿ ಮೃತಪಟ್ಟಿದ್ದಾರೆ.

‘ವಯನಾಡಿನ ದಾಖಲೆಗಳಲ್ಲಿರುವ ಮಾಹಿತಿ ಮಲೆಯಾಳಿ ಭಾಷೆಯಲ್ಲಿರುವುದರಿಂದ ಕನ್ನಡಿಗರನ್ನು ಪತ್ತೆ ಹಚ್ಚುವುದು ಕಷ್ಟಕರವಾಗಿದೆ’ ಎಂದು ಚಾಮರಾಜನಗರದಿಂದ ಅಲ್ಲಿಗೆ ತೆರಳಿರುವ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ವಯನಾಡ್‌ನ ಮೇಪ್ಪಾಡಿ, ಚೂರಮಲೆ ಮತ್ತು ಮುಂಡಕ್ಕೈ ಪ್ರದೇಶಗಳಲ್ಲಿ ರಕ್ಷಿಸಿದವರನ್ನು 12 ಕಾಳಜಿ ಕೇಂದ್ರಗಳಲ್ಲಿರಿಸಲಾಗಿದ್ದು 50ಕ್ಕೂ ಹೆಚ್ಚು ಕನ್ನಡ ಭಾಷಿಕರಿದ್ದಾರೆ. ಕರ್ನಾಟಕಕ್ಕೆ ಬರಲು ಬಯಸುವವರನ್ನು ಕರೆ ತರಲು ಎರಡು ಕೆಎಸ್‌ಆರ್‌ಟಿಸಿ ಬಸ್‌ಗಳಿವೆ. ಆದರೆ, ಬಹಳಷ್ಟು ಮಂದಿ ಬರಲು ಒಪ್ಪುತ್ತಿಲ್ಲ’ ಎಂದು ಹೇಳಿದ್ದಾರೆ.

ಮೃತದೇಹಗಳ ಗುರುತು ಪತ್ತೆ: ಚಾಮರಾಜನಗರ ತಾಲ್ಲೂಕಿನ ಇರಸವಾಡಿಯ ರಾಜೇಂದ್ರ ಅವರ ಶವ ಪತ್ತೆಯಾಗಿದ್ದು, ಜಿಲ್ಲೆಯ ಒಟ್ಟು ಮೂವರು ಮೃತಪಟ್ಟಿದ್ದಾರೆ.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಕತ್ತರಘಟ್ಟದ ಝಾನ್ಸಿರಾಣಿ ಅವರ ಮಗ ಎರಡೂವರೆ ವರ್ಷದ ನಿಹಾಲ್ ಹಾಗೂ ಅತ್ತೆ ಲೀಲಾವತಿ (55) ಅವರ ಮೃತದೇಹಗಳನ್ನು ಕುಟುಂಬದ ಸದಸ್ಯರು ಗುರುತು ಹಿಡಿದಿದ್ದು, ‘ಅಂತಿಮ ದರ್ಶನಕ್ಕಾದರೂ ಮೃತದೇಹಗಳನ್ನು ತರಿಸಿಕೊಡಿ’ ಎಂದು ಕೋರಿದ್ದಾರೆ.



ರೋಹಿತ್



ನಿಹಾಲ್



ಲೀಲಾವತಿ

‘ಕುಸಿತದ ಸ್ಥಳದಲ್ಲಿ ಮಣ್ಣಿನಿಂದ ಹೊರಗೆ ಕಾಣುತ್ತಿದ್ದ ಕೈ ಲೀಲಾವತಿಯವರದ್ದು ಹಾಗೂ ಅವರು ವಾಸವಿದ್ದ ಮನೆಯ ಸಮೀಪದ ಗಿಡಗಂಟಿಗಳ ನಡುವೆ ನಿಹಾಲ್ ಮೃತದೇಹ ಪತ್ತೆಯಾಗಿದೆ’ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಝಾನ್ಸಿರಾಣಿ, ಪತಿ ಅನಿಲ್ ಕುಮಾರ್ ಹಾಗೂ ಮಾವ ದೇವರಾಜು ಕೇರಳದ ವಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ತಿ.ನರಸೀಪುರ; ಏಳು ಮಂದಿ ನಾಪತ್ತೆ, ಇಬ್ಬರ ಸಾವು: ಮೈಸೂರು ಜಿಲ್ಲೆಯ ತಿ.ನರಸೀಪುರ ಮೂಲದ ಶಿವಣ್ಣ (45) ಹಾಗೂ ಶ್ರೇಯಾ ಮೃತಪಟ್ಟಿದ್ದು, 7 ಮಂದಿ ನಾಪತ್ತೆಯಾಗಿದ್ದಾರೆ.

ಹೆಪ್ಪಾಡಿ ಗ್ರಾಮ ಪಂಚಾಯಿತಿಯ ಕಾಳಜಿ ಕೇಂದ್ರದಲ್ಲಿ ಉಕ್ಕಳಗೆರೆ ಮೂಲದ 25 ಮಂದಿ ಆಸರೆ ಪಡೆದಿದ್ದಾರೆ. ಅವರೆಲ್ಲ ದಶಕಗಳಿಂದ ಅಲ್ಲಿಯೇ ಕೆಲಸ ಮಾಡುತ್ತಿದ್ದರು. ಅವರ ಜೊತೆಗಿದ್ದ ಸಾವಿತ್ರಿ (52), ಗುರುಮಲ್ಲ (57), ಸವಿತಾ (44), ಸಿದ್ದರಾಜು (45), ದಿವ್ಯಾ (35), ಅಶ್ವಿನಿ ನಾಪತ್ತೆಯಾಗಿದ್ದಾರೆ.

ಸಂತಸ್ತರ ಚಿಕಿತ್ಸೆಗಾಗಿ ಮೈಸೂರು ಜಿಲ್ಲಾಡಳಿತವು ಔಷಧಗಳೊಂದಿಗೆ ತಜ್ಞ ವೈದ್ಯರನ್ನು ಬುಧವಾರ ಕಳುಹಿಸಿ ಕೊಟ್ಟಿತು.

ಗಡಿಭಾಗವಾದ ಎಚ್.ಡಿ. ಕೋಟೆಯಲ್ಲಿ ಐದು ಆಂಬುಲೆನ್ಸ್‌ಗಳು ಸನ್ನದ್ಧವಾಗಿವೆ. ಕೇರಳದಿಂದ ಬರುವ ಗಾಯಾಳುಗಳ ಚಿಕಿತ್ಸೆಗಾಗಿ ವೈದ್ಯಕೀಯ ತಂಡವೂ ಸಿದ್ಧವಿದೆ.



ವಯನಾಡ್‌ನ ಭೂಕುಸಿತ ಪ್ರದೇಶದಲ್ಲಿ ಮಣ್ಣಿನಲ್ಲಿ ಕಂಡ ಕೈ ಲೀಲಾವತಿಯರದ್ದು ಎಂದು ಕುಟುಂಬಸ್ಥರು ಗುರುತಿಸಿದ್ದಾರೆ

ಮುಖ್ಯಾಂಶಗಳು

- ರಕ್ಷಿಸಿದವರನ್ನು 12 ಕಾಳಜಿ ಕೇಂದ್ರಗಳಲ್ಲಿ ಇರಿಸಿದ್ದು, 50ಕ್ಕೂ ಹೆಚ್ಚು ಕನ್ನಡಿಗರಿದ್ದಾರೆ
- ದಶಕಗಳಿಂದ ಕೇರಳದಲ್ಲಿ ಕೆಲಸ ಮಾಡುತ್ತಿದ್ದರು
- ಗಡಿಭಾಗವಾದ ಎಚ್. ಡಿ. ಕೋಟೆಯಲ್ಲಿ ಐದು ಆಂಬುಲೆನ್ಸ್‌ಗಳು ಸನ್ನದ್ಧ

ಕೊಡಗಿನ ಬಾಲಕ ಸಾವು

ಮಡಿಕೇರಿ/ಸಿದ್ದಾಪುರ: ಕೇರಳದ ವಯನಾಡ್‌ನಲ್ಲಿ ಸಂಭವಿಸಿದ ದುರಂತದಲ್ಲಿ ಕೊಡಗು ಜಿಲ್ಲೆಯ ಸಿದ್ದಾಪುರದ ಗುಹ್ಯ ಗ್ರಾಮದ ರೋಹಿತ್ (10) ಮೃತಪಟ್ಟಿದ್ದಾನೆ.

ಹದಿನೈದು ದಿನಗಳ ಹಿಂದೆ, ತಾಯಿ ಕವಿತಾ ಅವರೊಂದಿಗೆ ಆತ ಅಲ್ಲಿಗೆ ತೆರಳಿದ್ದ. ಅವರು ಮಗನನ್ನು ತಮ್ಮ ಅಕ್ಕ-ಭಾವನ ಮನೆಯಲ್ಲಿರಿಸಿ ಕೆಲಸಕ್ಕೆ ತೆರಳಿದ್ದರು. ಆಗ ಗುಡ್ಡ ಕುಸಿದು ಮೂವರೂ ಮೃತಪಟ್ಟರು. ಬಾಲಕನ ಅಂತ್ಯಕ್ರಿಯೆಯನ್ನು ಅಲ್ಲಿಯೇ ನಡೆಸಲಾಗಿದೆ’ ಎಂದು ವಿರಾಜಪೇಟೆ ತಹಶೀಲ್ದಾರ್ ರಾಮಚಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು. ರವಿ- ಕವಿತಾ ದಂಪತಿ ಗ್ರಾಮದ ಲೈನ್‌ಮನೆಯಲ್ಲಿ ಒಂದು ವರ್ಷದಿಂದ ವಾಸವಿದ್ದಾರೆ.

‘ವಯನಾಡ್‌ನ ಮೇಪಾಡಿಯಲ್ಲಿ 12 ವರ್ಷದಿಂದ ಪತಿಯೊಂದಿಗೆ ವಾಸವಿದ್ದ ಮಗಳು ವಿದ್ಯಾ (35) ದುರಂತದ ಬಳಿಕ ಸಂಪರ್ಕಕ್ಕೆ ಸಿಕ್ಕಿಲ್ಲ’ ಎಂದು ಅವರ ತಾಯಿ, ನೆಲ್ಯಹುದಿಕೇರಿಯ ನಲ್ವತ್ತೇಕರೆ ಗ್ರಾಮದ ಪೊನ್ನಮ್ಮ ತಿಳಿಸಿದ್ದಾರೆ.

ಮುಡಾ: ಸೇವೆ ಮುಂದುವರಿಕೆಗೆ ಅನುಮತಿ ಕೋರಿ ಪತ್ರ

ಪ್ರಜಾವಾಣಿ ವಾರ್ತೆ

ಮೈಸೂರು: ‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ತಿಂಗಳಿಂದ ವಿವಿಧ ಸೇವೆಗಳಲ್ಲಿ ವ್ಯತ್ಯಯವಾಗಿದ್ದು, ಸಾರ್ವಜನಿಕರು ಪರದಾಡುವಂತಾಗಿದೆ. ದೈನಂದಿನ ಕೆಲಸಗಳನ್ನು ಎಂದಿನಂತೆ ನಿರ್ವಹಿಸಲು ಅನುಮತಿ ನೀಡಬೇಕು’ ಎಂದು ಕೋರಿ ಆಯುಕ್ತರು ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದಾರೆ.

ಮುಡಾದ ಎಲ್ಲ ವ್ಯವಹಾರಗಳನ್ನು ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸುವಂತೆ ಸರ್ಕಾರ ಜುಲೈ 2ರಂದು ಸೂಚನೆ ನೀಡಿತ್ತು. ಪ್ರಮುಖ ನಿರ್ಣಯಗಳನ್ನು ಕೈಗೊಳ್ಳದಂತೆ ಆದೇಶಿಸಿತ್ತು. ನಂತರದಲ್ಲಿ ತನಿಖಾ ಆಯೋಗವು ಭೇಟಿ ನೀಡಿದ್ದು, ದಾಖಲೆಗಳ ಕೊಠಡಿಯನ್ನು ಸೀಜ್ ಮಾಡಿತ್ತು.

ಅಂದಿನಿಂದ ಮುಡಾದಲ್ಲಿ ಖಾತೆ, ಎನ್‌ಒಸಿ, ಖಾಸಗಿ ಬಡಾವಣೆಗಳ ನಕ್ಷೆ ಅನುಮೋದನೆ, ಪೌತಿ ಖಾತೆ ವರ್ಗಾವಣೆ, ಕ್ರಯಪತ್ರ ಸೇರಿದಂತೆ ಬಹುತೇಕ ಸೇವೆಗಳು ಸ್ಥಗಿತಗೊಂಡಿವೆ. ಅಧಿಕಾರಿಗಳು ಹಾಗೂ ಸಿಬ್ಬಂದಿಗೂ ಜುಲೈ ತಿಂಗಳ ವೇತನ ಪಾವತಿಗೆ ಸಹ ಅಡ್ಡಿಯಾಗಿದೆ ಎನ್ನಲಾಗಿದೆ.

ಈ ಹಿನ್ನೆಲೆಯಲ್ಲಿ, ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ನಗರ ಯೋಜನಾ ಆಯುಕ್ತರಿಗೆ ಪತ್ರ ಬರೆದಿರುವ ಆಯುಕ್ತ ರಘುನಂದನ್, ‘ನೌಕರರ ವೇತನ ಪಾವತಿ, ನ್ಯಾಯಾಲಯದ ಆದೇಶ ಪಾಲನೆ, ಖಾಸಗಿ ಬಡಾವಣೆಗಳಿಗೆ ಸಂಬಂಧಿಸಿದ ಖಾತೆ, ಎನ್‌ಒಸಿ, ಕಂದಾಯ ಸೇವೆ, ಮುಂತಾದ ಪ್ರಕ್ರಿಯೆ ನಡೆಸಲು ಅನುವು ಮಾಡಿಕೊಡಬೇಕು’ ಎಂದು ಕೋರಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಕಟ್ಟುಪಾಡು ಇಲ್ಲದವರು ಬದುಕಿನಲ್ಲಿ ಕೆಟ್ಟಪಾಡುಗಳನ್ನು ಅನುಭವಿಸಬೇಕಾಗುತ್ತದೆ.

–ಕೆ.ಎಸ್.ನಿಸಾರ್ ಅಹಮದ್

ವಯನಾಡ್ ಭೀಕರ ದುರಂತ ಒಂದು ಗಂಭೀರ ಎಚ್ಚರಿಕೆ

ಕೇರಳದ ಜನಪ್ರಿಯ ಪ್ರವಾಸಿ ತಾಣ ವಯನಾಡ್‌ನಲ್ಲಿ ಮಂಗಳವಾರ ನಸುಕಿನಲ್ಲಿ ಸಂಭವಿಸಿದ ಭೂಕುಸಿತ ಹಾಗೂ ಉಂಟಾದ ದಿಢೀರ್ ಪ್ರವಾಹವು ಭಾರಿ ಪ್ರಮಾಣದಲ್ಲಿ ಹಾನಿಯನ್ನು ಉಂಟುಮಾಡಿದೆ. ದೊಡ್ಡ ಪ್ರಮಾಣದಲ್ಲಿ ಜೀವಹಾನಿಯಾಗಿದೆ. ಜನರ ಮನೆ, ಆಸ್ತಿ–ಪಾಸ್ತಿ ಹೇಳಹೆಸರಿಲ್ಲದಂತೆ ನಾಶವಾಗಿವೆ. 150ಕ್ಕೂ ಹೆಚ್ಚು ಮಂದಿಯ ಮೃತದೇಹಗಳು ಪತ್ತೆಯಾಗಿವೆ. ಹಲವರು ನಾಪತ್ತೆಯಾಗಿದ್ದಾರೆ. ಅವರ ಪರಿಸ್ಥಿತಿ ಏನಾಗಿದೆ ಎಂಬುದು ಸ್ಪಷ್ಟವಿಲ್ಲ. ಇಡೀ ಹಳ್ಳಿ, ಶಾಲಾ ಕಟ್ಟಡಗಳು, ರಸ್ತೆಗಳು, ಸೇತುವೆಗಳು, ಇತರ ಕಟ್ಟಡಗಳು ಪ್ರವಾಹ ಹಾಗೂ ಭೂಕುಸಿತಕ್ಕೆ ಸಿಲುಕಿ ಧ್ವಂಸಗೊಂಡಿವೆ. ಈ ಪ್ರದೇಶದಲ್ಲಿ ಇದ್ದ ಹಲವು ಕಟ್ಟಡಗಳು ಕಣ್ಮರೆಯಾಗಿವೆ. ವಯನಾಡ್‌ನಲ್ಲಿ ಉಂಟಾಗಿರುವ ದುರಂತವು ಈಗ ಕಣ್ಣಿಗೆ ಗೋಚರವಾಗುತ್ತಿರುವುದಕ್ಕಿಂತ ಭೀಕರವಾಗಿರಬಹುದು. ಬೆಟ್ಟಗಳ ಮೇಲಿನಿಂದ ಬಂದ ಮಣ್ಣು ಹಾಗೂ ನೀರಿನ ಸುನಾಮಿಯೊಂದು ಈ ನಯನ ಮನೋಹರ ಪ್ರದೇಶವನ್ನು ಕೆಲವೇ ಗಂಟೆಗಳ ಅವಧಿಯಲ್ಲಿ ಸ್ಮಶಾನದಂತಾಗಿಸಿದೆ. ಭೂತಕಾಲದ ಹಲವು ತಪ್ಪುಗಳಿಗೆ ವರ್ತಮಾನದಲ್ಲಿ ಎದುರಾಗಿರುವ ಶಿಕ್ಷೆಯಂತೆ ಇದು ಕಾಣುತ್ತಿದೆ. ಹಿಂದಿನ ತಪ್ಪುಗಳು ಭವಿಷ್ಯದ ಮೇಲೆಯೂ ಕೆಟ್ಟ ಪರಿಣಾಮ ಉಂಟುಮಾಡುವ ಭೀತಿ ಎದುರಾಗಿದೆ.




ಭೂತಕಾಲದ ಹಲವು ತಪ್ಪುಗಳಿಗೆ ವರ್ತಮಾನದಲ್ಲಿ ಎದುರಾಗಿರುವ ಶಿಕ್ಷೆಯಂತೆ ಈ ದುರಂತ ಕಾಣುತ್ತಿದೆ

ಸರ್ಕಾರಗಳ ಮುಂದೆ, ನಾಗರಿಕ ಸಮಾಜದ ಮುಂದೆ ಈಗ ತಕ್ಷಣಕ್ಕೆ ಇರುವ ಸವಾಲು ರಕ್ಷಣಾ ಕಾರ್ಯವನ್ನು ಭರದಿಂದ ನಡೆಸುವುದು, ಜೀವ ಉಳಿಸಿಕೊಂಡವರಿಗೆ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವುದು ಹಾಗೂ ಇನ್ನಷ್ಟು ಹಾನಿ ಆಗದಂತೆ ನೋಡಿಕೊಳ್ಳುವುದು. ವಯನಾಡ್‌ನಲ್ಲಿ ಆಗಿರುವುದು ವ್ಯಕ್ತಿಗತ ಮಟ್ಟದಲ್ಲೂ ಸಮಷ್ಟಿಯ ಮಟ್ಟದಲ್ಲೂ ಅತೀವ ವೇದನೆ ಉಂಟುಮಾಡುವಂಥದ್ದು. ಈ ದುರಂತದ ಕಾರಣದಿಂದಾಗಿ ಆಗಿರುವ ಹಾನಿ ಮತ್ತು ನಷ್ಟ ಎಷ್ಟು ಎಂಬುದು ನಿಖರವಾಗಿ ಇನ್ನೂ ತಿಳಿದಿಲ್ಲ. ದೇಶದ ಸಶಸ್ತ್ರ ಪಡೆಗಳು, ಎನ್‌ಡಿಆರ್‌ಎಫ್, ಅಗ್ನಿಶಾಮಕ ದಳ, ಪೊಲೀಸರು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ. ಮಣ್ಣು ಹಾಗೂ ಇತರ ಅವಶೇಷಗಳ ಅಡಿಯಲ್ಲಿ ಸಿಲುಕಿರುವ ಜನರನ್ನು ಗುರುತಿಸುವ, ಅವರನ್ನು ರಕ್ಷಿಸುವ, ಗಾಯಾಳುಗಳನ್ನು ಆಸ್ಪತ್ರೆಗಳಿಗೆ ಸಾಗಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಇವರೆಲ್ಲ ಮೆಚ್ಚುವಂತಹ ಕೆಲಸ ಮಾಡುತ್ತಿದ್ದಾರೆ. ರಕ್ಷಣೆ ಹಾಗೂ ಪರಿಹಾರ ಕಾರ್ಯಗಳು ಇನ್ನೂ ಹಲವು ದಿನಗಳವರೆಗೆ ಮುಂದುವರಿಯುತ್ತವೆ. ನೆಲೆ ಕಳೆದುಕೊಂಡವರಿಗೆ ಪುನರ್ವಸತಿ ಕಲ್ಪಿಸುವ ಕೆಲಸಗಳು ಪೂರ್ಣಗೊಳ್ಳಲು ಸುದೀರ್ಘ ಅವಧಿ ಬೇಕಾಗಬಹುದು. ಭೂಕುಸಿತ ಹಾಗೂ ದಿಢೀರ್ ಪ್ರವಾಹದ ಪರಿಣಾಮವಾಗಿ ಕೊಚ್ಚಿಹೋದ ಕೆಲವು ಸ್ಥಳಗಳನ್ನು ಮತ್ತೆ ನಿರ್ಮಿಸಲು ಎಂದಿಗೂ ಸಾಧ್ಯವಾಗದಿರಬಹುದು. ಏಕೆಂದರೆ ಆ ರೀತಿ ಆಗಿರುವೆಡೆಗಳಲ್ಲಿ ಮೊದಲು ಏನಿತ್ತು ಎಂಬುದರ ಕುರುಹು ಕೂಡ ಈಗ ಕಾಣುತ್ತಿಲ್ಲ. ಹಲವರು ತಮ್ಮ ಕುಟುಂಬದ ಸದಸ್ಯರನ್ನು, ತಮ್ಮದೆನ್ನುವ ವಸ್ತುಗಳನ್ನು ಕಳೆದುಕೊಂಡಿದ್ದಾರೆ. ಅಂಥವರಿಗೆ ನೆರವು ಒದಗಿಸಬೇಕು. ಈಗ ಆಗಿರುವ ದುರಂತದಿಂದ ಹಾಗೂ ಹಿಂದೆ ಆಗಿಹೋಗಿರುವ ಇದೇ ಬಗೆಯ ಇತರ ದುರಂತಗಳಿಂದ ಪಾಠವನ್ನು ಸಹ ಕಲಿಯಬೇಕು. ಕೇರಳವು 2018ರಲ್ಲಿ ಭಾರಿ ಪ್ರವಾಹಕ್ಕೆ ಸಾಕ್ಷಿಯಾಗಿತ್ತು. ಈ ರಾಜ್ಯವು ಹಿಂದೆಯೂ ಭೂಕುಸಿತಗಳನ್ನು, ದಿಢೀರ್ ಪ್ರವಾಹಗಳನ್ನು, ಹವಾಮಾನ ವೈಪರೀತ್ಯಗಳನ್ನು ಕಂಡಿದೆ. ಈಗ ಭೂಕುಸಿತ ಕಂಡಿರುವ ಪ್ರದೇಶದಲ್ಲೇ ಹಿಂದೆಯೂ ಭೂಕುಸಿತ ಸಂಭವಿಸಿದೆ. ಪ್ರಕೃತಿಯ ಮೇಲೆ ನಿರಂತರವಾಗಿ ನಡೆಯುತ್ತಿರುವ ದಾಳಿಯ ಪರಿಣಾಮ ಕೆಟ್ಟದ್ದಾಗಿರುತ್ತದೆ ಎಂಬ ಎಚ್ಚರಿಕೆಗಳನ್ನು ಹಲವರು ನೀಡಿದ್ದರು. ಆದರೆ ಅಂತಹ ಎಚ್ಚರಿಕೆಗಳನ್ನು ಸಂಬಂಧಪಟ್ಟವರು ಕಿವಿಗೆ ಹಾಕಿಕೊಳ್ಳಲಿಲ್ಲ.

ಅರಣ್ಯನಾಶ, ಅತಿಕ್ರಮಣ, ಅನಿಯಂತ್ರಿತ ನಿರ್ಮಾಣ ಚಟುವಟಿಕೆಗಳು ಹಾಗೂ ಗಣಿಗಾರಿಕೆಯಿಂದಾಗಿ ಪಶ್ಚಿಮಘಟ್ಟ ಪ್ರದೇಶಕ್ಕೆ ಎದುರಾಗಿರುವ ಅಪಾಯಗಳ ಬಗ್ಗೆ ಮಾಧವ ಗಾಡ್ಗೀಳ್ ನೇತೃತ್ವದ ಸಮಿತಿಯು 2011ರಲ್ಲಿ ವರದಿ ಸಿದ್ಧಪಡಿಸಿದೆ. ಇಂತಹ ದುರಂತಗಳು ಸಂಭವಿಸಬಹುದು ಎಂಬುದನ್ನು ವರದಿಯು ಊಹಿಸಿತ್ತು, ವಿಕೋಪಗಳನ್ನು ತಡೆಯಲು ಕೆಲವು ಕ್ರಮಗಳನ್ನು ಸೂಚಿಸಿತ್ತು. ಗಾಡ್ಗೀಳ್ ಸಮಿತಿಯ ವರದಿಯನ್ನು ದುರ್ಬಲಗೊಳಿಸುವ ಉದ್ದೇಶದಿಂದ ಸರ್ಕಾರವು ಕೆ. ಕಸ್ತೂರಿರಂಗನ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತು. ದುರ್ಬಲಗೊಳಿಸಿದ ಶಿಫಾರಸುಗಳನ್ನು ಕೂಡ ಅನುಷ್ಠಾನಕ್ಕೆ ತರುವ ಕೆಲಸ ಆಗಲಿಲ್ಲ. ಸರ್ಕಾರವು ರಾಜಕೀಯ ಹಾಗೂ ಇತರ ಒತ್ತಡಗಳಿಗೆ ಮಣಿದು ಎಲ್ಲ ಶಿಫಾರಸುಗಳನ್ನು ನಿರ್ಲಕ್ಷಿಸಿತು. ಈಗ ಪಶ್ಚಿಮಘಟ್ಟ ಪ್ರದೇಶದ ಹಲವೆಡೆ, ಪರಿಸರ ನಾಶ ಹಾಗೂ ಹವಾಮಾನ ಬದಲಾವಣೆಯ ಕಾರಣದಿಂದಾಗಿ ಅವಘಡಗಳು ಸಂಭವಿಸುತ್ತಿವೆ. ವಯನಾಡ್ ದುರಂತವು ಇತರ ರಾಜ್ಯಗಳಿಗೂ ಒಂದು ಎಚ್ಚರಿಕೆಯಾಗಬೇಕು.

ವಲಸಿಗ ವಿರೋಧಿ ಟ್ರಂಪ್ ಎದುರು ವಲಸಿಗ ದಂಪತಿಯ ಪುತ್ರಿ ಕಮಲಾ ಸ್ಪರ್ಧೆ ಕುತೂಹಲ ಕೆರಳಿಸಿದೆ

ಆ ಒಂದು ಚಿತ್ರ, ಬದಲಾಯಿತು ಚಿತ್ರಣ!



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಈ ಬೆಳವಣಿಗೆಯನ್ನು ಬಹುಶಃ ಜೋ ಬೈಡನ್ ಮತ್ತು ಕಮಲಾ ಹ್ಯಾರಿಸ್ ಇಬ್ಬರೂ ನಿರೀಕ್ಷಿಸಿರಲಿಕ್ಕಿಲ್ಲ. 2020ರ ಅಧ್ಯಕ್ಷೀಯ ಚುನಾವಣೆಯ ಸಮಯದಲ್ಲೂ ಬೈಡನ್ ಅವರ ವಯಸ್ಸಿನ ಕುರಿತು ಚರ್ಚೆ ನಡೆದಿತ್ತು ನಿಜ. ಒಂದೊಮ್ಮೆ ಬೈಡನ್ ಅವರು ತಮ್ಮ ಅವಧಿಯನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದರೆ, ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಆ ಸ್ಥಾನವನ್ನು ತುಂಬಬೇಕಾಗಬಹುದು. ಬರೀ ಒಂದು ಅವಧಿಗೆ ಸೆನೆಟರ್ ಆಗಿ ರಾಜಕೀಯ ಅನುಭವ ಹೊಂದಿರುವ ಕಮಲಾ ಹ್ಯಾರಿಸ್, ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಕಾರ್ಯ ನಿರ್ವಹಿಸಲು ಸಮರ್ಥರೇ ಎಂಬ ಪ್ರಶ್ನೆ ಬೈಡನ್ ಅವರು ಕಮಲಾ ಅವರನ್ನು ಉಪಾಧ್ಯಕ್ಷ ಸ್ಥಾನಕ್ಕೆ ಆಯ್ದುಕೊಂಡಾಗ ಎದ್ದಿತ್ತು. ಇದೀಗ ನೋಡಿದರೆ ಎರಡನೆಯ ಅವಧಿಗೆ ಸ್ವತಃ ಕಮಲಾ ಹ್ಯಾರಿಸ್ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗುವ ಸಂದರ್ಭ ಎದುರಾಗಿದೆ!

ಕುಸಿದ ಜನಪ್ರಿಯತೆ ಮತ್ತು ಪಕ್ಷದೊಳಗಿನ ವಿರೋಧಕ್ಕೆ ಮಣಿದಿರುವ ಅಧ್ಯಕ್ಷ ಬೈಡನ್, ಚುನಾವಣಾ ಕಣದಿಂದ ಹಿಂದೆ ಸರಿದಿದ್ದಾರೆ. ಬಲಗೊಳ್ಳದ ಆರ್ಥಿಕತೆ, ಜಾಗತಿಕ ವೇದಿಕೆಯಲ್ಲಿ ಮಂಕಾದ ಅಮೆರಿಕದ ವರ್ಚಸ್ಸು, ಏರು ವಯಸ್ಸಿನ ಕಾರಣಕ್ಕೆ ಬಳಲಿದ ದೇಹ ಮತ್ತು ಧ್ವನಿ ಬೈಡನ್ ಅವರನ್ನು ದುರ್ಬಲ ಅಧ್ಯಕ್ಷ ಸ್ಥಾನದಲ್ಲಿ ನಿಲ್ಲಿಸಿವೆ. ಉಪಾಧ್ಯಕ್ಷೆಯಾಗಿ ಬೈಡನ್ ಅವರ ಛಾಯೆಯಂತೆ ಇದ್ದ ಕಮಲಾ ಹ್ಯಾರಿಸ್ ಉತ್ಸಾಹದಿಂದ ಎದ್ದು ನಿಂತಿದ್ದಾರೆ.

ಅಮೆರಿಕದ ಇತಿಹಾಸದಲ್ಲಿ ಹಾಲಿ ಅಧ್ಯಕ್ಷರು 'ಮತ್ತೊಂದು ಅವಧಿಗೆ ಅಧ್ಯಕ್ಷನಾಗಲಾರೆ' ಎಂದು ಚುನಾವಣಾ ಕಣದಿಂದ ಹಿಂದೆ ಸರಿದದ್ದು ಇದೇ ಮೊದಲೇನೂ ಅಲ್ಲ. 1952ರಲ್ಲಿ ಅಂದಿನ ಅಧ್ಯಕ್ಷ ಹ್ಯಾರಿ ಟ್ರೂಮನ್ ಮತ್ತು 1968ರಲ್ಲಿ ಲಿಂಡನ್ ಜಾನ್ಸನ್ ಚುನಾವಣಾ ವರ್ಷದಲ್ಲಿ ತಾವು ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಅಲ್ಲ ಎಂದು ಹಿಂದೆ ಸರಿದಿದ್ದರು. ಕೊರಿಯನ್ ಯುದ್ಧದ ಕಾರಣ ಟ್ರೂಮನ್ ಅವರ ಜನಪ್ರಿಯತೆ ಕುಸಿದಿತ್ತು. ವಿಯೆಟ್ನಾಂ ಯುದ್ಧವು ಜಾನ್ಸನ್ ಅವರ ಕಾಲಿಗೆ ತೊಡಕಾಗಿತ್ತು. ಈ ಇಬ್ಬರು ನಾಯಕರು ಮುಂದಿನ ಚುನಾವಣೆಯಲ್ಲಿ ಅಭ್ಯರ್ಥಿಯಾಗುವುದಿಲ್ಲ ಎಂದು ಘೋಷಿಸಿದ್ದರು. ಆ ಎರಡೂ ಚುನಾವಣೆಗಳಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಗೆಲುವು ಸಾಧಿಸಿದ್ದರು.

ಆದರೆ ಈಗಿನ ಸಂದರ್ಭವೇ ಬೇರೆ. ಬೈಡನ್ ಸ್ವಯಿಚ್ಛೆಯಿಂದ ಚುನಾವಣೆಗೆ ಸ್ಪರ್ಧಿಸಲಾರೆ ಎಂದವರಲ್ಲ. ತೀರಾ ಇತ್ತೀಚಿನವರೆಗೂ ತಾನು ಇನ್ನೊಂದು ಅವಧಿಗೆ ಅಧ್ಯಕ್ಷನಾಗಲು ಎಲ್ಲ ರೀತಿಯಿಂದಲೂ ಸಮರ್ಥ ಎಂದೇ ಅವರು ಸಂದರ್ಶನಗಳಲ್ಲಿ ವಾದಿಸುತ್ತಿದ್ದರು. ಕೆಲವು ವಾರಗಳ ಕೆಳಗೆ ಟ್ರಂಪ್ ಅವರೊಂದಿಗೆ ನಡೆದ ಚರ್ಚೆಯಲ್ಲಿ ವಯಸ್ಸಿನ ಕುರಿತು ಪ್ರಶ್ನೆ ಬಂದಾಗ, 'ಟ್ರಂಪ್ ಅವರನ್ನು ಸೋಲಿಸಲು, ಪ್ರಜಾಪ್ರಭುತ್ವವನ್ನು ಉಳಿಸಲು ನಾನೇ ಸಮರ್ಥ' ಎಂದು ಬೈಡನ್ ಕ್ಷೀಣ ಧ್ವನಿಯಲ್ಲೇ ಉತ್ತರಿಸಿದ್ದರು.

ಆದರೆ ಅಧ್ಯಕ್ಷೀಯ ಅಭ್ಯರ್ಥಿಗಳ ನಡುವಿನ ಮೊದಲ ಸಂವಾದದಲ್ಲಿ ಟ್ರಂಪ್ ಅವರ ಖಡಕ್ ಉತ್ತರಗಳ ಎದುರು ಮಂಕಾಗಿ ಕಂಡಿದ್ದ ಬೈಡನ್ ಅವರ ವಿರುದ್ಧ ಪಕ್ಷದೊಳಗೆ ಅಪಸ್ವರ ಕೇಳಿಬಂತು. ಸ್ಪರ್ಧೆಯಿಂದ ಹಿಂದೆ ಸರಿಯಿರಿ ಎಂಬ ಅಭಿಯಾನ ನಡೆಯಿತು. ಕೊನೆಗೂ ಬೈಡನ್ ಕಣದಿಂದ ಹಿಂದೆ ಸರಿದರು.

ಇದೀಗ ಕಮಲಾ ಹ್ಯಾರಿಸ್ ಉತ್ಸಾಹದಿಂದ ಪ್ರಚಾರ ಸಭೆಗಳನ್ನು ನಡೆಸುತ್ತಿದ್ದಾರೆ. ಒಬಾಮ, ಬೈಡನ್, ಅಲ್ ಗೋರ್ ಸೇರಿದಂತೆ ಡೆಮಾಕ್ರಟಿಕ್ ಪಕ್ಷದ ಹಿರಿಯ ನಾಯಕರು ಕಮಲಾ ಅವರ ಉಮೇದುವಾರಿಕೆಯನ್ನು ಅನುಮೋದಿಸಿರುವುದರಿಂದ, ಈ ತಿಂಗಳ 19ರಿಂದ 22ರವರೆಗೆ ನಡೆಯಲಿರುವ ಡೆಮಾಕ್ರಟಿಕ್ ಪಕ್ಷದ ರಾಷ್ಟ್ರೀಯ ಅಧಿವೇಶನದಲ್ಲಿ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ಕಮಲಾ ಹ್ಯಾರಿಸ್ ಅವರು ಹೊರಹೊಮ್ಮುವುದು ಬಹುತೇಕ ಖಚಿತವಾಗಿದೆ. ಅಮೆರಿಕದ ಮೊದಲ ಮಹಿಳಾ ಅಧ್ಯಕ್ಷರಾಗಿ ಶ್ವೇತಭವನ ಪ್ರವೇಶಿಸುವ ಅವಕಾಶ ಕಮಲಾ ಅವರ ಮುಂದಿದೆ.

ಕಮಲಾ ಅವರ ಬದುಕು ಮತ್ತು ರಾಜಕೀಯ ಬೆಳವಣಿಗೆಯನ್ನು ಗಮನಿಸಿದವರಿಗೆ ಸ್ಪಷ್ಟವಾಗುವ ಅಂಶ ಎಂದರೆ, ಆಕೆ ಮಹತ್ವಾಕಾಂಕ್ಷಿ. ಕಂಡ ಕನಸನ್ನು ನನಸು ಮಾಡಿಕೊಳ್ಳುವ ಛಲ ಇರುವ ಮಹಿಳೆ. ಶ್ರಮ ಮತ್ತು ಬುದ್ಧಿವಂತಿಕೆಯನ್ನು ಬಳಸಿ ರಾಜಕೀಯದ ಮೆಟ್ಟಿಲುಗಳನ್ನು ಏರಿದ ಚಾಣಾಕ್ಷೆ.

ಸಾಮಾನ್ಯವಾಗಿ ಉಪಾಧ್ಯಕ್ಷರಾದವರು ತೆರೆಮರೆಯಲ್ಲೇ ಉಳಿಯುತ್ತಾರೆ. ಕೆಲವರು ಮಾತ್ರ ಉಪಾಧ್ಯಕ್ಷರಾಗಿಯೂ ಆಡಳಿತದ ನೀತಿ ನಿಲುವುಗಳನ್ನು ನಿರ್ದೇಶಿಸುವ ಕೆಲಸ ಮಾಡಿದ್ದಾರೆ. ಐಸೆನ್ ಹೋವರ್ ಅವರ ಅವಧಿಯಲ್ಲಿ ಉಪಾಧ್ಯಕ್ಷ ರಿಚರ್ಡ್ ನಿಕ್ಸನ್ ಅವರೇ ಬಹುತೇಕ ಸಭೆಗಳನ್ನು ನಿರ್ವಹಿಸುತ್ತಿದ್ದರು. ಜಾನ್ ಎಫ್. ಕೆನಡಿ ಅವರ ಅವಧಿಯಲ್ಲಿ ಉಪಾಧ್ಯಕ್ಷರಾಗಿದ್ದ ಲಿಂಡನ್ ಜಾನ್ಸನ್, ಕೆನಡಿ ಹತ್ಯೆಯ ಬಳಿಕ ಉಂಟಾದ ನಿರ್ವಾತವನ್ನು ಬಹುಬೇಗ ತುಂಬಿದರು. ಜಾರ್ಜ್ ಬುಷ್ ಸೀನಿಯರ್ ಅವಧಿಯಲ್ಲಿ ಶ್ವೇತಭವನವು ಉಪಾಧ್ಯಕ್ಷ ಡಿಕ್ ಚೆನಿ ಅವರ ನಿಯಂತ್ರಣದಲ್ಲಿದೆ ಎಂಬ ಮಾತಿತ್ತು. ಬಿಲ್ ಕ್ಲಿಂಟನ್ ಅಧ್ಯಕ್ಷರಾಗಿದ್ದಾಗ ಅವರಿಗೆ ಸರಿಸಮಾನವಾಗಿ ಎಲ್ಲ ವಿಷಯಗಳಲ್ಲೂ ಅತಿ ಚುರುಕಿನಿಂದ ಕೆಲಸ ಮಾಡಿದವರು ಅಲ್ ಗೋರ್.




ಕಮಲಾ ಹ್ಯಾರಿಸ್ ಉಪಾಧ್ಯಕ್ಷೆಯಾಗಿ ಮಾಡಿದ್ದೇನು ಎಂದು ನೋಡಿದರೆ, ಹೆಚ್ಚಿನ ಸಂಗತಿಗಳು ಸಿಗುವುದಿಲ್ಲ. 2022ರ ಜೂನ್‌ನಲ್ಲಿ ಅಮೆರಿಕದ ಸುಪ್ರೀಂ ಕೋರ್ಟ್ ಗರ್ಭಪಾತದ ಸಾಂವಿಧಾನಿಕ ಹಕ್ಕನ್ನು ರದ್ದುಗೊಳಿಸುವ ಅಚ್ಚರಿಯ ತೀರ್ಪು ನೀಡಿತು. ಗರ್ಭಪಾತದ ಹಕ್ಕಿನ ಪರ ಇರುವ ಡೆಮಾಕ್ರಟಿಕ್ ಪಕ್ಷ ಹೊಸದೊಂದು ಹೋರಾಟಕ್ಕೆ ಸಜ್ಜಾಯಿತು. ಆಗ ಕಮಲಾ ಗರ್ಭಪಾತದ ಹಕ್ಕನ್ನು ರಕ್ಷಿಸುವ ಕುರಿತು ಮಾತನಾಡಿದರು. 'ಸಂತಾನೋತ್ಪತ್ತಿ ಸ್ವಾತಂತ್ರ್ಯ'ದ ಅಭಿಯಾನ ಕೈಗೊಂಡರು. ಗರ್ಭಪಾತದ ಕ್ಲಿನಿಕ್ ಒಂದಕ್ಕೆ ಭೇಟಿ ಕೊಟ್ಟರು. ಅಂತಹ ಕ್ಲಿನಿಕ್ ಒಂದಕ್ಕೆ ಭೇಟಿ ನೀಡಿದ ಅಮೆರಿಕದ ಮೊದಲ ಉಪಾಧ್ಯಕ್ಷೆ ಎನಿಸಿಕೊಂಡರು. ಬಂದೂಕು ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟುವ ದಿಸೆಯಲ್ಲಿ ಶ್ವೇತಭವನದಲ್ಲಿ ವಿಶೇಷ ಕಚೇರಿಯನ್ನು ತೆರೆದಾಗ ಅದರ ಉಸ್ತುವಾರಿಯನ್ನು ಕಮಲಾ ವಹಿಸಿಕೊಂಡರು.

ಈ ಎರಡೂ ವಿಷಯಗಳು ಚುನಾವಣಾ ದೃಷ್ಟಿಯಿಂದ ಮುಖ್ಯವಾದವು. ಅಮೆರಿಕದ ಹಲವು ಅಧ್ಯಕ್ಷೀಯ ಚುನಾವಣೆಗಳು ಗರ್ಭಪಾತ ಸ್ವಾತಂತ್ರ್ಯ ಎಂಬ ವಿಷಯದ ಸುತ್ತಲೇ ಗಿರಕಿ ಹೊಡೆದ ನಿದರ್ಶನಗಳಿವೆ. ಡೊನಾಲ್ಡ್ ಟ್ರಂಪ್ ಗರ್ಭಪಾತ ಸ್ವಾತಂತ್ರ್ಯದ ವಿಷಯದಲ್ಲಿ ಸ್ಪಷ್ಟ ನಿಲುವು ಹೊಂದಿಲ್ಲ. ಹಾಗಾಗಿ, ಟ್ರಂಪ್ ಅವರು ವಲಸೆ ವಿಷಯವನ್ನು ಈ ಬಾರಿ ಆದ್ಯತೆಯನ್ನಾಗಿಸಿಕೊಂಡರೆ, ಕಮಲಾ ಗರ್ಭಪಾತ ಸ್ವಾತಂತ್ರ್ಯದ ವಿಷಯವನ್ನು ಮುಖ್ಯ ಸಂಗತಿಯಾಗಿಸಿಕೊಳ್ಳಬಹುದು. ಹಲವು ಮೊಕದ್ದಮೆಗಳನ್ನು ಎದುರಿಸುತ್ತಿರುವ ಟ್ರಂಪ್ ಅವರನ್ನು ವಕೀಲ ವೃತ್ತಿ ಹಿನ್ನೆಲೆಯ ಕಮಲಾ ಹೇಗೆ ಕಟ್ಟಿಹಾಕುತ್ತಾರೆ ನೋಡಬೇಕು. ಮಹಿಳಾ ಅಭ್ಯರ್ಥಿ ಮತ್ತು ವರ್ಣೀಯ ಅಭ್ಯರ್ಥಿ ಎನ್ನುವುದನ್ನು ಅವರು ಗೆಲುವಿನ ದಾಳವಾಗಿ ಬಳಸಿಕೊಳ್ಳಬಹುದು.

ಡೊನಾಲ್ಡ್ ಟ್ರಂಪ್ ಅವರ ಮೇಲೆ ಇತ್ತೀಚೆಗೆ ನಡೆದ ಗುಂಡಿನ ದಾಳಿಯು ಚುನಾವಣೆ ಕುರಿತ ಲೆಕ್ಕಾಚಾರವನ್ನು, ಅಭ್ಯರ್ಥಿಗಳ ಬಗೆಗಿನ ಚಿತ್ರಣವನ್ನು ಬದಲಿಸಿಬಿಟ್ಟಿದೆ. ಕಿವಿಗೆ ಗುಂಡು ತಾಗಿ ರಕ್ತ ಒಸರುತ್ತಿದ್ದರೂ ಭದ್ರತಾ ಸಿಬ್ಬಂದಿಯ ಮಧ್ಯದಿಂದ ಎದ್ದು ಗಾಳಿಗೆ ಕೈ ಗುದ್ದಿದ ಟ್ರಂಪ್ ಅವರ ಚಿತ್ರ ಅವರನ್ನು 'ಗಟ್ಟಿಗ' ಎಂಬಂತೆ ಬಿಂಬಿಸಿದೆ. ಪ್ರಚಾರ ಸಭೆಗಳಲ್ಲಿ ಟ್ರಂಪ್ ಅವರು 'ಪ್ರಜಾಪ್ರಭುತ್ವಕ್ಕಾಗಿ ನಾನು ಗುಂಡಿನ ದಾಳಿ ಎದುರಿಸಬೇಕಾಯಿತು' ಎನ್ನತೊಡಗಿದ್ದಾರೆ. ಅವರ ತಂಡ ಆ ಚಿತ್ರವನ್ನು ಎಲ್ಲೆಡೆ ಪರಿಣಾಮಕಾರಿಯಾಗಿ ಬಳಸುತ್ತಿದೆ. ಪಕ್ಷದೊಳಗಿನ ಆಂತರಿಕ ಒತ್ತಡವನ್ನು ತಾಳಿಕೊಂಡು, 'ನಾನು ಕಣದಿಂದ ಹಿಂದೆ ಸರಿಯುವ ಮಾತೇ ಇಲ್ಲ' ಎಂದು ಪಟ್ಟುಹಿಡಿದಿದ್ದ ಬೈಡನ್ ಅವರನ್ನು ಆ ಘಟನೆ ಮತ್ತು ಟ್ರಂಪ್ ಅವರ ಆ ಒಂದು ಚಿತ್ರ ಕದಲಿಸಿಬಿಟ್ಟಿತೇ, ಕಣದಿಂದ ಹಿಂದೆ ಸರಿಯುವಂತೆ ಮಾಡಿತೇ?

ಅದೇನೇ ಇರಲಿ, ಅಮೆರಿಕದ ಎಲ್ಲ ಸಂಕಷ್ಟಗಳಿಗೂ ವಲಸಿಗರೇ ಕಾರಣ ಎಂಬಂತೆ ಮಾತನಾಡುವ ಟ್ರಂಪ್ ಎದುರು ಇದೀಗ ವಲಸಿಗ ದಂಪತಿಯ ಮಗಳು ಕಮಲಾ ಹ್ಯಾರಿಸ್ ನಿಂತಿದ್ದಾರೆ. ಹಲವು ಮೊದಲುಗಳನ್ನು ಸಾಧಿಸಿರುವ ಕಮಲಾ, ಗಾಜಿನ ಚಾವಣಿಯನ್ನು ಸೀಳಿ ಮತ್ತೊಂದು ಮೊದಲನ್ನು ಸಾಧಿಸುತ್ತಾರೆಯೇ ಎಂಬ ಪ್ರಶ್ನೆಗೆ ಉತ್ತರ ಸುಲಭವಿಲ್ಲ.

ಚುರುಮುರಿ



ಮಡದಿಯ ವರಿ

• ಆನಂದ

'ಈ ಜೋ ಬೈಡನ್‌ಗೆ ಹೆಂಡತಿ, ಮಗ, ಮಗಳು, ಅಳಿಯ, ಅಣ್ಣ, ಮೈದುನ ಹೀಗೆ ಯಾರೂ ಇಲ್ಲವೇ? ಒಬ್ಬಂಟೀನಾ?' ಮಡದಿ ಕೇಳಿದಳು.

'ಅವರ ವಂಶಾವಳಿ ಬಗ್ಗೆ ನಿನಗೇಕೆ ಉಸಾಬರಿ?' ಎಂದೆ.

'ಅಲ್ಲಾರೀ, ಅವರು ಅಧ್ಯಕ್ಷ ಚುನಾವಣೆಯಿಂದ ಹಿಂದೆ ಸರಿಯುವಾಗ ಆ ಪಟ್ಟವನ್ನು ಹೆಂಡತಿ, ಮಗ, ಅಳಿಯ ಹೀಗೆ ಯಾರಿಗಾದರೂ ಕೊಡಬಹುದಿತ್ತಲ್ಲವೇ?'

'ಯಾಕೆ?'

'ನಮ್ಮಲ್ಲಿ ಆಗೋಲ್ವೇನ್ರಿ? ಲಾಲೂ ಪ್ರಸಾದ್ ನೋಡಿ. ಅವರು ಕೆಳಗಿಳಿಯಬೇಕಾಗಿ ಬಂದಾಗ ಧರ್ಮಪತ್ನೀನ ಆ ಜಾಗದಲ್ಲಿ ಕೂಡಿಸಿ ಅಧಿಕಾರವನ್ನು ಡ್ರಾಯಿಂಗ್ ರೂಮ್‌ನಿಂದ ಕಿಚನ್‌ಗೆ ವರ್ಗಾಯಿಸಿದರು. ಈಗ ನೋಡಿ ನಮ್ಮಲ್ಲೇ. ತಾತ 90 ಆದರೂ ಇನ್ನೂ ಆ್ಯಕ್ಟಿವ್, ಅವರ ಮಕ್ಕಳು ಮಂತ್ರಿಗಳು ಅಥವಾ ಮಾಜಿ ಮಂತ್ರಿಗಳು, ಅಳಿಯ ಎಂಪಿ, ಮೊಮ್ಮಗ ಎಂಎಲ್‌ಸಿ, ಸೊಸೆ ಮಾಜಿ ಶಾಸಕಿ. ಇನ್ನೊಬ್ಬ ಮೊಮ್ಮಗ ಮಾಜಿ ಸಂಸದ...'

'ಕಾರ್ಯಕರ್ತರ ಒತ್ತಡದಿಂದ ಅವರೆಲ್ಲ ಸ್ಪರ್ಧಿಸಿದರು ಅಂತ ಹೇಳ್ತಾರಲ್ಲ...'

'ನಾನೂ ಅದನ್ನೇ ಕೇಳ್ತಾ ಇರೋದು. ಬೈಡನ್ ಮೇಲೆ ಅವರ ಪಕ್ಷದ ಕಾರ್ಯಕರ್ತರು 'ನಿಮ್ಮ ಫ್ಯಾಮಿಲಿಯಿಂದ ಯಾರನ್ನಾದರೂ ಒಬ್ಬರನ್ನು ನಿಲ್ಲಿಸಿ' ಅಂತ ಒತ್ತಡ ತರಬೇಕಿತ್ತು ಅಥವಾ ಬೈಡನ್‌ಜಿ ತಮ್ಮ ಇನ್‌ಫ್ಲುಯೆನ್ಸ್ ಉಪಯೋಗಿಸಿ ಯಾವುದಾದರೂ ಒಂದು ಹೆಸರನ್ನು ಮುಂದೆ ಬಿಡಬೇಕಿತ್ತು. ಕ್ಲಿಕ್ ಆಗ್ತಿತ್ತೋ ಏನೋ. ನಮ್ಮಲ್ಲೇ ವಾಸಿ. ಮೊನ್ನೆ ನೋಡಿ, ಮಂತ್ರಿಗಳು ತಮ್ಮ ಮಗನನ್ನು ನಿಲ್ಲಿಸಿದರು, ಇನ್ನೊಬ್ಬರು ತಮ್ಮ ಅಳಿಯನಿಗೆ ಟಿಕೆಟ್ ಕೊಡಿ ಎಂದರು, ಇನ್ನೊಬ್ಬರು ತಮ್ಮ ಮಗಳನ್ನು ಎಂಪಿ ಮಾಡಲು ಹೊರಟರು...'

'ಆದರೆ ಆಗಲಿಲ್ಲವಲ್ಲಾ?'

'ಸೊ ವಾಟ್? ಪ್ರಯತ್ನವನ್ನಂತೂ ಪಟ್ಟರಲ್ಲ'.

'ನೀನೇನು ಹೇಳೋದು, ಬೈಡನ್ ಅದೇನೂ ಮಾಡಲಿಲ್ಲ ಅಂತ ತಾನೆ?'

'ಹೌದು. ಕಮಲಕ್ಕನಿಗೆ ಜಾಗ ಬಿಡ್ತೀನಿ ಎಂದು ಇಳಿದೇಬಿಟ್ಟರು. ಅವರ ಮನೆಯವರಿಗೆ ಎಷ್ಟು ನಿರಾಸೆ ಆಗಿದೆಯೋ?' ಮಡದಿ ವ್ಯಸನಪಟ್ಟಳು.

ದಿನದ ಟ್ವೀಟ್

ಸುರಕ್ಷತೆಗೆ ಆದ್ಯತೆ ಇರಲಿ

ಮತ್ತೊಂದು ದಿನ, ಮತ್ತೊಂದು ರೈಲು ಅಪಘಾತ. ಸರಕು ಸಾಗಣೆ ರೈಲು ಡಾರ್ಜಿಲಿಂಗ್ ಸಮೀಪ ಹಳಿ ತಪ್ಪಿದೆ. ಭಾರತೀಯ ರೈಲ್ವೆಯಲ್ಲಿ ಎಲ್ಲೋ ಏನೋ ಗಂಭೀರವಾದ ಲೋಪ ಆಗುತ್ತಿರುವಂತಿದೆ.

ವೀಣಾ ಜೈನ್

ಕಿಡಿನುಡಿ



...ಬೆಟ್ಟಗುಡ್ಡ ಪ್ರದೇಶಗಳಲ್ಲಿ ಹರಿಯಲು ಮಾರ್ಗ ಕಾಣದಿದ್ದಾಗ ನದಿಗಳು ತಮ್ಮದೇ ಆದ ಮಾರ್ಗಗಳನ್ನು ಸೃಷ್ಟಿಸಿಕೊಳ್ಳುತ್ತವೆ. ವಯನಾಡ್ ಭೂಕುಸಿತ ಪ್ರಕರಣದಲ್ಲಿ 5 ಗ್ರಾಮಗಳ 1,000 ಮನೆಗಳು ನಿರ್ನಾಮವಾಗಿವೆ. ಅವೈಜ್ಞಾನಿಕ ಅಭಿವೃದ್ಧಿಯ ಹೆಸರಿನಲ್ಲಿ ಇನ್ನೂ ಎಲ್ಲಿಯವರೆಗೆ ನಾವು ಪ್ರಕೃತಿಯ ವಿರುದ್ಧ ಹೋಗಲು ಸಾಧ್ಯ? ವಿಪತ್ತು ಸಂಭವಿಸುವಷ್ಟು ತಡವಾಗುವ ಮುನ್ನ ಎತ್ತಿನಹೊಳೆ ಯೋಜನೆಯನ್ನು ನಿಲ್ಲಿಸಬೇಕು.

ವಿಜೆ ಶೆಟ್ಟಿ, ಎಂಜಿನಿಯರ್

25 ವರ್ಷಗಳ ಹಿಂದೆ

ಭಾನುವಾರ, 1-8-1999

• **ಮಿರಾಜುದ್ದೀನ್ ರಾಜೀನಾಮೆ**

ಬೆಂಗಳೂರು, ಜುಲೈ 31– ಬಿಜೆಪಿ ನೇತೃತ್ವದ ರಾಷ್ಟ್ರೀಯ ಜನತಾಂತ್ರಿಕ ಮೈತ್ರಿಕೂಟವನ್ನು ಸೇರುವ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ನಿರ್ಧಾರವನ್ನು ವಿರೋಧಿಸಿ ಪೌರಾಡಳಿತ ಸಚಿವ ಮಿರಾಜುದ್ದೀನ್ ಪಟೇಲ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ದೇವೇಗೌಡ ನೇತೃತ್ವದ ಜನತಾದಳದಲ್ಲಿ ಉಳಿಯಲು ನಿರ್ಧರಿಸಿದ್ದಾರೆ.

ಜನತಾದಳ ಇಬ್ಭಾಗವಾದ ನಂತರ ಪಟೇಲ್ ಸಂಪುಟಕ್ಕೆ ರಾಜೀನಾಮೆ ನೀಡುತ್ತಿರುವವರಲ್ಲಿ ಮಿರಾಜುದ್ದೀನ್ ಪಟೇಲ್ ಐದನೆಯವರಾಗಿದ್ದಾರೆ. ಇದಕ್ಕೆ ಮೊದಲು, ಸಚಿವರಾದ ಡಿ.ಮಂಜುನಾಥ್, ಮಾಲೀಕಯ್ಯ ಗುತ್ತೇದಾರ್, ಬಸವರಾಜ ಶಿವಣ್ಣನವರ್ ಮತ್ತು ಮುನಿಯಪ್ಪ ಮುದ್ದಪ್ಪ ಅವರು ಸಂಪುಟಕ್ಕೆ ರಾಜೀನಾಮೆ ನೀಡಿದ್ದರು.

ಜನತಾದಳ ವಿಧ್ಯುಕ್ತವಾಗಿ ಇಬ್ಭಾಗವಾದ ದಿನ ಮುಖ್ಯಮಂತ್ರಿ ಪಟೇಲ್ ಅವರೇ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಎಂಟು ಮಂದಿ ಸಚಿವರನ್ನು ವಜಾ ಮಾಡಿದ್ದರು.

• **ಕೋಮುಪಕ್ಷದ ಜತೆ ಸೇರಿದವರಿಗೆ ಪಾಠ: ಗೌಡರ ಕರೆ**

ಬೆಂಗಳೂರು, ಜುಲೈ 31– 'ಯಾರೇ ಪಕ್ಷ ಬಿಟ್ಟು ಹೋಗಿದ್ದರೂ ನಮ್ಮ ಬಲ ಕುಗ್ಗಿಲ್ಲ. ನಮ್ಮ ಸ್ಥೈರ್ಯ ಕುಂದಿಲ್ಲ; ಸ್ವಾರ್ಥ ಸಾಧನೆಗೆ ಬೆನ್ನಿಗೆ ಚೂರಿ ಹಾಕಿ ಕೋಮುವಾದಿ ಪಕ್ಷದ ಜತೆಗೆ ಸೇರಿರುವವರಿಗೆ ತಕ್ಕ ಪಾಠ ಕಲಿಸಿ' ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಇಂದು ಮತದಾರರಲ್ಲಿ ಮನವಿ ಮಾಡಿಕೊಂಡರು.

ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ವಾಜಪೇಯಿ ಸರ್ಕಾರ ರೈತ ವಿರೋಧಿ ಸರ್ಕಾರ. ಮುಂಬೈ–ಗುಜರಾತ್‌ನಂತಹ ಭಾರಿ ವರ್ತಕರ ಹಿಡಿತಕ್ಕೆ ಸಿಕ್ಕಿರುವ ಬಿಜೆಪಿ ಮತ್ತು ಮಿತ್ರಪಕ್ಷಗಳ ಬುಡವನ್ನು ಕೀಳಬೇಕಾಗಿದೆ' ಎಂದರು.

50 ವರ್ಷಗಳ ಹಿಂದೆ

ಗುರುವಾರ, 1-8-1974

• **ದಕ್ಷಿಣ ಕನ್ನಡದಲ್ಲಿ 5,300 ಮನೆ ಕುಸಿತ**

ಮಂಗಳೂರು, ಜುಲೈ 31– ಇತ್ತೀಚಿನ ಪ್ರವಾಹದಿಂದ ಜಿಲ್ಲೆಯ ಎಂಟು ತಾಲ್ಲೂಕುಗಳಲ್ಲಿನ ಒಟ್ಟು 192 ಗ್ರಾಮಗಳಲ್ಲಿ 5,300 ಮನೆ, ಕಟ್ಟಡಗಳು ಕುಸಿದು 1.25 ಕೋಟಿ ರೂಪಾಯಿ ನಷ್ಟವಾಗಿದೆಯೆಂದು ಅಧಿಕಾರಿಗಳ ಪ್ರಾಥಮಿಕ ಅಂದಾಜಿನಿಂದ ತಿಳಿದುಬಂದಿದೆ.

• **ಶ್ರೀಸಾಮಾನ್ಯ ಮುಕ್ತ; ಮಧ್ಯಮ, ಮೇಲುವರ್ಗಗಳು ಭಾರಕ್ಕೆ ಬಲಿ**

ನವದೆಹಲಿ, ಜುಲೈ 31– ಜನಸಾಮಾನ್ಯರ ನಿತ್ಯಬಳಕೆ ವಸ್ತುಗಳಿಗೆ ವಿನಾಯಿತಿ ನೀಡಿರುವುದಾಗಿ ಹೇಳಿ ಅರ್ಥಸಚಿವ ವೈ.ಬಿ. ಚವಾಣರು ಇಂದು ಲೋಕಸಭೆಯಲ್ಲಿ ಮಂಡಿಸಿದ ಪೂರಕ ಆಯವ್ಯಯ ಮಧ್ಯಮ ವರ್ಗದ ಜನರ ಕರಭಾರವನ್ನು ಹೆಚ್ಚಿಸಿದೆ.

ಅತ್ಯುತ್ಕೃಷ್ಟ ಹಾಗೂ ಉತ್ಕೃಷ್ಟ ದರ್ಜೆಯ ಬಟ್ಟೆ, ಸಿಗರೇಟ್, ಸಿಮೆಂಟ್ ಮತ್ತು ಗೃಹ ನಿರ್ಮಾಣ ವಸ್ತುಗಳ ಮೇಲಿನ ತೆರಿಗೆಯನ್ನು ಹೆಚ್ಚಿಸುವ ಮೂಲಕ ಚವಾಣರು ಮಧ್ಯಮ ವರ್ಗ ಮತ್ತು ಶ್ರೀಮಂತ ವರ್ಗದ ಜನರ ಮೇಲೆ ತೆರಿಗೆಯ ಪ್ರಹಾರ ನಡೆಸಿದ್ದಾರೆ.

• **ಉಪರಾಷ್ಟ್ರಪತಿ ಸ್ಥಾನಕ್ಕೆ ಕಾಂಗ್ರೆಸ್ ಸ್ಪರ್ಧಿ ಜತ್ತಿ**

ನವದೆಹಲಿ, ಜುಲೈ 31– ಉಪರಾಷ್ಟ್ರಪತಿ ಸ್ಥಾನಕ್ಕೆ ಒರಿಸ್ಸಾ ರಾಜ್ಯಪಾಲ ಬಿ.ಡಿ. ಜತ್ತಿ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ನಿಲ್ಲಿಸಬೇಕೆಂದು ಪಕ್ಷದ ಕೇಂದ್ರ ಸಂಸದೀಯ ಮಂಡಳಿಯು ಗುರುವಾರ ವಿಧ್ಯುಕ್ತವಾಗಿ ನಿರ್ಧರಿಸಲಿದೆ.

ಸಂಗತ

ವೃತ್ತಿ ಕೌಶಲ: ಬೇಕು ಸಮನ್ವಯ

ವಿದ್ಯಾರ್ಥಿಗಳು ಇಂಟರ್ನ್‌ಶಿಪ್ ಮತ್ತು ಪ್ರಾಜೆಕ್ಟ್‌ಗಳನ್ನು ಕೈಗೊಳ್ಳುವುದಕ್ಕೆ ಹೆಚ್ಚು ಅವಕಾಶ ಕಲ್ಪಿಸಲು ಉದ್ಯಮ ವಲಯ ಮುತುವರ್ಜಿ ತೋರಬೇಕಿದೆ

• ಎಚ್.ಕೆ.ಶರತ್


'ವಿಶ್ವವಿದ್ಯಾಲಯಗಳಿಂದ ಪದವಿ ಪಡೆದು ಉದ್ಯೋಗ ಮಾರುಕಟ್ಟೆ ಪ್ರವೇಶಿಸುವ ಯುವಸಮುದಾಯದಲ್ಲಿ ಕೆಲಸ ನಿರ್ವಹಿಸಲು ಅಗತ್ಯವಿರುವ ಕೌಶಲಗಳೇ ಇರುವುದಿಲ್ಲ' ಎನ್ನುವ ಅಸಮಾಧಾನವು ಉದ್ಯಮ ವಲಯದಿಂದ ಹೊರಹೊಮ್ಮುವುದು ಸರ್ವೇಸಾಮಾನ್ಯ. ವೃತ್ತಿಪರ ಶಿಕ್ಷಣವೆಂದೇ ಕರೆಯಲಾಗುವ ಎಂಜಿನಿಯರಿಂಗ್ ಪೂರೈಸಿದ ಹೆಚ್ಚಿನ ಉದ್ಯೋಗ ಆಕಾಂಕ್ಷಿಗಳಲ್ಲಿ ಕೆಲಸ ನಿರ್ವಹಿಸಲು ಬೇಕಿರುವ ಪ್ರಾಯೋಗಿಕ ಜ್ಞಾನವೇ ಇರುವುದಿಲ್ಲ. ಕಾಲೇಜುಗಳಲ್ಲಿ ಕೆಲಸಕ್ಕೆ ಬಾರದ ಸಂಗತಿಗಳನ್ನು ಹೆಚ್ಚಾಗಿ ಕಲಿಸಲಾಗುತ್ತಿದೆ. ಪದವಿಯಲ್ಲಿ ಓದುವುದಕ್ಕೂ ವೃತ್ತಿ ನಿರ್ವಹಿಸಲು ಬೇಕಿರುವ ಜ್ಞಾನಕ್ಕೂ ಸಂಬಂಧವೇ ಇಲ್ಲವೆನ್ನುವ ಆಕ್ಷೇಪವನ್ನು ಉದ್ಯೋಗದಾತರೊಂದಿಗೆ ಸ್ವತಃ ಉದ್ಯೋಗ ಆಕಾಂಕ್ಷಿಗಳೂ ವ್ಯಕ್ತಪಡಿಸುತ್ತಾರೆ.

'ವೃತ್ತಿಗೆ ಅಗತ್ಯವಿರುವುದನ್ನು ಕಲಿಸದ ಶಿಕ್ಷಣವನ್ನು ವೃತ್ತಿಪರವೆಂದು ಕರೆಯಬಹುದೇ' ಎಂಬ ಪ್ರಶ್ನೆ ಗಮನಾರ್ಹವಾದುದು. ಉದ್ಯೋಗ ಮಾರುಕಟ್ಟೆಯ ಅಗತ್ಯಕ್ಕೆ ಪೂರಕವಾದ ಕೌಶಲಗಳನ್ನು ಪದವಿ ಓದಿನ ವೇಳೆಯಲ್ಲಿಯೇ ವಿದ್ಯಾರ್ಥಿಗಳಲ್ಲಿ ಮೈಗೂಡುವಂತೆ ಮಾಡಬೇಕೆನ್ನುವ ಆಶಯ ಈಡೇರಬೇಕಿದ್ದರೆ, ವಿಶ್ವವಿದ್ಯಾಲಯಗಳೊಂದಿಗೆ ಉದ್ದಿಮೆ ಸಂಸ್ಥೆಗಳೂ ಕೈಜೋಡಿಸಬೇಕಾದ ಜರೂರತ್ತಿದೆ. ಶೈಕ್ಷಣಿಕ ವಲಯ ಮತ್ತು ಉದ್ಯಮ ವಲಯ ಎರಡರ ನಡುವೆಯೂ ಸಮನ್ವಯ ಏರ್ಪಡದಿದ್ದರೆ, ಈ ಸಮಸ್ಯೆಯ ಪರಿಹಾರಕ್ಕೆ ಕಂಡುಕೊಳ್ಳುವ ಮಾರ್ಗೋಪಾಯಗಳು ಪರಿಣಾಮಕಾರಿ ಆಗಲಾರವು.

ಪ್ರಾಯೋಗಿಕ ಕಲಿಕೆಗೆ ಉತ್ತೇಜನ ನೀಡುವ ಆಶಯದೊಂದಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) 2020- 21ನೇ ಶೈಕ್ಷಣಿಕ ಸಾಲಿನಿಂದ ಪಠ್ಯಕ್ರಮದಲ್ಲಿ ಇಂಟರ್ನ್‌ಶಿಪ್‌ಗೆ ಹೆಚ್ಚಿನ ಅವಕಾಶ ಕಲ್ಪಿಸುತ್ತಾ ಬಂದಿದೆ. ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ದೊರೆಯುವ ರಜಾ ಅವಧಿಯಲ್ಲಿ ನಿಗದಿತ ಅವಧಿಯ ಇಂಟರ್ನ್‌ಶಿಪ್ ಪೂರೈಸಲು ವಿದ್ಯಾರ್ಥಿಗಳಿಗೆ ಸೂಚಿಸಲಾಗುತ್ತಿದೆ. ವಿದ್ಯಾರ್ಥಿಗಳು ಇಂಟರ್ನ್‌ಶಿಪ್ ಮಾಡುವ ನೆಪದಲ್ಲಾದರೂ ಉದ್ಯಮ ಸಂಸ್ಥೆಗಳಲ್ಲಿನ ಕೆಲಸದ ವಾತಾವರಣ ಹೇಗಿರಲಿದೆ ಎಂಬ ಕುರಿತು ಪ್ರಾಥಮಿಕ ತಿಳಿವಳಿಕೆ ಹೊಂದಲಿ, ಜೊತೆಗೆ ಒಂದಿಷ್ಟು ಪ್ರಾಯೋಗಿಕ ಜ್ಞಾನ ಸಂಪಾದಿಸಲಿ ಎಂಬುದು ಇದರ ಆಶಯ. ಆದರೆ, ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಮಾಡಲು ಎಷ್ಟು ಕಂಪನಿಗಳು ಅವಕಾಶ ಕಲ್ಪಿಸುತ್ತಿವೆ ಎನ್ನುವುದು ಇಲ್ಲಿ ಪರಿಗಣನೆಗೆ ಬರಬೇಕಿದೆ.

ಅತ್ಯಲ್ಪ ಪ್ರಮಾಣದ ವಿದ್ಯಾರ್ಥಿಗಳಿಗೆ ಮಾತ್ರ ನೇರವಾಗಿ ಉದ್ಯಮ ಸಂಸ್ಥೆಗಳಲ್ಲೇ ಇಂಟರ್ನ್‌ಶಿಪ್ ಮಾಡುವ ಅವಕಾಶ ದೊರೆಯುತ್ತಿದೆ. ಉಳಿದ ವಿದ್ಯಾರ್ಥಿಗಳ ಇಂಟರ್ನ್‌ಶಿಪ್ ಬೇಡಿಕೆ ಪೂರೈಸಲೆಂದೇ ಬಹಳಷ್ಟು ಖಾಸಗಿ ತರಬೇತಿ ಕೇಂದ್ರಗಳು ತಲೆ ಎತ್ತುತ್ತಿವೆ. ಇವು ಕಾಲೇಜುಗಳೊಂದಿಗೆ ಒಪ್ಪಂದ ಮಾಡಿಕೊಂಡು ನಿಗದಿತ ಅವಧಿಯ ಇಂಟರ್ನ್‌ಶಿಪ್ ಕೋರ್ಸ್‌ಗಳನ್ನು ಆಯಾ ಕಾಲೇಜು ಕ್ಯಾಂಪಸ್‌ನಲ್ಲೇ ನಡೆಸಿ ಪ್ರಮಾಣಪತ್ರ ನೀಡುತ್ತಿವೆ. ಇದಕ್ಕಾಗಿ ವಿದ್ಯಾರ್ಥಿಗಳಿಂದ ಶುಲ್ಕವನ್ನೂ ಪಡೆಯಲಾಗುತ್ತಿದೆ. ಇದರಿಂದಾಗಿ ಇಂಟರ್ನ್‌ಶಿಪ್‌ನ ಮೂಲ ಆಶಯವೇ ಹಿನ್ನೆಲೆಗೆ ಸರಿದಂತಾಗಿದೆ.

2021–22ನೇ ಶೈಕ್ಷಣಿಕ ಸಾಲಿನಲ್ಲಿ ಎಂಜಿನಿಯರಿಂಗ್ ಪದವಿಗೆ ಪ್ರವೇಶ ಪಡೆದಿರುವವರಿಗೆ ಅಂತಿಮ ಸೆಮಿಸ್ಟರ್‌ನಲ್ಲಿ ಇಂಟರ್ನ್‌ಶಿಪ್ ಹೊರತುಪಡಿಸಿ ಬೇರೆ ಯಾವ ವಿಷಯವನ್ನೂ ಪಠ್ಯಕ್ರಮದಲ್ಲಿ ಸೇರಿಸಲಾಗಿಲ್ಲ. ಹೀಗಾಗಿ, ಅವಕಾಶ ದೊರೆತರೆ ಕಂಪನಿಯಲ್ಲಿ ಅಂತಿಮ ಸೆಮಿಸ್ಟರ್ ಅವಧಿಪೂರ್ತಿ ಕೆಲಸ ನಿರ್ವಹಿಸಿ ಪ್ರಾಯೋಗಿಕ ಜ್ಞಾನ ಸಂಪಾದಿಸಲು ಸಾಧ್ಯವಿದೆ. ಉದ್ಯಮ ವಲಯ ಲಾಭ-ನಷ್ಟದ ಲೆಕ್ಕಾಚಾರ ಬದಿಗಿರಿಸಿ, ಪ್ರಾಯೋಗಿಕ ಕಲಿಕೆಯನ್ನು ಪಠ್ಯಕ್ರಮದ ಭಾಗವಾಗಿಸುವ ಶೈಕ್ಷಣಿಕ ವಲಯದ ಆಶಯದ ಸಾಕಾರಕ್ಕೆ ಕೈಜೋಡಿಸುವ ಅಗತ್ಯ ಇದೆ.



ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಮತ್ತು ಪ್ರಾಜೆಕ್ಟ್‌ಗಳನ್ನು ಕೈಗೊಳ್ಳಲು ಹೆಚ್ಚೆಚ್ಚು ಅವಕಾಶ ಕಲ್ಪಿಸಲು ಉದ್ಯಮ ವಲಯ ಮುತುವರ್ಜಿ ತೋರಬೇಕಿದೆ. ಹೀಗೆ ಮಾಡದೆ, ಕೆಲಸಕ್ಕೆ ಬೇಕಿರುವ ಕೌಶಲಗಳನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿಲ್ಲ ಎಂದು ದೂರುತ್ತಾ ಕೂರುವುದರಿಂದ ಹೆಚ್ಚಿನ ಸುಧಾರಣೆ ಆಗಲಾರದು. ಈ ದಿಸೆಯಲ್ಲಿ ಭಾರತೀಯ ಮಷೀನ್ ಟೂಲ್ ಉತ್ಪಾದಕರ ಸಂಸ್ಥೆ (ಐಎಂಟಿಎಂಎ) ಕೆಲ ಹೆಜ್ಜೆಗಳನ್ನು ಈಗಾಗಲೇ ಇಟ್ಟಿರುವುದು ಇಲ್ಲಿ ಉಲ್ಲೇಖಾರ್ಹ. ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಪ್ರತಿವರ್ಷ ತಾನು ನಡೆಸುವ, ಉತ್ಪಾದನಾ ಕ್ಷೇತ್ರಕ್ಕೆ ಸಂಬಂಧಿಸಿದ ಅಂತರರಾಷ್ಟ್ರೀಯ ಮಟ್ಟದ ಪ್ರದರ್ಶನದಲ್ಲಿ ಆಯ್ದ ಕೆಲ ಶಿಕ್ಷಣ ಸಂಸ್ಥೆಗಳು ಪಾಲ್ಗೊಳ್ಳಲು ಸಂಸ್ಥೆಯು ಅವಕಾಶ ಕಲ್ಪಿಸುತ್ತಾ ಬಂದಿದೆ. ಇದಕ್ಕಾಗಿ 'ಅಕಡೆಮಿಕ್ ಪೆವಿಲಿಯನ್' ಎಂಬ ಉಪಕ್ರಮವನ್ನು ರೂಪಿಸಿರುವ ಸಂಸ್ಥೆ, ಅಲ್ಲಿ ಶಿಕ್ಷಣ ಸಂಸ್ಥೆಗಳು ಸಂಶೋಧನಾ ಚಟುವಟಿಕೆಗಳನ್ನು ಪ್ರದರ್ಶಿಸಲು ವೇದಿಕೆ ಒದಗಿಸುತ್ತಿದೆ.

ಉದ್ಯಮ ವಲಯದಲ್ಲಿನ ಪ್ರಾಯೋಗಿಕ ಸಮಸ್ಯೆಗಳೇನು ಮತ್ತು ಶೈಕ್ಷಣಿಕ ಸಂಶೋಧನೆಯ ಫಲಿತಾಂಶ ಪ್ರಾಯೋಗಿಕವಾಗಿಯೂ ಪ್ರಸ್ತುತವಾಗಬೇಕಿದ್ದರೆ ಏನು ಮಾಡಬೇಕು ಎಂಬ ಕುರಿತು ಅರಿವು ಮೂಡಿಸುವಲ್ಲಿ ಇದು ಗಮನಾರ್ಹ ಪಾತ್ರ ನಿರ್ವಹಿಸುತ್ತಿದೆ. ಉದ್ಯಮದ ನಿರೀಕ್ಷೆಗೆ ಪೂರಕವಾದುದನ್ನು ವೃತ್ತಿಪರ ಶಿಕ್ಷಣದ ಭಾಗವಾಗಿ ಕಲಿಸಬೇಕೆನ್ನುವ ಆಶಯ ಈಡೇರಬೇಕಿದ್ದರೆ, ಶೈಕ್ಷಣಿಕ ವಲಯವನ್ನು ಒಳಗೊಳ್ಳುವ ಉಪಕ್ರಮಗಳ ಜಾರಿಗೆ ಮುಂದಾಗುವ ಹೊಣೆಗಾರಿಕೆ ತಮ್ಮ ಮೇಲೂ ಇದೆ ಎಂಬುದನ್ನು ಉದ್ಯಮ ವಲಯ ಮನಗಾಣಬೇಕಿದೆ. ವಿದ್ಯಾರ್ಥಿಗಳನ್ನು ಒಳಗೆ ಬಿಟ್ಟುಕೊಳ್ಳುವುದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು ಎಂಬ ಧೋರಣೆಯನ್ನು ಬದಲಿಸಿಕೊಳ್ಳದೆ, ದೂರುತ್ತಾ ಕಾಲ ತಳ್ಳುವುದರಿಂದ ಬದಲಾವಣೆ ತರಲಾಗದು.

ವಾಚಕರ ವಾಣಿ

ಅನ್ಯರ ಹಕ್ಕು ಕಸಿದರೆ...!

ಸಂವಿಧಾನವು ನಮಗೆ ನೀಡಿರುವ ಮೂಲಭೂತ ಹಕ್ಕು ಹಾಗೂ ಸ್ವಾತಂತ್ರ್ಯವನ್ನು ನಾವು ದುರುಪಯೋಗಪಡಿಸಿಕೊಂಡರೆ ಅಥವಾ ಬೇರೆಯವರ ಹಕ್ಕು, ಸ್ವಾತಂತ್ರ್ಯವನ್ನು ನಾವು ಕಸಿದುಕೊಂಡರೆ ಅಥವಾ ಅವಕ್ಕೆ ಧಕ್ಕೆ ಪಡಿಸಿದರೆ ಏನಾಗುತ್ತದೆ? ಊಟ, ಬಟ್ಟೆ, ಹಾಸಿಗೆ ಹಾಗೂ ಪುಸ್ತಕಕ್ಕಾಗಿ ಹೈಕೋರ್ಟಿನ ಮೊರೆ ಹೋಗಬೇಕಾಗುತ್ತದೆ! ಇದು, ಇತ್ತೀಚಿನ ಪ್ರಕರಣವೊಂದರಿಂದ ಕಲಿಯಬೇಕಾದ ಪಾಠ!

ಪಿ.ಜೆ.ರಾಘವೇಂದ್ರ, ಮೈಸೂರು

ಕನಿಷ್ಠ ಮೊತ್ತ ಇಡದವರಿಗೆ ದಂಡ: ಸಲ್ಲದ ಕ್ರಮ

ಬ್ಯಾಂಕ್‌ನಲ್ಲಿ ಕನಿಷ್ಠ ಮೊತ್ತ ಇಡದ ಗ್ರಾಹಕರ ಖಾತೆಗಳಿಗೆ ಹಿಂದಿನ 5 ವರ್ಷಗಳಲ್ಲಿ ಸುಮಾರು ₹ 8,500 ಕೋಟಿ ದಂಡ ವಿಧಿಸಲಾಗಿದೆ ಎಂಬ ಮಾಹಿತಿಯನ್ನು ಲೋಕಸಭೆಯಲ್ಲಿ ಇತ್ತೀಚೆಗೆ ನೀಡಲಾಗಿದೆ. ಬಡತನ, ಸಮರ್ಪಕ ದುಡಿಮೆ ಇಲ್ಲದಿರುವುದು, ತಿಳಿವಳಿಕೆಯ ಕೊರತೆ ಅಥವಾ ಮರಣದಂತಹ ಸಂದರ್ಭಗಳಲ್ಲಿ ಲಕ್ಷಾಂತರ ಗ್ರಾಹಕರ ಖಾತೆಗಳಲ್ಲಿ ಕನಿಷ್ಠ ಮೊತ್ತ ಉಳಿದಿರುವ ಸಾಧ್ಯತೆ ಇರುವುದಿಲ್ಲ. ಅಂಥ ಪ್ರಸಂಗಗಳಲ್ಲಿ ನೋಟಿಸ್ ನೀಡಿ ಖಾತೆಯನ್ನು ಮುಕ್ತಾಯಗೊಳಿಸುವುದು ಬಿಟ್ಟು ಬ್ಯಾಂಕ್‌ಗಳು ದಂಡದ ರೂಪದಲ್ಲಿ ಸಾವಿರಾರು ಕೋಟಿ ರೂಪಾಯಿ ಗಳಿಸುವುದು ಸಮರ್ಥನೀಯವಲ್ಲ. ಎಲ್ಲದರಲ್ಲೂ ಲಾಭ ಗಳಿಕೆಗೆ ಮುಂದಾಗುವ ಪ್ರವೃತ್ತಿ ನಾಗರಿಕರನ್ನು ಹತಾಶೆಗೀಡು ಮಾಡುತ್ತದೆ. ಮುಂದಿನ ದಿನಗಳಲ್ಲಾದರೂ ಬ್ಯಾಂಕ್‌ಗಳು ಇಂಥ ಕ್ರಮ ಬಿಟ್ಟು ಜನಸಾಮಾನ್ಯರ ಸಂಕಷ್ಟಗಳಿಗೆ ಸ್ಪಂದಿಸಲಿ.

ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಪರಿಸರ ಸಂರಕ್ಷಣೆ: ಈಗಲಾದರೂ ಎಚ್ಚೋಣ

ಕೇರಳದಲ್ಲಿ ಸಂಭವಿಸಿರುವ ಭೂಕುಸಿತದ ಘನಘೋರ ಚಿತ್ರಗಳನ್ನು ನೋಡಿದರೆ ಕರುಳು ಕಿತ್ತುಬಂದಂತೆ ಆಗುತ್ತದೆ. ಇಡೀ ಊರಿಗೆ ಊರೇ ಮಸಣವಾಗಿ, ಸಾವಿನ ಸಂಖ್ಯೆ ಲೆಕ್ಕಕ್ಕೇ ಸಿಗುತ್ತಿಲ್ಲ. ಇದು ಪ್ರಕೃತಿಯ ವಿಕೋಪವಾದರೂ ಪ್ರಕೃತಿಯ ಮೇಲಣ ಮನುಷ್ಯನ ವಿಕೃತಿಯೂ ಹೌದು ಎಂದರೆ ಅತಿಶಯವಾಗದು. ಪರಿಸರ ಸಂರಕ್ಷಣೆಯ ದಿಸೆಯಲ್ಲಿ ನೇಮಿಸಿದ್ದ ಗಾಡ್ಗೀಳ್ ಹಾಗೂ ಕಸ್ತೂರಿರಂಗನ್ ಸಮಿತಿಗಳ ವರದಿಗಳನ್ನು ತಿರಸ್ಕರಿಸಿದ್ದರ ಪ್ರತಿಫಲ ಇದಾಗಿದೆ. ಇನ್ನಾದರೂ ಎಚ್ಚೆತ್ತು ಪರಿಸರ ಸಂರಕ್ಷಣೆಯತ್ತ ಗಮನಹರಿಸುವುದು ಅನಿವಾರ್ಯ.

ಸರ್ಕಾರವಷ್ಟೇ ಈ ಕೆಲಸ ಮಾಡಲಿ ಎಂದು ಕಾಯದೆ, ಜನರ ಸಹಭಾಗಿತ್ವವೂ ಇದ್ದರೆ ಯಶಸ್ಸು ಸಾಧ್ಯ. ಪರಿಸರ ಸಂರಕ್ಷಣೆಯಂತಹ ಕೆಲಸಗಳಿಗೆ ಜನರನ್ನು ಪ್ರೇರೇಪಿಸಲು ಸರ್ಕಾರಿ ಹುದ್ದೆಗಳಲ್ಲಿ ಭೂರಕ್ಷಕ, ಹಸಿರು ರಕ್ಷಕ ಎಂಬ ಪ್ರಮಾಣಪತ್ರಗಳನ್ನು ನೀಡುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ಆಗ ಪರಿಸರ ಸಂರಕ್ಷಣೆಯಲ್ಲಿ ಜನಸಾಮಾನ್ಯರು ಕೂಡ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ.

ಡಿ.ಎಂ.ಬಸೆಟ್ಟೆಪ್ಪ, ಬೆಂಗಳೂರು

ಭೂಕುಸಿತ... ತಕಥೈ ಕುಣಿತ

ಪಶ್ಚಿಮಘಟ್ಟ, ಹಿಮಾಲಯ ಪರ್ವತ ಪ್ರದೇಶದಲ್ಲಿ
ಮಳೆಗಾಲದಲ್ಲಿ ಸರ್ವೇಸಾಮಾನ್ಯವೀಗ ಭೂಕುಸಿತ
ಆದರೇನಂತೆ, ಪ್ರವಾಸೋದ್ಯಮದ ಹೆಸರಲ್ಲಿ ನಿಲ್ಲುತ್ತಿಲ್ಲ
ಪರಿಸರದ ಮೇಲೆ ಮನುಷ್ಯನ ತಕಥೈ ಕುಣಿತ.

ಆನಂದ ರಾಮತೀರ್ಥ, ಜಮಖಂಡಿ

ಇದು, ಉತ್ತಮ ಆಡಳಿತದ ಲಕ್ಷಣವೇ?

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಡಿ.ಸುಧಾಕರ್ ಅವರು ಚಿತ್ರದುರ್ಗ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕರೆದಿದ್ದ ಅಧಿಕಾರಿಗಳ ಸಭೆಯಲ್ಲಿ, ಅವರ ಆಪ್ತ ಎನಿಸಿಕೊಂಡಿರುವ ರೌಡಿಶೀಟರ್ ಕಂದಿಗೆರೆ ಜಗದೀಶ್ ಎನ್ನುವವರು ಪಾಲ್ಗೊಂಡು, ಅಧಿಕಾರಿಗಳನ್ನು ಪ್ರಶ್ನಿಸುತ್ತಾ ಅವರ ವಿರುದ್ಧ ಏರುಧ್ವನಿಯಲ್ಲಿ ಮಾತನಾಡಿರುವುದು ವರದಿಯಾಗಿದೆ (ಪ್ರ.ವಾ., ಜುಲೈ 31). ಶ್ರೀರಂಗಪಟ್ಟಣ- ಬೀದರ್ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಾಗಿ ವಶಪಡಿಸಿಕೊಳ್ಳಲಾಗಿರುವ ತಮ್ಮ ಜಮೀನಿಗೆ ಪರಿಹಾರ ವಿತರಣೆಯ ಸಂಬಂಧ ಹೈಕೋರ್ಟ್‌ನಲ್ಲಿ ಹೂಡಿರುವ ದಾವೆ ಕುರಿತಂತೆ ರೌಡಿಶೀಟರ್‌ನ ಅಹವಾಲು ಆಲಿಸಲು ಸಚಿವರು ಆತನನ್ನು ಸಭೆಗೆ ಕರೆಸಿದ್ದರು, ಆದರೆ ಆತ ಅಧಿಕಾರಿಗಳೊಡನೆ ಕುಳಿತುಕೊಂಡದ್ದು ದುರದೃಷ್ಟಕರ ಎಂದು ಜಿಲ್ಲಾಧಿಕಾರಿ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಇದನ್ನು ಗಮನಿಸಿದರೆ, ಆ ರೌಡಿ ಎಷ್ಟು ಪ್ರಭಾವಿ ಎನ್ನುವುದು ಅರಿವಾಗುತ್ತದೆ.

ಸಚಿವರಿಗೆ ಆಪ್ತರೆನಿಸಿಕೊಂಡ ಏಕೈಕ ಕಾರಣಕ್ಕಾಗಿ ಇಂತಹ ವ್ಯಕ್ತಿಯು ಅಧಿಕಾರಿಗಳ ಮೇಲೆ ಹೀಗೆ ದಬ್ಬಾಳಿಕೆ ನಡೆಸುವುದಕ್ಕೆ ಅವಕಾಶ ನೀಡುವುದು ಉತ್ತಮ ಆಡಳಿತದ ಲಕ್ಷಣವಲ್ಲ. ಈಗಾಗಲೇ ಮಠಾಧೀಶರು ಆಡಳಿತದಲ್ಲಿ ಮೂಗು ತೂರಿಸುತ್ತಿದ್ದಾರೆ. ಈಗ ರೌಡಿಗಳ ಸರದಿ. ಮುಂದಿನದ್ದು ಕಳ್ಳಕಾಕರು ಮತ್ತು ಭೂಗಳ್ಳರದ್ದಾದರೂ ಆಶ್ಚರ್ಯಪಡಬೇಕಾಗಿಲ್ಲ! ತಮ್ಮ ಜಾತಿಯ ಅಥವಾ ಮತ್ತಾವುದೇ ನೆಲೆಯವರ ಒಂದಷ್ಟು ಮತಗಳು ತಮ್ಮ ಬುಟ್ಟಿಗೆ ಬೀಳುವುದು ಖಚಿತವೆಂದಾದರೆ, ಅವರು ಸಮಾಜಘಾತುಕರು ಎನಿಸಿಕೊಂಡಿದ್ದರೂ ಸರಿ, ನಮ್ಮ ಜನಪ್ರತಿನಿಧಿಗಳು ಆಡಳಿತದ ನೀತಿ-ನಿಯಮಗಳನ್ನೆಲ್ಲಾ ಗಾಳಿಗೆ ತೂರಲು ಸಿದ್ಧರಿರುತ್ತಾರೆ ಎನ್ನುವುದನ್ನು ಈ ಪ್ರಕರಣ ಸಾಬೀತುಪಡಿಸಿದೆ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಭೂಕುಸಿತ: ಇಂಗುಗುಂಡಿಯ ಪಾತ್ರ?

ಕೇರಳದಲ್ಲಿ ಸಂಭವಿಸಿರುವ ಮಹಾ ಭೂಕುಸಿತದಲ್ಲಿ ಇಂಗುಗುಂಡಿಯ ಪಾತ್ರ ಇರಬಹುದೇ? ಸರ್ಕಾರವು ಗುಡ್ಡದ ಮೇಲೆ ಸದುದ್ದೇಶದಿಂದ ಹಲವಾರು ಇಂಗುಗುಂಡಿಗಳನ್ನು ದೊಡ್ಡಪ್ರಮಾಣದಲ್ಲಿ ನಿರ್ಮಿಸಿತ್ತು. ಈ ಹಿಂದೆ ಆ ಪ್ರದೇಶ ಹೀಗಿತ್ತು ಎಂದು ಹೇಳಲು ಅಲ್ಲಿ ಯಾವುದೇ ಸಾಕ್ಷ್ಯ ಈಗ ಉಳಿದಿಲ್ಲ. ಆದರೆ ಸರ್ಕಾರಿ ಕಚೇರಿಗಳ ಕಡತವನ್ನು ಹುಡುಕಿದರೆ, ಎಲ್ಲೆಲ್ಲಿ ಇಂಗುಗುಂಡಿಗಳನ್ನು ನಿರ್ಮಿಸಲಾಗಿತ್ತು ಎಂಬುದನ್ನು ಅದರ ನಕಾಶೆಯಿಂದ ನಿಖರವಾಗಿ ತಿಳಿಯಬಹುದು. ಈಗ ನಡೆದ ಭೂಕುಸಿತದ ಭಾಗದಲ್ಲಿ ಇಂಗುಗುಂಡಿ ಇರುವ ಭಾಗವನ್ನು ಹಾಗೂ ಇಲ್ಲದ ಭಾಗವನ್ನು ಸಮಗ್ರವಾಗಿ ಪರಿಶೀಲಿಸಿದರೆ, ಇಂಗುಗುಂಡಿಯ ಭವಿಷ್ಯವನ್ನು ನಿರ್ಧರಿಸಲು ಅನುಕೂಲವಾಗುತ್ತದೆ.

ಈಶ್ವರ ಶಾಸ್ತ್ರಿ ಮೋಟಿನಸರ, ಶಿರಸಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ದೈಹಿಕ ಶಿಕ್ಷಣ

ಶಾಲಾ ಮಕ್ಕಳಿಗೆ ಮರೀಚಿಕೆ

ಪ್ಯಾರಿಸ್‌ನಲ್ಲಿ ಒಲಿಂಪಿಕ್ಸ್ ನಡೆಯುತ್ತಿದೆ. ಪದಕ ಗೆಲ್ಲುತ್ತಿರುವ ಕ್ರೀಡಾಪಟುಗಳನ್ನು ಇಡೀ ಜಗತ್ತೇ ಅಭಿನಂದಿಸುತ್ತಿದೆ. ಆದರೆ, ಕ್ರೀಡೆಯ ವಾತಾವರಣವನ್ನು ರೂಪಿಸಬೇಕಿರುವ ಶಾಲೆಗಳಲ್ಲಿ ದೈಹಿಕ ಶಿಕ್ಷಣದ ಪರಿಸ್ಥಿತಿ ಆಶಾದಾಯಕವಾಗಿಲ್ಲ. ಯುನೆಸ್ಕೊ ಅಧ್ಯಯನವೊಂದರ ಪ್ರಕಾರ, ಜಾಗತಿಕ ಮಟ್ಟದಲ್ಲಿ ಬಹುತೇಕ ಶಾಲೆಗಳಲ್ಲಿ ದೈಹಿಕ ಶಿಕ್ಷಣದ ಕನಿಷ್ಠ ಚಟುವಟಿಕೆಗಳೂ ನಡೆಯುತ್ತಿಲ್ಲ. ಈ ವಿಚಾರದಲ್ಲಿ ಹಣದ ಕೊರತೆ, ತರಬೇತಿ ಪಡೆದ ಶಿಕ್ಷಕರ ಕೊರತೆ, ಸ್ಥಳದ ಕೊರತೆ, ಲಿಂಗ ತಾರತಮ್ಯ, ಅಂಗವಿಕಲರು ಎಂಬ ತಾರತಮ್ಯ ಪ್ರಮುಖ ಸಮಸ್ಯೆಗಳಾಗಿವೆ ಎಂದು ವರದಿ ತಿಳಿಸಿದೆ.

• ಬಿ.ವಿ.ಶ್ರೀನಾಥ್
ಸೂರ್ಯನಾರಾಯಣ ವಿ.



ಆಟ ಎನ್ನುವುದು ಶಿಕ್ಷಣದ ಬಹು ಬಹುಮುಖ್ಯ ಭಾಗ. ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಆಟ ಸಹಕಾರಿ. ಅದು ಮಕ್ಕಳ ಮೂಲಭೂತ ಹಕ್ಕು ಎಂದೇ ಪರಿಗಣಿಸಲಾಗಿದೆ. ಆದರೆ, ಬಹುತೇಕ ಶಾಲೆಗಳಲ್ಲಿ ಪಾಠಕ್ಕೆ ನೀಡುವ ಮಹತ್ವವನ್ನು ಆಟಕ್ಕೆ ನೀಡುವುದೇ ಇಲ್ಲ. ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ (ಯುನೆಸ್ಕೊ) ಬಿಡುಗಡೆ ಮಾಡಿರುವ ಜಾಗತಿಕ ಮಟ್ಟದ 'ಗುಣಾತ್ಮಕ ದೈಹಿಕ ಶಿಕ್ಷಣ'ದ (ಕ್ಯುಪಿಇ) ಬಗೆಗಿನ ಮೊದಲ ವಸ್ತುಸ್ಥಿತಿ ವರದಿಯಲ್ಲಿ ವ್ಯಕ್ತವಾಗಿರುವ ಪ್ರಮುಖ ಅಂಶ ಇದು.

ಯುನೆಸ್ಕೊ ಸಾಂಪ್ರದಾಯಿಕ ದೈಹಿಕ ಶಿಕ್ಷಣಕ್ಕಿಂತ ಭಿನ್ನವಾಗಿ, ವೇಗ, ವೈವಿಧ್ಯ, ಒಳಗೊಳ್ಳುವಿಕೆ ಮತ್ತು ಮೌಲ್ಯದ ಅಂಶಗಳನ್ನು ಸೇರಿಸಿ 'ಗುಣಾತ್ಮಕ ದೈಹಿಕ ಶಿಕ್ಷಣ' ಎನ್ನುವ ಪರಿಕಲ್ಪನೆಯನ್ನು ರೂಪಿಸಿದೆ.

'ಗ್ಲೋಬಲ್ ಸ್ಟೇಟ್ ಆಫ್ ಪ್ಲೇ' ಎನ್ನುವ ವರದಿಯನ್ನು ಯುನೆಸ್ಕೊದ ಶೈಕ್ಷಣಿಕ ತಂಡವು ಬಿಡುಗಡೆ ಮಾಡಿದೆ. ಅದರ ಪ್ರಕಾರ, ಆಟದಲ್ಲಿಯೂ ಲಿಂಗ ತಾರತಮ್ಯ ಅನುಸರಿಸಲಾಗುತ್ತಿದ್ದು, ವಿಶ್ವದ ಶೇ 82.7 ದೇಶಗಳು ಮಾತ್ರ ದೈಹಿಕ ಶಿಕ್ಷಣವನ್ನು ಬಾಲಕಿಯರಿಗೆ ಕಡ್ಡಾಯಗೊಳಿಸಿವೆ. ಕೇವಲ ಶೇ 7ರಷ್ಟು ಶಾಲೆಗಳು ಬಾಲಕರಿಗೆ ಮತ್ತು ಬಾಲಕಿಯರಿಗೆ ದೈಹಿಕ ಶಿಕ್ಷಣಕ್ಕಾಗಿ ಸಮಾನ ಸಮಯವನ್ನು ನಿಗದಿಪಡಿಸಿವೆ.

ಜಗತ್ತಿನ ಮೂರನೇ ಎರಡರಷ್ಟು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಶೇ 50ರಷ್ಟು ಪ್ರಾಥಮಿಕ ಶಾಲೆಗಳಲ್ಲಿ ವಾರಕ್ಕೆ ಅಗತ್ಯ ಪ್ರಮಾಣದಲ್ಲಿಯೂ ದೈಹಿಕ ಶಿಕ್ಷಣ ತರಗತಿಗಳು ನಡೆಯುತ್ತಿಲ್ಲ. ಯುನೆಸ್ಕೋ ಶೈಕ್ಷಣಿಕ ತಂಡದ ಸದಸ್ಯರೊಬ್ಬರು ಹೇಳುವ ಪ್ರಕಾರ, ಬಹುತೇಕ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಿಗೆ ದೈಹಿಕ ಶಿಕ್ಷಣದ ವಿಶೇಷ ತರಬೇತಿಯೇ ಇಲ್ಲ.

ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದ ನಿಯಮಗಳು ಮತ್ತು ಅದರ ಪಾಲನೆಯ ನಡುವೆ ದೊಡ್ಡ ಮಟ್ಟದ ವ್ಯತ್ಯಾಸವಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ನಿದರ್ಶನಕ್ಕೆ, ಶೇ 54.5ರಷ್ಟು ಶಾಲೆಗಳು ಬಾಲಕಿಯರಿಗೆ ಮತ್ತು ಬಾಲಕರಿಗೆ ಸಮಾನ ದೈಹಿಕ ಶಿಕ್ಷಣದ ಅವಕಾಶ ನೀಡುವ ಬಗ್ಗೆ ನಿಯಮ, ಕಾರ್ಯತಂತ್ರ, ಮಾರ್ಗಸೂಚಿ ರೂಪಿಸಲಾಗಿದೆ. ಆದರೆ, ಕೇವಲ ಶೇ 7.1ರಷ್ಟು ಶಾಲೆಗಳಲ್ಲಿ ಮಾತ್ರ ಇದು ಅನುಷ್ಠಾನಕ್ಕೆ ಬಂದಿದೆ.

ಜಾಗತಿಕ ಮಟ್ಟದಲ್ಲಿ ಶೇ 58.3 ದೇಶಗಳು, ಮುಖ್ಯವಾಹಿನಿಯ ಇತರ ಮಕ್ಕಳ ಜತೆಗೆ ಅಂಗವಿಕಲ ಮಕ್ಕಳನ್ನೂ ಆಟದಲ್ಲಿ ಸೇರಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಿವೆ. ಆದರೆ, ಶೇ 30ರಷ್ಟು ಶಾಲೆಗಳಲ್ಲಿ ಮಾತ್ರ ಇತರೆ ಮಕ್ಕಳ ಜತೆ ಅಂಗವಿಕಲ ಮಕ್ಕಳು ಆಟದಲ್ಲಿ ಬೆರೆಯುತ್ತಿದ್ದಾರೆ ಎಂದು ವರದಿ ತಿಳಿಸಿದೆ.

ಉತ್ತಮ, ಮಧ್ಯಮ ಅಥವಾ ಕಳಪೆ ಅಂಕಗಳ ಮೂಲಕ ಸರ್ಕಾರಗಳು ತಮ್ಮ ದೇಶದ ದೈಹಿಕ ಶಿಕ್ಷಣದ ಗುಣಮಟ್ಟವನ್ನು ಅಳೆಯಲು ಮತ್ತು ಅದನ್ನು ಉತ್ತಮಪಡಿಸುವ ಮಾರ್ಗಗಳನ್ನು ಕಂಡುಕೊಳ್ಳಲು ವರದಿಯು 10 ಮಾನದಂಡಗಳನ್ನು ನೀಡಿದೆ.


ಬಾಲಕ, ಬಾಲಕಿಯರ ಸಮಗ್ರ ಬೆಳವಣಿಗೆಗೆ ಆಟಗಳು ಅಗತ್ಯ. ಆದರೆ, ಹಣಕಾಸಿನ ಸಮಸ್ಯೆ ಮತ್ತು ಸಮಯದ ಸಮಸ್ಯೆಯಿಂದ ಶಿಕ್ಷಕರಿಗೆ ಸೂಕ್ತ ತರಬೇತಿ ಸಿಗುತ್ತಿಲ್ಲ. ವಿದ್ಯಾರ್ಥಿಗಳ ಅಗತ್ಯ ಮತ್ತು ಪರಿಣಾಮಕಾರಿ ಕಲಿಕೆಯ ಕಾರಣಕ್ಕೆ ದೈಹಿಕ ಶಿಕ್ಷಣವು ಹೊಸದೃಷ್ಟಿ ಪಡೆಯಬೇಕಿದ್ದು, ಪಠ್ಯಕ್ರಮದ ಪರಿಷ್ಕರಣೆ ಆಗಬೇಕಿದೆ ಎಂದು ವರದಿ ಸೂಚಿಸಿದೆ.

ಉತ್ತಮ ವಿದ್ಯಾರ್ಹತೆಯ ಜತೆಗೆ ತರಬೇತಿ ಪಡೆದ ಶಿಕ್ಷಕರ ಅಗತ್ಯವಿದ್ದು, ಅವರಿಗೆ ವೃತ್ತಿಪರ ಬೆಳವಣಿಗೆಯ ನಿರಂತರ ಅವಕಾಶಗಳು ಲಭ್ಯವಾಗಬೇಕು ಎಂದೂ ಉಲ್ಲೇಖಿಸಲಾಗಿದೆ. ಈ ಉದ್ದೇಶಕ್ಕಾಗಿ ಹೆಚ್ಚು ಹಣ ಮೀಸಲಿಡುವಂತೆ ದೇಶಗಳಿಗೆ ಯುನೆಸ್ಕೊ ಕರೆ ನೀಡಿದೆ.


ಶಿಫಾರಸುಗಳು

- ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ರಾಷ್ಟ್ರವೂ ಪರಿಣಾಮಕಾರಿ ನೀತಿಗಳನ್ನು ಜಾರಿಗೊಳಿಸಬೇಕು
- ಅನುದಾನ ಕೊರತೆಯಿಂದ ಹಲವು ರಾಷ್ಟ್ರಗಳಲ್ಲಿ ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದ ಮೂಲಸೌಕರ್ಯಗಳಿಲ್ಲ. ಎಲ್ಲ ಸೌಲಭ್ಯಗಳನ್ನು ಕಲ್ಪಿಸುವುದಕ್ಕಾಗಿ ಹೆಚ್ಚು ಅನುದಾನ ಮೀಸಲಿಡಬೇಕು
- ಅರ್ಹ ಮತ್ತು ತಜ್ಞ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕು. ಅವರ ಕೌಶಲಾಭಿವೃದ್ಧಿಗೆ ತರಬೇತಿಗಳನ್ನು ನೀಡಬೇಕು
- ದೈಹಿಕ ಶಿಕ್ಷಣದಲ್ಲಿ ಬಾಲಕರಂತೆ ಬಾಲಕಿಯರಿಗೆ, ಅಂಗವಿಕಲರಿಗೆ ಸಮಾನ ಅವಕಾಶ ನೀಡಬೇಕು
- ದೈಹಿಕ ಶಿಕ್ಷಣ ಪಠ್ಯಕ್ರಮವನ್ನು ಇನ್ನಷ್ಟು ಸುಧಾರಿಸಲು ಕ್ರಮ ಕೈಗೊಳ್ಳಬೇಕು. ಅಧ್ಯಯನ, ಸಂಶೋಧನೆ ಆಧಾರಿತ ಪಠ್ಯಕ್ರಮ ಅಳವಡಿಸಬೇಕು

ಶಿಕ್ಷಣ ಬಜೆಟ್‌ನಲ್ಲಿ ದೈಹಿಕ ಶಿಕ್ಷಣಕ್ಕೆ ಅನುದಾನ ಮೀಸಲಿಟ್ಟ ರಾಷ್ಟ್ರಗಳು



ದೈಹಿಕ ಶಿಕ್ಷಣ ನೀಡಲು ಶಾಲೆಗಳಲ್ಲಿ ಲಭ್ಯವಿರುವ ಸ್ಥಳ




117 ರಾಷ್ಟ್ರಗಳಲ್ಲಿ ಸಮೀಕ್ಷೆ

ಯುನೆಸ್ಕೊ, ಜಾಗತಿಕ ದೈಹಿಕ ಶಿಕ್ಷಣ ಸಮೀಕ್ಷೆಯ ಅಡಿಯಲ್ಲಿ ಸಚಿವಾಲಯ ಮಟ್ಟದ ಸಮೀಕ್ಷೆ, ಶಾಲಾ ಮಟ್ಟದ ಸಮೀಕ್ಷೆ ಮತ್ತು ಕೋವಿಡ್–19 ದತ್ತಾಂಶಗಳ ಸಮೀಕ್ಷೆ ನಡೆಸಿದ್ದು, ಅದರ ವರದಿಗಳನ್ನು ವಿಶ್ಲೇಷಣೆಗೆ ಒಳಪಡಿಸಿ 'ಗ್ಲೋಬಲ್ ಸ್ಟೇಟ್ ಆಫ್ ಪ್ಲೇ' ವರದಿ ಸಿದ್ಧಪಡಿಸಿದೆ.

ಅಂತರರಾಷ್ಟ್ರೀಯ ಮಟ್ಟದ ಈ ಸಮೀಕ್ಷೆಗಳಲ್ಲಿ 117 ರಾಷ್ಟ್ರಗಳು ಮತ್ತು 2,525 ಶಿಕ್ಷಕರಿಂದ ಮಾಹಿತಿ ಸಂಗ್ರಹಿಸಲಾಗಿದೆ. 117 ದೇಶಗಳನ್ನು ಏಳು ವಲಯಗಳನ್ನಾಗಿ ವಿಂಗಡಿಸಲಾಗಿದೆ (ಕೇಂದ್ರ ಮತ್ತು ದಕ್ಷಿಣ ಏಷ್ಯಾ, ಪೂರ್ವ ಮತ್ತು ಆಗ್ನೇಯ ಏಷ್ಯಾ, ಯುರೋಪ್ ಮತ್ತು ಉತ್ತರ ಅಮೆರಿಕ, ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್, ಉತ್ತರ ಆಫ್ರಿಕಾ ಮತ್ತು ಪಶ್ಚಿಮ ಏಷ್ಯಾ, ಒಸಿಯಾನಿಯಾ (ಆಸ್ಟ್ರೇಲಿಯಾ ಸೇರಿದಂತೆ ಪೆಸಿಫಿಕ್ ಸಾಗರ ಪ್ರದೇಶದ ರಾಷ್ಟ್ರಗಳು), ಸಹರಾ ಆಫ್ರಿಕಾ (ಆಫ್ರಿಕಾ ಖಂಡದ ದಕ್ಷಿಣ ಸಹರಾ ಭಾಗದ ದೇಶಗಳು). ಸರ್ಕಾರದ ನೀತಿಗಳು, ಸಂಪನ್ಮೂಲಗಳ ಹಂಚಿಕೆ, ಶಿಕ್ಷಕರಿಗೆ ತರಬೇತಿ, ಪಠ್ಯಕ್ರಮ ವಿನ್ಯಾಸ ಸೇರಿದಂತೆ 10 ನಿರ್ದಿಷ್ಟ ಮಾನದಂಡಗಳ ಆಧಾರದಲ್ಲಿ ವರದಿ ಸಿದ್ಧಪಡಿಸಲಾಗಿದೆ.

ತಜ್ಞ ದೈಹಿಕ ಶಿಕ್ಷಣ ಶಿಕ್ಷಕರು ಎಷ್ಟು?






83%
ಜಾಗತಿಕ ಮಟ್ಟದಲ್ಲಿ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದೈಹಿಕ ಶಿಕ್ಷಣ ಕಡ್ಡಾಯಗೊಳಿಸಿರುವ ರಾಷ್ಟ್ರಗಳು


63.8%
ರಾಷ್ಟ್ರೀಯ ಶಿಕ್ಷಣ ಬಜೆಟ್‌ನಲ್ಲಿ ದೈಹಿಕ ಶಿಕ್ಷಣಕ್ಕೆ ಶೇ 2ಕ್ಕಿಂತಲೂ ಕಡಿಮೆ ಅನುದಾನ ಮೀಸಲಿಟ್ಟ ರಾಷ್ಟ್ರಗಳ ಪ್ರಮಾಣ

57%
ವಿಶೇಷ ತರಬೇತಿಯ ಕೊರತೆ ಎದುರಿಸುತ್ತಿರುವ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ಪ್ರಮಾಣ

ದೈಹಿಕ ಶಿಕ್ಷಣ ತರಬೇತಿ ಅವಧಿಯ ಕೊರತೆ



ಬಾಲಕಿಯರಿಗೂ ದೈಹಿಕ ಶಿಕ್ಷಣ ಕಡ್ಡಾಯಗೊಳಿಸಿರುವ ರಾಷ್ಟ್ರಗಳು



ಆಧಾರ: ಪಿಟಿಐ, ಯುನೆಸ್ಕೊ ವರದಿ, ಎಎಸ್‌ಇಆರ್ ವರದಿ

ಭಾರತದ್ದೂ ಅದೇ ಕಥೆ

ಭಾರತದಲ್ಲಿ ಸಮಗ್ರ ಶಿಕ್ಷಣ ಅಭಿಯಾನದ ಶಾಲೆಗಳಲ್ಲಿ ದೈಹಿಕ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗಿದೆ. ಆದರೆ, ನಿಯಮಕ್ಕೆ ತಕ್ಕಂತೆ ಶಾಲೆಗಳಲ್ಲಿ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲ ಇಲ್ಲ. 'ಪ್ರಥಮ್' ಸಂಸ್ಥೆಯ 'ಶಿಕ್ಷಣ ಸ್ಥಿತಿಗತಿ ವಾರ್ಷಿಕ ವರದಿ'ಯ (ಎಎಸ್‌ಇಆರ್) ಪ್ರಕಾರ, ದೇಶದ ಪ್ರಾಥಮಿಕ ಮಟ್ಟದ ಶೇ 74.5ರಷ್ಟು ಶಾಲೆಗಳು ಮತ್ತು ಹಿರಿಯ ಪ್ರಾಥಮಿಕ ಮಟ್ಟದ ಶೇ 79.2ರಷ್ಟು ಶಾಲೆಗಳಲ್ಲಿ ಮಾತ್ರ ದೈಹಿಕ ಶಿಕ್ಷಣಕ್ಕಾಗಿ ಸಮಯ ನಿಗದಿಗೊಳಿಸಲಾಗಿದೆ. ಪ್ರಾಥಮಿಕ ಮಟ್ಟದ ಶೇ 4.3ರಷ್ಟು ಶಾಲೆಗಳು ಮತ್ತು ಹಿರಿಯ ಪ್ರಾಥಮಿಕ ಮಟ್ಟದ ಶೇ 31.3ರಷ್ಟು ಶಾಲೆಗಳಲ್ಲಿ ದೈಹಿಕ ಶಿಕ್ಷಣಕ್ಕಾಗಿ ಪ್ರತ್ಯೇಕ ಶಿಕ್ಷಕರಿದ್ದಾರೆ. ಪ್ರಾಥಮಿಕ ಮಟ್ಟದ ಶೇ 66.6 ಶಾಲೆಗಳು ಮತ್ತು ಹಿರಿಯ ಪ್ರಾಥಮಿಕ ಮಟ್ಟದ ಶೇ 71.8ರಷ್ಟು ಶಾಲೆಗಳಲ್ಲಿ ಮಾತ್ರ ಆಟದ ಮೈದಾನ ಇದೆ ಎಂದು (2022ರ ಮಾಹಿತಿ) ವರದಿ ತಿಳಿಸಿದೆ.

ಆನಂದ್ ಆಡಿಯೊ ತೆಕ್ಕೆಗೆ 'ಫೈರ್‌ಫ್ಲೈ'



ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ, ವಂಶಿ ನಿರ್ದೇಶನದ 'ಫೈರ್‌ಫ್ಲೈ' ಸಿನಿಮಾದ ಆಡಿಯೊ ಹಕ್ಕನ್ನು ಆನಂದ್ ಆಡಿಯೊ ಖರೀಸಿದಿದೆ.

ವಂಶಿ ಈ ಸಿನಿಮಾವನ್ನು ನಿರ್ದೇಶಿಸುವುದ ಜೊತೆಗೆ ನಾಯಕನಾಗಿಯೂ ನಟಿಸಿದ್ದಾರೆ. ವಂಶಿಗೆ ಜೋಡಿಯಾಗಿ ರಚನಾ ಇಂದರ್ ನಟಿಸಿದ್ದಾರೆ. 'ಫೈರ್‌ಫ್ಲೈ' ಸಿನಿಮಾಗೆ ಚರಣ್‌ರಾಜ್ ಅದ್ಭುತ ಸಂಗೀತ ಒದಗಿಸಿದ್ದಾರೆ. ಶೀಘ್ರದಲ್ಲಿಯೇ ಚರಣ್ ಟ್ಯೂನ್ ಹಾಕಿರುವ ಹಾಡುಗಳ ಹಬ್ಬ ಆನಂದ್ ಆಡಿಯೊ ಯುಟ್ಯೂಬ್‌ನಲ್ಲಿ ಶುರುವಾಗಲಿದೆ' ಎಂದಿದೆ ಚಿತ್ರತಂಡ. ಚಿತ್ರದಲ್ಲಿ ಮೂಗು ಸುರೇಶ್, ಶೀತಲ್ ಶೆಟ್ಟಿ, ಸುಧಾರಾಣಿ, ಅಚ್ಯುತ್‌ಕುಮಾರ್ ಪ್ರಮುಖ ಪಾತ್ರಗಳಿಗೆ ಬಣ್ಣಹಚ್ಚಿದ್ದಾರೆ.

ಶ್ರೀ ಮುತ್ತು ಸಿನಿ ಸರ್ವೀಸ್‌ನಡಿ ಈ ಸಿನಿಮಾ 2023ರ ಜೂನ್‌ನಲ್ಲಿ ಸೆಟ್ಟೇರಿತ್ತು. ಸಿನಿಮಾ ದೀಪಾವಳಿಗೆ ತೆರೆಕಾಣಲಿದೆ ಎಂದಿದೆ ಚಿತ್ರತಂಡ. ಚಿತ್ರಕ್ಕೆ ಅಭಿಲಾಷ್ ಕಳತ್ತಿ ಛಾಯಾಚಿತ್ರಗ್ರಹಣ ಇದೆ. ರಘು ನಿಡುವಳ್ಳಿ ಸಂಭಾಷಣೆ ಬರೆದಿದ್ದಾರೆ. ❖

ಗೌರಿ ಹಬ್ಬಕ್ಕೆ ಬರಲಿದೆ 'ಯುಐ'?

ಸದ್ಯ ಕನ್ನಡದ ಯಾವ ಚಿತ್ರಗಳೂ ಯಶಸ್ಸು ಕಾಣುತ್ತಿಲ್ಲ. ಚಿತ್ರಮಂದಿರಕ್ಕೆ ಜನರನ್ನು ಕರೆದು ತರುವಂತಹ ಸ್ಟಾರ್ ನಟರ ಚಿತ್ರಗಳು ಬಿಡುಗಡೆಗೊಳ್ಳಬೇಕೆಂಬ ಅಪೇಕ್ಷೆಯಲ್ಲಿ ಇಡೀ ಚಿತ್ರೋದ್ಯಮವಿದೆ. ಆದರೆ ಸ್ಟಾರ್ ನಟರ ಚಿತ್ರ ಬಿಡುಗಡೆ ದಿನಾಂಕ ಮಾತ್ರ ಮುಂದಕ್ಕೆ ಹೋಗುತ್ತಲೇ ಇದೆ.

ರಿಯಲ್ ಸ್ಟಾರ್ ಉಪೇಂದ್ರ ಅಭಿನಯದ 'ಯುಐ' ಚಿತ್ರ ಏಪ್ರಿಲ್ ನಲ್ಲಿಯೇ ತೆರೆಗೆ ಬರಬೇಕಿತ್ತು. ಗ್ರಾಫಿಕ್ಸ್ ಕೆಲಸದಿಂದ ಚಿತ್ರ ಬಿಡುಗಡೆ ವಿಳಂಬವಾಗಿದೆ ಎಂದು ತಂಡ ಹೇಳಿತ್ತು. ಅದಾದ ಬಳಿಕ ಮುಂದಿನ ಬಿಡುಗಡೆ ದಿನಾಂಕ ತಿಳಿಸಿರಲಿಲ್ಲ. ಮೂಲಗಳ ಪ್ರಕಾರ 'ಯುಐ' ಗೌರಿ–ಗಣೇಶ ಹಬ್ಬಕ್ಕೆ ತೆರೆಗೆ ಬರುವುದು ಖಚಿತವಾಗಿದೆ.

'ದೊಡ್ಡಮಟ್ಟದ ಗ್ರಾಫಿಕ್ಸ್ ಕೆಲಸವಿತ್ತು. ಹೀಗಾಗಿ ಚಿತ್ರ ಬಿಡುಗಡೆ ವಿಳಂಬವಾಗಿದೆ. ಸೆಪ್ಟೆಂಬರ್‌ನಲ್ಲಿ ಚಿತ್ರ ತೆರೆಗೆ ಬರುವುದು ಖಚಿತ. ಚಿತ್ರದ ಸಂಗೀತವನ್ನು ಹಂಗೇರಿ ದೇಶದಲ್ಲಿರುವ ಆರ್ಕೆಸ್ಟ್ರಾದಲ್ಲಿ ರೆಕಾರ್ಡ್ ಮಾಡಿದ್ದೇವೆ. ಹೈದರಾಬಾದ್‌ನಲ್ಲಿ ಗ್ರಾಫಿಕ್ಸ್ ಕೆಲಸ ನಡೆದಿದೆ. ಬಿಡುಗಡೆಯ ಅಂತಿಮ ಹಂತದ ಕೆಲಸಗಳು ಪ್ರಗತಿಯಲ್ಲಿವೆ' ಎನ್ನುತ್ತಾರೆ ನಿರ್ಮಾಪಕರಲ್ಲೊಬ್ಬರಾದ ಕೆ.ಪಿ.ಶ್ರೀಕಾಂತ್.



'ಇದು ಎಐ ಅಲ್ಲ, ಯುಐ ಜಗತ್ತು. ಈ ಟೀಸರ್ ನಿಮ್ಮ ಕಲ್ಪನೆಗಾಗಿ' ಎನ್ನುವ ಟೀಸರ್‌ನೊಂದಿಗೆ ಉಪೇಂದ್ರ ಚಿತ್ರ ಕುರಿತು ಪ್ರೇಕ್ಷಕರ ತಲೆಗೆ ಹುಳು ಬಿಟ್ಟಿದ್ದರು. ಚಿತ್ರದ 'ಟ್ರೋಲಾಗುತ್ತೆ, ಎಲ್ಲ ಟ್ರೋಲಾಗುತ್ತೆ' ಹಾಡು ಮೆಚ್ಚುಗೆ ಗಳಿಸಿತ್ತು.

'ನಾನು' ಮತ್ತು 'ನೀನು' ಎಂಬ ಅರ್ಥ ನೀಡುವ ಶೀರ್ಷಿಕೆ ಹೊಂದಿರುವ ಚಿತ್ರದಲ್ಲಿ ರೀಷ್ಮಾ ನಾಣಯ್ಯ ನಾಯಕಿ. ಅಜನೀಶ್ ಲೋಕನಾಥ್ ಸಂಗೀತವಿದೆ. ಉಪೇಂದ್ರ ಅವರು ಹಲವು ವರ್ಷಗಳ ಬಳಿಕ ನಿರ್ದೇಶನಕ್ಕೆ ಮರಳಿರುವ ಚಿತ್ರವಿದು. ಕೆ.ಪಿ. ಶ್ರೀಕಾಂತ್ ಮತ್ತು ಜಿ. ಮನೋಹರನ್ ಬಂಡವಾಳ ಹೂಡಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಆಗಸ್ಟ್ 1, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದ್ವಾದಶಿ ಗಂ. 15-30 ನಕ್ಷತ್ರ: ಮೃಗಶಿರ ಗಂ. 10-24 ಯೋಗ: ವ್ಯಾಘಾತ ಗಂ. 12-50 ಕರಣ: ತೈತಿಲ ಗಂ. 15-30, ಕರ್ಕಾಟಕ ಮಾಸದ 16 ನೇ ದಿನ, ಮಳೆನಕ್ಷತ್ರ: ಪುಷ್ಯ 4.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-19 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ : 22 ಮೊಹರಮ್
ಅದೃಷ್ಟ ಸಂಖ್ಯೆ : 4, 10

ಮೇಷ: ಷೇರು ಮಾರುಕಟ್ಟೆ ಹಾಗೂ ಕಮಿಷನ್ ವ್ಯಾಪಾರದವರಿಗೆ ಲಾಭಾಂಶ ವೃದ್ಧಿಯಾಗಿ ಬೆಳವಣಿಗೆ ಕಾಣಬಹುದು. ಆದಾಯ ವೆಚ್ಚಗಳನ್ನು ಸರಿದೂಗಿಸಿ-ಕೊಳ್ಳುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ಚತುರ ನಡೆ ಇರಲಿ.

ವೃಷಭ: ಸಾಮಾಜಿಕವಾಗಿ ವರ್ತನೆಯಲ್ಲಿ ಸ್ಥಿರತೆ ಹಾಗೂ ಸಮತೋಲನ ಕಾಯ್ದುಕೊಳ್ಳಿ. ಬಹಳಷ್ಟು ತಾಳ್ಮೆಯಿಂದ ಕೆಲಸ ನಿರ್ವಹಿಸಬೇಕಾಗುವುದು. ಅನವಶ್ಯಕವಾಗಿ ಪ್ರಯಾಣದ ಸಾಧ್ಯತೆ ಇದೆ. ಶಾರೀರಿಕ ಆರೋಗ್ಯ ಉತ್ತಮ.

ಮಿಥುನ: ಆಕಾಂಕ್ಷೆಗಳ ಸಿದ್ಧಿಯಾಗಿ, ಧಾರ್ಮಿಕ ಪ್ರವೃತ್ತಿಗಳಲ್ಲಿ ಆಸಕ್ತಿಯನ್ನು ಹೊಂದುವಿರಿ. ಕೆಲಸದ ಹೊರೆ ಹೆಚ್ಚಾಗಿ ಮಡದಿ ಮಕ್ಕಳಿಂದ ಸಹಕಾರ ಯಾಚಿಸ ಬೇಕಾಗುವುದು. ಉದ್ಯೋಗ ಬದಲಾಗುವ ಸಂಭವವಿದೆ.

ಕರ್ಕಾಟಕ: ಕಳೆಯಿತು ಎಂದುಕೊಂಡ ರೋಗವೊಂದು ಬೆಂಬಿಡದೆ ಕಾಡಿ ಸುತ್ತದೆ. ಬಂಧುಗಳಲ್ಲಿನ ಮಾತಿನ ಚಕಮಕಿ ಮನಸ್ಸಿಗೆ ಗೊಂದಲ ತಂದೀತು. ಸರ್ಕಾರ ಅಥವಾ ಸಂಸ್ಥೆಗಳ ನಿಯಮಗಳಿಗೆ ಬೆಲೆ ಕೊಡುವುದನ್ನು ಕಲಿಯಿರಿ.

ಸಿಂಹ: ಕೌಟುಂಬಿಕವಾಗಿ ಖರ್ಚುಗಳು ಅಧಿಕವೆನಿಸಿದರೂ ಆರ್ಥಿಕವಾಗಿ ಉತ್ತಮವಾಗಿರುವುದು. ಯಂತ್ರಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಅವಕಾಶಗಳು ದೊರಕಲಿವೆ. ಆದಾಯದ ಮೂಲಗಳು ಗೋಚರಿಸಲಿವೆ.

ಕನ್ಯಾ: ಮನೋಬಲದ ಜತೆಯಲ್ಲಿ ಆರ್ಥಿಕ ಬಲ ದೃಢವಾಗಿಸಿಕೊಂಡರೆ ಮಾತ್ರ ಕಾರ್ಯ ಸಾಧಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಹಣ್ಣು ತರಕಾರಿ ವ್ಯಾಪಾರಿಗಳಿಗೆ ಉತ್ತಮ ಆದಾಯದ ಅವಕಾಶವಿದೆ.

ತುಲಾ: ಹಣಕಾಸು ಸಂಸ್ಥೆಗೆ ಪಾಲುದಾರರಾಗಿ ಸೇರಿಕೊಳ್ಳುವ ಯೋಚನೆಯಲ್ಲಿ-ರುವವರಿಗೆ ವ್ಯವಹಾರದ ಉದ್ದಗಲವು ತಿಳಿಯುವುದು. ಔಷಧ ಕಂಪನಿಗಳಿಗೆ ಮತ್ತು ಔಷಧ ಮಾರಾಟ ಪ್ರತಿನಿಧಿಗಳಿಗೆ ಮಾರಾಟದಲ್ಲಿ ಹೆಚ್ಚಳವಾಗುವುದು.

ವೃಶ್ಚಿಕ: ವಿದೇಶ ವ್ಯವಹಾರಗಳಿಂದ ಆದಾಯ ಕೈಗೂಡಲಿದೆ. ಆರ್ಥಿಕವಾಗಿ ಸಂತೃಪ್ತಿ ಇರುವುದು. ಜನರೊಂದಿಗೆ ಬೆರೆಯುವ ಅಭ್ಯಾಸವನ್ನು ಮಾಡಿಕೊಳ್ಳಿ. ಅಂತಿಮ ಕ್ಷಣಗಳಲ್ಲಿ ಪಶ್ಚಾತ್ತಾಪ ಪಡುವ ಬದಲು ಮುಂಜಾಗ್ರತಾ ಕ್ರಮ ಕೈಗೊಳ್ಳಿ.

ಧನು: ಅಸೂಯೆಯಾಗದಂತೆ ಕಾರ್ಯಗಳನ್ನು ಸಾಧಿಸಿಕೊಳ್ಳುವ ಉತ್ತಮ ಗುಣವನ್ನು ಜೀವನದ ಶೈಲಿಯಲ್ಲಿ ವೃದ್ಧಿಸಿಕೊಳ್ಳಿರಿ. ಶ್ರಮ ಜೀವಿಗಳಿಗೆ ಶ್ರಮಕ್ಕೆ ಮೀರಿದ ಪ್ರತಿಫಲ ಅನುಭವಕ್ಕೆ ಬರಲಿದೆ.

ಮಕರ: ಆರ್ಥಿಕ ರಂಗದಲ್ಲಿ ನೂತನವಾಗಿ ಹೂಡಿಕೆ ಮಾಡುವುದು ಉತ್ತಮವಲ್ಲ. ದಂತ ವೈದ್ಯರಿಗೆ ಮತ್ತು ಶಸ್ತ್ರ ಚಿಕಿತ್ಸಕರಿಗೆ ವೃತ್ತಿಯಲ್ಲಿ ಅತೀವ ಗಮನವಿರಬೇಕಾಗುತ್ತದೆ. ವಿಶೇಷ ಪೂಜೆ ನಡೆಸಲು ತಯಾರಿ ಮಾಡುವಿರಿ.


ಕುಂಭ: ಸಹೋದ್ಯೋಗಿಯ ನೆರವಿನಿಂದ ಕೆಲಸ ಕಾರ್ಯಗಳು ಸಂಪನ್ನಗೊಳ್ಳ-ಲಿವೆ. ಕೆಲವೊಂದು ಪ್ರತಿಕೂಲ ಫಲಗಳೇ ಕಾರ್ಯಕ್ಷೇತ್ರದಲ್ಲಿದ್ದರೂ ಚಿಂತಿಸುವ ಅವಶ್ಯಕತೆ ಇಲ್ಲ. ಕಷ್ಟಕಾರ್ಪಣ್ಯಗಳಿಗೆ ತಂದೆ ತಾಯಿ ನೆರವಾಗಲಿದ್ದಾರೆ.

ಮೀನ: ಆಪ್ತಸ್ನೇಹಿತರ ಸಹಾಯದಿಂದ ಗೃಹ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸುವಿರಿ. ಸಮಸ್ಯೆಗಳನ್ನು ಶೀಘ್ರ ಬಗೆಹರಿಸಿಕೊಳ್ಳಲು ಬೇಕಾದ ಧಾರ್ಮಿಕ ಪ್ರಯತ್ನ ಮಾಡಿ. ರಫ್ತು ಮಾರಾಟಗಳಿಂದ ಆದಾಯ ಹೆಚ್ಚಲಿದೆ.

ಮೌಲ್ಯಗಳ ಮಹತ್ವ

ನುಡಿ ಬೆಳಗು





ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಟಿ. ಎನ್. ಶೇಷನ್ ಅವರು ತಮ್ಮ ಆತ್ಮಕಥೆಯಲ್ಲಿ ಹೇಳಿದ ಘಟನೆಯೊಂದು ಹೀಗಿದೆ: ಶೇಷನ್ ಹಿರಿಯ ಐಎಎಸ್ ಅಧಿಕಾರಿಯಾಗಿದ್ದ ಸಮಯ. ಒಂದು ದಿನ ಅವರು ಮತ್ತು ಅವರ ಹೆಂಡತಿ ಕಾರಿನಲ್ಲಿ ಉತ್ತರ ಪ್ರದೇಶದ ಯಾವುದೋ ಊರಿಗೆ ಹೊರಟಿದ್ದರು. ದಾರಿಯ ನಡುವೆ ಒಂದೆಡೆ ದೊಡ್ಡ ದೊಡ್ಡ ಮರಗಳಿದ್ದವು. ಆ ಮರಗಳಲ್ಲಿ ಸುಂದರವಾದ ಗೀಜಗನ ಗೂಡುಗಳು ನೇತಾಡುತ್ತಿದ್ದವು. ಅವುಗಳನ್ನು ನೋಡಿ ಶೇಷನ್ ಅವರ ಹೆಂಡತಿಗೆ ಬಹಳ ಸಂತೋಷವಾಯಿತು. ಎರಡು ಗೂಡುಗಳನ್ನು ತಮ್ಮ ಮನೆಯ ಕೈತೋಟದಲ್ಲಿ ನೇತು ಹಾಕಿದರೆ ಎಷ್ಟು ಚೆನ್ನಾಗಿ ಕಾಣಬಹುದಲ್ಲ ಎಂದುಕೊಂಡು ಅವರು ಪತಿಯ ಹತ್ತಿರ ಹೇಳಿದರು. ಗೂಡುಗಳು ಎತ್ತರದ ಮರಗಳಲ್ಲಿದ್ದ ಕಾರಣ ಶೇಷನ್ ತಮ್ಮ ಚಾಲಕನೊಂದಿಗೆ ಹೊರಬಂದು ಹೇಗೆ ಈ ಗೂಡುಗಳನ್ನು ತೆಗೆಯುವುದೆಂದು ಚರ್ಚಿಸತೊಡಗಿದರು.

ಅಷ್ಟರಲ್ಲಿ ಅವರ ಚಾಲಕ ಅಲ್ಲಿಯೇ ಕೊಂಚ ದೂರದಲ್ಲಿ ಕುರಿ ಕಾಯುತ್ತಿರುವ ಒಬ್ಬ ಹುಡುಗನನ್ನು ನೋಡಿದರು. ಆ ಬಾಲಕನನ್ನು ಕರೆದು 'ನೋಡು, ನಿನಗೆ ಹತ್ತು ರೂಪಾಯಿ ಕೊಡುತ್ತೇವೆ ಎರಡು ಗೂಡು ತೆಗೆದು ಕೊಡುತ್ತೀಯಾ' ಎಂದು ಕೇಳಿದರು. ಆ ಹುಡುಗ 'ಇ' ಅಂದ. 'ಐವತ್ತು ರೂಪಾಯಿ ಕೊಡುತ್ತೇನೆ' ಎಂದರೂ ಆತ ಒಪ್ಪಲಿಲ್ಲ. ಶೇಷನ್ ಆ ಹುಡುಗನ ಹತ್ತಿರ 'ಏಕೆ ನೀನು ಗೂಡು ತೆಗೆಯಲು ನಿರಾಕರಿಸುತ್ತಿದ್ದೀ' ಎಂದು ಕೇಳಿದರು. ಅದಕ್ಕೆ ಆ ಹುಡುಗ, 'ಸಾಹೇಬರೇ, ಈಗ ನಾನೇನಾದರೂ ಈ ಗೂಡುಗಳನ್ನು ತೆಗೆದರೆ ಆಹಾರ ತರಲು ಹೊರ ಹೋದ ತಾಯಿ ಹಕ್ಕಿ ಸಂಜೆ ಬಂದು ನೋಡಿದರೆ ಗೂಡೂ ಇರುವುದಿಲ್ಲ, ಮರಿಗಳೂ ಇರುವುದಿಲ್ಲ. ಆ ಹಕ್ಕಿಗೆ ಏನೆನ್ನಿಸಬಹುದು?'

ಶೇಷನ್ ಬರೆಯುತ್ತಾರೆ: 'ಆ ರಾತ್ರಿ ನನಗೆ ಅಪರಾಧಿ ಪ್ರಜ್ಞೆಯಿಂದ ನಿದ್ದೆ ಬರಲಿಲ್ಲ, ಹೆಸರಿಗೆ ಇಷ್ಟು ದೊಡ್ಡ ಐಎಎಸ್ ಅಧಿಕಾರಿ, ಆದರೆ ಆ ಅವಿದ್ಯಾವಂತ ಪುಟ್ಟ ಬಾಲಕ ಅರ್ಥ ಮಾಡಿಕೊಂಡದ್ದು ನನ್ನ ತಲೆಗೆ ಹೊಳೆಯಲಿಲ್ಲವಲ್ಲ'.


ನಿಜ, ಶಿಕ್ಷಣದಿಂದಲೇ ಎಲ್ಲವೂ ಸಿಕ್ಕಿಬಿಡುವುದಿಲ್ಲ. ಸಂಸ್ಕಾರ ಕೂಡ ಮನುಷ್ಯನಿಗೆ ಬದುಕಲು ಕಲಿಸುತ್ತದೆ. ಹಾಗಾಗಿ ಜೀವನದಲ್ಲಿ ಶಿಕ್ಷಣದ ಜತೆಜತೆಗೆ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಬದುಕು ಬಂಗಾರವಾಗುತ್ತದೆ. ಕಾರಣ ನಾವ್ಯಾರೂ ಒಂಟಿಯಾಗಿ ದ್ವೀಪದಲ್ಲಿ ಬದುಕುತ್ತಿಲ್ಲ. ಜನರಿರುವ ಸಮಾಜದಲ್ಲಿ ಬದುಕುತ್ತಿದ್ದೇವೆ. ಬದುಕಿನ ಪ್ರತೀ ಹೆಜ್ಜೆಯಲ್ಲೂ ಈ ಸಮಾಜದ ಋಣವನ್ನು ಹೊತ್ತಿರುವ ನಾವು ಇತರರಲ್ಲಿರುವ ಮೌಲ್ಯಗಳನ್ನು ಗುರುತಿಸಿ ನಮ್ಮಲ್ಲಿರುವ ದೋಷಗಳನ್ನು ತಿದ್ದಿಕೊಂಡಾಗ ಮಾತ್ರ ನಿಜವಾದ ಸಂಘಜೀವಿಗಳೆನಿಸಿಕೊಂಡೇವು. ಏಕೆಂದರೆ ಮೌಲ್ಯಗಳು ಬದುಕಿಗೊಂದು ಗುರಿಯನ್ನು ನೀಡುತ್ತವೆ, ಆತ್ಮಾವಲೋಕನಕ್ಕೆ ದಾರಿಯಾಗುತ್ತವೆ. ಕ್ರಮೇಣ ನಮ್ಮ ಅಸ್ಮಿತೆಯೇ ಆಗುತ್ತವೆ. ❖

ಪದಬಂಧ 5759

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಲಾಸಾದರೂ ತೋರುತ್ತಿರುವ ಬೆಡಗು! (3)
4.ನಮ್ಮ ರಾಷ್ಟ್ರಪಿತ (5)
6.ಕೆಟ್ಟ ರೂಪವಿದು (3)
8.ಜೈ ಜವಾನ್, ಜೈ ಕಿಸಾನ್ ಎಂದು ಕರೆ ನೀಡಿದ್ದ ಭಾರತದ ಎರಡನೆಯ ಪ್ರಧಾನಮಂತ್ರಿ (8)
10.ನದಿಗೆ ಅಥವಾ ಕೆರೆಕೊಳಗಳಿಗೆ ನೀರು ಹರಿದು ಬರುವ ಪ್ರದೇಶ (8)
12.ಕರಿಯಲ್ಲಿರುವ ಸುಗಂಧದ್ರವ್ಯ (3)
14.ಮರವನ್ನು ಕೊರೆಯುವ ಪಕ್ಷಿ (5)
16.ವ್ಯಾಕರಣದಲ್ಲಿ ಗಂಡು ಜಾತಿಯನ್ನು ಸೂಚಿಸುವ ಶಬ್ದ (3)

ಮೇಲಿಂದ ಕೆಳಕ್ಕೆ
1.ಸುಗಮವಾಗಿ ಕಿತ್ತಿರುವ ಹೂವು (2)
2.ನಿಯಮ ಅಥವಾ ಸಂಪ್ರದಾಯ ಎಂದರೂ ಆದೀತು (2)
3.ರುಚಿಯಾದುದನ್ನು ಹೀಗೆನ್ನಿ (2)
5.ಕಹಿರುಚಿಯ ಈ ತರಕಾರಿ ಕೊನೆಗೆ ದೀರ್ಘವಾಗಿದೆ (3)
7.ಈಕೆ ಅನ್ಯ ಹೆಂಗಸು (3)
9.ಶಿಲ್ಪಕಲೆಗಳ ಬೀಡು ಹೊಯ್ಸಳ ನಾಡು ಎಂದೇ ಪ್ರಸಿದ್ಧವಾದ ಜಿಲ್ಲೆ (3)
10.ಟಕ ಟಕ ಶಬ್ದ ಮಾಡುವ ಕುದುರೆಗಾಡಿ (3)
11.ರಾಕ್ಷಸನ ಹೆಸರು ರಥವೂ ಆದೀತು (3)
13.ಪುಢಾರಿ ಬಳಿಯಿರುವ ಶತ್ರು (2)
14.ಡಮರುಗ ಹಿಡಿದಿರುವ ಸುತ (2)
15.ಗ್ರಹ ತಾರೆಗಳು ತಿರುಗುವ ಪಥ (2)



5758ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಪದಕ 6.ಕಾಷ್ಠವ್ಯಸನ
8.ಕಯಿಕಾ 9.ಫಲ
11.ಹಸು 13.ಮಂಜುಳ
15.ಚಿನಕುರುಳಿ 17.ಕೆಲಸ

ಮೇಲಿಂದ ಕೆಳಕ್ಕೆ:
1.ಅಪಸ್ವರ 2.ಶ್ರೇಷ್ಠ
3.ಮೌನ 5.ಕಳಕಳಿ
6.ಕಾರ್ಯಕಾರಿಮಂಡಳಿ
7.ಸರಾಫ 10.ಬಳಲಿಕೆ
12.ಸುಮ್ಮಾನ 14.ಸರಾಸರಿ
15.ಚಿತೆ 16.ರುಳಿ

ಸುಡೊಕು 6144

7		5	9					
	4				2		9	
2		9	3	7		5		4
9		4						2
			4		9	1		
	3					9		6
4					8		7	
		1	7			2		3
8		2		5			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6143 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

ವಿರೋಧ ಪಕ್ಷಗಳಿಂದ ಲೋಕಸಭೆಯಲ್ಲಿ ಪ್ರತಿಭಟನೆ ● ಅನುರಾಗ್ ಠಾಕೂರ್ ನೀಡಿದ್ದ ಹೇಳಿಕೆಗೆ ಖಂಡನೆ

ಪ್ರಧಾನಿಯಿಂದ ಗಂಭೀರ ಹಕ್ಕುಚ್ಯುತಿ: ಕಾಂಗ್ರೆಸ್



ಅನುರಾಗ್ ಠಾಕೂರ್

ನವದೆಹಲಿ(ಪಿಟಿಐ): ಬಜೆಟ್ ಮೇಲಿನ ಭಾಷಣದ ವೇಳೆ ಜಾತಿ ಗಣತಿ ಕುರಿತು ಬಿಜೆಪಿ ಸಂಸದ ಅನುರಾಗ್ ಠಾಕೂರ್ ನೀಡಿದ್ದ ಹೇಳಿಕೆಗಳನ್ನು ಖಂಡಿಸಿ ವಿರೋಧ ಪಕ್ಷಗಳ ಸದಸ್ಯರು ಲೋಕಸಭೆಯಲ್ಲಿ ಬುಧವಾರ ಪ್ರತಿಭಟಿಸಿದರು.

‘ಕಡತದಿಂದ ತೆಗೆದು ಹಾಕಲಾಗಿದ್ದ, ಸಂಸದ ಠಾಕೂರ್ ಹೇಳಿಕೆಗಳನ್ನು ಒಳಗೊಂಡ ವಿಡಿಯೊವನ್ನು ‘ಎಕ್ಸ್’ನಲ್ಲಿ ಹಂಚಿಕೊಳ್ಳುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರಿಂದ ಗಂಭೀರವಾದ ಹಕ್ಕುಚ್ಯುತಿಯಾಗಿದೆ’ ಎಂದು ಕಾಂಗ್ರೆಸ್ ಸದಸ್ಯರು ಟೀಕಿಸಿದರು.

ವಿರೋಧ ಪಕ್ಷಗಳ ಸದಸ್ಯರ ಪ್ರತಿಭಟನೆ ಜೋರಾಗುತ್ತಿದ್ದಂತೆಯೇ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪವನ್ನು ಮಧ್ಯಾಹ್ನದ ವರೆಗೆ ಮುಂದೂಡಿದರು.

ಅನುರಾಗ್ ಠಾಕೂರ್ ಅವರು ಬಜೆಟ್ ಮೇಲೆ ಮಂಗಳವಾರ ಭಾಷಣ ಮಾಡುವ ವೇಳೆ, ‘ಯಾರಿಗೆ ತನ್ನ ಜಾತಿ ಯಾವುದು ಎಂಬುದು ತಿಳಿದಿಲ್ಲವೊ ಅವರು ಜಾತಿ ಗಣತಿ ಕುರಿತು ಮಾತನಾಡುತ್ತಾರೆ’ ಎಂದಿದ್ದರು.

ಠಾಕೂರ್ ಅವರ ಈ ಮಾತು ಭಾರಿ ಗದ್ದಲಕ್ಕೆ ಕಾರಣವಾಗಿತ್ತು. ಈ ಹೇಳಿಕೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಉದ್ದೇಶಿಸಿ ಹೇಳಿದ್ದು ಎಂದು ಆರೋಪಿಸಿ ವಿರೋಧ ಪಕ್ಷಗಳ ಸದಸ್ಯರು ಮಂಗಳವಾರವೂ ಪ್ರತಿಭಟಿಸಿದ್ದರು.

ಈ ವಿಡಿಯೊ ಹಂಚಿಕೊಂಡಿದ್ದ ಪ್ರಧಾನಿ ಮೋದಿ, ‘ನನ್ನ ಉತ್ಸಾಹಿ, ಯುವ ಸಹೋದ್ಯೋಗಿ ಅನುರಾಗ್ ಠಾಕೂರ್ ಅವರ ಈ ಮಾತುಗಳನ್ನು ತಪ್ಪದೇ ಕೇಳಬೇಕು. ವಾಸ್ತವ ಸಂಗತಿಗಳು, ಹಾಸ್ಯ ಮಿಶ್ರಿತ ಅವರ ಭಾಷಣ ‘ಇಂಡಿಯಾ’ ಒಕ್ಕೂಟದ ಕೆಟ್ಟ ರಾಜಕೀಯದ ಮುಖವಾಡವನ್ನು ಕಳಚಿದೆ’ ಎಂಬ ಒಕ್ಕಣೆಯೊಂದಿಗೆ ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದರು.

‘ಇಂಡಿಯಾ’ ಪ್ರತಿಭಟನೆ: ಸಂಸತ್ ಭವನದ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿದ ಲೋಕಸಭೆಯಲ್ಲಿ ಕಾಂಗ್ರೆಸ್ ಉಪನಾಯಕ ಗೌರವ್ ಗೊಗೋಯಿ, ‘ಜಾತಿ ಗಣತಿ ಕುರಿತಂತೆ ಬಿಜೆಪಿ ನಾಯಕರ ಸಂವೇದನಾರಹಿತ ಮತ್ತು ಕ್ರೂರವಾದ ಹೇಳಿಕೆಗಳನ್ನು ಖಂಡಿಸಿ ‘ಇಂಡಿಯಾ’ ಒಕ್ಕೂಟ ಸದನದಲ್ಲಿ ಬುಧವಾರ ಪ್ರತಿಭಟಿಸಿತು’ ಎಂದು ಹೇಳಿದರು.

‘ಜಾತಿ ಗಣತಿ ಬಹಳ ಭಾವನಾತ್ಮಕ ವಿಚಾರ. ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳು ಜಾತಿ ಗಣತಿ ನಡೆಯಬೇಕು ಎಂದು ಬಯಸುತ್ತಿದ್ದರೆ, ಅವರ ಈ ಬೇಡಿಕೆಯನ್ನು ಬಿಜೆಪಿಯು ಸಂಸತ್‌ನಲ್ಲಿ ಅಣಕಿಸುತ್ತಿದೆ. ಪರಿಶಿಷ್ಟರು ಹಾಗೂ ಒಬಿಸಿಗಳನ್ನು ಬಿಜೆಪಿ ಅವಮಾನಿಸಿದೆ. ಅದೂ ಅಲ್ಲದೇ, ಠಾಕೂರ್ ಅವರ ಭಾಷಣ ಮೆಚ್ಚಿ ಪ್ರಧಾನಿ ಅದರ ವಿಡಿಯೊ ಹಂಚಿಕೊಂಡಿದ್ದು ದುರದೃಷ್ಟಕರ’ ಎಂದರು.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘ಸಂಸದ ಠಾಕೂರ್ ಅವರ ಭಾಷಣವನ್ನು ತಪ್ಪದೇ ಕೇಳಬೇಕು ಎಂದಿರುವ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆ ಅವಹೇಳನಕಾರಿ ಹಾಗೂ ಆಕ್ಷೇಪಾರ್ಹವೂ ಆಗಿದೆ. ಈ ರೀತಿ ಹೇಳುವ ಮೂಲಕ ಪ್ರಧಾನಿಯವರು ಗಂಭೀರವಾದ ಹಕ್ಕುಚ್ಯುತಿಯನ್ನು ಉತ್ತೇಜಿಸುತ್ತಿದ್ದಾರೆ’ ಎಂದು ಟೀಕಿಸಿದ್ದಾರೆ.

ಚನ್ನಿ ನೋಟಿಸ್

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಹಕ್ಕುಚ್ಯುತಿ ಗೊತ್ತುವಳಿ ಮಂಡಿಸುವುದಾಗಿ ಕಾಂಗ್ರೆಸ್ ಸಂಸದ ಚರಣ್‌ಜಿತ್ ಸಿಂಗ್ ಚನ್ನಿ ಬುಧವಾರ ನೋಟಿಸ್ ಸಲ್ಲಿಸಿದ್ದಾರೆ.

ಈ ಸಂಬಂಧ ಚನ್ನಿ ಅವರು ಸ್ಪೀಕರ್ ಓಂ ಬಿರ್ಲಾ ಅವರಿಗೆ ನೋಟಿಸ್ ಸಲ್ಲಿಸಿದ್ದು, ನಿಯಮ 222ರಡಿ ಪ್ರಧಾನಿ ವಿರುದ್ಧ ಹಕ್ಕುಚ್ಯುತಿ ಗೊತ್ತುವಳಿ ಮಂಡಿಸಲು ಅವಕಾಶ ನೀಡುವಂತೆ ಕೋರಿದ್ದಾರೆ. ಬಜೆಟ್ ಮೇಲಿನ ಭಾಷಣದ ವೇಳೆ ಸಂಸದ ಅನುರಾಗ್ ಠಾಕೂರ್ ಮಂಗಳವಾರ ನೀಡಿದ್ದ ಕೆಲ ಹೇಳಿಕೆಗಳನ್ನು ಕಡತದಿಂದ ತೆಗೆದು ಹಾಕಲಾಗಿತ್ತು. ಆದಾಗ್ಯೂ, ಠಾಕೂರ್ ಅವರ ಹೇಳಿಕೆಗಳನ್ನು ಒಳಗೊಂಡ ವಿಡಿಯೊವೊಂದನ್ನು ಪ್ರಧಾನಿ ಮೋದಿ ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ ಎಂದು ಚನ್ನಿ ಆರೋಪಿಸಿದ್ದಾರೆ.

‘ಬಿಜೆಪಿ, ಕಾಂಗ್ರೆಸ್ ಒಬಿಸಿ ವಿರೋಧಿ ಪಕ್ಷಗಳು’



ಮಾಯಾವತಿ

ಲಖನೌ(ಪಿಟಿಐ): ಜಾತಿ ಕುರಿತಂತೆ ಲೋಕಸಭೆಯಲ್ಲಿ ನಡೆಯುತ್ತಿರುವ ಜಟಾಪಟಿ ನಾಟಕವಷ್ಟೆ. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಒಬಿಸಿ ವಿರೋಧಿಯಾಗಿವೆ ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಬುಧವಾರ ಹೇಳಿದ್ದಾರೆ.

‘ಈ ಎರಡೂ ಪಕ್ಷಗಳು ಒಬಿಸಿ ಸಮುದಾಯಕ್ಕೆ ಮೋಸ ಮಾಡುವ ಪ್ರಯತ್ನ ನಡೆಸಿವೆ’ ಎಂದು ‘ಎಕ್ಸ್’ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಟೀಕಿಸಿದ್ದಾರೆ. ‘ಜಾತಿ ಗಣತಿಯು ಸಾರ್ವಜನಿಕ ಹಿತಾಸಕ್ತಿಯ ಮಹತ್ವದ ವಿಷಯ. ಉತ್ತರ ಪ್ರದೇಶದಲ್ಲಿ ಒಬಿಸಿಗಳಿಗೆ ನಮ್ಮ ಬಿಎಸ್‌ಪಿ ಸರ್ಕಾರ ಮೀಸಲಾತಿ ಜಾರಿಗೊಳಿಸಿತ್ತು. ಇದೇ ರೀತಿ, ಕೇಂದ್ರ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು’ ಎಂದೂ ಅವರು ಹೇಳಿದ್ದಾರೆ.

ಪರಿಶಿಷ್ಟರು, ಒಬಿಸಿಗಳು ಹಾಗೂ ಆದಿವಾಸಿಗಳನ್ನು ಅವಮಾನಿಸಿದ ಭಾಷಣವನ್ನು ಪ್ರಧಾನಿ ಹೊಗಳಿದ್ದಾರೆ. ಆ ಜನರ ಪರವಾಗಿ ನಾವು ಹೋರಾಡುತ್ತೇವೆ

ಗೌರವ್ ಗೊಗೋಯಿ, ಲೋಕಸಭೆಯಲ್ಲಿ ಕಾಂಗ್ರೆಸ್ ಉಪನಾಯಕ

ಪರಿಶಿಷ್ಟರು, ಒಬಿಸಿ ಹಾಗೂ ಮುಸ್ಲಿಮರಿಗೆ ಬಿಜೆಪಿಯವರ ಹೃದಯದಲ್ಲಿ ಸ್ಥಾನ ಇಲ್ಲ ಎಂಬುದನ್ನು ನಾವು ಹೇಳುತ್ತಲೇ ಇದ್ದೇವೆ. ಇವರಿಗೆ ಸಂಸತ್‌ನಲ್ಲಿ ಅವಮಾನಿಸಲಾಗಿದೆ

ಧರ್ಮೇಂದ್ರ ಯಾದವ್, ಸಮಾಜವಾದಿ ಪಕ್ಷದ ಸಂಸದ

ನಮ್ಮ ಮುಂದಿರುವ ಪ್ರಶ್ನೆ ರಾಹುಲ್ ಗಾಂಧಿಯವರ ಜಾತಿ ಯಾವುದು ಎಂಬುದಲ್ಲ, ಬದಲಾಗಿ ಜಾತಿ ಗಣತಿ

ಮನೋಜ್ ಝಾ, ಆರ್‌ಜೆಡಿ ರಾಜ್ಯಸಭಾ ಸಂಸದ

ಸುದ್ದಿ 2 ನಿಮಿಷ

ಬಿಜೆಪಿ–ಜೆಡಿಎಸ್ ವಿರುದ್ಧ ಉಗ್ರ ಹೋರಾಟ: ಕುರುಬರ ಸಂಘ

ಬೆಂಗಳೂರು: ‘ಹಿಂದುಳಿದ ವರ್ಗಗಳ ನಾಯಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಇಳಿಸಲು ಬಿಜೆಪಿ ಮತ್ತು ಜೆಡಿಎಸ್ ಯತ್ನಿಸುತ್ತಿವೆ. ಈ ಕಾರಣದಿಂದಲೇ ಪಾದಯಾತ್ರೆ ಹಮ್ಮಿಕೊಂಡಿವೆ. ಈ ದ್ವೇಷಪೂರಿತ ಹೋರಾಟವನ್ನು ನಿಲ್ಲಿಸದೇ ಇದ್ದರೆ, ರಾಜ್ಯದಾದ್ಯಂತ ಉಗ್ರ ಹೋರಾಟ ನಡೆಸುತ್ತೇವೆ’ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಎಂ.ಈರಣ್ಣ ಎಚ್ಚರಿಕೆ ನೀಡಿದರು.

ನಗರದಲ್ಲಿ ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹಿಂದುಳಿದ ವರ್ಗದ ವ್ಯಕ್ತಿ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ ಎಂಬುದನ್ನು ಇವರಿಗೆ ಸಹಿಸಲು ಆಗುತ್ತಿಲ್ಲ. ಹೀಗಾಗಿ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ವಾಲ್ಮೀಕಿ ನಿಗಮದ ಹಣ ದುರ್ಬಳಕೆ ಪ್ರಕರಣ ಮತ್ತು ಮುಡಾ ನಿವೇಶನ ಹಂಚಿಕೆ ಪ್ರಕರಣ ಗಳಲ್ಲಿ ನಡೆದಿರುವ ಅಕ್ರಮಗಳ ತನಿಖೆಗೆ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿದೆ. ಹೀಗಿದ್ದೂ ವಿರೋಧ ಪಕ್ಷಗಳು ಸಿದ್ದರಾಮಯ್ಯ ವಿರುದ್ಧ ಸಂಚು ನಡೆಸುತ್ತಿವೆ. ಇದನ್ನು ಧಿಕ್ಕರಿಸುತ್ತೇವೆ’ ಎಂದರು.

‘ನೆರೆ ಹಾವಳಿಯಿಂದ ರಾಜ್ಯದ ಹಲವು ಪ್ರದೇಶಗಳು ತತ್ತರಿಸಿವೆ. ಡೆಂಗಿ ಪ್ರಕರಣಗಳು ಹೆಚ್ಚಾಗಿವೆ. ವಿಧಾನಮಂಡಲ ಅಧಿವೇಶನದಲ್ಲಿ ಜನಕ್ಕೆ ಉಪಯೋಗವಾಗುವ ವಿಷಯಗಳನ್ನು ಬಿಟ್ಟು, ಎರಡೂ ಸದನಗಳಲ್ಲಿ ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಮತ್ತು ಪರಿಷತ್ ಸದಸ್ಯರು ಗದ್ದಲ ಎಬ್ಬಿಸಿದರು. ಅಭಿವೃದ್ಧಿಗೆ ಸಹಕಾರ ನೀಡುವ ಬದಲಿಗೆ ಹಾದಿ–ಬೀದಿ ಹೋರಾಟ ನಡೆಸುತ್ತಿದ್ದಾರೆ. ಇಂಥದ್ದನ್ನು ಬಿಟ್ಟು ಜನರಿಗೆ ಉಪಯೋಗವಾಗುವ ಕೆಲಸವನ್ನು ಮಾಡಬೇಕು’ ಎಂದು ಸಂಘದ ಕಾರ್ಯಾಧ್ಯಕ್ಷ ಬಸವರಾಜ ಲ. ಬಸಲಿಗುಂದಿ ಆಗ್ರಹಿಸಿದರು.

ಶಾ ಭೇಟಿಯಾದ ವಿಜಯೇಂದ್ರ



ನವದೆಹಲಿ: ಮೈಸೂರಿನವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆಗೆ ಬೆಂಬಲ ನೀಡುವುದಿಲ್ಲ ಎಂದು ಜೆಡಿಎಸ್ ಪ್ರಕಟಿಸಿದ ಬೆನ್ನಲ್ಲೇ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಬುಧವಾರ ಭೇಟಿ ಮಾಡಿ ಚರ್ಚಿಸಿದರು.

‘ಕಾಂಗ್ರೆಸ್ ಸರ್ಕಾರದ ವಿರುದ್ಧ ಜನಾಂದೋಲನ ರೂಪಿಸಲು ಪಕ್ಷ ಪಾದಯಾತ್ರೆ ಹಮ್ಮಿಕೊಂಡಿದೆ. ಈ ಬಗ್ಗೆ ಜೆಡಿಎಸ್ ನಾಯಕರೊಂದಿಗೆ ಸಮಾಲೋಚಿಸಿಯೇ ತೀರ್ಮಾನ ತೆಗೆದುಕೊಳ್ಳಲಾಗಿದೆ. ಆದರೆ, ಜೆಡಿಎಸ್ ನಾಯಕರು ಕೊನೆಯ ಕ್ಷಣದಲ್ಲಿ ನಿಲುವು ಬದಲಿಸಿದ್ದಾರೆ. ಇದರಿಂದ ನಾವೆಲ್ಲ ಮುಜುಗರ ಅನುಭವಿಸುವಂತಾಗಿದೆ. ಈ ಬಗ್ಗೆ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರೊಂದಿಗೆ ಸಮಾಲೋಚಿಸಿ ಪಾದಯಾತ್ರೆಗೆ ಸಹಕಾರ ನೀಡುವಂತೆ ತಿಳಿಸಬೇಕು’ ಎಂದು ವಿಜಯೇಂದ್ರ ಅವರು ಶಾ ಅವರಲ್ಲಿ ಮನವಿ ಮಾಡಿದರು.

‘ಕರ್ನಾಟಕದ ಭ್ರಷ್ಟ ಕಾಂಗ್ರೆಸ್ ಸರ್ಕಾರದ ಹಗರಣಗಳ ಕುರಿತು ವರಿಷ್ಠರಿಗೆ ವಿವರ ನೀಡಲಾಯಿತು. ಸಚಿವರು ಸಂಘಟನೆ ಬಲಪಡಿಸುವ ಕುರಿತು ಮಾರ್ಗದರ್ಶನ ನೀಡಿದರು. ಕಾಂಗ್ರೆಸ್ ಸರ್ಕಾರದ ವಿರುದ್ಧ ಪಕ್ಷ ನಡೆಸುತ್ತಿರುವ ಹೋರಾಟಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು’ ಎಂದು ವಿಜಯೇಂದ್ರ ತಿಳಿಸಿದ್ದಾರೆ.

ಮೇಕೆದಾಟು: ಕೇಂದ್ರ ಸರ್ಕಾರದ ಮಧ್ಯಸ್ಥಿಕೆಗೆ ಉಪಮುಖ್ಯಮಂತ್ರಿ ಶಿವಕುಮಾರ್ ಆಗ್ರಹ

ತಮಿಳುನಾಡಿನೊಂದಿಗೆ ಮಾತುಕತೆಗೆ ಒಲವು

ಪ್ರಜಾವಾಣಿ ವಾರ್ತೆ



ಡಿ.ಕೆ. ಶಿವಕುಮಾರ್ ಹಾಗೂ ನರೇಂದ್ರ ಮೋದಿ ಚರ್ಚಿಸಿದರು

ನವದೆಹಲಿ: ಮೇಕೆದಾಟು ಯೋಜನೆಯ ಅನುಷ್ಠಾನಕ್ಕೆ ಎದುರಾಗಿರುವ ತೊಡಕು ಬಗೆಹರಿಸಲು ತಮಿಳುನಾಡು ಸರ್ಕಾರದೊಂದಿಗೆ ಮಾತುಕತೆಗೆ ನಮ್ಮ ಸರ್ಕಾರ ಸಿದ್ಧವಿದೆ. ಈ ವಿಷಯವನ್ನು ಸೌಹಾರ್ದಯುತವಾಗಿ ಬಗೆಹರಿಸಲು ಸಂಧಾನ ಮಾತುಕತೆಯ ಮಧ್ಯಸ್ಥಿಕೆ ವಹಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಎಂದು ಉಪ ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರುವಾರ ಇಲ್ಲಿ ಭೇಟಿಯಾದ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಈ ವಿಷಯದ ಬಗ್ಗೆ ತಮಿಳು ನಾಡು ಸರ್ಕಾರದೊಂದಿಗೆ ಕರ್ನಾಟಕ ಸರ್ಕಾರ ಮಾತುಕತೆ ನಡೆಸಬೇಕೆಂದು ಪ್ರಧಾನಿ ಸಲಹೆ ನೀಡಿದ್ದಾರೆ’ ಎಂದರು.

‘ಗಿಫ್ಟ್ ಸಿಟಿ ಮಾದರಿಯಲ್ಲಿ ಬೆಂಗಳೂರನ್ನು ಪರಿಗಣಿಸಬೇಕು ಎಂದು ಮನವಿ ಮಾಡಲಾಗಿತ್ತು. ಇದು ಸಾಧ್ಯವಾಗದ ಕಾರಣಕ್ಕೆ ಸುರಂಗ ರಸ್ತೆ, ಸಿಗ್ನಲ್ ಮುಕ್ತ ರಸ್ತೆ, ಪ್ರಮುಖ ರಸ್ತೆಗಳು ಮತ್ತು ಮಳೆ ನೀರುಗಾಲುವೆಗಳ ಅಭಿವೃದ್ಧಿ ಹಾಗೂ ನೀರಾವರಿಗೆ ಹೆಚ್ಚಿನ ಅನುದಾನ ನೀಡುವಂತೆ ಮೋದಿ ಅವರಿಗೆ ಮನವಿ ಸಲ್ಲಿಸಲಾಗಿದೆ’ ಎಂದರು.

‘ಬೆಂಗಳೂರು ಅತಿ ಹೆಚ್ಚು ತೆರಿಗೆ ನೀಡುವ ನಗರ. ಈ ನಗರಕ್ಕೆ ಕೇಂದ್ರ ಬಜೆಟ್‌ನಲ್ಲಿ ನಯಾಪೈಸೆ ಅನುದಾನ ಸಿಕ್ಕಿಲ್ಲ. ಮಹಾರಾಷ್ಟ್ರದಂತೆ ನಮ್ಮನ್ನು ಪರಿಗಣಿಸಬೇಕು ಎಂದು ಮನವಿ ಮಾಡಲಾಗಿದೆ. ಮನಮೋಹನ್ ಸಿಂಗ್ ಅವರ ಕಾಲದಲ್ಲಿ ಜೆಎನ್ ನರ್ಮ್ ಯೋಜನೆ ಅಡಿ ಎಲೆಕ್ಟ್ರಾನಿಕ್ ಸಿಟಿ, ಹೆಬ್ಬಾಳ, ನೆಲಮಂಗಲ ಮೇಲ್ಸೇತುವೆ ನಿರ್ಮಾಣಕ್ಕೆ ಅನುದಾನ ನೀಡಲಾಗಿತ್ತು’ ಎಂದರು.

‘ದೇಶಕ್ಕೆ ಒಂದೇ ಗಿಫ್ಟ್ ಸಿಟಿ ಮಾಡಲು ಸಾಧ್ಯ. ಎರಡು ಪ್ರದೇಶಗಳನ್ನು ಮಾಡಲು ಸಾಧ್ಯವಿಲ್ಲ ಎಂದು ಪ್ರಧಾನಿ ತಿಳಿದರು. ಬೆಂಗಳೂರಿನಲ್ಲಿ ಕೈಗೆತ್ತಿಕೊಳ್ಳಲು ನಿರ್ಧರಿಸಿರುವ ಯೋಜನೆಗಳಿಗೂ ಕೇಂದ್ರ ಸರ್ಕಾರ ನೆರವಾಗಬೇಕು ಎಂದು ಕೇಳಲಾಗಿದೆ’ ಎಂದರು.

‘ಕಳೆದ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಅನುದಾನ ಘೋಷಣೆ ಮಾಡಲಾಗಿತ್ತು. ಈ ಬಾರಿಯ ಸಚಿವ ಸಂಪುಟ ಸಭೆಯಲ್ಲಿ ವಿಚಾರ ಪ್ರಸ್ತಾಪಿಸಿ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಪ್ರಧಾನಿ ಭರವಸೆ ನೀಡಿದರು’ ಎಂದರು.

ಬಳಿಕ ಶಿವಕುಮಾರ್ ಅವರು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ, ಜಲಶಕ್ತಿ ಖಾತೆಯ ರಾಜ್ಯ ಸಚಿವ ವಿ.ಸೋಮಣ್ಣ, ವಸತಿ ಹಾಗೂ ನಗರ ವ್ಯವಹಾರಗಳ ಸಚಿವ ಮನೋಹರ್‌ಲಾಲ್ ಖಟ್ಟರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಪ್ರಧಾನಿಗೆ ಡಿಸಿಎಂ ಅಹವಾಲು

- ಸುಮಾರು 77.6 ಕಿಮೀನಷ್ಟು ವಿವಿಧ ರಾಷ್ಟ್ರೀಯ ಹೆದ್ದಾರಿ ರಸ್ತೆ ಜಾಲವು ಬೆಂಗಳೂರು ನಗರದಲ್ಲಿ ಹಾದುಹೋಗುತ್ತದೆ. ಹೊಸೂರು- ಬಳ್ಳಾರಿ ರಸ್ತೆ ಮತ್ತು ಕೆ.ಆರ್ ಪುರದಿಂದ ಮೈಸೂರು ರಸ್ತೆಯ ತನಕ ಸುರಂಗ ರಸ್ತೆ ಮತ್ತು ಎಲಿವೇಟೆಡ್ ಕಾರಿಡಾರ್ ನಿರ್ಮಾಣದಿಂದ ಸಂಚಾರ ದಟ್ಟಣೆ ತಪ್ಪಿಸಬಹುದು. ಈ ಯೋಜನೆಗಳಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಡಿಯಲ್ಲಿ ಕೇಂದ್ರ ಸರ್ಕಾರ ಸಹಕಾರ ನೀಡಬೇಕು.
- ಮೆಟ್ರೊ 3ನೇ ಹಂತಕ್ಕೆ ಕೇಂದ್ರ ಸರ್ಕಾರ ಕೂಡಲೇ ಒಪ್ಪಿಗೆ ನೀಡಬೇಕು.
- ಮೆಟ್ರೊ ಮಾರ್ಗ ಹಾಗೂ ಮೇಲ್ಸೇತುವೆ ಇರುವಂತಹ ಡಬಲ್ ಡೆಕ್ಕರ್ ಯೋಜನೆಗೆ ಕೇಂದ್ರ ಸರ್ಕಾರ ಅನುಮತಿ ನಿಡಬೇಕು.
- ಬೆಂಗಳೂರಿನಲ್ಲಿ 73.01 ಕಿಮೀ ಉದ್ದದ ಫೆರಿಫೆರಲ್ ಹೊರವರ್ತುಲ ರಸ್ತೆ ನಿರ್ಮಾಣವನ್ನು ಪಿಪಿಪಿ ಮಾದರಿಯಲ್ಲಿ ಮಾಡಲು ಸರ್ಕಾರ ಮುಂದಾಗಿದೆ. ಇದಕ್ಕೆ ಅಂದಾಜು ₹27 ಸಾವಿರ ಕೋಟಿ ಖರ್ಚಾಗಬಹುದು. ಇದರಲ್ಲಿ ಸುಮಾರು ₹21 ಸಾವಿರ ಕೋಟಿ ಹಣ ಭೂಸ್ವಾಧೀನಕ್ಕೆ, ₹6 ಸಾವಿರ ಕೋಟಿ ನಿರ್ಮಾಣ ವೆಚ್ಚಕ್ಕೆ ಖರ್ಚು ಆಗಲಿದೆ. ಇದಕ್ಕೆ ಕೇಂದ್ರ ನೆರವು ನೀಡಬೇಕು.
- ಬೆಂಗಳೂರು ಹಾಗೂ ಸುತ್ತಲಿನ ನೀರಿನ ಮೂಲಗಳ ಅಭಿವೃದ್ಧಿಗೆ 15 ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ₹6 ಸಾವಿರ ಕೋಟಿ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡಬೇಕು.
- ಕರ್ನಾಟಕಕ್ಕೆ 173 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿ ‘ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ–2’ 2013ಲ್ಲಿ ತೀರ್ಪು. ತೀರ್ಪನ್ನು ಗೆಜೆಟ್‌ನಲ್ಲಿ ಪ್ರಕಟಿಸಬೇಕು.
- ಮಹದಾಯಿ ಯೋಜನೆಗೆ ಕೇಂದ್ರ ಜಲ ಆಯೋಗ ಒಪ್ಪಿಗೆ ಸೂಚಿಸಿದೆ. ಈ ಯೋಜನೆಗೆ ಪರಿಸರ ಇಲಾಖೆಯ ಅನುಮತಿ ಕೊಡಿಸಬೇಕು.
- ಪ್ರಸ್ತಾವಿತ ಗೋದಾವರಿ- ಕಾವೇರಿ ನದಿ ಜೋಡಣೆ ಯೋಜನೆಯಲ್ಲಿ ಕರ್ನಾಟಕಕ್ಕೆ ನ್ಯಾಯಯುತವಾಗಿ ನೀರು ಹಂಚಿಕೆಯಾಗಬೇಕು. ನದಿ ಜೋಡಣೆಯಿಂದ ಲಭ್ಯವಾಗುವ 147 ಟಿಎಂಸಿ ನೀರಿನಲ್ಲಿ ಕರ್ನಾಟಕಕ್ಕೆ 15.89 ಟಿಎಂಸಿ ನೀರು ಹಂಚಿಕೆ ಮಾಡಲಾಗಿದೆ. ಈ ಅನ್ಯಾಯ ಸರಿಪಡಿಸಬೇಕು.

ಬಿಜೆಪಿ 20 ಗುಂಪು ಎಂ.ಬಿ.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಯಲ್ಲಿ ವಿಜಯೇಂದ್ರ, ಅಶ್ವತ್ಥನಾರಾಯಣ, ಅಶೋಕ, ರಮೇಶ ಜಾರಕಿಹೊಳಿ, ಯತ್ನಾಳ ಹೀಗೆ ಇಪ್ಪತ್ತು ಗುಂಪುಗಳಿವೆ. ಪಾದಯಾತ್ರೆ ಬಗ್ಗೆ ಬಿಜೆಪಿ ಮತ್ತು ಜೆಡಿಎಸ್ ಮಧ್ಯೆಯೇ ಒಮ್ಮತವಿಲ್ಲ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಟೀಕಿಸಿದರು.

ಬುಧವಾರ ಅವರು ಸುದ್ದಿಗಾರರ ಜತೆ ಮಾತನಾಡಿ, ಬಿಜೆಪಿಯವರು ಪಾದಯಾತ್ರೆ ಮಾಡಿಕೊಳ್ಳಲಿ. ಅವರ ಸರ್ಕಾರ ಇದ್ದಾಗ ನಡೆದ ಶೇ 40ರಷ್ಟು ಕಮಿಷನ್, ಕೋವಿಡ್ ಹಗರಣವೂ ಸೇರಿ ಎಲ್ಲ ಹಗರಣಗಳ ಬಗ್ಗೆ ಸತ್ಯ ಸಂಗತಿಯನ್ನು ಜನರಿಗೆ ತಿಳಿಸಲಿ ಎಂದರು. ಬಿಜೆಪಿ ಸರ್ಕಾರವಿದ್ದಾಗ ಸಾಲು- ಸಾಲು ಹಗರಣಗಳು ನಡೆದಿದ್ದವು. ವಾಲ್ಮೀಕಿ ನಿಗಮದ ಹಗರಣದ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ. ಮೈಸೂರು ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರ ಏನೂ ಇಲ್ಲ. ಈಗಾಗಲೇ ಅವರು ಆ ಕುರಿತು ಸ್ಪಷ್ಟೀಕರಣ ನೀಡಿದ್ದಾರೆ ಎಂದರು.



ಗಂಗಾ ಜಲ

ಶ್ರಾವಣ ಮಾಸದ ಅಂಗವಾಗಿ ಕಾವಾಡಿಗಳು ಬುಧವಾರ ಹರಿದ್ವಾರದಲ್ಲಿನ ಗಂಗಾ ನದಿಯಿಂದ ನೀರನ್ನು ಕೊಂಡೊಯ್ದರು – ಪಿಟಿಐ ಚಿತ್ರ

‘ಗೌಡರ ಕುಟುಂಬಕ್ಕೆ ವಿಷ ಇಟ್ಟವನ ಜತೆ ವೇದಿಕೆ ಹಂಚಿಕೊಳ್ಳಲು ಸಾಧ್ಯವೇ?’

ಒಂದನೇ ಪುಟದಿಂದ...

ಪಾದಯಾತ್ರೆಯಲ್ಲಿ ಭಾಗಿಯಾಗಬಾರದು ಎಂದು ಜಿ.ಟಿ.ದೇವೇಗೌಡರ ಅಧ್ಯಕ್ಷತೆಯ ಪಕ್ಷದ ಪ್ರಮುಖರ ಸಮಿತಿ ಬೆಂಗಳೂರಿನಲ್ಲಿ ಮಂಗಳವಾರ ತೀರ್ಮಾನ ಮಾಡಿದೆ. ಬಿಜೆಪಿ ನಾಯಕರು ಪಾದಯಾತ್ರೆ ಮಾಡಬೇಕು ಎಂದು ನಿರ್ಧಾರ ಕೈಗೊಂಡು ಸಿದ್ಧತೆ ಮಾಡುತ್ತಿದ್ದಾರೆ. ಆದರೆ, ಪಾದಯಾತ್ರೆಗೆ ಇದು ಸೂಕ್ತ ಸಂದರ್ಭವಲ್ಲ ಎಂಬ ಕಾರಣಕ್ಕೆ ನಾವು ಹಿಂದೆ ಸರಿದಿದ್ದೇವೆ ಎಂದರು.

‘ಇಡೀ ರಾಜ್ಯ ಮಳೆ, ನೆರೆ, ಭೂಕುಸಿತ, ಬೆಳೆನಾಶದಿಂದ ತತ್ತರಿಸಿದೆ. ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಪಾದಯಾತ್ರೆ ಮಾಡಿದರೆ ಜನರಿಂದ ಟೀಕೆಗಳು ಬರುವ ಸಾಧ್ಯತೆ ಇದೆ. ಇದೇ ಕಾರಣದಿಂದ ನಾವು ಪಾದಯಾತ್ರೆಯಿಂದ ಹಿಂದೆ ಸರಿದಿದ್ದೇವೆ’ ಎಂದು ಸ್ಪಷ್ಟಪಡಿಸಿದರು.

‘ಈ ಪಾದಯಾತ್ರೆಯಿಂದ ರಾಜ್ಯದ ಜನರಿಗೆ ಆಗುವ ಲಾಭವಾದರೂ ಏನು? ಇಲ್ಲಿ ಕಾನೂನು ಹೋರಾಟ ಮಾಡುವುದು ಮುಖ್ಯ. ಕೇವಲ ರಾಜಕೀಯವೇ ನಮಗೆ ಮುಖ್ಯವಲ್ಲ. ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದಾಗ ಯಾಕೆ ಬೆಂಬಲ ಕೊಡಬೇಕು? ಬೆಂಗಳೂರಿನಿಂದ ಮೈಸೂರಿನವರೆಗೂ ನಮ್ಮ ಪಕ್ಷಕ್ಕೆ ಶಕ್ತಿ ಇದೆ. ನಮ್ಮನ್ನೇ ಪರಿಗಣಿಸದಿದ್ದರೆ ಹೇಗೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಬಿಡದಿಯಿಂದ ಮೈಸೂರಿನವರೆಗೆ ಕೃಷಿ ಚಟುವಟಿಕೆಗಳು ಆರಂಭವಾಗಿವೆ. ಮಂಡ್ಯ, ಮೈಸೂರಿನಲ್ಲಿ ಭತ್ತದ ನಾಟಿ ಶುರುವಾಗಿದೆ. ಬಿಜೆಪಿ ನಾಯಕರು ಪೂರ್ವ ಸಿದ್ಧತೆ ಮಾಡಿಕೊಂಡಿದ್ದರು. ಎಲ್ಲವನ್ನೂ ಅಂತಿಮಗೊಳಿಸಿದ ನಂತರ ನಮಗೂ ಮಾಹಿತಿ ಇರಲಿ ಎಂದು ಸಭೆಗೆ ಕರೆದು ಹೇಳಿದ್ದಾರಷ್ಟೇ. ಇದು ಸರಿಯಲ್ಲ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

‘ಪಾದಯಾತ್ರೆ: ಶೀಘ್ರ ನಿರ್ಧಾರ’

ಮಂಗಳೂರು: 'ಮುಡಾ ಹಗರಣದ ಸಮಗ್ರ ತನಿಖೆಗೆ ಆಗ್ರಹಿಸಿ ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ನಡೆಸುವ ತೀರ್ಮಾನ ಕೈಗೊಂಡ ಸಂದರ್ಭದಲ್ಲಿ ವಯನಾಡ್‌ನಲ್ಲಿ ಭೂಕುಸಿತದಂತಹ ಘಟನೆಗಳು ನಡೆದಿರಲಿಲ್ಲ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಜೊತೆ ಚರ್ಚಿಸಿ ಪಾದಯಾತ್ರೆ ಬಗ್ಗೆ ಶೀಘ್ರವೇ ನಿರ್ಧಾರ ಪ್ರಕಟಿಸುತ್ತೇವೆ' ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ತಿಳಿಸಿದರು.

'ಪಾದಯಾತ್ರೆಗೆ ನೈತಿಕ ಬೆಂಬಲವನ್ನೂ ನೀಡುವುದಿಲ್ಲ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ ನೀಡಿರುವ ಕುರಿತು ಇಲ್ಲಿ ಪ್ರತಿಕ್ರಿಯಿಸಿದ ಅವರು, 'ಜೆಡಿಎಸ್ ನಮ್ಮ ಮೈತ್ರಿ ಪಕ್ಷ. ಅವರ ಜೊತೆಯೂ ಮಾತನಾಡುತ್ತೇವೆ. ಈ ಬಗ್ಗೆ ನಮ್ಮ ಮನೆ ಒಳಗಡೆ ಚರ್ಚಿಸಿ ತೀರ್ಮಾನಕ್ಕೆ ಬರುತ್ತೇವೆ' ಎಂದರು.

ಸಂಕ್ಷಿಪ್ತ ಸುದ್ದಿ

ವೀರಶೈವ ಮಹಾಸಭಾ: ಆ.25ಕ್ಕೆ ಚುನಾವಣೆ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭಾದ ಕರ್ನಾಟಕ, ಕೇರಳ ಮತ್ತು ಆಂಧ್ರಪ್ರದೇಶ ರಾಜ್ಯ ಘಟಕಗಳಿಗೆ ಆಗಸ್ಟ್ 25ರಂದು ಚುನಾವಣೆ ನಡೆಯಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ವಿವರ ನೀಡಿದ ಚುನಾವಣಾಧಿಕಾರಿ ಎಂ.ಬಿ. ದ್ಯಾಬೇರಿ, ‘ಆ.1ರಿಂದ ಆ.7ರ ವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶವಿದೆ. ಆ.8ರಂದು ನಾಮಪತ್ರ ಪರಿಶೀಲನೆ, ಆ.11 ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನ ಆಗಿದೆ. ಆ.25ರಂದು ಬೆಳಿಗ್ಗೆ 8ರಿಂದ ಸಂಜೆ 5ರವರೆಗೆ ಮತದಾನ ನಡೆಯಲಿದೆ. ಅಂದೇ ಸಂಜೆ ಮತ ಎಣಿಕೆ ನಡೆಯಲಿದೆ’ ಎಂದು ತಿಳಿಸಿದರು.

ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಸಮಿತಿ ಸದಸ್ಯರು ಸೇರಿ ಒಟ್ಟು 41 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಜೊತೆಗೆ ಮಹಾಸಭಾದ ಕೇಂದ್ರ ಕಾರ್ಯಕಾರಿ ಸ್ಥಾನಗಳಿಗೂ ಚುನಾವಣೆ ನಡೆಯಲಿದೆ. ಕೇಂದ್ರ ಕಾರ್ಯಕಾರಿ ಸಮಿತಿಗೆ ಕರ್ನಾಟಕದ 30, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಮಹಾರಾಷ್ಟ್ರ ಗಳಿಂದ ತಲಾ ಒಬ್ಬ ಮಹಿಳೆ ಸೇರಿ ತಲಾ 5 ಸದಸ್ಯರ ಆಯ್ಕೆ ನಡೆಯಲಿದೆ ಎಂದರು.

ಪಿಜಿ ದಂತ ವೈದ್ಯ: 2ನೇ ಸುತ್ತಿನ ಸೀಟು ಹಂಚಿಕೆ

ಬೆಂಗಳೂರು: ಸ್ನಾತಕೋತ್ತರ ದಂತ ವೈದ್ಯಕೀಯ (ಎಂಡಿಎಸ್) ಕೋರ್ಸ್‌ನ ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಆ.3ರಿಂದ ಆರಂಭವಾಗಲಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಮೊದಲನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಶುಲ್ಕ ಪಾವತಿಸಿರುವವರು, ಯಾವುದೇ ಸೀಟು ಹಂಚಿಕೆಯಾಗದೇ ಇರುವವರು ಆ.3ರಿಂದ ಕೆಇಎ ಕಚೇರಿಯಲ್ಲಿ ತಮ್ಮ ಎಲ್ಲ ಮೂಲ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ. ದಾಖಲೆ ಸಲ್ಲಿಸದಿದ್ದರೆ ಅಂತಹವರಿಗೆ ಸೀಟು ಹಂಚಿಕೆ ಮಾಡಲಾಗುವುದಿಲ್ಲ. ಎರಡನೇ ಸುತ್ತಿನ ಸೀಟು ಹಂಚಿಕೆಗೆ ಆ.3ರಂದು ಸೀಟ್ ಮ್ಯಾಟ್ರಿಕ್ಸ್ ಪ್ರಕಟಿಸಲಾಗುತ್ತದೆ. ಆ.4ರಿಂದ 6ರವರೆಗೆ ಆಯ್ಕೆಗಳನ್ನು ದಾಖಲಿಸಲು ಸಮಯ ನೀಡಲಾಗುತ್ತದೆ. ಆ.7ರಂದು ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ಹಾಗೂ ಆ.8ರಂದು ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ. ಕಾಲೇಜಿಗೆ ವರದಿ ಮಾಡಿಕೊಳ್ಳಲು ಆ.13 ಕೊನೆ ದಿನ ಎಂದು ಕೆಇಎ ಹೇಳಿದೆ.

ಮುಸ್ಲಿಮರೊಂದಿಗೆ ವ್ಯಾಪಾರ ಬಹಿಷ್ಕಾರಕ್ಕೆ ಕರೆ ಎಫ್‌ಐಆರ್ ದಾಖಲಿಸಲು ಕೋರ್ಟ್ ಆದೇಶ

ಪಾಟಣ್ (ಪಿಟಿಐ): ಕಳೆದ ವರ್ಷ ನಡೆದ ಕೋಮು ಸಂಘರ್ಷದ ನಂತರ ಗ್ರಾಮದ ಮುಸ್ಲಿಮರೊಂದಿಗೆ ವ್ಯಾಪಾರ ಬಹಿಷ್ಕಾರಕ್ಕೆ ಕರೆ ನೀಡಿದ್ದ ಗುಂಪಿನ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಗುಜರಾತ್‌ನ ಪಾಟಣ್ ಜಿಲ್ಲಾ ನ್ಯಾಯಾಲಯವು ಆದೇಶಿಸಿದೆ.

ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಎಚ್. ಪಿ ಜೋಶಿ ಅವರು, ‘ಅರ್ಜಿದಾರರಾದ ಮಕ್ಬೂಲ್ ಹುಸೇನ್ ಶೇಖ್ ಅವರ ದೂರಿನ ಆಧಾರದಲ್ಲಿ ಪ್ರಕರಣ ದಾಖಲಿಸಿ ನಿಗದಿತ ಸಮಯದ ಒಳಗಾಗಿ ತನಿಖೆ ಪೂರ್ಣಗೊಳಿಸಿ’ ಎಂದು ಬಲಿಸನಾ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್‌ಗೆ ಸೂಚಿಸಿದ್ದಾರೆ.

‘2023ರ ಜುಲೈ 16ರಂದು ನಡೆದ ಕೋಮು ಸಂಘರ್ಷವನ್ನೇ ಕೆಲವರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಮುಸ್ಲಿಮರೊಂದಿಗೆ ವ್ಯಾಪಾರ ವಹಿವಾಟು ನಡೆಸದಂತೆ ಮತ್ತು ಅಂಗಡಿಗಳ ಬಾಡಿಗೆ ಒಪ್ಪಂದವನ್ನು ರದ್ದು ಮಾಡಿಕೊಳ್ಳುವಂತೆ ಜನರಿಗೆ ಕರೆ ನೀಡುತ್ತಿದ್ದಾರೆ’ ಎಂದು ಆರೋಪಿಸಿ ಅರ್ಜಿದಾರರು ಕೋರ್ಟ್ ಮೆಟ್ಟಿಲೇರಿದ್ದರು.

ಇದಕ್ಕೂ ಮುನ್ನ ಪೊಲೀಸರ ಬಳಿ ದೂರು ನೀಡಿ ಅಲ್ಲಿ ಯಾವುದೇ ಕ್ರಮ ಕೈಗೊಳ್ಳದ ಕಾರಣ ನ್ಯಾಯಾಲಯದ ಮೆಟ್ಟಿಲೇರಿದ್ದೇನೆ ಎಂದೂ ಹೇಳಿದ್ದರು.

‘ಒಳ್ಳೆಯ ಪ್ರದರ್ಶನ ನೀಡಿದಲ್ಲಿ ರಾಷ್ಟ್ರ ರಾಜಕಾರಣದಲ್ಲಿ ಬದಲಾವಣೆಯ ಗಾಳಿ’

ಅತಿ ಆತ್ಮವಿಶ್ವಾಸ ಬೇಡ: ಸೋನಿಯಾ

ಪ್ರಜಾವಾಣಿ ವಾರ್ತೆ



ಸೋನಿಯಾ ಗಾಂಧಿ

ನವದೆಹಲಿ: ನಾಲ್ಕು ರಾಜ್ಯಗಳ ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದು, ಜನರ ಒಲವು ಕಾಂಗ್ರೆಸ್ ಪಕ್ಷದ ಪರವಾಗಿದೆ. ಹಾಗಂತ ಅತಿಯಾದ ಆತ್ಮವಿಶ್ವಾಸ ಮತ್ತು ಅಲಕ್ಷ್ಯ ಒಳ್ಳೆಯದಲ್ಲ ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ (ಸಿಪಿಪಿ) ಅಧ್ಯಕ್ಷೆ ಸೋನಿಯಾ ಗಾಂಧಿ ಎಚ್ಚರಿಸಿದ್ದಾರೆ.

ಸಂವಿಧಾನ ಸದನದ ಸೆಂಟ್ರಲ್ ಹಾಲ್‌ನಲ್ಲಿ ನಡೆದ ಸಿಪಿಪಿ ಸಭೆಯಲ್ಲಿ ಮಾತನಾಡಿದ ಅವರು, ‘ಪಕ್ಷದ ನಾಯಕರ ಸದ್ವರ್ತನೆಯೇ ಲೋಕಸಭಾ ಚುನಾವಣೆಯಲ್ಲಿ ಉತ್ತಮ ಫಲಿತಾಂಶಕ್ಕೆ ಕಾರಣ. ಹಾಗಂತ ಅತಿಯಾದ ಆತ್ಮವಿಶ್ವಾಸ, ಆಲಸ್ಯ ಬೇಡ; ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣ. ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಒಳ್ಳೆಯ ಪ್ರದರ್ಶನ ನೀಡಿದಲ್ಲಿ ರಾಷ್ಟ್ರ ರಾಜಕಾರಣದಲ್ಲಿ ಬದಲಾವಣೆಯ ಗಾಳಿ ಬೀಸಲಿದೆ’ ಎಂದು ಹೇಳಿದರು.

ಹರಿಯಾಣ, ಮಹಾರಾಷ್ಟ್ರ, ಜಾರ್ಖಂಡ್ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ಈ ವರ್ಷ ವಿಧಾನಸಭೆ ಚುನಾವಣೆ ನಡೆಯಲಿದೆ.

‘ಲೋಕಸಭಾ ಚುನಾವಣೆ ವೇಳೆ ಅತಿಯಾದ ನಿರೀಕ್ಷೆ ಹೊಂದಿದ್ದ ಮೋದಿ ಸರ್ಕಾರವು ದೊಡ್ಡ ಪಾಠ ಕಲಿತಿರುವುದನ್ನು ನೋಡಿದ್ದೇವೆ. ಆದರೂ ಸಮುದಾಯಗಳ ಮಧ್ಯೆ ಬಿರುಕು ಮೂಡಿಸುವ, ಭಯ ಮತ್ತು ದ್ವೇಷದ ವಾತಾವರಣ ಸೃಷ್ಟಿಸುವ ನೀತಿಯನ್ನು ಮುಂದುವರಿಸಿದೆ. ಉತ್ತರ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳು ಮಳಿಗೆಗಳ ಎದುರು ಮಾಲೀಕರ ಹೆಸರು ಪ್ರಕಟಿಸಲು ಸೂಚಿಸಿದ್ದೇ ಅದಕ್ಕೆ ಪುರಾವೆ. ಅದೃಷ್ಟವಶಾತ್ ಸುಪ್ರೀಂ ಕೋರ್ಟ್ ಸರಿಯಾದ ಸಮಯದಲ್ಲಿ ಮಧ್ಯಪ್ರವೇಶ ಮಾಡಿತು’ ಎಂದು ಹೇಳಿದರು.

ಸರ್ಕಾರಿ ನೌಕರರು ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗಿಯಾಗಲು ಇದ್ದ ನಿರ್ಬಂಧವನ್ನು ತೆರವುಗೊಳಿಸಿದ ಕೇಂದ್ರ ಸರ್ಕಾರದ ನಿರ್ಧಾರವನ್ನು ಉಲ್ಲೇಖಿಸಿದ ಅವರು, ‘ಅಧಿಕಾರಿಗಳು ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ನಿಯಮಗಳು ಹೇಗೆ ದಿಢೀರ್ ಬದಲಾಗುತ್ತವೆ ನೋಡಿ. ಆರ್‌ಎಸ್‌ಎಸ್ ತಾನೊಂದು ಸಾಂಸ್ಕೃತಿಕ ಸಂಘಟನೆ ಎಂದು ಕರೆದುಕೊಳ್ಳುತ್ತದೆ. ಆದರೆ, ಅದು ಬಿಜೆಪಿಯ ರಾಜಕೀಯ ಮತ್ತು ಸೈದ್ಧಾಂತಿಕ ನೆಲೆ ಎಂದು ಇಡೀ ಜಗತ್ತಿಗೆ ಗೊತ್ತು’ ಎಂದರು.

‘ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರ ಚಟುವಟಿಕೆಗಳು ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಸೋನಿಯಾ ಗಾಂಧಿ, ‘ಇತ್ತೀಚೆಗೆ ಜಮ್ಮುವಿನಲ್ಲಿ ಕನಿಷ್ಠ 11 ಉಗ್ರರ ದಾಳಿಗಳು ನಡೆದಿವೆ. ಕಾಶ್ಮೀರದಲ್ಲೂ ಇಂಥ ಘಟನೆ ಮರುಕಳಿಸುತ್ತಿವೆ. ಅನೇಕ ಭದ್ರತಾ ಸಿಬ್ಬಂದಿ ಮತ್ತು ನಾಗರಿಕರು ಪ್ರಾಣ ಕಳೆದುಕೊಂಡಿದ್ದಾರೆ. ‘ಜಮ್ಮು ಮತ್ತು ಕಾಶ್ಮೀರದಲ್ಲಿ ಎಲ್ಲವೂ ಸುಸ್ಥಿತಿಯಲ್ಲಿದೆ’ ಎಂಬ ಮೋದಿ ಸರ್ಕಾರದ ಹೇಳಿಕೆಯನ್ನು ಈ ಘಟನೆಗಳು ಅಣಕಿಸುವಂತಿವೆ’ ಎಂದು ವಾಗ್ದಾಳಿ ನಡೆಸಿದರು.

‘ಮಣಿಪುರದ ಪರಿಸ್ಥಿತಿ ಸುಧಾರಿಸಿದಂತೆ ಕಾಣುತ್ತಿಲ್ಲ. ಪ್ರಧಾನಿ ಮೋದಿ ಅವರು ಇಡೀ ಜಗತ್ತು ಸುತ್ತುತ್ತಾರೆ; ಆದರೆ ಮಣಿಪುರಕ್ಕೆ ಹೋಗಲು, ಪರಿಸ್ಥಿತಿಯನ್ನು ಸುಧಾರಿಸಲು ಕ್ರಮಕೈಗೊಳ್ಳಲು ಹಿಂದೇಟು ಹಾಕುತ್ತಾರೆ’ ಎಂದು ಲೇವಡಿ ಮಾಡಿದರು.

‘ಜನಗಣತಿ ನಡೆಸುವ ಉದ್ದೇಶವೇ ಸರ್ಕಾರಕ್ಕೆ ಇದ್ದಂತಿಲ್ಲ. ಜನಗಣತಿ ನಡೆಯದಿದ್ದರೆ ಜನಸಂಖ್ಯೆಯ ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಸಂಖ್ಯೆಯ ಬಗ್ಗೆ ನಿಖರ ಮಾಹಿತಿ ಲಭ್ಯವಾಗುವುದಿಲ್ಲ. ಇದರರ್ಥ ಕನಿಷ್ಠ 12 ಕೋಟಿ ನಾಗರಿಕರು ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯ ಲಾಭದಿಂದ ವಂಚಿತರಾಗುತ್ತಿದ್ದಾರೆ. ಕೇಂದ್ರ ಸರ್ಕಾರ ಮಂಡಿಸಿದ ಬಜೆಟ್‌ನಲ್ಲಿಯೂ ರೈತರು, ಯುವಜನರ ಬೇಡಿಕೆಗಳನ್ನು ಕಡೆಗಣಿಸಲಾಗಿದೆ’ ಎಂದು ಟೀಕಿಸಿದರು.

ಮುಖ್ಯಾಂಶಗಳು

- ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರ ಚಟುವಟಿಕೆಗಳು ಹೆಚ್ಚುತ್ತಿರುವ ಬಗ್ಗೆ ಕಳವಳ
- ಜನಗಣತಿ ನಡೆಸುವ ಉದ್ದೇಶವೇ ಸರ್ಕಾರಕ್ಕೆ ಇದ್ದಂತಿಲ್ಲ – ಟೀಕೆ

ಡಿಕೆಶಿ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಪ್ರಕರಣ

ಸಿಬಿಐನಿಂದ ‘ಜೈಹಿಂದ್ ಟಿ.ವಿ’ ವಾಹಿನಿಯ ಎಂಡಿ ವಿಚಾರಣೆ

ತಿರುವನಂತಪುರ (ಪಿಟಿಐ): ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಬೆಂಗಳೂರಿನಲ್ಲಿ ಕಾಂಗ್ರೆಸ್ ನಡೆಸುತ್ತಿರುವ ‘ಜೈಹಿಂದ್ ಟಿ.ವಿ’ ವಾಹಿನಿಯ ವ್ಯವಸ್ಥಾಪಕ ನಿರ್ದೇಶಕರನ್ನು (ಎಂಡಿ) ಸಿಬಿಐ ವಿಚಾರಣೆಗೆ ಕರೆಸಿ, ಹೇಳಿಕೆಯನ್ನು ದಾಖಲಿಸಿಕೊಂಡಿದೆ.

ಕೇರಳದ ಈ ಸುದ್ದಿ ವಾಹಿನಿಯ ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್. ಶಿಜು ಅವರನ್ನು ಸಂಪರ್ಕಿಸಿದಾಗ, ತನಿಖಾ ಸಂಸ್ಥೆಯಿಂದ ಸಮನ್ಸ್ ಬಂದಿದ್ದರಿಂದ ಮಂಗಳವಾರ ಸಿಬಿಐ ಅಧಿಕಾರಿಗಳ ಮುಂದೆ ವಿಚಾರಣೆಗೆ ಹಾಜರಾಗಿದ್ದೆ ಎಂದು ಹೇಳಿದರು.

ಡಿ.ಕೆ. ಶಿವಕುಮಾರ್ ಅವರು ‘ಜೈಹಿಂದ್ ಟಿವಿ’ ವಾಹಿನಿಯಲ್ಲಿ ಮಾಡಿರುವ ಹೂಡಿಕೆಯ ವಿವರಗಳನ್ನು ನೀಡುವಂತೆ ಸಿಬಿಐ ಜುಲೈ 19ರಂದು ಚಾನೆಲ್‌ಗೆ ಹೊಸದಾಗಿ ನೋಟಿಸ್ ನೀಡಿತ್ತು. ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಸಿಬಿಐನ ಎಫ್‌ಐಆರ್ ಅನ್ನು ಪ್ರಶ್ನಿಸಿ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದ ಕೆಲವು ದಿನಗಳ ನಂತರ ಖುದ್ದು ಹಾಜರಾಗಲು ಈ ನೋಟಿಸ್ ನೀಡಲಾಗಿದೆ.

ಶಿಜು ಅವರನ್ನು ಸಿಬಿಐ ಕಚೇರಿಯಲ್ಲಿ ಒಂದು ತಾಸು ಇರಿಸಿಕೊಳ್ಳಲಾಗಿತ್ತು. ಅಧಿಕಾರಿಗಳು ಕೇಳಿದ ಎಲ್ಲ ದಾಖಲೆಗಳನ್ನು ಅವರು ಒದಗಿಸಿದರು ಎಂದು ಮೂಲಗಳು ಹೇಳಿವೆ.

‘ಹೌದು. ಡಿ.ಕೆ. ಶಿವಕುಮಾರ್ ಅವರು ನಮ್ಮ ಚಾನೆಲ್‌ನಲ್ಲಿ ಹೂಡಿಕೆ ಮಾಡಿದ್ದಾರೆ. ಯಾವುದೇ ಅಕ್ರಮ ನಡೆದಿಲ್ಲ. ಎಲ್ಲವೂ ಕಾನೂನುಬದ್ಧವಾಗಿಯೇ ಇದೆ. ಒಪ್ಪಂದದ ಎಲ್ಲ ದಾಖಲೆಗಳು ನಮ್ಮ ಬಳಿ ಇವೆ. ಸಿಬಿಐ ಅಧಿಕಾರಿಗಳು ಕೇಳಿದ್ದ ಎಲ್ಲ ದಾಖಲೆಗಳನ್ನು ಒದಗಿಸಿದ್ದೇನೆ. ಅಧಿಕಾರಿಗಳ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿದ್ದೇನೆ’ ಎಂದು ಕೇರಳದಲ್ಲಿ ಕಾಂಗ್ರೆಸ್ ನಾಯಕರೂ ಆಗಿರುವ ಶಿಜು ‘ಪಿಟಿಐ’ಗೆ ತಿಳಿಸಿದರು.

‘ಶಿವಕುಮಾರ್ ಅವರ ಕುಟುಂಬದ ಸದಸ್ಯರ ಹೂಡಿಕೆಯ ಬಗ್ಗೆ ಅಧಿಕಾರಿಗಳು ಸ್ಪಷ್ಟೀಕರಣ ಕೇಳಿದರು. ಡಿ.ಕೆ. ಶಿವಕುಮಾರ್ ಅವರ ಪತ್ನಿ ಅಥವಾ ಮಕ್ಕಳು ಚಾನೆಲ್‌ನಲ್ಲಿ ಯಾವುದೇ ಹೂಡಿಕೆ ಮಾಡಿಲ್ಲ. ಇದನ್ನು ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದೇನೆ. ಮುಚ್ಚಿಡಲು ಏನೂ ಇಲ್ಲ’ ಎಂದು ಅವರು ಹೇಳಿದರು.

ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ 2023ರ ಸೆಕ್ಷನ್ 94 ಮತ್ತು 179ರ ಅಡಿಯಲ್ಲಿ ಹೊರಡಿಸಲಾದ ಜುಲೈ 19ರ ನೋಟಿಸ್‌ನಲ್ಲಿ, ಡಿ.ಕೆ. ಶಿವಕುಮಾರ್ ಮತ್ತು ಅವರ ಪತ್ನಿ ಉಷಾ ಶಿವಕುಮಾರ್ ಅವರು ಜೈಹಿಂದ್ ಟಿವಿ ಚಾನೆಲ್‌ನಲ್ಲಿ ಮಾಡಿರುವ ಹೂಡಿಕೆಗಳು, ಅವರಿಗೆ ಪಾವತಿಸಿರುವ ಲಾಭಾಂಶಗಳು, ಷೇರು ವಹಿವಾಟಿನ ವಿವರಗಳನ್ನು ಒದಗಿಸುವಂತೆ ಚಾನೆಲ್‌ನ ವ್ಯವಸ್ಥಾಪಕ ನಿರ್ದೇಶಕರಿಗೆ ಕೇಂದ್ರೀಯ ತನಿಖಾ ಸಂಸ್ಥೆ ಕೇಳಿದೆ.

ಯುಪಿಎಸ್‌ಸಿ ಅಧ್ಯಕ್ಷರಾಗಿ ಪ್ರೀತಿ ಸೂದನ್ ನೇಮಕ



ಪ್ರೀತಿ ಸೂದನ್

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಆರೋಗ್ಯ ಸಚಿವಾಲಯದ ಮಾಜಿ ಕಾರ್ಯದರ್ಶಿ ಪ್ರೀತಿ ಸೂದನ್ ಅವರನ್ನು ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಅಧ್ಯಕ್ಷೆಯನ್ನಾಗಿ ನೇಮಕ ಮಾಡಲಾಗಿದೆ. ಸದ್ಯ ಯುಪಿಎಸ್‌ಸಿ ಸದಸ್ಯೆಯಾಗಿರುವ ಪ್ರೀತಿ, ಗುರುವಾರ ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಆಗಸ್ಟ್ ಒಂದರಿಂದ, ಮುಂದಿನ ಆದೇಶದವರೆಗೆ ಅಥವಾ 2025ರ ಏಪ್ರಿಲ್ 29ವರೆಗೆ ಪ್ರೀತಿ ಅವರು ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸಲಿದ್ದಾರೆ.

ಆಂಧ್ರ ಪ್ರದೇಶ ಕೇಡರ್‌ನ 1983ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಪ್ರೀತಿ, ಕೇಂದ್ರ ಆರೋಗ್ಯ ಕಾರ್ಯದರ್ಶಿ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ.

ಯುಪಿಎಸ್‌ಸಿ ಅಧ್ಯಕ್ಷರಾಗಿದ್ದ ಮನೋಜ್ ಸೋನಿ ಅವರು ಜುಲೈ 4ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರಿಂದ ಆ ಸ್ಥಾನ ತೆರವಾಗಿತ್ತು.

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ

KUIDFC

ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ, ಬಿಎಂಟಿಸಿ ಡಿಪೋ ಹತ್ತಿರ, ಬೆಂಗಳೂರು-560 038. ದೂರವಾಣಿ: 91-80-25196100, 25196124 ಫ್ಯಾಕ್ಸ್: 080-25196110

ಅಂತರ್ಜಾಲ ವಿಳಾಸ: www.kuidfc.com ಇ-ಮೇಲ್ ವಿಳಾಸ: info@kuidfc.com

ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲ್ಯೂಎಮ್/24/ಹು-ಧಾ/2024-25/06 ದಿನಾಂಕ: 29.07.2024

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಸಂಸ್ಥೆಯು N.G.T ಪರಿಹಾರ ನಿಧಿ ಹಾಗೂ ಸ್ವಚ್ಛ ಭಾರತ ಅಭಿಯಾನ ನಿಧಿಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ **ಈ ಕೆಳಕಂಡ ಯೋಜನೆಗಳಿಗೆ** ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆಪಿಪಿ ಪೋರ್ಟಲ್‌ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರ್ ಮೊತ್ತ (ಜಿಎಸ್‌ಟಿ ಒಳಗೊಂಡಂತೆ) ರೂ. ಕೋಟಿಗಳಲ್ಲಿ	ಮುಂಗಡ ಭದ್ರತಾ ಠೇವಣಿ ರೂ.ಲಕ್ಷಗಳಲ್ಲಿ
1	Construction of Upgradation of sewerage system for the Hubballi-Dharwad Municipal Corporation (HDMC) under NGT Environmental Compensation fund on DBOT Model. **Call-2**	**62.94**	**63.00**

1) ಟೆಂಡರ್ ಆಹ್ವಾನಿಸಿರುವ ದಿನಾಂಕ: **30.07.2024.** 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ & ಸಮಯ: **05.08.2024 ಸಮಯ: 11.30 ಪೂರ್ವಾಹ್ನ.** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **20.08.2024 ಸಮಯ: 5.30 ಅಪರಾಹ್ನ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **22.08.2024 ಸಮಯ: 11.30 ಪೂರ್ವಾಹ್ನ.** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **29.08.2024 ಸಮಯ: 11.30 ಪೂರ್ವಾಹ್ನ.**

ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official Website ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯ ವ್ಯವಸ್ಥಾಪಕರು , ಯೋಜನಾ ಮೇಲ್ವಿಚಾರಣಾ ಘಟಕ,
ಯುಡಬ್ಲ್ಯೂಎಮ್-ಕೆಯುಐಡಿಎಫ್‌ಸಿ, ಬೆಂಗಳೂರು

ವಾಸಾಸಂಇ/ವಾಪ್ರ/1167/ಎಂಎಎ/2024-25

ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಸಂಖ್ಯೆ : ಲೋ.ಇ./ಬಾ.ವಿ./ಪಿ.ಬಿ./ಕೆ.ಡಬ್ಲ್ಯೂ/2024-25/1135 ದಿನಾಂಕ : 29-07-2024

ಅವಧಿ ವಿಸ್ತರಣೆ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999 - 2000 ರ ಪ್ರಕಾರ ಆ್ಯಕ್ಟ 2000 ರ ನಿಯಮದಂತೆ **ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ - 1, 2** ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ. ಪೋರ್ಟಲ್ ಮುಖಾಂತರ **ಬಾಗಲಕೋಟೆ ವಿಭಾಗದ ಅಡಿಯಲ್ಲಿಯ ಟೆಂಡರ್ ಪ್ರಕಟಣೆ ಸಂಖ್ಯೆ : 0920 ದಿನಾಂಕ : 15-07-2024 ರಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಗಳನ್ನು ಟೆಂಡರ್ ಅವಧಿಯನ್ನು ಈ ಕೆಳಗಿನಂತೆ ವಿಸ್ತರಣೆ ಮಾಡಲಾಗಿದೆ.**

ವರ್ಕ ಇಂಡೆಂಟ್ ನಂ. : ಸಾಮಾನ್ಯ : 11332, 11333, 11339, 11335, 11337, 11338, 11341..

ಪರಿಶಿಷ್ಠ ಜಾತಿ : 11334, 11340.

ಪರಿಶಿಷ್ಠ ಪಂಗಡ : 11342.

ಬದಲಾದ ಟೆಂಡರ್ ಅನುಸೂಚಿ

ಅ) ಟೆಂಡರ್ ಸ್ವೀಕರಿಸುವ ದಿನಾಂಕ	:	03-08-2024 ರಂದು ಸಂಜೆ 4.00 ಘಂಟೆಯವರೆಗೆ
ಆ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	05-08-2024 ರಂದು ಸಂಜೆ 4.30 ಘಂಟೆಯವರೆಗೆ
ಇ) ಆರ್ಥಿಕ ಬಿಡ್ ತೆರೆಯುವ ದಿನಾಂಕ	:	06-08-2024 ರಂದು ಸಂಜೆ 4.30 ಘಂಟೆಯವರೆಗೆ

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ : https://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/150/ಮಣಿಪಾಲ್/2024-25

ನಗರಸಭಾ ಕಾರ್ಯಾಲಯ, ಹುಣಸೂರು, ಮೈಸೂರು ಜಿಲ್ಲೆ – 571105

ದೂರವಾಣಿ : 08222-252048, E-mail: itstaff_ulb_hunsur@yahoo.co.in

ಸಂ:ಹುನಕಾ/ತಾಂತ್ರಿಕ ಶಾಖೆ/ಟೆಂ-07/2024-25 ದಿನಾಂಕ : 25.07.2024

ಟೆಂಡರ್ ಪ್ರಕಟಣೆ ಕರೆ-2 (ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ)

ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿ **2024-25** ನೇ ಸಾಲಿನ 15ನೇ ಹಣಕಾಸು ಯೋಜನೆಯ ಮುಕ್ತ ಅನುದಾನ ಮತ್ತು ನಿರ್ಬಂಧಿತ ಅನುದಾನ ಹಾಗೂ ಎಸ್.ಎಫ್.ಸಿ. ಮುಕ್ತನಿಧಿ/ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ/ ಶೇ.7.25/ ಶೇ.5ರ ಹಾಗೂ ನಗರಸಭಾ ಅನುದಾನಗಳಡಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಗುತ್ತಿಗೆದಾರರಿಂದ **KW-1** ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000 ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹಗುತ್ತಿಗೆದಾರರು **https://kppp.karnataka.gov.in** ನಿಂದ ಟೆಂಡರ್ ಪರತ್ತು, ಇಎಂಡಿ ವಿವರ ಹಾಗೂ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಕಾಮಗಾರಿಯ ವಿವರ ಈ ಕೆಳಕಂಡಂತೆ ಇರುತ್ತದೆ. ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸುವ ಮತ್ತು ಟೆಂಡರ್ ಫಾರಂ ಡೌನ್ ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ **ದಿನಾಂಕ: 09.08.2024** ಹಾಗೂ ಟೆಂಡರ್ ತೆರೆಯುವ **ದಿನಾಂಕ: 12.08.2024** ಕಾಮಗಾರಿ ನಿಬಂದನೆ, ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸೂಚನೆ:- ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಕ್ರ ಸಂ	ಕಾಮಗಾರಿಗಳ ಇಂಡೆಂಡ್ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಮೀಸಲಾತಿ
1.	DMA/2024-25/OW/WORK_INDENT19270/CALL-2	9.84	24600/-	ಇತರೆ
2.	DMA/2024-25/OW/WORK_INDENT19274/CALL-2	20.00	25000/-	ಪರಿಶಿಷ್ಟ ಜಾತಿ
3.	DMA/2024-25/OW/WORK_INDENT19276 CALL-2	14.75	36875/-	ಇತರೆ
4.	DMA/2024-25/OW/WORK INDENT19280 CALL-2	6.15	7700/-	ಪರಿಶಿಷ್ಟ ಜಾತಿ

ಸಹಿ/- ಆಡಳಿತಾಧಿಕಾರಿಗಳು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು

ಸಹಿ/- ಪೌರಾಯುಕ್ತರು, ನಗರಸಭೆ, ಹುಣಸೂರು

DIPR/DDMYS-335/KSMCA-237/2024-25

SANJAY GANDHI INSTITUTE OF TRAUMA AND ORTHOPAEDICS

(Government of Karnataka Autonomous Institution)

Byrasandra, Jayanagar East, Bangalore - 560011. Ph: 080-26564516 Tele/Fax: 080-26565222

E-mail: sitodirector@gmail.com

No: SGIT&O/ACD/FC/08/2024-25 Date: 30.07.2024

NOTIFICATION

Application are invited for Fellowship Programmes for the academic year 2024-25 in Sanjay Gandhi Institute of Trauma and Orthopaedics, Bengaluru as per the guidelines and calendar of events issued by Rajiv Gandhi University of Health Sciences, Bengaluru vide Notification No: **RGUHS/MEDICAL/FELLOW/COE/2024-25, Dated: 13.06.2024.** The details are as here under :-

		Sl. No.	Subject	Duration in Months	Number of Admissions
1	**Details, Duration and intake for the course**	1	Sports Injury & Arthroscopy	18	04
		2	Arthroplasty	18	04
		3	Spine Surgery	18	04
		4	Advanced Orthopaedic Trauma	18	04
		5	Maxillofacial Trauma	18	04
		6	Ultrasound & Image Guided Advanced Nerve Blocks	12	04
2	**Eligibility**	Candidate with NMC/MCI Recognized Post Graduate Degree in concerned specialty. **Or** Candidates with NMC/MCI Recognized Post Graduate Diploma in concerned specialty with three years experience (Copies to be enclosed) **Or** DM/MCH/DNB in concerned specialty 1. For Maxillofacial Trauma qualification - required MDS DMFS/Oral Maxillofacial Surgery 2. For Ultrasound & Image Guided Advanced Nerve Blocks - qualification required is MD /DNB Anaesthesia			
3	**Stipend**	According to Government Notification			
4	Institutional / In-service candidates should send their applications through proper channel				
5	For application format visit website **www.sgito.org** apply with Bio-data and relevant certificates. The duly filled in application should reach through by Registered post or Inperson to this institute in scaled cover within Date: 07.08.2024. The candidate should super scribe on the envelope as **"Application for fellowship programme in the subject of ____________ for the year 2024-25"**				
6	Application fee of Rs.4,000/- (for each subject) made by online payment to the following Account **Director, Sanjay Gandhi Institute of Trauma & Orthopaedics, Bangalore - 560011, Account No - 10313054855, IFSC Code SBIN0004926, State Bank of India, Jayanagar 4th 'T' Block, Bangalore** and online payment Receipt should enclose along with Application form.				
7	**Date and Place of Examination**	**13.08.2024, 02.30 pm to 03.30 pm at Examination Building, Library Block, 1st floor, Bangalore Medical College & Research Institute, Bengaluru - 560002**			
8	The selected In-service candidates shall execute a bond in Form No.19 appended to KCSR and other private candidates shall deposit their original marks cards. Degree certificates, (UG & PG), Experience Certificate etc. In case the candidates fails to complete or withdraw from the fellowship programme before joining the course during the course he/she shall pay a fine of Rs.10,000-00 and the entire stipend amount, if any, drawn in respect of any fellowship programme will have to be repaid.				
9	Course Fees Rs. 34,840/- + University fee (Non refundable)				

DIPR/CP/1183/SPAN COMMUNICATIONS/2024-25

SD/- DIRECTOR

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಐಬಿಸಿ ವಿಭಾಗ ಸಂಖ್ಯೆ-2

ಆಲಮೇಲ-586202.ದೂರವಾಣಿ ಸಂ:08488-232298. ಇ-ಮೇಲ್:kbjnleealmel@gmail.com

ಸಂ:ಕೃಭಾಜನಿನಿ/ಐಬಿಸಿವಿ-2/ಪಿಬಿ/ಕೋಟೇಶನ್/2024-25/300 ದಿನಾಂಕ:30.07.2024

ಐಟಂ ರೇಟ್ ಕೋಟೆಶನ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ ಐಬಿಸಿ ವಿಭಾಗ ನಂ-2 ಆಲಮೇಲ ತಾ: ಆಲಮೇಲ ಜಿ: ವಿಜಯಪುರ ಇವರು ಕರ್ನಾಟಕ ಸರಕಾರದ KPPP ಪ್ರಾಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ನಿಯಮಾವಳಿಗಳಿಗೆ ಒಳಪಟ್ಟ Reputed registered Original Equipment Manufacturer/Dealers/Suppliers ಏಜೆನ್ಸಿಗಳಿಂದ ಈ ಕೆಳಗೆ ತಿಳಿಸಿದ ಕಾಮಗಾರಿಗಳಿಗೆ For supply, installation of integrated automated gates on districutary/sub-distributary/laterals/DPO's for varying size, with built inflow meter, solar power panels, communication systems along with establishment of wireless communication network and commissioning of canal automation system from 0.00 to 147.00 km of ILC Project of KBJNL. ಐಟಂದರ ಕೋಟೇಶನ ಆಹ್ವಾನಿಸಲಾಗಿರುತ್ತದೆ. ಕೋಟೇಶನನ್ನು ಒಂದು ಲಕೋಟೆ ಪದ್ಧತಿಯಲ್ಲಿ ಸಲ್ಲಿಸುವುದು ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ http://kppp.karnataka.gov.in ನಲ್ಲಿ ಮಾಹಿತಿ ಖಚಿತಪಡಿಸಿಕೊಂಡು ಕೋಟೇಶನಲ್ಲಿ ಭಾಗವಹಿಸಬಹುದು.

ಟಿಪ್ಪಣಿ: 1) ಇ-ಪ್ರಾಕ್ಯೂರ್‌ಮೆಂಟ್ http://kppp.karnataka.gov.in ವೆಬ್‌ಸೈಟ್‌ನಲ್ಲಿರುವ ಕಾಮಗಾರಿಯ ಐಟಂಗಳಿಗೆ ಕೋಟೇಶನ್ ಸಲ್ಲಿಸುವ ದಿನಾಂಕ: 02.08.2024 ರಿಂದ 09.08.2024 ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವುದು. 2) ಭರ್ತಿಗೊಳಿಸಿದ ಕೋಟೇಶನ ಸಲ್ಲಿಸುವ ಕೊನೆಯ ದಿನಾಂಕ: 09.08.2024 ರ ಸಾಯಂಕಾಲ 4.30 ಘಂಟೆಯವರಗೆ ಸಲ್ಲಿಸುವದು. 3) The retes shall be exclusive of GST and including transportation and delivery at site, etc. 4)ಕೋಟೇಶನ ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ವಿಭಾಗ ನಂ-2 ಆಲಮೇಲ ಕಛೇರಿಯಲ್ಲಿ ದಿನಾಂಕ: 12.08.2024 ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವುದು. 5) ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ವಿಭಾಗ ನಂ-2, ಆಲಮೇಲ ಕಛೇರಿ ವೇಳೆಯಲ್ಲಿ ಪಡೆಯಬಹುದು ಅಥವಾ http://kppp.karnataka.gov.in ವೆಬ್‌ಸೈಟ್ ನಿಂದ ಪಡೆಯಬಹುದು. 6) ಯಾವುದೇ ಕಾರಣ ನೀಡದೇ ಕೋಟೇಶನ್ ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಐಬಿಸಿ ವಿಭಾಗ-2, ಆಲಮೇಲ.

ವಾಸಾಸಂಇ/ವಿಜಯಪುರ/146/ಕೆಎಸ್‌ಎಂಸಿಎ/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿತ ಏಜೆನ್ಸಿಗಳಿಂದ ದ್ವಿ ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಮುಖ್ಯ ಅಭಿಯಂತರರವರ ಕಛೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009

ಕ್ರಮ ಸಂ.	ಕೆಲಸದ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ (ರೂ.ಗಳಲ್ಲಿ)
	ಐಎಫ್‌ಟಿ ಸಂಖ್ಯೆ ಬೆಂಜಮಂ/ಪ್ರಮುಅ/ಮುಅ(ಪೂ)/ಅಮುಅ(ಪೂ)-2/ಉಮುಅ(ನಿ)-1/ತಾಂಸ(ಪೂ)/1941/2024-25	ದಿನಾಂಕ: 29.07.2024
1	ಸಕಾನಿಅ(ದಪೂ-1) ಉಪ ವಿಭಾಗದ ಜಾನ್‌ಸನ್ ಮಾರ್ಕೆಟ್ ಸೇವಾ ಠಾಣೆ ಅಡಿಯಲ್ಲಿ ಬರುವ ಮದರ್ ತೆರೇಸಾ ರಸ್ತೆಯಿಂದ ಹಳೆ ರೇಸ್ ಕೋರ್ಸ್ ರಸ್ತೆಯವರೆಗೆ (ರಿಚ್‌ಮಂಡ್ ರಸ್ತೆಯಿಂದ ಲೋಯರ್ ಅಗ್ರಮ್ ರಸ್ತೆಯವರೆಗೆ) ಬಿಬಿಎಂಪಿಯ ವೈಟ್ ಟಾಪಿಂಗ್ ಕಾಮಗಾರಿಗಾಗಿ 600ಮಿಮೀ ವ್ಯಾಸದ, 200ಮಿಮೀ ವ್ಯಾಸ ಎಂಎಸ್ ಕೊಳವೆ ಮಾರ್ಗ ಮತ್ತು 150ಮಿಮೀ ವ್ಯಾಸದ ಡಿಐ ಕೊಳವೆ ಮಾರ್ಗವನ್ನು ಒದಗಿಸುವುದು, ಅಳವಡಿಸುವುದು ಹಾಗೂ ಸಂಪರ್ಕಿಸುವುದು.	ರೂ.383.42 ಲಕ್ಷಗಳು / ರೂ.5.75 ಲಕ್ಷಗಳು
2	ಸಕಾನಿಅ(ದಪೂ-2) ಉಪ ವಿಭಾಗದ ಹಲಸೂರು ಸೇವಾ ಠಾಣೆ ಅಡಿಯಲ್ಲಿ ಬರುವ ಸ್ವಾಮಿ ವಿವೇಕಾನಂದ ರಸ್ತೆಯಲ್ಲಿ 400ಮಿಮೀ, 300ಮಿಮೀ, 150ಮಿಮೀ ವ್ಯಾಸದ ಡಿಐ ಕೊಳವೆ ಮಾರ್ಗವನ್ನು ಬದಲಾಯಿಸುವುದು.	ರೂ.196.78 ಲಕ್ಷಗಳು / ರೂ.3.48 ಲಕ್ಷಗಳು
3	ಸಕಾನಿಅ(ದಪೂ-1) ಉಪ ವಿಭಾಗದ ಸಿಎಲ್‌ಆರ್ ಸೇವಾ ಠಾಣೆ ಅಡಿಯಲ್ಲಿ ಬರುವ ಎಎಸ್‌ಸಿ ಜಂಕ್ಷನ್ ಇಂದ ಈಜೀಪುರ ಮುಖ್ಯ ರಸ್ತೆಯವರೆಗೆ ಲೋಯರ್ ಅಗ್ರಮ್ ರಸ್ತೆಯಲ್ಲಿ ಬಿಬಿಎಂಪಿಯ ವೈಟ್ ಟಾಪಿಂಗ್ ಕಾಮಗಾರಿಗಾಗಿ 300ಮಿಮೀ, 200ಮಿಮೀ ವ್ಯಾಸದ ಎಂಎಸ್ ಮತ್ತು 150ಮಿಮೀ ವ್ಯಾಸದ ಡಿಐ ಕೊಳವೆ ಮಾರ್ಗವನ್ನು ಒದಗಿಸುವುದು, ಅಳವಡಿಸುವುದು ಹಾಗೂ ಸಂಪರ್ಕಿಸುವುದು.	ರೂ.169.62 ಲಕ್ಷಗಳು / ರೂ.3.00 ಲಕ್ಷಗಳು
4	ಸಕಾನಿಅ(ದಪೂ-1) ಉಪ ವಿಭಾಗದ ಸಿಎಲ್‌ಆರ್ ಸೇವಾ ಠಾಣೆ ಅಡಿಯಲ್ಲಿ ಬರುವ ಈಜೀಪುರ ಮುಖ್ಯ ರಸ್ತೆಯಲ್ಲಿ (ಎಸ್‌ಡಬ್ಲ್ಯೂಡಿ ಈಜೀಪುರದಿಂದ ಐಆರ್‌ಆರ್‌ವರೆಗೆ) 300ಮಿಮೀ, 200ಮಿಮೀ ವ್ಯಾಸದ ಎಂಎಸ್ ನೀರು ಸರಬರಾಜು ಮಾರ್ಗವನ್ನು ಮತ್ತು 150ಮಿಮೀ ವ್ಯಾಸದ ಡಿಐ ಕೊಳವೆ ಮಾರ್ಗವನ್ನು ಒದಗಿಸುವುದು, ಅಳವಡಿಸುವುದು ಹಾಗೂ ಸಂಪರ್ಕಿಸುವುದು.	ರೂ.181.78 ಲಕ್ಷಗಳು / ರೂ.2.73 ಲಕ್ಷಗಳು
5	ಸಕಾನಿಅ(ದಪೂ-1) ಉಪ ವಿಭಾಗದ ಸಿಎಲ್‌ಆರ್ ಸೇವಾ ಠಾಣೆ ಅಡಿಯಲ್ಲಿ ಬರುವ ವಿಕ್ಟೋರಿಯ ರಸ್ತೆಯಿಂದ ಮಿಲಿಟರಿ ಬಜಾರ್ ಸ್ಟ್ರೀಟ್‌ವರೆಗಿರುವ ಕೆಹೆಚ್ ರೆಹಮಾನ್ ರಸ್ತೆ, ಪಾಮ್ ಗ್ರೂವ್ ರಸ್ತೆಯಲ್ಲಿ ಉದ್ದೇಶಿತ ವೈಟ್ ಟಾಪಿಂಗ್ ಕಾಮಗಾರಿಗಾಗಿ ಹೊಸ ಮೆಷಿನ್ ಹೋಲ್‌ಗಳ ನಿರ್ಮಾಣದೊಂದಿಗೆ 225ಮಿಮೀ ವ್ಯಾಸದ ಹೂಳು ಶೇಖರಣೆಯ ಮತ್ತು ಹಾಳಾದ ಮಾರ್ಗದ ಬದಲಾಗಿ 300ಮಿಮೀ ವ್ಯಾಸದ ಆರ್‌ಸಿಸಿ ಮಾರ್ಗವನ್ನು ಒದಗಿಸುವುದು ಹಾಗೂ ಅಳವಡಿಸುವುದು.	ರೂ.150.99 ಲಕ್ಷಗಳು / ರೂ.2.67 ಲಕ್ಷಗಳು

ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 14.08.2024 ರ ಮಧ್ಯಾಹ್ನ 4.00 ಗಂಟೆಯವರೆಗೆ. ಬಿಡ್‌ಗಳನ್ನು 16.08.2024 ರಂದು ಬೆಳಿಗ್ಗೆ 11.00 ಗಂಟೆಯ ನಂತರ ತೆರೆಯಲಾಗುವುದು.

ಸಹಿ/- ಮುಖ್ಯ ಅಭಿಯಂತರರು (ಪೂರ್ವ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ವಾಪ್ರ/1191/ಆಕಾರ್/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ-ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಕಾಮಗಾರಿಗಳ ವಿವರ	ಕಾಮಗಾರಿಗಿಟ್ಟ ಮೊತ್ತ / ಇಎಂಡಿ ಮೊತ್ತ
	ಮುಖ್ಯ ಅಭಿಯಂತರರ ಕಛೇರಿ (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009	
	ಸಂ: ಬೆಂ.ಜ.ಮಂ/ಮುಅ(ಯೋ)/ಅಮುಅ(ಕೇಂಲು&ಡಿಸಿಡಬ್ಲ್ಯೂ)/864/2024-25	ದಿನಾಂಕ:30.07.2024
1	ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP) ಮಾದರಿಯಲ್ಲಿ ಟಿ.ಕೆ. ಹಳ್ಳಿಯವರೆಗೆ ಅರ್ಕಾವತಿ ನದಿಯ ಪುನರುಜ್ಜೀವನಕ್ಕಾಗಿ ಏಜೆನ್ಸಿಯ ಆಯ್ಕೆಗಾಗಿ ವಹಿವಾಟು ಸಲಹಾ ಸೇವೆಗಳನ್ನು ಒದಗಿಸುವುದು.	ರೂ.310.94 ಲಕ್ಷಗಳು / ರೂ.4.67 ಲಕ್ಷಗಳು
	ಸಂ: ಬೆಂ.ಜ.ಮಂ/ಮುಅ(ಯೋ)/ಅಮುಅ(ಕೇಂಲು&ಡಿಸಿಡಬ್ಲ್ಯೂ)/865/2024-25	ದಿನಾಂಕ:30.07.2024
2	ಸಾರ್ವಜನಿಕ ಖಾಸಗಿ ಸಹಭಾಗಿತ್ವದ (PPP) ಮಾದರಿಯಲ್ಲಿ ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿರುವ ಡಿಎಂಎ ನ ಪ್ರಾಯೋಗಿಕ ಯೋಜನೆಯಲ್ಲಿ ಏಐ ಸಕ್ರಿಯಗೊಳಿಸಿದ ಸ್ಮಾರ್ಟ್ ವಾಟರ್ ಮೀಟರ್‌ಗಳ ಸ್ಥಾಪನೆ, ಕಾರ್ಯಾರಂಭ ಮತ್ತು ಕಾರ್ಯಕ್ಷಮತೆಯ ಮೌಲ್ಯಮಾಪನಕ್ಕಾಗಿ ಏಜೆನ್ಸಿಯ ಆಯ್ಕೆಗಾಗಿ ವಹಿವಾಟು ಸಲಹಾ ಸೇವೆಗಳನ್ನು ಒದಗಿಸುವುದು.	ರೂ.297.61 ಲಕ್ಷಗಳು / ರೂ.4.45 ಲಕ್ಷಗಳು
	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **16.08.2024ರ ಸಂಜೆ 4.00 ಗಂಟೆಯವರೆಗೆ.** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **17.08.2024 ರ ಸಂಜೆ 4.30 ಗಂಟೆಯ ನಂತರ.**	
	ಸಂ: ಬೆಂ.ಜ.ಮಂ/ಮುಅ(ಯೋ)/ಅಮುಅ(ಯೋ)-1/867/2024-25	ದಿನಾಂಕ:30.07.2024
3	ಬಿಬಿಎಂಪಿಯ ವೈಟ್ ಟಾಪಿಂಗ್ ಮಾಡಲು ಪ್ರಸ್ತಾವಿತ ಕನಕಪುರ ಮುಖ್ಯರಸ್ತೆಯಿಂದ ಆರಂಭಗೊಂಡು ಮಲ್ಲಸಂದ್ರ ಗ್ರಾಮದವರೆಗಿನ ಹಾಲಿಡೇ ವಿಲೇಜ್ ಮುಖ್ಯರಸ್ತೆಗೆ ಭೂಗತ ಒಳಚರಂಡಿಯನ್ನು ಒದಗಿಸುವುದು.	ರೂ.457.05 ಲಕ್ಷಗಳು / ರೂ.6.86 ಲಕ್ಷಗಳು
	ಸಂ: ಬೆಂ.ಜ.ಮಂ/ಮುಅ(ಯೋ)/ಅಮುಅ(ಯೋ)-1/868/2024-25	ದಿನಾಂಕ:30.07.2024
4	ಸಕಾನಿಅ(ಯೋ)-2 ವಿಭಾಗದ ಅಡಿಯಲ್ಲಿ ಬರುವ ಹೆಣ್ಣೂರು ಬಾಗಲೂರು ಮುಖ್ಯ ರಸ್ತೆಯುದ್ದಕ್ಕೂ 250 ಮಿಮೀ ವ್ಯಾಸದ ಡಿಡಬ್ಲ್ಯೂಸಿ ಪೈಪ್‌ಲೈನ್ ಒದಗಿಸುವುದು (ವೈಟ್ ಟಾಪಿಂಗ್).	ರೂ.458.27 ಲಕ್ಷಗಳು / ರೂ.6.88 ಲಕ್ಷಗಳು
	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **16.08.2024ರ ಮಧ್ಯಾಹ್ನ 3.00 ಗಂಟೆಯವರೆಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **17.08.2024 ರ ಸಂಜೆ 4.00 ಗಂಟೆಯ ನಂತರ.** ಸಹಿ/- ಮುಖ್ಯ ಅಭಿಯಂತರರು(ಯೋಜನೆ)	
	ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009	
	ಸಂ: ಬೆಂ.ಜ.ಮಂ/ಪ್ರಮುಅ/ಮುಅ(ಪೂ)/ಅಮುಅ(ಪೂ)-2/ಉಮುಅ(ನಿ)-I/ತಾಂಸ(ಪೂ)/1896/2024-25	ದಿನಾಂಕ:29.07.2024
5	ಸಕಾನಿಅ(ಪೂ)-2-2 ಉಪ ವಿಭಾಗದ ಲಿಂಗರಾಜಪುರದಲ್ಲಿ 10ಸಿ ಫ್ಲೈಓವರ್ ಪ್ರದೇಶದಲ್ಲಿ 300ಮಿಮೀ ವ್ಯಾಸದ ಆರ್‌ಸಿಸಿ ಒಳಚರಂಡಿಯನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ.133.17 ಲಕ್ಷಗಳು / ರೂ.2.35 ಲಕ್ಷಗಳು
6	ಸಕಾನಿಅ(ಪೂ)-2-1 ಉಪ ವಿಭಾಗದ ವ್ಯಾಪ್ತಿಯಲ್ಲಿ ಹೆಣ್ಣೂರು ರಸ್ತೆಯಿಂದ ಕುಳ್ಳಪ್ಪ ವೃತ್ತದವರೆಗೆ ನೆಹರು ರಸ್ತೆಯಲ್ಲಿ 300ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ3 ದರ್ಜೆಯ ಒಳಚರಂಡಿ ಪೈಪ್‌ಲೈನ್ ಒದಗಿಸುವುದು ಮತ್ತು ಅಳವಡಿಸುವುದು.	ರೂ.117.84 ಲಕ್ಷಗಳು / ರೂ.2.08 ಲಕ್ಷಗಳು
7	ಸಕಾನಿಅ(ಪೂ)-2-1 ಉಪ ವಿಭಾಗದ ವ್ಯಾಪ್ತಿಯಲ್ಲಿ ಹೆಣ್ಣೂರು ಜಂಕ್ಷನ್ ಓಆರ್‌ಆರ್‌ನಿಂದ ಲಿಂಗರಾಜಪುರಂ ಮೇಲ್ಸೇತುವೆವರೆಗೆ ಹೆಣ್ಣೂರು 80 ಅಡಿ ಮುಖ್ಯ ರಸ್ತೆಯಲ್ಲಿ 300ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ3 ದರ್ಜೆಯ ಒಳಚರಂಡಿ ಪೈಪ್‌ಲೈನ್ ಒದಗಿಸುವುದು ಮತ್ತು ಅಳವಡಿಸುವುದು.	ರೂ.161.02 ಲಕ್ಷಗಳು / ರೂ.2.85 ಲಕ್ಷಗಳು
8	ಸಕಾನಿಅ(ಪೂ)-2-1 ಉಪ ವಿಭಾಗದ ವ್ಯಾಪ್ತಿಯಲ್ಲಿ ನಾಗವಾರ ಮುಖ್ಯರಸ್ತೆಯಲ್ಲಿ ಓಆರ್‌ಆರ್‌ನಿಂದ ಶಾಂಪುರ ರಸ್ತೆ ಜಂಕ್ಷನ್‌ವರೆಗೆ 300 ವ್ಯಾಸದ ಆರ್‌ಸಿಸಿ ಎನ್‌ಪಿ 3 ದರ್ಜೆಯ ಒಳಚರಂಡಿ ಪೈಪ್‌ಲೈನ್ ಒದಗಿಸುವುದು ಮತ್ತು ಅಳವಡಿಸುವುದು.	ರೂ. 161.03 ಲಕ್ಷಗಳು / ರೂ.2.85 ಲಕ್ಷಗಳು
9	ಸಕಾನಿಅ(ಪೂ)-2-1 ಉಪ ವಿಭಾಗದ ವ್ಯಾಪ್ತಿಯಲ್ಲಿ ಕಮ್ಮನಹಳ್ಳಿ ರಸ್ತೆಯ 10ಸಿ ಫ್ಲೈಓವರ್‌ನಿಂದ ಓಆರ್‌ಆರ್‌ವರೆಗೆ 300 ವ್ಯಾಸದ ಆರ್‌ಸಿಸಿ ಎನ್‌ಪಿ 3 ದರ್ಜೆಯ ಒಳಚರಂಡಿ ಪೈಪ್‌ಲೈನ್ ಒದಗಿಸುವುದು ಮತ್ತು ಅಳವಡಿಸುವುದು.	ರೂ.150.83 ಲಕ್ಷಗಳು / ರೂ.2.66 ಲಕ್ಷಗಳು
10	ಸಕಾನಿಅ(ಪೂ)-2-1 ಉಪ ವಿಭಾಗದ ವ್ಯಾಪ್ತಿಯಲ್ಲಿ ಗೋವಿಂದಪುರ ರಸ್ತೆ, ವೀರಣ್ಣಪಾಳ್ಯ ಸರ್ವೀಸ್ ರಸ್ತೆಯಿಂದ ಹೆಚ್‌ಬಿಆರ್ 1ನೇ ಮುಖ್ಯ ಸರ್ವೀಸ್ ರಸ್ತೆಯವರೆಗೆ (ಓಆರ್‌ಆರ್) ಆರ್‌ಸಿಸಿ ಎನ್‌ಪಿ 3 ದರ್ಜೆಯ ಒಳಚರಂಡಿ ಪೈಪ್‌ಲೈನ್ ಒದಗಿಸುವುದು ಮತ್ತು ಅಳವಡಿಸುವುದು.	ರೂ.227.25 ಲಕ್ಷಗಳು / ರೂ.4.02 ಲಕ್ಷಗಳು

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **17.08.2024ರ ಸಂಜೆ 4.00 ಗಂಟೆಯವರೆಗೆ.** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **19.08.2024 ರ ಬೆಳಿಗ್ಗೆ 11.00 ಗಂಟೆಯ ನಂತರ.**

ಸಹಿ/- ಮುಖ್ಯ ಅಭಿಯಂತರರು(ಪೂರ್ವ)

ಟೆಂಡರ್ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು **https://kppp.karnataka.gov.in** ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾಪ್ರ/ಜಿಎ/1178/2024-25

ನಗರಸಭಾ ಕಾರ್ಯಾಲಯ, ಉಡುಪಿ. ಉಡುಪಿ ಜಿಲ್ಲೆ-576101

Phone : 0820-2520446/2520306, Fax : 0820-2524236

E-Mail: itstaff_ulb_udupi@yahoo.com Web: www.udupicity.mrc.gov.in

UCMC/HS/JM-6000L/CR-112/2024-25 Date: 31.07.2024

ಟೆಂಡರ್ ಪ್ರಕಟಣೆ-2ನೇ ಕರೆ

ಕೆ.ಟಿ.ಟಿ.ಪಿ. ಕಾಯ್ದೆ 1999 ಮತ್ತು ನಿಯಮಗಳು 2000ರನ್ವಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತಾರ 6000 ಲೀ ಸಾಮಾರ್ಥ್ಯದ ಜೆಟ್ಟಿಂಗ್ ಮೆಷಿನ್ ವಾಹನವನ್ನು ಪೂರೈಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 16/08/2024 ಸಮಯ 5.00** ಗಂಟೆವರೆಗೆ. ಅರ್ಹ ಪೂರೈಕೆದಾರರು/ಗುತ್ತಿಗೆದಾರರು/ಏಜನ್ಸಿಯವರು ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್‌ನಲ್ಲಿ **(https://kppp.karnataka.gov.in)** ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.

ಅನುದಾನದ ವಿವರ:- ಎಸ್.ಬಿ.ಎಂ.1 ರ ಉಳಿಕೆ ಅನುದಾನ

ಕೆಲಸದ ಹೆಸರು: (1) Procurement of 6000 L Capacity Jetting Machine. **ಟೆಂಡರ್ ಸಂಖ್ಯೆ:** DMA/2024-25/IND1869/CALL-2, ಟೆಂಡರಿಗಿಟ್ಟ ಮೊತ್ತ: **Rs.40,00,000.00/-**, ಇ.ಎಂ.ಡಿ ಮೊತ್ತ: **Rs.1,00,000.00/-**

ವಾಸಾಇ/ಸನಿಲು/ಕೆಎಸ್‌ಎಂಸಿಎ/183/24-25 ದಿ: 31.07.2024 ಸಹಿ/- ಪೌರಾಯುಕ್ತರು, ಉಡುಪಿ ನಗರಸಭೆ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹಾವೇರಿ.

ಈ ಕಛೇರಿ ಗುತ್ತಿಗೆ ಸಂ.:033/ಪಿಬಿ/ಗುತ್ತಿಗೆ/5054/2024-25/1515/

ದಿನಾಂಕ : 26-07-2024

ಇ-ಟೆಂಡರ್ ಪ್ರಕಟಣೆ

ದಿನಾಂಕ : 26-07-2024 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಕಾಮಗಾರಿಗಳ ಇಂಡೆಂಟ್ ಸಂಖ್ಯೆ **11221 ಮತ್ತು 11039**ರ ಕಾಮಗಾರಿಗಳ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **26-08-2024 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ)** ಹಾಗೂ ಕಾಮಗಾರಿಗಳ ಇಂಡೆಂಟ್ ಸಂಖ್ಯೆ **10750 ಮತ್ತು 10994**ರ ಕಾಮಗಾರಿಗಳ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **12-08-2024 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ)** ವನ್ನು ನಿಗದಿಪಡಿಸಲಾಗಿರುತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.kppp.karnataka.gov.inನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- (ಮಹಾಬಲೇಶಪ್ಪ ಕೆ.)
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾ.ಸಾ.ಇ./ಹಾವೇರಿ/170/2024-25/ದೇಶಪಾಂಡೆ ಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಜಲಸಂಪನ್ಮೂಲ ಇಲಾಖೆ

ಮುಖ್ಯ ಸಂಶೋಧನಾಧಿಕಾರಿಯವರ ಕಛೇರಿ,
ಭೂಗುಣ ತಂತ್ರ ವಿಜ್ಞಾನ ಮತ್ತು ತಳಪಾಯ ಇಂಜಿನಿಯರಿಂಗ್ ವಿಭಾಗ, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ,
ಕೃಷ್ಣರಾಜಸಾಗರ.

ಐ.ಎಫ್.ಟಿ ಸಂ:03/2024 ದಿನಾಂಕ:30.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಭೂಗುಣ ತಂತ್ರ ವಿಜ್ಞಾನ ಮತ್ತು ತಳಪಾಯ ಇಂಜಿನಿಯರಿಂಗ್ ವಿಭಾಗದ ಮುಖ್ಯ ಸಂಶೋಧನಾಧಿಕಾರಿಯವರಿಂದ **ಐ.ಎಫ್.ಟಿ ನಂ:03/2024-25 ದಿನಾಂಕ: 30.07.2024 ರಲ್ಲಿ** ನಮೂದಿಸಿರುವ ಸೇವೆಗಳಿಗೆ ಅರ್ಹ ಗುತ್ತಿಗೆದಾರರಿಂದ ಇ-ಪ್ರಕ್ಯೂರ್ಮೆಂಟ್ ಮೂಲಕ ಟೆಂಡರ್‌ಗಳನ್ನು ಸ್ಟಾಂಡರ್ ಟೆಂಡರ್ ಡಾಕ್ಯೂಮೆಂಟ್ ರಲ್ಲಿನ ಷರತ್ತುಗಳಿಗೆ ಅನುಗುಣವಾಗಿ ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು ವಿದ್ಯುನ್ಮಾನ ಜಾಲದಲ್ಲಿ **ದಿನಾಂಕ: 30.07.2024 ರಿಂದ 06.08.2024 ರವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಸ್ವೀಕೃತಿ ಅಂತಿಮ **ದಿನಾಂಕ: 07.08.2024 ರ ಮಧ್ಯಾಹ್ನ 12.00 ಘಂಟೆವರೆಗೆ** ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಅಥವಾ ವೆಬ್ ಸೈಟ್ **http://kppp.karnataka.gov.in** ಮೂಲಕ ಪಡೆಯಬಹುದಾಗಿದೆ. ವೆಬ್ ಸೈಟ್ ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/- ಮುಖ್ಯ ಸಂಶೋಧನಾಧಿಕಾರಿ,
ಭೂಗುಣ ತಂತ್ರ ವಿಜ್ಞಾನ ಮತ್ತು ತಳಪಾಯ ಇಂಜಿನಿಯರಿಂಗ್ ವಿಭಾಗ.
ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ ಕೃಷ್ಣರಾಜಸಾಗರ

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/213/2024-25

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಜಿಲ್ಲಾ ಅಧಿಕಾರಿಗಳ ಕಛೇರಿ, ಕೊಠಡಿ ಸಂಖ್ಯೆ : 215, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110.

ದೂ.: 080-2244 9999, ಇ-ಮೇಲ್: dobcmbengalururural@gmail.com

ಸಂಖ್ಯೆ : ಡಿ.ಬಿ.ಸಿ./ಬೆಂ.ಗ್ರಾ./ಹೊರಸಂಪನ್ಮೂಲ ಟೆಂಡರ್/ಸಿ.ಆರ್-02/2024-25

ದಿನಾಂಕ : 30-07-2024

ಪತ್ರಿಕಾ ಪ್ರಕಟಣೆ

2024-25 ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ, ಜಿಲ್ಲಾ ಕಛೇರಿ ಹಾಗೂ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳು ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು ಹಾಗೂ ರಾತ್ರಿಕಾವಲುಗಾರರು ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಹಾಗೂ ಜವಾನರ ಹುದ್ದೆಗಳಿಗೆ ಸಿಬ್ಬಂದಿಯ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿ ಮುಖಾಂತರ ಪಡೆಯಲು ಅರ್ಹ ಹಾಗೂ ವಿವಿಧ ಕಾಯ್ದೆಗಳ ಕಾನೂನಿನಡಿಯಲ್ಲಿ ನೊಂದಣಿ ಮಾಡಿಕೊಂಡಿರುವ ವ್ಯಕ್ತಿಗಳು / ಸಂಸ್ಥೆಗಳಿಂದ ಆನ್‌ಲೈನ್ ಮುಖಾಂತರ ಟೆಂಡರ್ ಕರೆಯಲಾಗಿದೆ.

ಇ-ಪ್ರೊಕ್ಯೂರ್‌ಮೆಂಟ್ (https://kppp.karnataka.gov.in) (BCWD/2024-25/SE 0041) ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ : 30-07-2024 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು, ದಿನಾಂಕ : 16-08-2024 ರ ಸಂಜೆ 5.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ **(https://kppp.karnataka.gov.in) (BCWD/2024-25/SE0041)** ನ ಮೂಲಕ ಮಾಹಿತಿ ಪಡೆಯಬಹುದು ಅಥವಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/- ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/1176/2024-25

ಬೆಂಗಳೂರು ವಿಶ್ವವಿದ್ಯಾಲಯ

NAAC Accredited with 'A++' Grade

Accredited by NAAC with A++

ಜ್ಞಾನಭಾರತಿ, ಬೆಂಗಳೂರು – 560 056.

ಸಂಖ್ಯೆ: ಎಸಿಎ-4/ಎಲ್.ಎಲ್.ಎಂ ಪ್ರವೇಶ/2024-25 ದಿನಾಂಕ: **31.07.2024**

ಪ್ರವೇಶಾತಿ ಅಧಿಸೂಚನೆ

ವಿಷಯ: 2024-25ರ ಶೈಕ್ಷಣಿಕ ಸಾಲಿನ ಎರಡು ವರ್ಷದ ಎಲ್‌ಎಲ್.ಎಮ್. ಸ್ನಾತಕೋತ್ತರ ಪದವಿ ಮೊದಲ ಸೆಮಿಸ್ಟರ್ ಕೋರ್ಸ್‌ನ ಪ್ರವೇಶಾತಿ ಕೋರಿ ಅರ್ಜಿಯನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 31.07.2024

ವಿಶ್ವವಿದ್ಯಾಲಯ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು ಇವರಿಂದ 2024-25ರ ಶೈಕ್ಷಣಿಕ ಸಾಲಿನ ಎರಡು ವರ್ಷದ ಎಲ್‌ಎಲ್.ಎಮ್. ಸ್ನಾತಕೋತ್ತರ ಪದವಿ ಮೊದಲ ಸೆಮಿಸ್ಟರ್ ಕೋರ್ಸ್‌ನ ಪ್ರವೇಶಾತಿ ಕೋರಿ ಅರ್ಜಿಯನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಮೂರು/ಐದು ವರ್ಷದ ಎಲ್.ಎಲ್.ಬಿ. ಪದವಿಯಲ್ಲಿ ಕನಿಷ್ಠ ಶೇ. 45 ಅಂಕಗಳೊಂದಿಗೆ (ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ/ಪಂಗಡ/ಪ್ರವರ್ಗ-1 ಮತ್ತು ವಿಕಲ ಚೇತನ ಅರ್ಜಿದಾರರಿಗೆ ಶೇ.5 ರಷ್ಟು ವಿನಾಯಿತಿ. ಪರಿಶಿಷ್ಟ ಜಾತಿ/ಪಂಗಡ ಅಭ್ಯರ್ಥಿಗಳ ಕುಟುಂಬ ವಾರ್ಷಿಕ ಆದಾಯವು ರೂ. 8 ಲಕ್ಷಕ್ಕಿಂತ ಮೇಲೆ ಮೀರಿರಬಾರದು) ಯಶಸ್ವಿಯಾಗಿ ಪೂರ್ಣಗೊಳಿಸಿರುವವರು ಮಾತ್ರ ಅರ್ಹರಾಗಿರುತ್ತಾರೆ. ರೂ.850/- (ಕರ್ನಾಟಕ ನಿವಾಸಿಯಾದ ಪ.ಜಾತಿ/ಪ ಪಂಗಡ/ ಪ್ರವರ್ಗ-1 ಮತ್ತು ತೃತೀಯ ಲಿಂಗಿಗಳಿಗೆ ರೂ.425/- ಮಾತ್ರ) ಗಳ ಅರ್ಜಿ ಶುಲ್ಕದ ಜೊತೆ ಪ್ರಸ್ಸಸಿಂಗ್ ಶುಲ್ಕ ರೂ.75.00 plus ಅನ್ವಯಿಸುವ ತೆರಿಗೆಗಳನ್ನು online ಮುಖಾಂತರ ಪಾವತಿಸಬೇಕಾಗುತ್ತದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ಬೆಂಗಳೂರು ವಿಶ್ವವಿದ್ಯಾಲಯ ವೆಬ್‌ಸೈಟ್ **https://bangaloreuniversity.karnataka.gov.in** or **www.ulcbangalore.com** ನಲ್ಲಿ ಲಭ್ಯವಿರುವ ಅರ್ಜಿಯನ್ನು ಭರ್ತಿ ಮಾಡಿ, ಸಂಬಂಧಪಟ್ಟ ಎಲ್ಲಾ ದಾಖಲೆ ಹಾಗೂ ಪ್ರಮಾಣ ಪತ್ರಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವ ಮುಖಾಂತರ ಭರ್ತಿ ಮಾಡಿದ ಅರ್ಜಿಗಳನ್ನು online ನಲ್ಲಿ ಸಲ್ಲಿಸಲು **ದಿನಾಂಕ: 09.08.2024** ರಂದು ಕೊನೆಯ ದಿನಾಂಕವಾಗಿರುತ್ತದೆ ಹಾಗೂ ರೂ.200.00 ಗಳ ದಂಡ ಶುಲ್ಕದೊಂದಿಗೆ **ದಿನಾಂಕ: 11.08.2024** ವರೆಗೂ ಸಲ್ಲಿಬಹುದು. ಆನ್‌ಲೈನ್‌ನಲ್ಲಿ ಅರ್ಜಿಯನ್ನು ಡೌನ್‌ಲೋಡ್ ಮಾಡಿ ಸಂಬಂಧಿಸಿದ ದಾಖಲೆಗಳೊಂದಿಗೆ **ಪ್ರಾಂಶುಪಾಲರು ಹಾಗೂ ಮುಖ್ಯಸ್ಥರು, ವಿಶ್ವವಿದ್ಯಾಲಯ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು-560056** ಇವರಿಗೆ **ದಿನಾಂಕ: 13.08.2024** ರೊಳಗಾಗಿ ಖುದ್ದಾಗಿ/ಅಂಚೆ ಮುಖಾಂತರ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾಲಯದ ಜಾಲತಾಣವನ್ನು ಅಥವಾ 080-22961172/1174 ಸಂಪರ್ಕಿಸಿ.

ಸಹಿ/-
ಕುಲಸಚಿವರು

DIPR/CP/RO1196/AAPL/2024-25

ಕುಸಿದ ನೆಲ, ಕಮರಿದ ಜೀವ



ಚೂರಲ್‌ಮಲದಲ್ಲಿ ಶೋಧ ಕಾರ್ಯದ ನಡುವೆಯೇ ನಾಪತ್ತೆಯಾಗಿರುವ ಬಂಧುಗಳ ಫೋಟೊ ಹಿಡಿದು ವ್ಯಕ್ತಿಯೊಬ್ಬರು ಹುಡುಕಾಟ ನಡೆಸಿದ್ದರು —ಪಿಟಿಐ ಚಿತ್ರ

• ವಿಕ್ರಂ ಕಾಂತಿಕೆರೆ

ಮೇಪ್ಪಾಡಿ (ವಯನಾಡ್ ಜಿಲ್ಲೆ): ಸೂರ್ಯ ಮುಳುಗಿದ್ದ. ಸುತ್ತಲೂ ಕತ್ತಲು ಆವರಿಸಿತ್ತು. ಅಟ್ಟಮಲ ಮತ್ತು ಚೂರಲ್‌ಮಲ ಪ್ರದೇಶಗಳನ್ನು ಸಂಪರ್ಕಿಸುವ ಬೇಯ್ಲಿ ಸೇತುವೆಯನ್ನು ಪುನರ್ ನಿರ್ಮಿಸುವ ಕಾರ್ಯ ಸೇನಾಪಡೆಯಿಂದ ತ್ವರಿತಗತಿಯಲ್ಲಿ ಸಾಗಿತ್ತು. ಮುಂಡಕ್ಕೈ ಭಾಗದಲ್ಲಿ ಕೊಚ್ಚಿಹೋದ ಸೇತುವೆಯ ಮರುನಿರ್ಮಾಣ ಕಾರ್ಯ ರಾತ್ರಿ ವೇಳೆ ಬಹುತೇಕ ಪೂರ್ಣಗೊಂಡಿತು. ಆದರೆ ಮಹಾಪ್ರವಾಹಕ್ಕೆ ಕೊಚ್ಚಿಕೊಂಡು ಹೋದ ಜೀವ-ಜೀವನ...?

ಮೇಪ್ಪಾಡಿಯಲ್ಲಿ ಮಂಗಳವಾರ ಮುಂಜಾನೆ ಸಂಭವಿಸಿದ ಭೂಕುಸಿತದಿಂದ ಬದುಕು ಕಳೆದುಕೊಂಡ ನೂರಾರು ಮಂದಿಯಲ್ಲಿ ಉಳಿದಿರುವುದು ಇದೊಂದೇ ಪ್ರಶ್ನೆ. ಜೀವಜಲ ನೀಡಿ ಬದುಕು ಕಟ್ಟಿಕೊಳ್ಳಲು ನೆರವಾದ ಚಾಲಿಯಾರ್ ನದಿಯೇ ರಾತ್ರಿ ಹಗಲಾಗುವಷ್ಟರಲ್ಲಿ ಕಸಿದುಕೊಂಡು ಹೋಯಿತು. ಹಾಗೆ ಕಳೆದುಕೊಂಡ ತಮ್ಮವರನ್ನು ನೆನೆಯುತ್ತ ಕಣ್ಣೀರ ಕೋಡಿ ಹರಿಸುತ್ತಿರುವ ಪ್ರತಿಯೊಬ್ಬರನ್ನೂ ಈಗ ಈ ಪ್ರಶ್ನೆ ಕಾಡುತ್ತಿದೆ.

‘ರಾತ್ರಿ ಸುಮಾರು 1.30 ಆಗಿರಬಹುದು. ಬಂಡೆ ಕಲ್ಲು ಸಿಡಿದಂಥ ಸದ್ದು ಕೇಳಿಸಿತು. ಬೆಚ್ಚಿ ಬಿದ್ದು ಕಣ್ಣುಜ್ಜುತ್ತಾ ಕಿಟಕಿಯಿಂದಾಚೆ ನೋಡಿದರೆ ಮೇಲ್ಭಾಗದಿಂದ ಗುಡ್ಡವೇ ಇಳಿದು ಬರುತ್ತಿದ್ದುದು ಕಂಡಿತು. ಎಲ್ಲರನ್ನೂ ಎಬ್ಬಿಸಿ ಹೊರಗೆ ಓಡುವಂತೆ ತಿಳಿಸಿದೆ. ಅಷ್ಟರಲ್ಲಿ ಶಬ್ದ ಭೀಕರವಾಗುತ್ತ ಸಾಗಿತು. ಕಲ್ಲು, ಮಣ್ಣು, ಮರಗಳು, ಕೆಸರು ಎಲ್ಲವೂ ನಮ್ಮತ್ತ ನುಗ್ಗಿ ಬರುತ್ತಿತ್ತು. ಮಗಳು ಕೆಸರಿನಲ್ಲಿ ಸಿಲುಕಿದಳು. ಅವಳನ್ನು ಉಳಿಸಿದೆ. ನಮ್ಮ ಮನೆಯ ಎಲ್ಲರೂ ಉಳಿದೆವು. ಅತ್ತಿತ್ತ ನೋಡಿದಾಗ ಸಮೀಪದ ನಿವಾಸಿಗಳೆಲ್ಲರೂ ಮಣ್ಣಿನಲ್ಲಿ ಮಣ್ಣಾಗಿ ಹೋಗುವುದು ಕಂಡಿತು. ಮನೆ ಇಲ್ಲ. ಸಂಬಂಧಿಕರೂ ಇಲ್ಲ...ಯಾರೂ ಈಗಿಲ್ಲ..’ ಎಂದು ಕಾಳಜಿ ಕೇಂದ್ರದಲ್ಲಿ ಕಳೆಯುತ್ತಿರುವ ಮೊಯ್ದು ಹೇಳುತ್ತಾ ಸಾಗಿದರು. ಕೊನೆ ಕೊನೆಗೆ ಅವರ ದನಿ ನಡುಗಿತು. ಗಂಟಲು ಕಟ್ಟಿತು. ಕಣ್ಣೀರು ಸುರಿಯಿತು.

ಮೊಯ್ದು ಅವರ ಪಕ್ಕದಲ್ಲಿದ್ದ ತಮಿಳು ಮಿಶ್ರಿತ ಮಲಯಾಳ ಮಾತನಾಡುತ್ತಿದ್ದ ವ್ಯಕ್ತಿಗೆ ತನ್ನ ಹೆಸರು ಹೇಳಿಕೊಳ್ಳುವುದಕ್ಕೂ ಇಷ್ಟ ಇರಲಿಲ್ಲ. ‘ಇನ್ನೇನು ಬಾಕಿ ಇದೆ, ನಾವಿದ್ದಲ್ಲಿ ಏನೂ ಇಲ್ಲ. ಯಾವ ಕಾರಣಕ್ಕೂ ನಾನಿನ್ನು ಅತ್ತ ಸುಳಿಯಲಾರೆ...’ ಎಂದು ಹೇಳುತ್ತ ಅವರು ಕಣ್ಣೀರಾದರು.

ಮೇಪ್ಪಾಡಿ ಕಟ್ಟಡಗಳ ಒಳಗೆ ಹುಡುಕಿದಲ್ಲೆಲ್ಲ ಶವಗಳೇ ಸಿಗುತ್ತಿದ್ದವು. ಹೊತ್ತು ನೆತ್ತಿಗೇರುತ್ತಿದ್ದ ಹೊತ್ತಿನಲ್ಲಿ ಚೂರಲ್‌ಮಲ ಗ್ರಾಮ ಪಂಚಾಯಿತಿ ಕಚೇರಿಯ ಆಸುಪಾಸಿನಲ್ಲಿ ಕುಸಿದು ಬಿದ್ದ ಚಾವಣಿಯನ್ನು ಸರಿಸುತ್ತಿದ್ದಂತೆ ನಿಶ್ಚಲವಾಗಿದ್ದ ಎರಡು ದೇಹಗಳು ಪತ್ತೆಯಾದವು. ಅದು ನಾಸರ್ ಮತ್ತು ಸುದೇವ್ ಕುಟುಂಬಗಳು ಅಕ್ಕಪಕ್ಕದಲ್ಲಿ ವಾಸಿಸುತ್ತಿದ್ದ ಸ್ಥಳ.


ಮೇಪ್ಪಾಡಿಯಿಂದ 13 ಕಿಲೋಮೀಟರ್ ದೂರದ ಚೂರಲ್‌ಮಲ, ಸಣ್ಣ ನೀರಿನ ಹರಿವು ಇದ್ದ ಜಾಗ. ಆದರೆ ಭೂಕುಸಿತದಿಂದ ಹರಿದುಬಂದ ನೀರು ಆ ಪ್ರದೇಶವನ್ನೇ ನದಿಯಂತಾಗಿಸಿದೆ.

ಮಲಪ್ಪುರಂ ಜಿಲ್ಲೆಯಲ್ಲಿ ಮೃತದೇಹಗಳು: ವಯನಾಡ್‌ನ ನೆರೆಯ ಮಲಪ್ಪುರಂ ಜಿಲ್ಲೆಯ ಮುಂಡೇರಿ ಮತ್ತು ಪೋತ್ತುಕಲ್ಲ್ ಪ್ರದೇಶಗಳಲ್ಲಿ ಚಾಲಿಯಾರ್ ನದಿ ತೀರದಲ್ಲಿ ಆರು ಮಹಿಳೆಯರು ಮತ್ತು ನಾಲ್ವರು ಪುರುಷರನ್ನು ಒಳಗೊಂಡ 15 ಮೃತದೇಹಗಳನ್ನು ಬುಧವಾರ ಪತ್ತೆ ಮಾಡಲಾಗಿದೆ. ಇದರೊಂದಿಗೆ ಈ ಪ್ರದೇಶದಲ್ಲಿ ಲಭಿಸಿದ ಮೃತದೇಹಗಳ ಸಂಖ್ಯೆ 72 ಆಗಿದೆ. ಚಾಲಿಯಾರ್ ನದಿಯ ಇಕ್ಕೆಲಗಳ, ಅಟ್ಟಮಲ ಮತ್ತು ಮುಂಡಕ್ಕೈ ಭಾಗದಲ್ಲಿ ಸಿಲುಕಿದ್ದ 1486 ಮಂದಿಯನ್ನು ರಕ್ಷಿಸಲಾಗಿದ್ದು, ವಿವಿಧ ಕಾಳಜಿ ಕೇಂದ್ರಗಳಲ್ಲಿ ಇರಿಸಲಾಗಿದೆ. ಒಂಬತ್ತು ಮಂದಿ ಸಚಿವರು ಸ್ಥಳದಲ್ಲಿ ಬೀಡುಬಿಟ್ಟಿದ್ದು ಎರಡು ತಂಡಗಳಾಗಿ ಪರಿಹಾರ ಕಾರ್ಯಗಳ ನೇತೃತ್ವ ವಹಿಸಿದ್ದಾರೆ. ಸಹಾಯವಾಣಿ ಕೊಠಡಿಯಲ್ಲಿ ಸಚಿವರು ಕಡ್ಡಾಯವಾಗಿ ಇರಬೇಕೆಂದು ಸರ್ಕಾರ ಸೂಚಿಸಿದೆ.

ಮೇಪ್ಪಾಡಿ ಭೂಕುಸಿತ: ಚಾಲಿಯಾರ್ ನದಿ ತೀರದಲ್ಲಿ ಹುಡುಕಿದಲ್ಲೆಲ್ಲ ಪತ್ತೆಯಾಗುತ್ತಿರುವ ಮೃತದೇಹಗಳು



ಭೂಕುಸಿತದ ಪ್ರದೇಶದಲ್ಲಿ ಸಿಬ್ಬಂದಿ ಹಗ್ಗದ ನೆರವಿನಲ್ಲಿ ಸಂತ್ರಸ್ತರನ್ನು ರಕ್ಷಿಸಿದ ಚಿತ್ರವನ್ನು ಭಾರತೀಯ ಸೇನೆ ಬಿಡುಗಡೆ ಮಾಡಿದೆ —ಎಎಫ್‌ಪಿ ಚಿತ್ರ



ಮೃತಪಟ್ಟವರ ಕುಟುಂಬಕ್ಕೆ ತಲಾ ₹5 ಲಕ್ಷ

ಬೆಂಗಳೂರು: ವಯನಾಡ್‌ನಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಮೃತಪಟ್ಟ ಕನ್ನಡಿಗರ ಕುಟುಂಬಕ್ಕೆ ತಲಾ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಅಲ್ಲದೆ, ವಯನಾಡ್‌ಗೆ ತೆರಳಿ ರಕ್ಷಣಾ ಕಾರ್ಯಕ್ಕೆ ನೆರವಾಗುವಂತೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರಿಗೆ ಸೂಚಿಸಿದ್ದಾರೆ. ಮುಖ್ಯಮಂತ್ರಿಯ ಸೂಚನೆಯಂತೆ ಅಲ್ಲಿಗೆ ತೆರಳಿರುವ ಲಾಡ್, ಕೇರಳದ ಮುಖ್ಯಮಂತ್ರಿ ಕಚೇರಿ ಜೊತೆ ನಿರಂತರ ಸಂಪರ್ಕದಲ್ಲಿದ್ದಾರೆ. ರಾಜ್ಯದ ಇಬ್ಬರು ಐಎಎಸ್ ಅಧಿಕಾರಿಗಳು ದುರಂತ ಸ್ಥಳಕ್ಕೆ ಈಗಾಗಲೇ ತೆರಳಿದ್ದಾರೆ.

ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿರುವ ಸಿದ್ದರಾಮಯ್ಯ, ದುರಂತದ ಬಗ್ಗೆ ಆಘಾತ ವ್ಯಕ್ತಪಡಿಸಿದ್ದಾರೆ. ಅಗತ್ಯವಾದ ಎಲ್ಲ ರೀತಿಯ ನೆರವು ನೀಡುವ ಜೊತೆಗೆ, ರಕ್ಷಣಾ ತಂಡಗಳು ಮತ್ತು ಸಾಮಗ್ರಿಗಳನ್ನು ಕಳುಹಿಸಲಾಗುವುದು ಎಂದೂ ಭರವಸೆ ನೀಡಿದ್ದಾರೆ.

‘ಸಂತ್ರಸ್ತರ ಪ್ರಾಣ ರಕ್ಷಣೆ ನಮ್ಮ ಆದ್ಯತೆ’ ಎಂದು ತಿಳಿಸಿದ್ದಾರೆ.





ಕೇರಳದ ವಯನಾಡ್ ಜಿಲ್ಲೆಯ ಮೇಪ್ಪಾಡಿ ಸಮೀಪದಲ್ಲಿರುವ ಸೇಂಟ್ ಜೋಸೆಫ್ ಶಾಲೆಯಲ್ಲಿ ಸ್ಥಾಪಿಸಿರುವ ಕಾಳಜಿ ಕೇಂದ್ರಕ್ಕೆ ಬುಧವಾರ ಭೇಟಿ ನೀಡಿದ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಭೂಕುಸಿತದಿಂದ ಸಂತ್ರಸ್ತರಾದ 40 ಕನ್ನಡಿಗರ ಜತೆ ಮಾತುಕತೆ ನಡೆಸಿದರು



ಮೇಪ್ಪಾಡಿಯ ಕುಟುಂಬ ಆರೋಗ್ಯ ಕೇಂದ್ರಕ್ಕೆ ತೆರಳುವ ಮಾರ್ಗದಲ್ಲಿ ಮೃತರ ಶವ ಹೊತ್ತು ಸಾಗಿರುವ ಆಂಬುಲೆನ್ಸ್‌ಗಳ ಸಾಲು —ಪ್ರಜಾವಾಣಿ ಚಿತ್ರ/ಪುಷ್ಕರ್ ವಿ



ಅವಶೇಷಗಳಡಿ ಬಿದ್ದಿರುವ ಗಿಟಾರ್ —ಎಎಫ್‌ಪಿ ಚಿತ್ರ

ಕೊಚ್ಚಿಹೋದ ಬದುಕು...

ಒಂದನೇ ಪುಟದಿಂದ...

ಭಾರಿ ಮಳೆಯಿಂದಾಗಿ ವಯನಾಡ್‌ನಲ್ಲಿ ಸಂಭವಿಸಿದ್ದ ಭೂಕುಸಿತ, ಪ್ರವಾಹದಿಂದಾಗಿ 22 ಮಕ್ಕಳು ಸೇರಿ 200 ಮಂದಿ ಮೃತಪಟ್ಟಿದ್ದಾರೆ. 191ಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿದ್ದಾರೆ. ಬೆಟ್ಟ ಪ್ರದೇಶಗಳ ನಡುವೆ ಇದ್ದ ಮುಂಡಕ್ಕೈ, ಚೂರಲ್‌ಮಲ, ಅಟ್ಟಮಲ, ನೂಲ್ಪುಳ ಗ್ರಾಮಗಳು ಗುಡ್ಡ ಕುಸಿತದಿಂದ ಧಾರಾಶಾಹಿಯಾಗಿವೆ.

ನಿರಂತರ ಮಳೆ, ಎಲ್ಲೆಂದರಲ್ಲಿ ಹರಡಿರುವ ಕೆಸರು, ಪ್ರತಿ ಹೆಜ್ಜೆಯನ್ನು ಎಚ್ಚರಿಕೆಯಿಂದ ಇಡಬೇಕಾದಂತೆ ಜಾರುತ್ತಿರುವ ನೆಲ ಹಾಗೂ ಇದರ ಜೊತೆಗೆ ರಭಸದಿಂದ ಹರಿಯುತ್ತಿರುವ ನದಿ – ಈ ಎಲ್ಲವೂ ರಕ್ಷಣಾ ಕಾರ್ಯಗಳಿಗೆ ಸವಾಲೊಡ್ಡಿವೆ. ಪ್ರತಿಸವಾಲು ಎಂಬಂತೆ ರಕ್ಷಣಾ ಕಾರ್ಯ ವೇಗವಾಗಿ ನಡೆದಿದೆ. ಭೂಕುಸಿತ ಹಾಗೂ ಪ್ರವಾಹಕ್ಕೆ ಸಿಕ್ಕಿ ನಾಪತ್ತೆಯಾದವರು ಹಾಗೂ ಅವಶೇಷಗಳ ನಡುವೆ ಬದುಕುಳಿದವರ ಪತ್ತೆಗೆ ಶೋಧ ಕಾರ್ಯ ಚುರುಕಾಗಿ ನಡೆದಿದೆ. ಕುಸಿದ ಮನೆಗಳ ಅವಶೇಷಗಳು, ಪ್ರವಾಹದಲ್ಲಿ ಕೊಚ್ಚಿ ಗುಡ್ಡೆಯಾಗಿರುವ ಮರ, ಗಿಡ ಕೊಂಬೆಗಳ ರಾಶಿಗಳು ಕೂಡ ಕಾರ್ಯಾಚರಣೆಗೆ ಅಡೆತಡೆ ಒಡ್ಡುತ್ತಿವೆ.



ಮೃತದೇಹವನ್ನು ಸಾಗಿಸಿದ ರಕ್ಷಣಾ ಕಾರ್ಯಕರ್ತರು —ಎಎಫ್‌ಪಿ ಚಿತ್ರ

ವಯನಾಡ್ ಜಿಲ್ಲಾಡಳಿತದ ಪ್ರಕಾರ, ಕೆಸರು, ಅವಶೇಷಗಳ ನಡುವೆ ಹಲವರು ಸಿಲುಕಿರುವ ಸಾಧ್ಯತೆ ಇದೆ. ಮೃತರ ಸಂಖ್ಯೆ ಇನ್ನಷ್ಟು ಏರಬಹುದು. ಅಂದಾಜು 200 ಜನರು ನಾಪತ್ತೆಯಾಗಿದ್ದಾರೆ. 300 ಮನೆಗಳು ಪೂರ್ಣ ನಾಶವಾಗಿವೆ. ಚೂರಲ್‌ಮಲ, ಮುಂಡಕ್ಕೈ ಗ್ರಾಮಗಳಲ್ಲಿ ಗುಡ್ಡಕುಸಿತದ ಪರಿಣಾಮ ತೀವ್ರವಾಗಿದೆ.

ಮೃತರಲ್ಲಿ 123 ಶವಗಳ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಈ ಪೈಕಿ 75 ಶವಗಳ ಗುರುತು ಪತ್ತೆಯಾಗಿದೆ. ಪತ್ತೆಯಾದ ಶವಗಳನ್ನು ಮೇಪ್ಪಾಡಿಯ ಸಮುದಾಯ ಆರೋಗ್ಯ ಕೇಂದ್ರ ಹಾಗೂ ನಿಲಂಬೂರ್ ಸರ್ಕಾರಿ ಆಸ್ಪತ್ರೆಯಲ್ಲಿ ಇಡಲಾಗಿದೆ ಎಂದು ಜಿಲ್ಲಾಡಳಿತವು ತಿಳಿಸಿದೆ.

ಮಾಹಿತಿ ಸಂಗ್ರಹ: ಈ ಮಧ್ಯೆ, ಅವಘಡದಲ್ಲಿ ಮೃತಪಟ್ಟವರು, ನಾಪತ್ತೆಯಾದವರ ಖಚಿತ ಮಾಹಿತಿಗಾಗಿ ನಿವಾಸಿಗಳ ಹೆಸರು, ಅಂಕಿ ಅಂಶಗಳನ್ನು ಸಂಗ್ರಹಿಸಲು ಜಿಲ್ಲಾಡಳಿತ ಮುಂದಾಗಿದೆ. ಮಾಹಿತಿ ಕಲೆಹಾಕಲು ಜಿಲ್ಲಾ ತುರ್ತು ನಿರ್ವಹಣಾ ಕೇಂದ್ರ ಸ್ಥಾಪಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ರಕ್ಷಣಾ ಇಲಾಖೆಯ ಹೇಳಿಕೆಯ ಪ್ರಕಾರ, ಮಂಗಳವಾರ ರಾತ್ರಿಯಿಂದ ಬಾಧಿತ ಗ್ರಾಮಗಳಿಂದ ಸುಮಾರು ಒಂದು ಸಾವಿರ ಜನರನ್ನು ರಕ್ಷಿಸಲಾಗಿದೆ. ಸೇನೆಯು ಬಾಧಿತ ಪ್ರದೇಶಗಳ ವ್ಯಾಪ್ತಿಯಲ್ಲಿ ವೈಮಾನಿಕ ಸಮೀಕ್ಷೆ ನಡೆಸುತ್ತಿದ್ದು, ರಕ್ಷಣೆಯಲ್ಲಿ ತೊಡಗಿರುವ ತಂಡಗಳ ಜೊತೆಗೆ ಪೂರಕ ಮಾಹಿತಿಯನ್ನು ಹಂಚಿಕೊಳ್ಳುತ್ತಿದೆ.

ಸೂತಕದೂರಿನವರ ಸಂಕಟ

ವಯನಾಡ್ (ಪಿಟಿಐ): ಅಳಿದು ಉಳಿದ ಮನೆಗಳ ತುಂಬೆಲ್ಲಾ ಕೆಸರು. ಗೋಡೆಯ ಮೇಲೆ ಕೆಟ್ಟು ನಿಂತ ಗಡಿಯಾರ, ದುರಂತ ಎರಗಿದ ಸಮಯವನ್ನು ದಾಖಲಿಸಿತ್ತು. ಮನೆಯಂಗಳದಲ್ಲಿ ಬಿದ್ದಿರುವ ತುಂಬು ಕುಟುಂಬದ ಫೋಟೊ, ಆ ಫೋಟೊದಲ್ಲಿ ಇರುವವರು ಮನೆಯಲ್ಲಿಲ್ಲ. ಎಲ್ಲವನ್ನೂ ಆಪೋಶನ ತೆಗೆದುಕೊಂಡ ಕಲ್ಲು–ಕೆಸರಿನ ರಾಶಿಯಿಂದಾಗಿ ತಪ್ಪಿಸಿಕೊಳ್ಳಲಾಗದೆ ಅಪ್ಪಿಕೊಂಡೇ ಸತ್ತ ಕುಟುಂಬದವರು. ಕೂತವರು ಕೂತಲ್ಲೇ, ಮಲಗಿದವರು ಮಲಗಿದಲ್ಲೇ ಪ್ರಾಣ ಕಳೆದುಕೊಂಡಿದ್ದು...

ಗುಡ್ಡಕುಸಿತ ಮತ್ತು ಅದನ್ನು ಹಿಂಬಾಲಿಸಿದ ದಿಢೀರ್ ಕೆಸರು ಪ್ರವಾಹದಲ್ಲಿ ಕೊಚ್ಚಿಹೋದ ವಯನಾಡ್‌ನ ಮುಂಡಕ್ಕೈ ಮತ್ತು ಚೂರಲ್‌ಮಲದ ಎಲ್ಲೆಡೆ ಕಾಣಸಿಗುವ ದೃಶ್ಯಗಳಿವು. ಸಂತ್ರಸ್ತರು, ರಕ್ಷಣಾ ಸಿಬ್ಬಂದಿ ಭೂಕುಸಿತದ ಭೀಕರತೆಯನ್ನು ಒಂದೊಂದಾಗಿ ಬಿಚ್ಚಿಡುತ್ತಿದ್ದಾರೆ.

‘ರಾತ್ರಿ 1.30ರ ವೇಳೆಗೆ ದೊಡ್ಡ ಶಬ್ದ ಕೇಳಿಸಿತು. ಎದ್ದು ಹೊರಬಂದು ನೋಡಿದರೆ, ಪ್ರವಾಹದ ನೀರು ಮನೆಯ ಮುಂದೆಯೇ ಹರಿಯುತ್ತಿತ್ತು. ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದವರು ಸಹಾಯಕ್ಕಾಗಿ ಕಿರುಚುತ್ತಿದ್ದರು, ಕೈ ಮೇಲೆ ಎತ್ತುತ್ತಿದ್ದರು. ಆದರೆ, ಪ್ರವಾಹದ ರಭಸ ಎಷ್ಟಿತ್ತೆಂದರೆ, ನೋಡ ನೋಡುತ್ತಲೇ ಎಲ್ಲವೂ ನಡೆದೇಹೋಯಿತು. ಎಲ್ಲವೂ ನಿಂತಿತು ಎಂದು ಭಾವಿಸಿ ಮತ್ತೆ ಮಲಗಿದೆವು. ನಾವಿರುವುದು ಚೂರಲ್‌ಮಲದಲ್ಲಿ. ಮತ್ತೆ ಸುಮಾರು 3.30ಕ್ಕೆ ನಮ್ಮ ಹತ್ತಿರವೇ ಏನೋ ಒಂದು ಶಬ್ದವಾದಂತೆ ಕೇಳಿಸಿತು. ಇನ್ನಷ್ಟು ಜನರು ಕೊಚ್ಚಿ ಹೋಗುತ್ತಿದ್ದರು; ಜೊತೆಗೆ ಮೃತದೇಹಗಳೂ. ನಾವು ಹೇಗೋ ಬದುಕುಳಿದೆವು’ ಎಂದು ತಮ್ಮ ಭೀಕರ ಅನುಭವವನ್ನು ಬಿಚ್ಚಿಟ್ಟರು ಕಾರ್ಮಿಕ ಜಯನ್.

‘ನನ್ನ ಹೆಂಡತಿ ಕಡೆಯ ಕುಟುಂಬದ 11 ಮಂದಿ ಕಾಣೆಯಾಗಿದ್ದಾರೆ. ಮುಂಡಕ್ಕೈನಲ್ಲಿ ಅವರ ಮನೆಗಳಿದ್ದವು. ಅವರ ಬಗ್ಗೆ ಏನಾದರೂ ಮಾಹಿತಿ ಸಿಗಬಹುದೇ ಎಂದು ನಾನೀಗ ಇಲ್ಲಿಯೇ ನಿಂತು ಕಾಯುತ್ತಿದ್ದೇನೆ’ ಎನ್ನುತ್ತಾರೆ ಜಯನ್. ಇವರ ರೀತಿಯಲ್ಲಿಯೇ ಹಲವರು ತಮ್ಮ ಆಪ್ತರ ಕುರಿತು ಮಾಹಿತಿ ತಿಳಿದುಕೊಳ್ಳಲು ಕಾಯುತ್ತಿದ್ದಾರೆ.

ಬದುಕುಳಿದವರು ಕಂಡಿದ್ದು...

ಕೆಸರಿನಲ್ಲಿ ಸಿಲುಕಿಕೊಂಡವರ ಕಥೆಯೇ ಬೇರೆ. ‘ಜನರ ಅಳು, ಸಹಾಯಕ್ಕಾಗಿ ಕೈ ಚಾಚುತ್ತಿರುವ ದೃಶ್ಯಗಳು ಎಲ್ಲೆಡೆ ಕಾಣುತ್ತಿದೆ. ಅವರ ಪ್ರೀತಿಪಾತ್ರರ ಜೀವಗಳು ಅವರ ಕಣ್ಣ ಮುಂದೆಯೇ ಹೋಗಿವೆ. ಕೆಸರಲ್ಲಿ ಸಿಲುಕಿರುವ ಕೆಲವರು ತಮ್ಮ ಜೀವ ಉಳಿಸಿಕೊಳ್ಳುವ ಹೋರಾಟದಲ್ಲಿದ್ದರು’ ಎನ್ನುತ್ತಾರೆ ರಕ್ಷಣಾ ಸಿಬ್ಬಂದಿ.

ಗುಡ್ಡ ಕುಸಿತದ ಶಬ್ದ ಕೇಳಿಸಿಕೊಂಡವರು ಜೀವ ಉಳಿಸಿಕೊಳ್ಳಲು ಮನೆಮಂದಿಯನ್ನು ಕಟ್ಟಿಕೊಂಡು ಮನೆಯಿಂದ ದೂರ ಓಡಿಬಂದಿದ್ದಾರೆ. ಕೆಲವರಿಗೆ ಇದು ಸಾಧ್ಯವಾಗಿಲ್ಲ. ‘ನನ್ನ ಅಪ್ಪನನ್ನು ಮಾತ್ರ ರಕ್ಷಿಸಲು ಸಾಧ್ಯವಾಯಿತು. ನಾನು ಅವರನ್ನು ಎತ್ತಿಕೊಂಡು ಕಾಡಿನ ಕಡೆಗೆ ಓಡಿದೆ. ಆದರೆ ತಂಗಿಯನ್ನು ರಕ್ಷಿಸಲಾಗಲಿಲ್ಲ. ಮನೆಯಿಂದ ಹೊರಗೆ ಓಡಿದ ನಮ್ಮಿಬ್ಬರು ಮಕ್ಕಳನ್ನು ನೀರು ಕೊಚ್ಚಿಕೊಂಡು ಹೋಯಿತು. ಅವರು ಕೂಗುತ್ತಲೇ ಇದ್ದರು, ನಾನು ಅಸಹಾಯಕನಾಗಿದ್ದೆ’ ಎಂದು ಗದ್ಗದಿತರಾದರು ಚೂರಲ್‌ಮಲದ ಪ್ರಸನ್ನ.

ವಿದ್ಯಾರ್ಥಿಗಳ ಸೇವೆ


‘ಇವರೆಲ್ಲಾ ನಮ್ಮ ಜೊತೆಯೇ ಇದ್ದವರು. ಇಲ್ಲಿ ನಮ್ಮ ಸ್ನೇಹಿತರಿದ್ದಾರೆ, ಅವರ ಕುಟುಂಬಗಳು ಇವೆ. ನಮ್ಮ ಕೈಯಲ್ಲಿ ದೊಡ್ಡ ದೊಡ್ಡ ಕೆಲಸ ಮಾಡಲು ಸಾಧ್ಯವಿಲ್ಲ. ಆದರೆ, ಅವರಿಗಾಗಿ ನಮ್ಮ ಕೈಲಾದ ಸಣ್ಣ ಸಹಾಯ ಮಾಡುತ್ತಿದ್ದೇವೆ’ ಎನ್ನುತ್ತಾ ಮೇಪ್ಪಾಡಿಯ ಸರ್ಕಾರಿ ಶಾಲೆಯಾದ ಜಿಎಚ್‌ಎಸ್‌ಎಸ್ ಪ್ರೌಢಶಾಲೆಯ ಮಕ್ಕಳು ನಿರಾಶ್ರಿತರಿಗಾಗಿ ವಿವಿಧೆಡೆಯಿಂದ ಬಂದಿದ್ದ ಬಟ್ಟೆಗಳನ್ನು ಜೋಡಿಸಿಟ್ಟರು.



ಕುಸಿದ ಮನೆಯೊಂದರ ಗೋಡೆಯೊಂದರಲ್ಲಿ ನೇತಾಡುತ್ತಿದ್ದ ಜನ್ಮದಿನ ಶುಭಾಶಯ ಪತ್ರ ಗಮನಸೆಳೆಯಿತು


- ‘ಭೂಕುಸಿತದ ಭೀಕರತೆಯನ್ನು ಕಣ್ಣಾರೆ ಕಂಡ ಪುಟ್ಟ ಪುಟ್ಟ ಮಕ್ಕಳಿಗೆ ಈಗ ನಿದ್ದೆಯೇ ಬರುತ್ತಿಲ್ಲ. ಕೆಲವು ಗಂಟೆಗಳ ಮಟ್ಟಿಗೆ ಮಲಗಿದರೂ ಭಯದಿಂದ ಬೆಚ್ಚಿ ಎದ್ದು ಕೂರುತ್ತಿದ್ದಾರೆ’ ಎನ್ನುತ್ತಿದ್ದಾರೆ ನಿರಾಶ್ರಿತ ಶಿಬಿರಗಳಲ್ಲಿರುವ ಪೋಷಕರು
- ಮೊದಲ ಬಾರಿಗೆ ಭೂಕುಸಿತ ಸಂಭವಿಸಿದಾಗ ಕೆಲವರು ಬದುಕುಳಿದು, ಸುರಕ್ಷಿತ ಸ್ಥಳಗಳಿಗೆ ತೆರಳುತ್ತಿದ್ದರು. ಆದರೆ, ಪ್ರವಾಹದ ತೀವ್ರತೆಗೆ ಅವರು ಅದರಲ್ಲಿಯೇ ಕೊಚ್ಚಿಹೋದರು. ಅವರ ದೇಹದ ಭಾಗಗಳು ಈಗ ಸಿಗುತ್ತಿವೆ. ಕೆಲವರ ಕಾಲು, ಕೆಲವರ ಕೈ...’ ಎನ್ನುತ್ತಾರೆ ಅರುಣ್ ದೇವ್. ವೈದ್ಯಕೀಯ ನೆರವು ನೀಡುತ್ತಿರುವ ತಂಡದೊಂದಿಗೆ ಅರುಣ್ ಕೆಲಸ ಮಾಡುತ್ತಿದ್ದಾರೆ
- ಮೃತರ ಕುಟುಂಬಗಳ ಆಕ್ರಂದನ ಮುಗಿಲು ಮುಟ್ಟಿದೆ. ಕಳೆದುಕೊಂಡವರ ಹೆಸರು ಕೂಗುತ್ತಾ, ಅಳುತ್ತಾ ಅಂತ್ಯಸಂಸ್ಕಾರ ನೆರವೇರಿಸಲಾಗುತ್ತಿದೆ
- ಗಾಯಾಳುಗಳ ತುರ್ತು ಚಿಕಿತ್ಸೆಗೆ ಆಮ್ಲಜನಕ ಸೌಲಭ್ಯವುಳ್ಳ ಆಂಬುಲೆನ್ಸ್ ಸೇರಿ ವೈದ್ಯಕೀಯ ಕೇಂದ್ರ ಮತ್ತು ಕಂಟ್ರೋಲ್ ರೂಂ ಅನ್ನು ಚೂರಲ್‌ಮಲದಲ್ಲಿ ಸ್ಥಾಪಿಸಲು ಕೇರಳ ನಿರ್ಧರಿಸಿದೆ.

ಈಶಾನ್ಯ ರಾಜ್ಯಗಳಲ್ಲಿ 592 ಭೂಕುಸಿತ



- ‘ಈಶಾನ್ಯ ರಾಜ್ಯಗಳಲ್ಲಿ ಕಳೆದ ಏಳು ವರ್ಷಗಳಲ್ಲಿ ಸಂಭವಿಸಿದ ಭೂಕುಸಿತಗಳ ಸಂಖ್ಯೆಯನ್ನು ಗಮನಿಸಿದರೆ, ಈ ವರ್ಷದ ಏಪ್ರಿಲ್–ಜುಲೈ ತಿಂಗಳಲ್ಲೇ ಹೆಚ್ಚಿನ ಭೂಕುಸಿತ ಸಂಭವಿಸಿದೆ. ಕಳೆದ ಏಳು ವರ್ಷಗಳಲ್ಲಿ 396 ಭೂಕುಸಿತ ಸಂಭವಿಸಿದ್ದರೆ, ಈ ವರ್ಷದಲ್ಲಿಯೇ ಇಂಥ 196 ಘಟನೆಗಳು ಸಂಭವಿಸಿವೆ’ ಎಂದು ಭೂ ವಿಜ್ಞಾನ ಸಚಿವ ಜಿತೇಂದ್ರ ಸಿಂಗ್ ಲೋಕಸಭೆಗೆ ಬುಧವಾರ ಮಾಹಿತಿ ನೀಡಿದರು
- ‘ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ’ವು ಈ ಸಮೀಕ್ಷೆ ನಡೆಸಿದೆ. ಯಾಕಾಗಿ ಇಂಥ ಘಟನೆಗಳು ಹೆಚ್ಚೆಚ್ಚು ಸಂಭವಿಸುತ್ತಿವೆ, ಇದರ ಗುಣಲಕ್ಷಣಗಳೇನು ಎನ್ನುವುದನ್ನು ತಿಳಿದುಕೊಳ್ಳಲು ಸುಮಾರು 20 ವರ್ಷಗಳ ದತ್ತಾಂಶಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕಿದೆ’ ಎಂದು ಸಚಿವರು ಹೇಳಿದರು

‘ಅಸ್ಸಾಂ ಪ್ರವಾಹ: 880 ಮಂದಿ ಸಾವು’



‘ಕಳೆದ ಐದು ವರ್ಷಗಳಲ್ಲಿ ಅಸ್ಸಾಂನಲ್ಲಿ ಉಂಟಾದ ಪ್ರವಾಹದಲ್ಲಿ ಒಟ್ಟು 880 ಮಂದಿ ಮೃತಪಟ್ಟಿದ್ದಾರೆ’ ಎಂದು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಬುಧವಾರ ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ

ಪಿಣರಾಯಿ ಸರ್ಕಾರ ಮುನ್ನೆಚ್ಚರಿಕೆ ಕಡೆಗಣಿಸಿತ್ತು- ಅಮಿತ್ ಶಾ

ಕೇಂದ್ರ, ಕೇರಳ ಸರ್ಕಾರ ಕೆಸರೆರಚಾಟ

ಪ್ರಜಾವಾಣಿ ವಾರ್ತೆ

ನವದೆಹಲಿ/ತಿರುವನಂತಪುರ: ವಯನಾಡ್‌ನಲ್ಲಿ ಸಂಭವಿಸಿರುವ ಭೂಕುಸಿತ ಅವಘಡಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ಕೇರಳ ಸರ್ಕಾರದ ನಡುವೆ ಪರಸ್ಪರ ಕೆಸರೆರಚಾಟ ಆರಂಭವಾಗಿದೆ.

‘ಭೂಕುಸಿತ ಸಾಧ್ಯತೆ’ ಕುರಿತು ಎಚ್ಚರಿಕೆ ನೀಡಲಾಗಿತ್ತು. ಕೇರಳ ಸರ್ಕಾರ ಕಡೆಗಣಿಸಿತು’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಇದನ್ನು ಅಲ್ಲಗಳೆದಿದ್ದಾರೆ.

‘ಭೂಕುಸಿತ ಸಾಧ್ಯತೆ ಕುರಿತು ಮುನ್ನೆಚ್ಚರಿಕೆ ನೀಡಿದ್ದೆವು. ಕೇರಳ ಸರ್ಕಾರ ಸ್ಪಂದಿಸಿದ್ದರೆ, ಹಲವು ಜೀವ ಉಳಿಸಬಹುದಾಗಿತ್ತು’ ಎಂದು ಸಂಸತ್ತಿನಲ್ಲಿ ಈ ಕುರಿತು ಮಾತನಾಡಿದ ಅಮಿತ್ ಶಾ ಹೇಳಿದರು.

ರಾಜ್ಯಸಭೆಯಲ್ಲಿ ಈ ಬಗ್ಗೆ ಗಮನ ಸೆಳೆದ ರಾಘವ್ ಛಡ್ಡಾ, ಜೆಬಿ ಮೇತ್ತರ್, ಎ.ಎ.ರಹೀಂ ಅವರು, ಇಂತಹ ಗಂಭೀರ ಅವಘಡ ಕುರಿತು ಮುನ್ಸೂಚನೆ ನೀಡುವ ವ್ಯವಸ್ಥೆ ಅಳವಡಿಸಬೇಕು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಅಮಿತ್ ಶಾ ಅವರು, ‘ಸಂಭವನೀಯ ಭೂಕುಸಿತ ಕುರಿತಂತೆ ಕೇರಳ ಸರ್ಕಾರಕ್ಕೆ ಜುಲೈ 23, 24, 25 ಮತ್ತು 26ರಂದೇ ಮುನ್ನೆಚ್ಚರಿಕೆ ನೀಡಲಾಗಿತ್ತು. ಇಂತಹುದೇ ಸಂದೇಶಕ್ಕೆ ಇತರೆ ಕೆಲವು ರಾಜ್ಯಗಳು ಸ್ಪಂದಿಸಿವೆ’ ಎಂದು ಹೇಳಿದರು. ಒಡಿಶಾಗೆ 7 ದಿನದ ಹಿಂದೆ ಚಂಡಮಾರುತದ ಎಚ್ಚರಿಕೆ ನೀಡಲಾಗಿತ್ತು. ಅಲ್ಲಿ ಒಂದು ಸಾವು ಮಾತ್ರ ಸಂಭವಿಸಿತು. ಗುಜರಾತ್‌ಗೆ ಇಂಥ ಎಚ್ಚರಿಕೆ ನೀಡಲಾಗಿತ್ತು. ಅಲ್ಲಿ ಒಂದು ಪ್ರಾಣಿಯೂ ಸತ್ತಿಲ್ಲ. ಆದರೆ, ಬಾಧಿತರಿಗೆ ನೆರವಾಗಲು ಕೇರಳ ಸರ್ಕಾರ ಮಾಡಿದ್ದಾದರೂ ಏನು?’ ಎಂದು ಪ್ರಶ್ನಿಸಿದರು.

ತೇಜಸ್ವಿ ಸೂರ್ಯ ಹೇಳಿಕೆ: ‘ಕೈ’ ಪ್ರತಿಭಟನೆ

ನವದೆಹಲಿ (ಪಿಟಿಐ): ಲೋಕಸಭೆ ಕಲಾಪದಲ್ಲಿ ವಯನಾಡ್ ಭೂಕುಸಿತ ಚರ್ಚೆ ವೇಳೆ ಆಡಳಿತಾರೂಢ ಬಿಜೆಪಿ, ಕಾಂಗ್ರೆಸ್ ಸದಸ್ಯರ ನಡುವೆ ಬುಧವಾರ ವಾಕ್ಸಮರ ನಡೆಯಿತು.

ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರು ವಯನಾಡ್ ಕ್ಷೇತ್ರ ಪ್ರತಿನಿಧಿಸಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದ್ದು, ರಾಹುಲ್ ಅವರು ಭೂಕುಸಿತ ವಿಷಯವನ್ನು ಯಾವತ್ತೂ ಪ್ರಸ್ತಾಪಿಸಿರಲಿಲ್ಲ ಎಂದು ಆರೋಪಿಸಿದರು. ಗಮನ ಸೆಳೆಯುವ ನಿಲುವಳಿ ಸೂಚನೆಯಡಿ ವಿಷಯ ಪ್ರಸ್ತಾಪಿಸಿದ ತೇಜಸ್ವಿ ಸೂರ್ಯ, ಕೇರಳ ವಿಪತ್ತು ನಿರ್ವಹಣಾ ಮಂಡಳಿ ಶಿಫಾರಸುಗಳ ಹೊರತಾಗಿಯೂ ವಯನಾಡ್‌ನಲ್ಲಿ ಧಾರ್ಮಿಕ ಸಂಸ್ಥೆಗಳ ಒತ್ತಡದಿಂದಾಗಿ ಅಕ್ರಮ ಒತ್ತುವರಿ ತೆರವುಗೊಳಿಸಲು ಸಾಧ್ಯವಾಗಿಲ್ಲ. ಇದನ್ನು ಕೇರಳ ಅರಣ್ಯ ಸಚಿವರೇ ಅಲ್ಲಿನ ವಿಧಾನಸಭೆಯಲ್ಲಿ ಹೇಳಿದ್ದಾರೆ ಎಂದರು.

ಸೂರ್ಯ ಅವರ ಹೇಳಿಕೆಯನ್ನು ವಿರೋಧಿಸಿ ಕಾಂಗ್ರೆಸ್ ಸದಸ್ಯರು ಪ್ರತಿಭಟಿಸಿದರು. ಸ್ಪೀಕರ್ ಕಲಾಪವನ್ನು ಸಂಜೆ 4 ಗಂಟೆವರೆಗೆ ಮುಂದೂಡಿದರು.

‘ಶಾ ಹೇಳಿಕೆ ಆಧಾರರಹಿತ’

ತಿರುವನಂತಪುರ: ಅಮಿತ್ ಶಾ ಅವರ ಹೇಳಿಕೆಯು ‘ಆಧಾರರಹಿತ’ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಪ್ರತಿಕ್ರಿಯಿಸಿದ್ದಾರೆ.

‘ಐಎಂಡಿ ವರದಿ ಆಧರಿಸಿ ಗೃಹ ಸಚಿವರು ಹೇಳಿಕೆ ನೀಡಿರಬಹುದು. ರಾಜ್ಯ ಸರ್ಕಾರ ಐಎಂಡಿ ವರದಿಗೆ ಪ್ರಾಮುಖ್ಯತೆ ನೀಡಿದ್ದು, ಕ್ರಮ ಕೈಗೊಂಡಿದೆ’ ಎಂದು ಹೇಳಿದರು. ಜು.29ರಂದು ಐಎಂಡಿ ಆರೆಂಜ್ ಅಲರ್ಟ್ ನೀಡಿತ್ತು. ವಯನಾಡ್‌ನಲ್ಲಿರುವ ಭಾರತೀಯ ಭೂಸರ್ವೇಕ್ಷಣಾ ಇಲಾಖೆ ಮಾಪಕ ಕೇಂದ್ರವೂ ಗ್ರೀನ್ ಅಲರ್ಟ್ ನೀಡಿತ್ತು ಎಂದರು.

ಕೋಚಿಂಗ್ ಕೇಂದ್ರದಲ್ಲಿ ನೀರು ನುಗ್ಗಿದ ಪ್ರಕರಣ ● ಕಾರು ಚಾಲಕನ ಬಂಧಿಸಿದ್ದಕ್ಕೆ ಅಸಮಾಧಾನ

ದೆಹಲಿ ಪೊಲೀಸರಿಗೆ ಹೈಕೋರ್ಟ್ ತರಾಟೆ

ನವದೆಹಲಿ (ಪಿಟಿಐ): 'ದೆಹಲಿ ಪೊಲೀಸರು ಏನು ಮಾಡುತ್ತಿದ್ದಾರೆ? ಅವರಿಗೆ ತಮ್ಮ ಮೇಲೆ ನಿಯಂತ್ರಣ ಇಲ್ಲವಾಗಿದೆಯೇ' ಎಂದು ದೆಹಲಿ ಹೈಕೋರ್ಟ್ ಬುಧವಾರ ಕಟುವಾಗಿ ಪ್ರಶ್ನಿಸಿದೆ.

ದೆಹಲಿಯ ಕೋಚಿಂಗ್ ಕೇಂದ್ರವೊಂದರ ತಳಮಹಡಿಗೆ ನೀರು ನುಗ್ಗಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದ ಮೂವರು ವಿದ್ಯಾರ್ಥಿಗಳು ಮೃತಪಟ್ಟ ಘಟನೆ ಸಂಬಂಧ ಎಸ್‌ಯುವಿ ವಾಹನದ ಚಾಲಕರೊಬ್ಬರನ್ನು ಬಂಧಿಸಿರುವ ಪೊಲೀಸರಿಗೆ ಚಾಟಿ ಬೀಸುವ ಕೆಲಸವನ್ನು ಕೋರ್ಟ್ ಮಾಡಿದೆ.

ವಿಚಿತ್ರವಾದ ತನಿಖೆಯೊಂದು ಇಲ್ಲಿ ನಡೆಯುತ್ತಿದೆ. ಹಳೆ ರಾಜೇಂದರ್ ನಗರದಲ್ಲಿ ಕಾರು ಚಲಾಯಿಸಿದ ವ್ಯಕ್ತಿಯ ವಿರುದ್ಧ ದೆಹಲಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಆದರೆ ಪೊಲೀಸರು ದೆಹಲಿ ಮಹಾನಗರ ಪಾಲಿಕೆ (ಎಂಸಿಡಿ) ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಮುಂದಾಗಿಲ್ಲ ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಮತ್ತು ನ್ಯಾಯಮೂರ್ತಿ ತುಷಾರ್ ರಾವ್ ಗೆಡೆಲಾ ಅವರು ಇದ್ದ ವಿಭಾಗೀಯ ಪೀಠವು ಹೇಳಿದೆ.

'ದೆಹಲಿ ಪೊಲೀಸರು ಏನು ಮಾಡುತ್ತಿದ್ದಾರೆ? ತನಿಖೆಯ ಮೇಲ್ವಿಚಾರಣೆ ನಡೆಸುತ್ತಿರುವ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಇದು ಮುಚ್ಚಿಹಾಕುವ ಪ್ರಯತ್ನವೇ?' ಎಂದು ಪೀಠ ಪ್ರಶ್ನಿಸಿದೆ.

ಸ್ಥಳದಲ್ಲಿ ಕಾರು ಚಲಾಯಿಸಿದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಹೇಳಿದ ಪೀಠವು, 'ಘಟನೆಗೆ ಸಂಬಂಧಿಸಿದಂತೆ ಅಧಿಕಾರಿಗಳನ್ನು ಇದುವರೆಗೆ ಹೊಣೆಗಾರರನ್ನಾಗಿಸಲಾಗಿದೆಯೇ? ಅಧಿಕಾರಿಗಳನ್ನು ಹೊಣೆ ಆಗಿಸಿದರೆ ಮುಂದೆ ಇಂತಹ ಘಟನೆಗಳು ಆಗುವುದಿಲ್ಲ' ಎಂದು ಹೇಳಿತು.

'ತನಿಖೆಯನ್ನು ಯಾರು ನಡೆಸುತ್ತಿದ್ದಾರೆ? ಅವರು ಆ ಪ್ರದೇಶದ ಯಾವುದೇ ದಾರಿಹೋಕನನ್ನು ಅಥವಾ ಚಾಲಕನನ್ನು ಹಿಡಿದು, ಇವೆಲ್ಲ ನೀನು ಕಾರು ಚಲಾಯಿಸಿದ್ದರಿಂದ ಆಯಿತು ಎನ್ನಲು ಯತ್ನಿಸುತ್ತಿದ್ದಾರೆ. ಯಾವುದಾದರೂ ಅಧಿಕಾರಿಯನ್ನು ತನಿಖೆಗೆ ಗುರಿಪಡಿಸಲಾಗಿದೆಯೇ? ಚರಂಡಿಯಲ್ಲಿನ ಹೂಳು ತೆಗೆಯದ ಅಧಿಕಾರಿಯನ್ನು ಕೇಳಿದ್ದಾರೆಯೇ' ಎಂದು ಪ್ರಶ್ನಿಸಿತು.

ವಿದ್ಯಾರ್ಥಿಗಳು ಮೃತಪಟ್ಟ ಘಟನೆ ಕುರಿತ ತನಿಖೆಯನ್ನು ಕೇಂದ್ರೀಯ ಸಂಸ್ಥೆಯೊಂದಕ್ಕೆ ವಹಿಸುವ ಇಂಗಿತವನ್ನು ಹೈಕೋರ್ಟ್ ವ್ಯಕ್ತಪಡಿಸಿದೆ. ಪಾಲಿಕೆಯ ಆಯುಕ್ತ, ಸಂಬಂಧಪಟ್ಟ ಡಿಸಿಪಿ ಮತ್ತು ಪ್ರಕರಣದ ತನಿಖಾಧಿಕಾರಿ ತನ್ನೆದುರು ಶುಕ್ರವಾರ ವಿಚಾರಣೆಗೆ ಹಾಜರಾಗಬೇಕು ಎಂದು ಸೂಚಿಸಿದೆ.

ಮೂವರು ವಿದ್ಯಾರ್ಥಿಗಳು ಮೃತಪಟ್ಟ ಘಟನೆ ಬಗ್ಗೆ ಉನ್ನತ ಮಟ್ಟದ ಸಮಿತಿಯೊಂದರಿಂದ ತನಿಖೆ ನಡೆಸಬೇಕು ಎಂಬ ಕೋರಿಕೆ ಇರುವ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸುತ್ತಿದೆ. ಅಲ್ಲದೆ, ದೆಹಲಿ ನಗರದಲ್ಲಿ ನೂರಾರು ಗ್ರಂಥಾಲಯಗಳು ತಳಮಹಡಿಗಳಲ್ಲಿ ಇವೆ ಎಂಬ ಅರ್ಜಿಗಳನ್ನೂ ಅದು ವಿಚಾರಣೆ ನಡೆಸುತ್ತಿದೆ. ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಲಾಗಿದೆ.



ಕೋರ್ಟ್ ಹೇಳಿದ ಮಾತುಗಳು...

- ನಿಮ್ಮ ಪ್ರಾಧಿಕಾರಗಳು ದಿವಾಳಿಯೆದ್ದಿವೆ. ನಿಮಗೆ ಸಂಬಳ ಕೊಡುವುದಕ್ಕೇ ಹಣ ಇಲ್ಲದಿದ್ದಾಗ ಮೂಲಸೌಕರ್ಯವನ್ನು ಹೇಗೆ ಮೇಲ್ದರ್ಜೆಗೆ ಏರಿಸುತ್ತೀರಿ? ನಿಮಗೆ ಉಚಿತ ಕೊಡುಗೆಗಳ ಸಂಸ್ಕೃತಿ ಬೇಕು, ತೆರಿಗೆ ಸಂಗ್ರಹಿಸುವುದು ನಿಮಗೆ ಬೇಕಿಲ್ಲ. ನೀವು ಹಣ ಸಂಗ್ರಹಿಸುತ್ತಿಲ್ಲ, ಹೀಗಾಗಿ ನೀವು ಹಣವನ್ನು ಖರ್ಚು ಮಾಡುತ್ತಿಲ್ಲ. ಈ ದುರಂತವು ಒಂದಲ್ಲ ಒಂದು ದಿನ ಆಗುವುದಿತ್ತು.
- ಉಚಿತ ಕೊಡುಗೆಗಳ ಸಂಸ್ಕೃತಿ ಬೇಕೇ ಅಥವಾ ನಿಮಗೆ ಸೂಕ್ತವಾದ ಮೂಲಸೌಕರ್ಯ ಬೇಕೇ ಎಂಬುದನ್ನು ನೀವು ನೋಡಬೇಕು. ದೆಹಲಿಯ ಜನಸಂಖ್ಯೆ 3.3 ಕೋಟಿಯಷ್ಟಿದೆ. ಆದರೆ ಈ ನಗರ ಯೋಜಿತವಾಗಿದ್ದು 6–7 ಲಕ್ಷ ಜನರಿಗಾಗಿ. ಮೂಲಸೌಕರ್ಯವನ್ನು ಮೇಲ್ದರ್ಜೆಗೆ ಏರಿಸದೆ ನೀವು ಇಷ್ಟೊಂದು ಜನರಿಗೆ ಹೇಗೆ ಆಶ್ರಯ ಕಲ್ಪಿಸುತ್ತೀರಿ?

ಜಾಮೀನು ಅರ್ಜಿ ತಿರಸ್ಕೃತ

ನವದೆಹಲಿ (ಪಿಟಿಐ): ದೆಹಲಿಯ ಹಳೆ ರಾಜಿಂದರ್ ನಗರ ಪ್ರದೇಶದ ಕೋಚಿಂಗ್ ಕೇಂದ್ರದ ತಳಮಹಡಿಯ ನಾಲ್ವರು ಮಾಲೀಕರು ಹಾಗೂ ಎಸ್‌ಯುವಿ ವಾಹನದ ಚಾಲಕ ಸಲ್ಲಿಸಿದ್ದ ಜಾಮೀನು ಅರ್ಜಿಗಳನ್ನು ಇಲ್ಲಿನ ನ್ಯಾಯಾಲಯವೊಂದು ಬುಧವಾರ ತಿರಸ್ಕರಿಸಿದೆ.

ಈ ಕೋಚಿಂಗ್ ಕೇಂದ್ರದ ತಳಮಹಡಿಗೆ ನೀರು ನುಗ್ಗಿದ ಪರಿಣಾಮವಾಗಿ ಮೂವರು ವಿದ್ಯಾರ್ಥಿಗಳು ಮೃತಪಟ್ಟಿದ್ದರು. ಚಾಲಕ ಮನುಜ್ ಕಥೂರಿಯಾ, ತಳಮಹಡಿಯ ಮಾಲೀಕರಾದ ತೇಜಿಂದರ್ ಸಿಂಗ್, ಪರ್ವಿಂದರ್ ಸಿಂಗ್, ಹರ್ವಿಂದರ್ ಸಿಂಗ್ ಮತ್ತು ಸರಬ್ಜೀತ್ ಸಿಂಗ್ ಅವರ ಜಾಮೀನು ಅರ್ಜಿಗಳನ್ನು ಮ್ಯಾಜಿಸ್ಟ್ರೇಟ್ ವಿನೋದ್ ಕುಮಾರ್ ಅವರು ವಜಾಗೊಳಿಸಿದರು.

ನೀರು ಹರಿಯುತ್ತಿದ್ದ ರಸ್ತೆಯಲ್ಲಿ ಕಥೂರಿಯಾ ಅವರು ಎಸ್‌ಯುವಿ ಚಾಲನೆ ಮಾಡಿ, ನೀರಿನ ಮಟ್ಟ ಹೆಚ್ಚಾಗುವಂತೆ ಮಾಡಿ, ತಳಮಹಡಿಗೆ ನೀರು ನುಗ್ಗಲು ಕಾರಣರಾಗಿದ್ದಾರೆ ಎಂಬ ಆರೋಪ ಹೊರಿಸಲಾಗಿದೆ. ಅಪರಾಧಕ್ಕೆ ಪ್ರಚೋದನೆ ನೀಡಿದ ಆರೋಪವನ್ನು ತಳಮಹಡಿಯ ಮಾಲೀಕರ ವಿರುದ್ಧ ಹೊರಿಸಲಾಗಿದೆ. ಐದೂ ಮಂದಿಯನ್ನು ಸೋಮವಾರ ಬಂಧಿಸಲಾಗಿದೆ.

'ಕೋಚಿಂಗ್ ಕೇಂದ್ರ ನಿಯಂತ್ರಣಕ್ಕೆ ಕಾನೂನು'

ಕೋಚಿಂಗ್ ಸೆಂಟರ್‌ಗಳ ನಿಯಂತ್ರಣಕ್ಕೆ ದೆಹಲಿ ಸರ್ಕಾರ ಕಾನೂನು ಜಾರಿಗೆ ತರಲಿದೆ ಎಂದು ಸಚಿವೆ ಆತಿಶಿ ಬುಧವಾರ ಹೇಳಿದರು.

'ಕಾನೂನು ರೂಪಿಸಲು ಸರ್ಕಾರವು ಅಧಿಕಾರಿಗಳು ಮತ್ತು ವಿವಿಧ ಕೋಚಿಂಗ್ ಹಬ್‌ಗಳ ವಿದ್ಯಾರ್ಥಿಗಳನ್ನು ಒಳಗೊಂಡ ಸಮಿತಿ ರಚಿಸಲಿದೆ. ಮೂಲಸೌಕರ್ಯ, ಅಧ್ಯಾಪಕರ ಅರ್ಹತೆ, ಶುಲ್ಕ ನಿಯಂತ್ರಣ ಮತ್ತು ದಿಕ್ಕುತಪ್ಪಿಸುವ ಜಾಹೀರಾತುಗಳ ತಡೆಗಟ್ಟುವ ನಿಬಂಧನೆಗಳನ್ನು ಹೊಸ ಕಾನೂನು ಒಳಗೊಂಡಿರಲಿದೆ. ಇದಕ್ಕೂ ಮೊದಲು ಸಾರ್ವಜನಿಕರ ಪ್ರತಿಕ್ರಿಯೆ ಕೂಡ ಪಡೆಯಲಾಗುವುದು' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕೇಂದ್ರವೂ ಕಾನೂನು ತರಲಿ– ಎಎಪಿ: 'ಕೋಚಿಂಗ್ ಸೆಂಟರ್‌ಗಳ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಕಾನೂನು ರೂಪಿಸಬೇಕು ಮತ್ತು ಈ ವಿಷಯದ ಬಗ್ಗೆ ಪೋಷಕರೊಂದಿಗೆ ಚರ್ಚಿಸಲು ಸಂಸತ್ತು ಸರ್ವಪಕ್ಷಗಳ ನಾಯಕರನ್ನು ಒಳಗೊಂಡ ಸಮಿತಿ ರಚಿಸಬೇಕು' ಎಂದು ಎಎಪಿ ಬುಧವಾರ ಒತ್ತಾಯಿಸಿದೆ.

ಪೂಜಾ ಖೇಡ್ಕರ್ ನೇಮಕಾತಿ ರದ್ದು

ಪ್ರಜಾವಾಣಿ ವಾರ್ತೆ/ ಪಿಟಿಐ



ನವದೆಹಲಿ: ಸುಳ್ಳು ಮಾಹಿತಿ ನೀಡಿದ ಆರೋಪದ ಮೇಲೆ ಐಎಎಸ್ ಪ್ರೊಬೇಷನರಿ ಅಧಿಕಾರಿ ಪೂಜಾ ಖೇಡ್ಕರ್ (32) ಅವರ ನೇಮಕಾತಿ ಆದೇಶವನ್ನು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಬುಧವಾರ ರದ್ದುಗೊಳಿಸಿದೆ.

ಅದರ ಜತೆಗೆ ಭವಿಷ್ಯದ ಎಲ್ಲ ಪರೀಕ್ಷೆಗಳು ಮತ್ತು ಆಯ್ಕೆಗಳಿಂದ ಅವರನ್ನು ಆಯೋಗ ಡಿಬಾರ್ ಮಾಡಿದೆ.

'ಲಭ್ಯವಿರುವ ಎಲ್ಲ ದಾಖಲಾತಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ್ದು, ಅವರು ನಾಗರಿಕ ಸೇವಾ ಪರೀಕ್ಷಾ (ಸಿಎಸ್‌ಇ–2022) ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂಬುದು ಗೊತ್ತಾಗಿದೆ' ಎಂದು ಆಯೋಗ ಪ್ರಕಟಣೆಯಲ್ಲಿ ತಿಳಿಸಿದೆ.

'2023ರ ಬ್ಯಾಚ್‌ನ ಐಎಎಸ್ ಪ್ರೊಬೇಷನರಿ ಅಧಿಕಾರಿಯಾದ (ಸಿಎಸ್‌ಇ–2022) ಪೂಜಾ ಖೇಡ್ಕರ್ ಅವರ ನೇಮಕಾತಿಯನ್ನು ರದ್ದುಗೊಳಿಸಲಾಗಿದೆ ಮತ್ತು ಮುಂದಿನ ಎಲ್ಲ ಪರೀಕ್ಷೆಗಳು ಅಥವಾ ಆಯ್ಕೆಗಳಿಂದ ಅವರನ್ನು ಶಾಶ್ವತವಾಗಿ ಡಿಬಾರ್ ಮಾಡಲಾಗಿದೆ' ಎಂದು ಯುಪಿಎಸ್‌ಸಿ ಪ್ರಕಟಣೆಯಲ್ಲಿ ಹೇಳಿದೆ.

2009ರಿಂದ 2023ರವರೆಗಿನ 15 ವರ್ಷಗಳ ಅವಧಿಯ ಸಿಎಸ್‌ಇಗೆ ಅಂತಿಮವಾಗಿ ಶಿಫಾರಸು ಮಾಡಲಾದ 15,000 ಅಭ್ಯರ್ಥಿಗಳ ಲಭ್ಯ ದತ್ತಾಂಶಗಳನ್ನು ಪರಿಶೀಲಿಸಲಾಗಿದೆ. ಈ ಅಭ್ಯರ್ಥಿಗಳು ತೆಗೆದುಕೊಂಡ ಪರೀಕ್ಷಾ ಪ್ರಯತ್ನಗಳನ್ನೂ ಪರಿಶೀಲಿಸಲಾಗಿದೆ. ಆದರೆ ಖೇಡ್ಕರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ಸಿಎಸ್‌ಇ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡುಬಂದಿಲ್ಲ ಎಂದಿದೆ ಆಯೋಗ. .

ಹೆತ್ತವರ ಹೆಸರೂ ಬದಲು: 'ಖೇಡ್ಕರ್ ಅವರು ತಮ್ಮ ಹೆಸರನ್ನಷ್ಟೇ ಅಲ್ಲದೆ, ತಮ್ಮ ಹೆತ್ತವರ ಹೆಸರನ್ನೂ ಬದಲಿಸಿರುವುದು ಗೊತ್ತಾಗಿದೆ. ಹೀಗಾಗಿ ಅವರು, ನಿಗದಿಪಡಿಸಿರುವ ಪರೀಕ್ಷಾ ಪ್ರಯತ್ನಗಳ ಮಿತಿಯನ್ನು ಮೀರಿದ್ದಾರೆಯೇ ಎಂಬುದನ್ನು ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ' ಎಂದು ಅದು ಹೇಳಿದೆ.

ಇಂತಹ ಪ್ರಕರಣಗಳು ಭವಿಷ್ಯದಲ್ಲಿ ಮರುಕಳಿಸದಂತೆ ನೋಡಿಕೊಳ್ಳಲು ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಮತ್ತಷ್ಟು ಬಲಪಡಿಸಲಾಗುವುದು ಎಂದು ಅದು ವಿವರಿಸಿದೆ.

ನೋಟಿಸ್‌ಗೆ ಪ್ರತಿಕ್ರಿಯಿಸದ ಪೂಜಾ: ತನ್ನ ಗುರುತನ್ನು ಮರೆ ಮಾಚುವ ಮೂಲಕ ಪರೀಕ್ಷಾ ನಿಯಮಗಳನ್ನು ಉಲ್ಲಂಘಿಸಿ, ವಂಚಿಸಿದ್ದಕ್ಕಾಗಿ ಯುಪಿಎಸ್‌ಸಿ ಜುಲೈ 18ರಂದು ಪೂಜಾ ಮನೋರಮಾ ದಿಲೀಪ್ ಖೇಡ್ಕರ್ ಅವರಿಗೆ ಶೋಕಾಸ್ ನೋಟಿಸ್ ನೀಡಿತ್ತು. ಅದಕ್ಕೆ ಜುಲೈ 25ರೊಳಗೆ ಪ್ರತಿಕ್ರಿಯಿಸುವಂತೆ ಪೂಜಾ ಅವರಿಗೆ ಸೂಚಿಸಲಾಗಿತ್ತು. ಆದರೆ ಅವರು ಅಗತ್ಯ ದಾಖಲೆಗಳನ್ನು ಸಂಗ್ರಹಿಸಲು ಆಗಸ್ಟ್ 4ರವರೆಗೆ ಸಮಯ ಕೋರಿದ್ದರು. ಅದನ್ನು ಮಾನ್ಯ ಮಾಡಿದ್ದ ಆಯೋಗವು ಅವರಿಗೆ ಪ್ರತಿಕ್ರಿಯೆ ನೀಡಲು ಜುಲೈ 30ರ ಮಧ್ಯಾಹ್ನ 3.30ರವರೆಗೆ ಅಂತಿಮ ಅವಕಾಶ ನೀಡಿತ್ತು. ಆದರೆ ಈ ನಿಗದಿತ ಅವಧಿಯಲ್ಲಿ ಪೂಜಾ ಅವರು ತಮ್ಮ ವಿವರಣೆ ನೀಡುವಲ್ಲಿ ವಿಫಲರಾಗಿದ್ದಾರೆ ಎಂದು ಆಯೋಗ ಮಾಹಿತಿ ನೀಡಿದೆ.

ಪೂಜಾ ಅವರು ಐಎಎಸ್ ಪ್ರೊಬೇಷನರಿ ಅವಧಿಯಲ್ಲಿ ಪುಣೆಯಲ್ಲಿ ಸೇವೆಗೆ ನಿಯೋಜಿತರಾಗಿದ್ದ ವೇಳೆ ತಮ್ಮ ಕಾರ್ಯವೈಖರಿಯಿಂದ ಚರ್ಚೆಗೆ ಗ್ರಾಸವಾಗಿದ್ದರು. ತಮ್ಮ ಖಾಸಗಿ ಕಾರಿಗೆ ಸರ್ಕಾರಿ ಲಾಂಛನ, ಕೆಂಪು ದೀಪ ಅಳವಡಿಸಿದ್ದು ವಿವಾದಕ್ಕೀಡಾಗಿತ್ತು. ಇದರ ಬೆನ್ನಲ್ಲೇ ನಕಲಿ ದಾಖಲೆ ಸಲ್ಲಿಕೆಗೆ ಸಂಬಂಧಿಸಿದಂತೆ ಆಯೋಗವು ಪೂಜಾ ವಿರುದ್ಧ ಎಫ್‌ಐಆರ್ ದಾಖಲಿಸಿತ್ತು.

ನಿರೀಕ್ಷಣಾ ಜಾಮೀನಿಗೆ ಅರ್ಜಿ: ಇಂದು ಆದೇಶ

ನವದೆಹಲಿ (ಪಿಟಿಐ): ನಕಲಿ ದಾಖಲೆಗಳನ್ನು ಸಲ್ಲಿಸಿ, ವಂಚಿಸಿರುವ ಆರೋಪ ಎದುರಿಸುತ್ತಿರುವ ಪ್ರೊಬೇಷನರಿ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಅವರು ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿ ಕುರಿತ ಆದೇಶವನ್ನು ಗುರುವಾರ (ಆ.1) ಪ್ರಕಟಿಸುವುದಾಗಿ ದೆಹಲಿ ನ್ಯಾಯಾಲಯ ಹೇಳಿದೆ.

'ಹಿರಿಯ ಅಧಿಕಾರಿಯೊಬ್ಬರ ವಿರುದ್ಧ ಲೈಂಗಿಕ ಶೋಷಣೆಯ ದೂರು ಸಲ್ಲಿಸಿದ್ದಕ್ಕಾಗಿ ನನ್ನನ್ನು ಗುರಿಯಾಗಿಸಲಾಗಿದೆ. ನನ್ನನ್ನು ಬಂಧಿಸುವ ಬೆದರಿಕೆ ಇದೆ. ಹೀಗಾಗಿ ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕು' ಎಂದು ಪೂಜಾ ಕೋರಿದರು. ಇದನ್ನು ವಿರೋಧಿಸಿದ ಸರ್ಕಾರಿ ವಕೀಲರು, 'ಪೂಜಾ ಪರೀಕ್ಷಾ ವ್ಯವಸ್ಥೆಯನ್ನು ವಂಚಿಸಿದ್ದಾರೆ' ಎಂದರು. ವಾದ, ಪ್ರತಿವಾದ ಆಲಿಸಿದ ಹೆಚ್ಚುವರಿ ಸೆಷನ್ ನ್ಯಾಯಾಧೀಶರು ಆದೇಶ ಕಾಯ್ದಿರಿಸಿದರು.

ಶಾಲಾ ಮಕ್ಕಳ ಸುರಕ್ಷತೆಗೆ ಮಾರ್ಗಸೂಚಿ

ನವದೆಹಲಿ (ಪಿಟಿಐ): ಹಳೆ ರಾಜಿಂದರ್ ನಗರದ ಕೋಚಿಂಗ್ ಸೆಂಟರ್‌ನ ದುರಂತ ಘಟನೆಯ ನಂತರ ಎಚ್ಚೆತ್ತಿರುವ ದೆಹಲಿ ಸರ್ಕಾರ, ಶಾಲಾ ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಭದ್ರತೆಗಾಗಿ ಬುಧವಾರ ಮಾರ್ಗಸೂಚಿಗಳನ್ನು ಹೊರಡಿಸಿದೆ.

ಶಿಕ್ಷಣ ನಿರ್ದೇಶನಾಲಯ (ಡಿಒಇ) ಹೊರಡಿಸಿದ ಮಾರ್ಗಸೂಚಿಗಳು ಈ ರೀತಿ ಇವೆ.

- ಖಾಸಗಿ ಮತ್ತು ಸರ್ಕಾರಿ ಶಾಲೆಗಳ ಕಟ್ಟಡಗಳಲ್ಲಿ ನೆಲಮಾಳಿಗೆ ಬಳಕೆಗೆ ಸಂಬಂಧಿಸಿ ದೆಹಲಿ ಮಾಸ್ಟರ್ ಪ್ಲ್ಯಾನ್‌ನ 2021ರ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
- ಶಾಲೆಯ ಆವರಣ ಮತ್ತು ಸುತ್ತಮುತ್ತ ನೀರು ನಿಲ್ಲುವುದನ್ನು ತಪ್ಪಿಸಲು ಶಾಲಾ ಆಡಳಿತ ಮಂಡಳಿ ಅಧಿಕಾರಿಗಳು ಮತ್ತು ಸಂಬಂಧಿಸಿದವರು ತಮ್ಮ ಮಟ್ಟದಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳಬೇಕು.
- ದೆಹಲಿ ರಾಜಧಾನಿಯ ಪ್ರದೇಶದಲ್ಲಿನ (ಜಿಎನ್‌ಸಿಟಿ) ಎಲ್ಲ ಶಾಲೆಗಳು ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಭದ್ರತೆ ಖಾತ್ರಿಪಡಿಸಿಕೊಳ್ಳುವುದು ಅತ್ಯಗತ್ಯ.
- ಯಾವುದೇ ಅಹಿತಕರ ಘಟನೆಯನ್ನು ತಪ್ಪಿಸಲು ಅಗತ್ಯ ಮೂಲಸೌಕರ್ಯ ಹೊಂದಿರಬೇಕು.
- ಶಾಲಾ ಕಟ್ಟಡಗಳಲ್ಲಿ ನೆಲಮಾಳಿಗೆಯನ್ನು ಮಾಸ್ಟರ್ ಪ್ಲಾನ್‌ನ ನಿಬಂಧನೆಗಳ ಪ್ರಕಾರ ಮತ್ತು ಮಂಜೂರಾದ ಯೋಜನೆಯ ಪ್ರಕಾರ ಅನುಮತಿಸುವ ಚಟುವಟಿಕೆಗಳಿಗೆ ಮಾತ್ರ ಬಳಸುತ್ತಿರುವುದನ್ನು ಪ್ರಾಂಶುಪಾಲರು ಖಚಿತಪಡಿಸಿಕೊಳ್ಳಬೇಕು.
- ಶಾಲಾ ಕಟ್ಟಡದ ಗೇಟ್‌ಗಳು ಬಳಕೆಯಲ್ಲಿರಬೇಕು. ಪ್ರವೇಶ, ನಿರ್ಗಮನಕ್ಕೆ ಈ ಗೇಟ್ ತೆರೆಯಬೇಕು.
- ನೆಲಮಾಳಿಗೆಯ ಪ್ರವೇಶ ಮತ್ತು ನಿರ್ಗಮನ ದ್ವಾರಗಳು ಸ್ಪಷ್ಟವಾಗಿ ಗೋಚರಿಸುವಂತೆ ಗುರುತಿಸಬೇಕು.

ವಿಮೆಗೆ ಜಿಎಸ್‌ಟಿ ಬೇಡ: ಗಡ್ಕರಿ



ನವದೆಹಲಿ (ಪಿಟಿಐ): ಜೀವ ವಿಮೆ ಹಾಗೂ ವೈದ್ಯಕೀಯ ವಿಮಾ ಕಂತುಗಳ ಮೇಲೆ ವಿಧಿಸಲಾಗುತ್ತಿರುವ ಶೇ 18ರಷ್ಟು ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಹಿಂಪಡೆಯುವಂತೆ, ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್‌ಗೆ ಮನವಿ ಮಾಡಿದ್ದಾರೆ.

ವಿಮಾ ಉದ್ಯಮದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನಾಗ್ಪುರ ವಿಭಾಗದ ಜೀವ ವಿಮಾ ನಿಗಮ ನೌಕರರ ಒಕ್ಕೂಟವು ತಮಗೆ ಸಲ್ಲಿಸಿದ್ದ ಮನವಿಯನ್ನು ಉಲ್ಲೇಖಿಸಿ, ಹಣಕಾಸು ಸಚಿವರಿಗೆ ಗಡ್ಕರಿ ಪತ್ರ ಬರೆದಿದ್ದಾರೆ.

'ಜೀವ ವಿಮಾ ಕಂತುಗಳ ಮೇಲೆ ಜಿಎಸ್‌ಟಿ ವಿಧಿಸುವುದು ಜೀವನದ ಅನಿಶ್ಚಿತತೆಗಳ ಮೇಲೆ ತೆರಿಗೆ ವಿಧಿಸುವಂತಿದೆ. ಕುಟುಂಬಕ್ಕೆ ರಕ್ಷಣೆ ಒದಗಿಸುವುದಕ್ಕಾಗಿ ವ್ಯಕ್ತಿಯೊಬ್ಬರು ಖರೀದಿಸುವ ಜೀವ ವಿಮೆಗಳ ಕಂತಿನ ಮೇಲೆ ತೆರಿಗೆ ವಿಧಿಸಬಾರದು ಎಂದು ಒಕ್ಕೂಟವು ತನ್ನ ಭಾವನೆಯನ್ನು ವ್ಯಕ್ತಪಡಿಸಿದೆ' ಎಂದು ಹೆದ್ದಾರಿ ಸಚಿವರು ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ.

ಸಾಮಾಜಿಕವಾಗಿ ಅತ್ಯಗತ್ಯವಾಗಿರುವ ವೈದ್ಯಕೀಯ ವಿಮಾ ಉದ್ಯಮದ ಬೆಳವಣಿಗೆಗೆ ಶೇ 18ರಷ್ಟು ಜಿಎಸ್‌ಟಿ ತಡೆಯೊಡ್ಡುತ್ತದೆ ಎಂಬುದು ಸಾಬೀತಾಗಿದೆ ಎಂದು ನೌಕರರ ಒಕ್ಕೂಟ ಪ್ರಸ್ತಾಪಿಸಿದೆ. ಈ ಮೇಲಿನ ಎಲ್ಲ ಅಂಶಗಳನ್ನು ಪರಿಗಣಿಸಿ ಸರಕು ಮತ್ತು ಸೇವಾ ತೆರಿಗೆಯನ್ನು ಹಿಂಪಡೆಯಬೇಕು ಎಂದು ಗಡ್ಕರಿ ಪತ್ರ ಮುಖೇನ ಹಣಕಾಸು ಸಚಿವರಿಗೆ ಮನವಿ ಮಾಡಿದ್ದಾರೆ.

ಉತ್ತರ ಪ್ರದೇಶ ವಿಧಾನಸಭೆಗೆ ನುಗ್ಗಿದ ಮಳೆ ನೀರು



ಉತ್ತರ ಪ್ರದೇಶ ವಿಧಾನಸಭೆ ಕಾರಿಡಾರ್‌ನಲ್ಲಿ ನಿಂತಿದ್ದ ಮಳೆ ನೀರನ್ನು ಬುಧವಾರ ಸಿಬ್ಬಂದಿ ಹೊರಹಾಕಿದರು –ಪಿಟಿಐ ಚಿತ್ರ

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ಬುಧವಾರ ಸುರಿದ ಧಾರಾಕಾರ ಮಳೆಯಿಂದಾಗಿ ವಿಧಾನಸಭೆಯ ಕಚೇರಿಗಳಿಗೆ ಭಾರಿ ಪ್ರಮಾಣದ ನೀರು ನುಗ್ಗಿದೆ. ವಿಧಾನಮಂಡಲದ ಕಲಾಪ ನಡೆಯುತ್ತಿರುವಾಗಲೇ ಮಳೆಯ ನೀರು ವಿಧಾನಸಭೆಗೆ ನುಗ್ಗಿದೆ.


ರಾಜ್ಯ ರಾಜಧಾನಿ ಲಖನೌ ಸೇರಿದಂತೆ ವಿಧಾನಭವನದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಎರಡೂವರೆ ಗಂಟೆ ನಿರಂತರವಾಗಿ ಸುರಿದ ಮಳೆಯಿಂದ ವಿಧಾನಸಭೆ ಕಟ್ಟಡದ ಪ್ರವೇಶ ದ್ವಾರ ಸೇರಿದಂತೆ ಕೆಲವು ಕೊಠಡಿಗಳಲ್ಲಿ ಭಾರಿ ಪ್ರಮಾಣದ ನೀರು ನಿಂತಿತ್ತು. ಇದರಿಂದಾಗಿ ಸಿಬ್ಬಂದಿ ಬಕೆಟ್ ಮತ್ತು ನೆಲ ಒರೆಸುವ ಬಟ್ಟೆಯಿಂದ ಮಳೆ ನೀರನ್ನು ತೆಗೆದುಹಾಕಿದರು.

ಈ ಘಟನೆಯನ್ನು ಬಳಸಿಕೊಂಡು ಪ್ರತಿಪಕ್ಷಗಳು, ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿವೆ.

ಎಲ್ಲಕ್ಕಿಂತಲೂ ಮುಖ್ಯವಾಗಿ ವಿಧಾನಸಭೆಗೆ ಬಜೆಟ್ ಅಗತ್ಯವಿದೆ. ಕೇವಲ ಒಂದು ಮಳೆಗೆ ವಿಧಾನಸಭೆಯಲ್ಲಿ ಇಂಥ ಪರಿಸ್ಥಿತಿ ಉದ್ಭವವಾಗಿದೆ ಎಂದರೆ ಇನ್ನು ರಾಜ್ಯದ ಪರಿಸ್ಥಿತಿಯನ್ನು ದೇವರೇ ಕಾಪಾಡಬೇಕು ಎಂದು 'ಎಕ್ಸ್'ನಲ್ಲಿ ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಶಾಸಕ ಶಿವಪಾಲ್ ಸಿಂಗ್ ಯಾದವ್ ಟೀಕಿಸಿದ್ದಾರೆ. ಅಲ್ಲದೆ, ವಿಧಾನಸಭೆಯಲ್ಲಿ ನೀರು ನಿಂತಿರುವ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಕಲಾಪ ನಡೆಯುವ ಸಭಾಂಗಣಕ್ಕೆ ಏನೂ ಹಾನಿಯಾಗಿಲ್ಲ. ಮಳೆ ಸಂಬಂಧಿತ ಅವಘಡಗಳಲ್ಲಿ 12 ಮಂದಿ ಮೃತಪಟ್ಟಿದ್ದಾರೆ.

ಷೇರುಪೇಟೆ ವಹಿವಾಟು 286



ಎನ್‌ಎಸ್‌ಇ ನಿಫ್ಟಿ


ಹಿಂದಿನ ಅಂತ್ಯ	24,857
ಇಂದಿನ ಅಂತ್ಯ	24,951
▲	94
ದಿನದ ಗರಿಷ್ಠ	24,984

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹226-480
ದ್ವಿತಳಿ (ಬಿ.ವಿ) ₹300-611

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹490
12 ಕ್ಕೆ	₹70
ಮೈಸೂರು	
100ಕ್ಕೆ	₹495

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1570 (1590)
ಸೋಯಾ (ರಿಫೈನ್ಡ್)	₹950 (950)
ಸೂರ್ಯಕಾಂತಿ (ರಿಫೈನ್ಡ್)	₹955 (960)
ಪಾಮೋಲಿನ್	₹898 (900)

ಕೊಬ್ಬರಿ ಧಾರಣೆ
(ಕ್ವಿಂಟಲ್‌ಗೆ)

ಅರಸೀಕೆರೆ	₹9350-9350
ದಾವಣಗೆರೆ	₹6800-6800
ಕೆ.ಆರ್.ಪೇಟೆ	₹9455-9502
ತಿಪಟೂರು	₹9100-10000
ತುರುವೇಕೆರೆ	₹9500-9500

ಜಿಡಿಪಿ ಶೇ 7.5ರಷ್ಟು ಪ್ರಗತಿ ನಿರೀಕ್ಷೆ



ನವದೆಹಲಿ (ಪಿಟಿಐ): ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಸಂಸ್ಥೆಯು 2024–25ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಭಾರತದ ಜಿಡಿಪಿ ಬೆಳವಣಿಗೆಯನ್ನು ಪರಿಷ್ಕರಿಸಿದ್ದು, ಶೇ 7.5ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಿದೆ.

ಈ ಮೊದಲು ಶೇ 7ರಷ್ಟು ಬೆಳವಣಿಗೆ ದಾಖಲಿಸಲಿದೆ ಎಂದು ಸಂಸ್ಥೆಯ ವರದಿ ತಿಳಿಸಿತ್ತು.

ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಸಾರ್ವಜನಿಕ ವೆಚ್ಚಕ್ಕೆ ನಿಗದಿಪಡಿಸಿರುವ ಮೊತ್ತದಲ್ಲಿ ಏರಿಕೆಯಾಗಿದೆ. ಕಾರ್ಪೊರೇಟ್ ಕಂಪನಿಗಳು ಮತ್ತು ಬ್ಯಾಂಕ್‌ಗಳ ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಜೊತೆಗೆ, ಖಾಸಗಿ ವಲಯದ ಆರಂಭಿಕ ಬಂಡವಾಳ ವೆಚ್ಚ ಹೆಚ್ಚಳಕ್ಕೆ ಬಜೆಟ್ ಪೂರಕವಾಗಿದೆ. ಇದು ಆರ್ಥಿಕತೆ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದೆ.

ಕೃಷಿ ವಲಯದ ಅಭಿವೃದ್ಧಿ ಮತ್ತು ಗ್ರಾಮೀಣರ ದಿನಬಳಕೆಯ ವೆಚ್ಚ ಹೆಚ್ಚಳಕ್ಕೆ ಬಜೆಟ್ ನೀತಿಗಳು ಪೂರಕವಾಗಿವೆ. ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ (ಎಂಎಸ್‌ಎಂಇ) ಸಾಲ ನೀಡಿಕೆಯಲ್ಲಿ ಸುಧಾರಣೆಯಾಗುವ ಭರವಸೆ ಸಿಕ್ಕಿದೆ. ಹೊಸ ಉದ್ಯೋಗಗಳ ಸೃಷ್ಟಿಗೆ ಒತ್ತು ನೀಡಲಾಗಿದೆ. ಹಾಗಾಗಿ, ಜಿಡಿಪಿ ಬೆಳವಣಿಗೆಯು ಸದೃಢವಾಗಿರಲಿದೆ ಎಂದು ಹೇಳಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಶೇ 7.2ರಷ್ಟು ಹಾಗೂ ಕೇಂದ್ರ ಹಣಕಾಸು ಸಚಿವಾಲಯದ ಆರ್ಥಿಕ ಸಮೀಕ್ಷೆಯು ಶೇ 6.5ರಿಂದ ಶೇ 7ರಷ್ಟು ಜಿಡಿಪಿ ಪ್ರಗತಿ ಕಾಣಲಿದೆ ಎಂದು ಅಂದಾಜಿಸಿದೆ.

ಇನ್ಫೊಸಿಸ್‌ಗೆ ಜಿಎಸ್‌ಟಿ ಮಹಾನಿರ್ದೇಶನಾಲಯದಿಂದ ನೋಟಿಸ್ ಜಾರಿ

₹32,403 ಕೋಟಿ ವಂಚನೆ

ನವದೆಹಲಿ (ಪಿಟಿಐ): ದೇಶದ ಎರಡನೇ ಅತಿದೊಡ್ಡ ಐ.ಟಿ ಸೇವಾ ಕಂಪನಿಯಾದ ಇನ್ಫೊಸಿಸ್‌ಗೆ ₹32,403 ಕೋಟಿ ಸಮಗ್ರ ಜಿಎಸ್‌ಟಿ ವಂಚನೆ ಎಸಗಿರುವ ಆರೋಪದ ಮೇರೆಗೆ ಬೆಂಗಳೂರಿನ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯವು (ಡಿಜಿಜಿಐ) ನೋಟಿಸ್ ನೀಡಿದೆ.

‘2017ರ ಜುಲೈನಿಂದ 2021–2022ರ ವರೆಗೆ ವಿದೇಶಗಳಲ್ಲಿ ಇರುವ ತನ್ನ ಶಾಖೆಗಳ ಸೇವೆಗಳಿಗೆ ಸಮಗ್ರ ಜಿಎಸ್‌ಟಿ ಪಾವತಿಗೆ ಸಂಬಂಧಿಸಿದಂತೆ ನೋಟಿಸ್ ಸ್ವೀಕರಿಸಲಾಗಿದೆ’ ಎಂದು ಇನ್ಫೊಸಿಸ್, ಬುಧವಾರ ಷೇರುಪೇಟೆಗೆ ತಿಳಿಸಿದೆ.

ಅಂತಿಮವಾಗಿ ಷೋಕಾಸ್ ನೋಟಿಸ್ ಜಾರಿಗೂ ಮೊದಲು ವಿವರಣೆ ಕೇಳಿ ಮಹಾನಿರ್ದೇಶಾಲಯದಿಂದ ಈ ನೋಟಿಸ್ ನೀಡಲಾಗುತ್ತದೆ.

ವಂಚನೆ ಹೇಗೆ?: ಇನ್ಫೊಸಿಸ್ ಕಂಪನಿಯು ಮಾಹಿತಿ ತಂತ್ರಜ್ಞಾನ ಸೇರಿ ಇತರೆ ಸೇವೆ ಒದಗಿಸಲು ವಿದೇಶಗಳಲ್ಲಿ ಹಲವು ಸೇವಾದಾರರೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಅವರಿಗೆ ಅನುಕೂಲ ಕಲ್ಪಿಸಲು ಸಾಗರೋತ್ತರ ಶಾಖೆಗಳನ್ನು ತೆರೆದಿದೆ.

ಸಮಗ್ರ ಸರಕು ಮತ್ತು ಸೇವಾ ಕಾಯ್ದೆಯಡಿ ಇವರನ್ನು ‘ವಿಶಿಷ್ಟ ವ್ಯಕ್ತಿಗಳು’ ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ, ಇವರಿಂದ ಪಡೆಯುವ ಸೇವೆಗೆ ಸಮಗ್ರ ಜಿಎಸ್‌ಟಿ ಅನ್ವಯವಾಗಲಿದೆ ಎಂದು ಡಿಜಿಜಿಐ ತಿಳಿಸಿದೆ.

ಕಂಪನಿಯು ಸಾಗರೋತ್ತರ ಶಾಖೆಯ ಕಚೇರಿಗಳಿಂದ ಸರಬರಾಜು ಸ್ವೀಕೃತಿಗಳನ್ನು ಪಡೆದಿದೆ. ಆದರೆ, ಇದಕ್ಕೆ ಬದಲಾಗಿ ಈ ಶಾಖೆಗಳ ಕಚೇರಿಯ ವೆಚ್ಚವನ್ನು ತೋರಿಸಿದೆ. ಆದರೆ, ಸೇವೆ ಸ್ವೀಕರಿಸಿದ ಸರಬರಾಜಿನ ಮೇಲೆ ರಿವರ್ಸ್ ಚಾರ್ಜ್ ಕಾರ್ಯ ವಿಧಾನದ ಅನ್ವಯ ಕಂಪನಿಯು ಸಮಗ್ರ ಜಿಎಸ್‌ಟಿ ಪಾವತಿಸಬೇಕಿದೆ ಎಂದು ತಿಳಿಸಿದೆ.

ಈ ವಂಚನೆ ಬಗ್ಗೆ ಡಿಜಿಜಿಐ ಅಧಿಕಾರಿಗಳು ಇನ್ಫೊಸಿಸ್‌ಗೆ ಭೇಟಿ ನೀಡಿ ತನಿಖೆ ನಡೆಸುವ ಸಾಧ್ಯತೆಯಿದೆ.

ಕಂಪನಿಯ ಹೇಳಿಕೆ ಏನು?

‘ಕಾನೂನಿನ ಮೇಲೆ ನಮಗೆ ನಂಬಿಕೆಯಿದೆ. ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯದಿಂದ ಸ್ವೀಕರಿಸಿರುವ ನೋಟಿಸ್‌ಗೆ ಸಮಂಜಸ ಉತ್ತರ ನೀಡಲಾಗುವುದು’ ಎಂದು ಇನ್ಫೊಸಿಸ್ ತಿಳಿಸಿದೆ.

‘ಸಾಗರೋತ್ತರ ಕಚೇರಿಗಳ ವೆಚ್ಚಕ್ಕೆ ಸರಕು ಮತ್ತು ಸೇವಾ ತೆರಿಗೆ ಅನ್ವಯವಾಗುವುದಿಲ್ಲ’ ಎಂದು ಹೇಳಿದೆ.

ಭಾರತದಲ್ಲಿ ಇರುವ ಯಾವುದೇ ಕಂಪನಿಗೆ ಸಾಗರೋತ್ತರ ಶಾಖೆಗಳಿಂದ ಒದಗಿಸುವ ಸೇವೆಗೆ ಜಿಎಸ್‌ಟಿ ಅನ್ವಯವಾಗುವುದಿಲ್ಲ. ಈ ಬಗ್ಗೆ ಜಿಎಸ್‌ಟಿ ಮಂಡಳಿಯ ಶಿಫಾರಸು ಅನ್ವಯ ಕೇಂದ್ರೀಯ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿಯು ಸುತ್ತೋಲೆ ಹೊರಡಿಸಿದೆ’ ಎಂದು ತಿಳಿಸಿದೆ.

ಐ.ಟಿ ರಫ್ತು ಸೇವೆಗಳಿಗೆ ಪಾವತಿಸುವ ಜಿಎಸ್‌ಟಿಗೆ ಸಂಬಂಧಿಸಿದಂತೆ ಕ್ರೆಡಿಟ್ ಅಥವಾ ಮರುಪಾವತಿ ಸೌಲಭ್ಯ ಪಡೆಯುವ ಅವಕಾಶವಿದೆ. ಕಂಪನಿಯು ಯಾವುದೇ ಜಿಎಸ್‌ಟಿ ಬಾಕಿ ಉಳಿಸಿಕೊಂಡಿಲ್ಲ. ಕೇಂದ್ರ ಮತ್ತು ರಾಜ್ಯದ ತೆರಿಗೆ ನಿಯಮಾವಳಿಗಳನ್ನು ಪಾಲಿಸುತ್ತಿದೆ ಎಂದು ಹೇಳಿದೆ.


ಸುದ್ದಿ 2 ನಿಮಿಷ

ಸೆನ್ಸೆಕ್ಸ್, ನಿಫ್ಟಿ ಸೂಚ್ಯಂಕ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ನಾಲ್ಕನೇ ದಿನವಾದ ಬುಧವಾರವೂ ಸೂಚ್ಯಂಕಗಳು ಏರಿಕೆ ಕಂಡಿವೆ.

ಲೋಹ, ಪವರ್ ಹಾಗೂ ಕೆಲವು ಆಟೊ ಷೇರುಗಳ ಖರೀದಿ ಹೆಚ್ಚಳದಿಂದಾಗಿ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 286 ಅಂಶ ಏರಿಕೆ ಕಂಡು, 81,741 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 94 ಅಂಶ ಏರಿಕೆ ಕಂಡು, 24,951 ಅಂಶಗಳಲ್ಲಿ ಸ್ಥಿರಗೊಳ್ಳುವ ಮೂಲಕ ಹೊಸ ಎತ್ತರಕ್ಕೆ ಜಿಗಿದಿದೆ.



ಸೆನ್ಸೆಕ್ಸ್ ಗುಚ್ಛದಲ್ಲಿನ ಜೆಎಸ್‌ಡಬ್ಲ್ಯು ಸ್ಟೀಲ್, ಏಷ್ಯನ್ ಪೇಂಟ್ಸ್, ಮಾರುತಿ ಸುಜುಕಿ ಇಂಡಿಯಾ, ಎನ್‌ಟಿಪಿಸಿ, ಅದಾನಿ ಪೋರ್ಟ್ಸ್, ಭಾರ್ತಿ ಏರ್‌ಟೆಲ್, ಐಟಿಸಿ ಮತ್ತು ಟೆಕ್ ಮಹೀಂದ್ರ ಕಂಪನಿಯ ಷೇರುಗಳ ಮೌಲ್ಯದಲ್ಲಿ ಏರಿಕೆಯಾಗಿದೆ.

ರಿಲಯನ್ಸ್ ಇಂಡಸ್ಟ್ರಿಸ್, ಇನ್ಫೊಸಿಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಬಜಾಜ್ ಫಿನ್‌ಸರ್ವ್, ಎಕ್ಸಿಸ್ ಬ್ಯಾಂಕ್ ಷೇರಿನ ಮೌಲ್ಯ ಇಳಿಕೆಯಾಗಿದೆ.

ಬೆಳ್ಳಿ ಧಾರಣೆ ₹1,100 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ ಮತ್ತು ಬೆಳ್ಳಿ ದರವು ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು ₹350 ಏರಿಕೆಯಾಗಿದ್ದು, ₹71,950ಕ್ಕೆ ತಲುಪಿದೆ. ಪ್ರತಿ ಕೆ.ಜಿಗೆ ಬೆಳ್ಳಿ ದರವು ₹1,100 ಏರಿಕೆ ಕಂಡಿದ್ದು, ₹85,600 ಆಗಿದೆ.

ಬಜೆಟ್‌ನಲ್ಲಿ ಸರ್ಕಾರವು ಚಿನ್ನ ಮತ್ತು ಬೆಳ್ಳಿ ಮೇಲಿನ ಕಸ್ಟಮ್ಸ್ ಸುಂಕವನ್ನು ಕಡಿತಗೊಳಿಸಿದೆ. ಆದರೆ, ಹಬ್ಬದ ಋತು ಆರಂಭವಾಗುತ್ತಿರುವುದರಿಂದ ದೇಶೀಯ ಮಾರುಕಟ್ಟೆಯಲ್ಲಿ ಮತ್ತೆ ಹಳದಿ ಲೋಹಕ್ಕೆ ಬೇಡಿಕೆ ಹೆಚ್ಚಿದೆ. ಇದರಿಂದ ಬೆಲೆ ಏರಿಕೆಯಾಗುತ್ತಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಅಮೆರಿಕದ ಬಾಂಡ್ ಗಳಿಕೆಯ ಪ್ರಮಾಣ ಇಳಿಕೆಯಾಗಿದೆ. ಡಾಲರ್ ಮೌಲ್ಯವು ಕಡಿಮೆಯಾಗಿದೆ. ಇದರಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನದತ್ತ ದೃಷ್ಟಿ ನೆಟ್ಟಿದ್ದಾರೆ. ಹಾಗಾಗಿ, ಹಳದಿ ಲೋಹದ ದರವು ಹೆಚ್ಚಳವಾಗುತ್ತಿದೆ ಎಂದು ಹೇಳಿದ್ದಾರೆ.

ಬಿಒಬಿಗೆ ₹4,458 ಕೋಟಿ ಲಾಭ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾದ (ಬಿಒಬಿ) ನಿವ್ವಳ ಲಾಭದಲ್ಲಿ ಶೇ 10ರಷ್ಟು ಏರಿಕೆಯಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹4,070 ಕೋಟಿ ಲಾಭಗಳಿಸಿತ್ತು. ಈ ತ್ರೈಮಾಸಿಕದಲ್ಲಿ ₹4,458 ಕೋಟಿ ಲಾಭ ಗಳಿಸಿದೆ. ₹32,116 ಕೋಟಿ ವರಮಾನ ಗಳಿಸಿದೆ. ಒಟ್ಟು ಬಡ್ಡಿ ವರಮಾನ ₹29,629 ಕೋಟಿ ಆಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 3.51ರಿಂದ ಶೇ 2.88ಕ್ಕೆ ಇಳಿಕೆಯಾಗಿದೆ. ನಿವ್ವಳ ಎನ್‌ಪಿಎ ಶೇ 0.78ರಿಂದ ಶೇ 0.69ಕ್ಕೆ ಕುಗ್ಗಿದೆ. ಸಮರ್ಪಕ ಬಂಡವಾಳ ಅನುಪಾತವು (ಸಿಎಆರ್) ಶೇ 16.82ರಷ್ಟಿದೆ ಎಂದು ಬ್ಯಾಂಕ್ ತಿಳಿಸಿದೆ.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹219
ಆರ್‌ಎಸ್‌ಎಸ್-5	₹211
ಗುಡ್ ಲಾಟ್	₹202

(ಪ್ರತಿ ಕೆ.ಜಿಗೆ)

ಜೂನ್‌ನಲ್ಲಿ 20 ತಿಂಗಳ ಕನಿಷ್ಠ ಮಟ್ಟಕ್ಕೆ ದಾಖಲು: ಕೇಂದ್ರ


ಮೂಲಸೌಕರ್ಯ: ಬೆಳವಣಿಗೆ ಇಳಿಕೆ

ನವದೆಹಲಿ (ಪಿಟಿಐ): ಕಚ್ಚಾ ತೈಲ ಮತ್ತು ರಿಫೈನರಿ ಉತ್ಪನ್ನಗಳ ಉತ್ಪಾದನೆಯ ಕುಸಿತದಿಂದಾಗಿ ದೇಶದ ಪ್ರಮುಖ 8 ಮೂಲ ಸೌಕರ್ಯ ವಲಯಗಳ ಬೆಳವಣಿಗೆಯು ಜೂನ್ ತಿಂಗಳಲ್ಲಿ 20 ತಿಂಗಳ ಕನಿಷ್ಠ ಮಟ್ಟವಾದ ಶೇ 4ಕ್ಕೆ ಇಳಿಕೆಯಾಗಿದೆ.

ಮೇ ತಿಂಗಳಲ್ಲಿ ಈ ವಲಯಗಳ ಉತ್ಪಾದನೆಯು ಶೇ 6.4ರಷ್ಟು ಏರಿಕೆ ಆಗಿತ್ತು. 2023ರ ಜೂನ್‌ನಲ್ಲಿ ಶೇ 8.4ರಷ್ಟು ಮತ್ತು 2022ರ ಅಕ್ಟೋಬರ್‌ನಲ್ಲಿ ಶೇ 0.7ರಷ್ಟು ದಾಖಲಾಗಿತ್ತು ಎಂದು ಕೇಂದ್ರ ಸರ್ಕಾರವು ಬುಧವಾರ ತಿಳಿಸಿದೆ.

ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಿಫೈನರಿ ಉತ್ಪನ್ನ, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಪ್ರಮುಖ ವಲಯಗಳಾಗಿವೆ. ಕೈಗಾರಿಕಾ ಉತ್ಪಾದನಾ ಸೂಚ್ಯಂಕಕ್ಕೆ (ಐಐಪಿ) ಈ ವಲಯಗಳು ಶೇ 40.27ರಷ್ಟು ಕೊಡುಗೆ ನೀಡುತ್ತವೆ.

ಎಂಟು ವಲಯದ ಬೆಳವಣಿಗೆ (ಶೇಕಡಾವಾರು)



ಪ್ರಸಕ್ತ ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ಮೂಲ ಸೌಕರ್ಯ ವಲಯಗಳ ಉತ್ಪಾದನೆಯು ಶೇ 5.7ರಷ್ಟಿತ್ತು. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 6ರಷ್ಟು ಇತ್ತು.

ಕಚ್ಚಾ ತೈಲ ಉತ್ಪಾದನೆಯು (–) ಶೇ 2.6 ಮತ್ತು ರಿಫೈನರಿ ಉತ್ಪನ್ನಗಳ ಉತ್ಪಾದನೆಯು (–) ಶೇ 1.5ರಷ್ಟು ಕಡಿಮೆಯಾಗಿದೆ.

ನೈಸರ್ಗಿಕ ಅನಿಲ ಶೇ 3.3, ರಸಗೊಬ್ಬರ ಶೇ 2.4, ಉಕ್ಕು ಶೇ 2.7 ಮತ್ತು ಸಿಮೆಂಟ್ ವಲಯದ ಉತ್ಪಾದನೆಯು ಶೇ 1.9ರಷ್ಟು ಇಳಿದಿದೆ. ಆದರೆ, ಕಲ್ಲಿದ್ದಲು ಶೇ 14.8ರಷ್ಟು ಮತ್ತು ವಿದ್ಯುತ್ ವಲಯದ ಬೆಳವಣಿಗೆಯು ಶೇ 7.7ರಷ್ಟು ಬೆಳವಣಿಗೆ ದಾಖಲಿಸಿದೆ.

‘ಮೇ ತಿಂಗಳಲ್ಲಿನ ಉತ್ಪಾದನೆಗೆ ಹೋಲಿಸಿದರೆ ಕಲ್ಲಿದ್ದಲು, ರಸಗೊಬ್ಬರ ಮತ್ತು ಸಿಮೆಂಟ್ ವಲಯ ಹೊರತುಪಡಿಸಿ ಉಳಿದ ಐದು ವಲಯಗಳ ಬೆಳವಣಿಗೆಯು ಕುಗ್ಗಿದೆ. ಹಾಗಾಗಿ, ಜೂನ್‌ನಲ್ಲಿ ಈ ವಲಯಗಳ ಬೆಳವಣಿಗೆ ಇಳಿಕೆಯಾಗಿದೆ. ಆದರೆ, ಕೈಗಾರಿಕಾ ಉತ್ಪಾದನೆಯು ಏರಿಕೆಯಾಗುವ ನಿರೀಕ್ಷೆ ಇದೆ’ ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಹಿಗ್ಗಿದ ವಿತ್ತೀಯ ಕೊರತೆ ಅಂತರ



ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 8.1ರಷ್ಟು ಆಗಿದೆ ಎಂದು ಲೆಕ್ಕಪತ್ರಗಳ ಮಹಾನಿಯಂತ್ರಕರು (ಸಿಜಿಎ) ಬುಧವಾರ ಬಿಡುಗಡೆಗೊಳಿಸಿರುವ ವರದಿ ತಿಳಿಸಿದೆ.

ವರಮಾನ ಮತ್ತು ವೆಚ್ಚದ ನಡುವಣ ಅಂತರವಾದ ವಿತ್ತೀಯ ಕೊರತೆಯು ಏಪ್ರಿಲ್–ಜೂನ್ ಅವಧಿಯಲ್ಲಿ ಮೌಲ್ಯದ ಲೆಕ್ಕದಲ್ಲಿ ₹1.35 ಲಕ್ಷ ಕೋಟಿಯಷ್ಟಿದೆ. 2023–24ನೇ ಸಾಲಿನ ಬಜೆಟ್ ಅಂದಾಜಿನ ಶೇ 25.3ರಷ್ಟು ಆಗಿದೆ ಎಂದು ತಿಳಿಸಿದೆ.

2023–24ನೇ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯು ಶೇ 5.6ರಷ್ಟು ಇತ್ತು. ಇತ್ತೀಚೆಗೆ ಮಂಡನೆಯಾದ ಬಜೆಟ್‌ನಲ್ಲಿ 2024–25ನೇ ಆರ್ಥಿಕ ಸಾಲಿಗೆ ಜಿಡಿಪಿಯ ಶೇ 4.9ರಷ್ಟಕ್ಕೆ ತಗ್ಗಿಸುವ ಗುರಿ ನಿಗದಿಪಡಿಸಲಾಗಿದೆ. ಮೌಲ್ಯದ ಲೆಕ್ಕದಲ್ಲಿ ಇದು ₹16.85 ಲಕ್ಷ ಕೋಟಿ ಆಗಿದೆ.

ಏಪ್ರಿಲ್‌ನಿಂದ ಜೂನ್‌ವರೆಗೆ ₹5.49 ಲಕ್ಷ ಕೋಟಿ ನಿವ್ವಳ ತೆರಿಗೆ ವರಮಾನ ಸಂಗ್ರಹವಾಗಿದೆ. ಇದು ಪ್ರಸಕ್ತ ಆರ್ಥಿಕ ವರ್ಷದ ಬಜೆಟ್ ಅಂದಾಜಿನ ಶೇ 21.1ರಷ್ಟಿದೆ. 2022–23ರ ಜೂನ್ ಅಂತ್ಯಕ್ಕೆ ಶೇ 18.6ರಷ್ಟು ವರಮಾನ ಸಂಗ್ರಹವಾಗಿತ್ತು.

ಜೂನ್ ತ್ರೈಮಾಸಿಕದಲ್ಲಿ ಕೇಂದ್ರ ಸರ್ಕಾರದ ಒಟ್ಟು ವೆಚ್ಚವು ₹9.69 ಲಕ್ಷ ಕೋಟಿ ಆಗಿದೆ. ಇದು ಬಜೆಟ್ ಅಂದಾಜಿನ ಶೇ 20.4ರಷ್ಟಿದೆ. ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಸರ್ಕಾರದ ವೆಚ್ಚವು ಶೇ 23ರಷ್ಟು ದಾಟಿತ್ತು.

ಮಹೀಂದ್ರ ಲಾಭದಲ್ಲಿ ಏರಿಕೆ

ಮುಂಬೈ (ಪಿಟಿಐ): 2024–25ನೇ ಜೂನ್ ತ್ರೈಮಾಸಿಕದಲ್ಲಿ ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು, ₹3,283 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹2,745 ಕೋಟಿ ಲಾಭಗಳಿಸಲಾಗಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 20ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿಯು ಬುಧವಾರ ತಿಳಿಸಿದೆ.

ಕಳೆದ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹33,892 ಕೋಟಿ ವರಮಾನ ಗಳಿಸಿತ್ತು. ಈ ತ್ರೈಮಾಸಿಕದಲ್ಲಿ ₹37,218 ಕೋಟಿ ಗಳಿಸಿದೆ. ಒಟ್ಟಾರೆ ಶೇ 10ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

‘ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಕಂಪನಿಯ ಎಲ್ಲಾ ವಹಿವಾಟುಗಳ ಕಾರ್ಯಾಚರಣೆಯು ಉತ್ತಮ ಆರಂಭ ಕಂಡಿದೆ. ವಾಹನ ಮತ್ತು ರಿಯಲ್ ಎಸ್ಟೇಟ್ ವಿಭಾಗದ ಮಾರುಕಟ್ಟೆ ವಿಸ್ತರಣೆ ಮತ್ತು ಲಾಭದಲ್ಲಿ ಏರಿಕೆಯಾಗಿದೆ. ಪೂರ್ಣ ವರ್ಷದಲ್ಲಿ ಗ್ರಾಹಕರಿಗೆ ಮತ್ತಷ್ಟು ಸೇವೆ ಒದಗಿಸಲಾಗುವುದು’ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅನಿಶ್ ಶಾ ತಿಳಿಸಿದ್ದಾರೆ.

ಭಾರತದಲ್ಲಿ ನೇಮಕಾತಿ: ಐಎಸ್‌ಐಎಲ್ ಉಗ್ರ ಸಂಘಟನೆ ಯತ್ನ

ವಿಶ್ವಸಂಸ್ಥೆ (ಪಿಟಿಐ): ಭಯೋತ್ಪಾದಕ ಸಂಘಟನೆಯಾದ ಐಎಸ್‌ಐಎಲ್–ಕೆ (ಇಸ್ಲಾಮಿಕ್ ಸ್ಟೇಟ್ ಇನ್ ಇರಾಕ್ ಆ್ಯಂಡ್ ದಿ ಲೇವಂತ್ – ಖೊರಾಸಾನ್) ಭಾರತದಲ್ಲಿ ಇರುವ ತನ್ನ ಬೆಂಬಲಿಗರ ನೆರವಿನಿಂದ, ಒಬ್ಬಂಟಿಯಾಗಿ ಕೆಲಸ ಮಾಡುವವರನ್ನು ನೇಮಕ ಮಾಡಿಕೊಳ್ಳಲು ಮುಂದಾಗಿದೆ ಎಂದು ವಿಶ್ವಸಂಸ್ಥೆಯ ವರದಿಯೊಂದು ಹೇಳಿದೆ.

ದೇಶದಲ್ಲಿ ಭಾರಿ ಪ್ರಮಾಣದಲ್ಲಿ ದಾಳಿ ನಡೆಸಲು ಈ ಭಯೋತ್ಪಾದಕ ಸಂಘಟನೆಗೆ ಸಾಧ್ಯವಾಗದೆ ಇದ್ದರೂ, ಅದು ಈ ಮಾರ್ಗ ಅನುಸರಿಸಲು ಮುಂದಾಗಿದೆ ಎಂದು ವರದಿಯು ಎಚ್ಚರಿಸಿದೆ.

‘ಸಂಘಟನೆಯು ಉರ್ದು ಭಾಷೆಯಲ್ಲಿ ಕೈಪಿಡಿಯೊಂದನ್ನು ಬಿಡುಗಡೆ ಮಾಡಿದ್ದು, ಹಿಂದೂ–ಮುಸ್ಲಿಂ ಭಿನ್ನಮತವನ್ನು ಭಾರಿ ದೊಡ್ಡದಾಗಿ ತೋರಿಸುವ ಕೆಲಸ ಮಾಡಿದೆ’ ಎಂದು ವಿಶ್ವಸಂಸ್ಥೆಯ ವರದಿಯು ಹೇಳಿದೆ. ಈ ಪ್ರದೇಶದಲ್ಲಿ ಐಎಸ್‌ಐಎಲ್–ಕೆ ಸಂಘಟನೆಯು ಬಹಳ ಗಂಭೀರ ಬೆದರಿಕೆಯಾಗಿದೆ ಎಂದು ಹೇಳಿದೆ.

ಕರ್ನಾಟಕದಲ್ಲಿ ₹2,100 ಕೋಟಿ ಬಂಡವಾಳ ಹೂಡಿಕೆ

ಸನ್ಸೇರಾ ಜತೆ ಸರ್ಕಾರ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನಗಳು ಮತ್ತು ವೈಮಾನಿಕ ಬಿಡಿಭಾಗಗಳನ್ನು ತಯಾರಿಸುವ ಸನ್ಸೇರಾ ಕಂಪನಿಯು ರಾಜ್ಯದಲ್ಲಿ ₹2,100 ಕೋಟಿ ಹೂಡಿಕೆ ಮಾಡಲಿದ್ದು, ಈ ಸಂಬಂಧ ಕೈಗಾರಿಕಾ ಇಲಾಖೆ ಜತೆಗೆ ಒಡಂಬಡಿಕೆಗೆ ಸಹಿ ಮಾಡಿದೆ.

ಖನಿಜ ಭವನದಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರ ಸಮ್ಮುಖದಲ್ಲಿ ಇಲಾಖೆಯ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಮತ್ತು ಸನ್ಸೇರಾ ಕಂಪನಿಯ ಸಿಇಒ ಶೇಖರ್ ವಾಸನ್ ಅವರು ಒಪ್ಪಂದಕ್ಕೆ ಅಂಕಿತ ಹಾಕಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ‘ಸನ್ಸೇರಾ ಎಂಜಿನಿಯರಿಂಗ್ ಲಿಮಿಟೆಡ್ ಸಂಸ್ಥೆಯು ಮುಂದಿನ ಐದು ವರ್ಷಗಳಲ್ಲಿ ಹಂತ ಹಂತವಾಗಿ ಈ ಹೂಡಿಕೆ ಮಾಡಲಿದೆ. ಇದರಿಂದ ಸುಮಾರು 3,500 ಉದ್ಯೋಗಗಳು ಸೃಷ್ಟಿ ಆಗಲಿವೆ’ ಎಂದು ಹೇಳಿದರು.

ಈ ಕಂಪನಿಯು ರಾಮನಗರ ಜಿಲ್ಲೆಯ ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 55 ಎಕರೆ ಪ್ರದೇಶದಲ್ಲಿ ತನ್ನ ಉತ್ಪಾದನಾ ಘಟಕ ಆರಂಭಿಸಲಿದೆ. ತರಬೇತಿ ಕೇಂದ್ರವನ್ನೂ ಆರಂಭಿಸಲಿದ್ದು, ಇದರಿಂದ ಸ್ಥಳೀಯರ ಕೌಶಲ ವೃದ್ಧಿಯಾಗಲಿದೆ. ಕಂಪನಿಯು ದೇಶದಲ್ಲಿ 16 ತಯಾರಿಕಾ ಘಟಕಗಳನ್ನು ಹೊಂದಿದ್ದು, ಅವುಗಳ ಪೈಕಿ 12 ಘಟಕಗಳು ನಮ್ಮ ರಾಜ್ಯದಲ್ಲೇ ಇವೆ’ ಎಂದು ಹೇಳಿದರು.

ಓಟಿಸ್‌ನಿಂದ ₹135 ಕೋಟಿ ಹೂಡಿಕೆ: ಎಲಿವೇಟರ್‌ಗಳನ್ನು ತಯಾರಿಸುವ ಓಟಿಸ್ ಕಂಪನಿ ಕೂಡ ರಾಜ್ಯದಲ್ಲಿ ₹135 ಕೋಟಿ ಹೂಡಲು ಆಸಕ್ತಿ ವ್ಯಕ್ತಪಡಿಸಿದ ಕಾರಣ ಸಚಿವ ಎಂ.ಬಿ.ಪಾಟೀಲ, ಕಂಪನಿಯ ಹಿರಿಯ ನಿರ್ದೇಶಕ ರವಿಶಂಕರ್ ನೇತೃತ್ವದ ತಂಡದ ಜತೆ ಮಾತುಕತೆ ನಡೆಸಿದರು.

ಇದಕ್ಕಾಗಿ ಕಂಪನಿಯು ಹಾರೋಹಳ್ಳಿಯಲ್ಲಿ 12 ಎಕರೆ ಭೂಮಿಯನ್ನು ಕೇಳಿದೆ. ಭೂಮಿ ಒದಗಿಸಲಾಗುವುದು. ಇದರಿಂದ 200ಕ್ಕೂ ಹೆಚ್ಚು ಉದ್ಯೋಗ ಸೃಷ್ಟಿ ಆಗಲಿದೆ ಎಂದು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ವಾಣಿಜ್ಯ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ, ಕಂಪನಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ಎಫ್.ಆರ್.ಸಿಂಘ್ವಿ, ಕಾರ್ಯದರ್ಶಿ ರಾಜೇಶ್ ಮೋದಿ ಇದ್ದರು.



ಖನಿಜ ಭವನದಲ್ಲಿ ನಡೆದ ಸಮಾರಂಭದಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಮತ್ತು ಸನ್ಸೇರಾ ಕಂಪನಿಯ ಸಿಇಒ ಶೇಖರ್ ವಾಸನ್ ಒಡಂಬಡಿಕೆಗೆ ಸಹಿ ಹಾಕಿದರು

‘ನೆರೆ ರಾಜ್ಯದಲ್ಲಿ ಹೂಡಿಕೆಯಿಂದ ನಮಗೆ ನಷ್ಟವಿಲ್ಲ’

‘ಟೊಯೊಟ ಕಂಪನಿಯ ಹೂಡಿಕೆ ಎಂದಿನಂತೆ ಮುಂದುವರಿಯಲಿದೆ. ಆ ಕಂಪನಿ ಮಹಾರಾಷ್ಟ್ರದಲ್ಲೂ ಹೂಡಿಕೆ ಮಾಡುತ್ತಿರುವುದನ್ನು ಬೇರೆ ದೃಷ್ಟಿಯಿಂದ ನೋಡುವ ಅಗತ್ಯವಿಲ್ಲ. ಅದರಿಂದ ನಮ್ಮ ರಾಜ್ಯಕ್ಕೆ ನಷ್ಟವೂ ಆಗುವುದಿಲ್ಲ’ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

‘ಟೊಯೊಟ ಕಂಪನಿಯು ಮಹಾರಾಷ್ಟ್ರದಲ್ಲಿ ಹೆಚ್ಚುವರಿ ಹೂಡಿಕೆ ಮಾಡಬಹುದು. ನಮ್ಮಲ್ಲಿ ಹೂಡಿಕೆ ಮಾಡಿದ ಮಾತ್ರಕ್ಕೆ ಅವರು ಇನ್ನೊಂದು ಕಡೆ ಹೂಡಿಕೆ ಮಾಡಬಾರದು ಎಂದೇನಿಲ್ಲ. ಆದರೆ, ಕರ್ನಾಟಕದಲ್ಲಿ ಆ ಕಂಪನಿಯ ಹೂಡಿಕೆ ಎಂದಿನಂತೆಯೇ ಮುಂದುವರಿಯಲಿದೆ’ ಎಂದು ತಿಳಿಸಿದ್ದಾರೆ.

ಟೆಹರಾನ್ ನಿವಾಸದ ಮೇಲೆ ಇಸ್ರೇಲ್‌ನಿಂದ ವೈಮಾನಿಕ ದಾಳಿ: ಹಮಾಸ್

ಹಮಾಸ್ ಪರಮೋಚ್ಚ ನಾಯಕ ಹನಿಯೆ ಹತ್ಯೆ

ಬೈರೂತ್ (ಎಪಿ): ಹಮಾಸ್‌ನ ಪರಮೋಚ್ಚ ನಾಯಕ ಇಸ್ಮಾಯಿಲ್ ಹನಿಯೆ (61) ಅವರನ್ನು ಇರಾನ್‌ನಲ್ಲಿ ಹತ್ಯೆ ಮಾಡಲಾಗಿದೆ ಎಂದು ಇರಾನ್ ಮತ್ತು ಬಂಡುಕೋರರ ಗುಂಪು ಬುಧವಾರ ಖಚಿತಪಡಿಸಿವೆ.



ಇಸ್ಮಾಯಿಲ್ ಹನಿಯೆ

ಪ್ಯಾಲೆಸ್ಟೀನ್‌ನ ಬಂಡುಕೋರ ಸಂಘಟನೆಯ ರಾಜಕೀಯ ಘಟಕದ ಮುಖ್ಯಸ್ಥ ಹನಿಯೆ ಅವರ ಸಾವಿಗೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯೇ ಕಾರಣ ಎಂದು ಹಮಾಸ್ ಆರೋಪಿಸಿದೆ. ‘ದಾಳಿಯ ಬಗ್ಗೆ ತನಿಖೆ ನಡೆಸಲಾಗುತ್ತಿದೆ’ ಎಂದು ಇರಾನ್‌ನ ಪ್ಯಾರಾ ಮಿಲಿಟರಿ ರೆವಲ್ಯೂಷನರಿ ಗಾರ್ಡ್ ತಿಳಿಸಿದೆ. ದಾಳಿ ಹೇಗೆ ನಡೆಯಿತು ಎಂಬ ಬಗ್ಗೆ ಅದು ಮಾಹಿತಿ ನೀಡಿಲ್ಲ.

ಕಳೆದ ವರ್ಷ ಅಕ್ಟೋಬರ್ 7ರಂದು ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ಹಠಾತ್ ದಾಳಿ ನಡೆಸಿ 1,200 ಮಂದಿಯನ್ನು ಹತ್ಯೆಗೈದಿದ್ದರು. 250 ಮಂದಿಯನ್ನು ಒತ್ತೆಯಾಳಾಗಿ ಹೊತ್ತೊಯ್ದಿದ್ದರು. ನಂತರ ಹನಿಯೆ ಮತ್ತು ಇತರ ಹಮಾಸ್ ನಾಯಕರನ್ನು ಸದೆಬಡಿಯಲು ಇಸ್ರೇಲ್ ನಿರಂತರವಾಗಿ ಪ್ರಯತ್ನಿಸುತ್ತಿದೆ.

> ಈ ಹತ್ಯೆಯನ್ನು ಖಂಡಿಸುತ್ತೇನೆ. ಇದು ಹೇಡಿಗಳ ಕೃತ್ಯ ಮತ್ತು ಅಪಾಯಕಾರಿ ಬೆಳವಣಿಗೆ
> **ಮಹಮ್ಮದ್ ಅಬ್ಬಾಸ್,** ಪ್ಯಾಲೆಸ್ಟೀನ್ ಅಧ್ಯಕ್ಷ

ಹನಿಯೆ ಅವರ ಹತ್ಯೆ ವಿಚಾರವಾಗಿ ಇಸ್ರೇಲ್ ಈವರೆಗೆ ಪ್ರತಿಕ್ರಿಯೆ ನೀಡಿಲ್ಲ.

ಸಾವಿನ ಬೆನ್ನಲ್ಲೇ ಹೇಳಿಕೆ ಬಿಡುಗಡೆ ಮಾಡಿರುವ ಹಮಾಸ್, ‘ಇರಾನ್‌ನ ನೂತನ ಅಧ್ಯಕ್ಷರ ಪ್ರಮಾಣವಚನ ಸಮಾರಂಭದಲ್ಲಿ ಪಾಲ್ಗೊಂಡು ಮರಳಿದ ಬಳಿಕ ರಾಜಧಾನಿ ಟೆಹರಾನ್‌ನಲ್ಲಿರುವ ಅವರ ನಿವಾಸದಲ್ಲಿದ್ದ ಸಂದರ್ಭದಲ್ಲಿ ಹನಿಯೆ ಮತ್ತು ಇತರ ಅಧಿಕಾರಿಗಳನ್ನು ಹತ್ಯೆ ಮಾಡಲಾಗಿದೆ’ ಎಂದು ತಿಳಿಸಿದೆ.

‘ಹನಿಯೆ ಅವರು ಹುತಾತ್ಮರಾಗಿದ್ದಾರೆ’ ಎಂದೂ ಹಮಾಸ್ ಹೇಳಿಕೆಯಲ್ಲಿ ಘೋಷಣೆ ಮಾಡಿದೆ.

ಕಳೆದ ಏಪ್ರಿಲ್‌ನಲ್ಲಿ ಗಾಜಾ ಮೇಲೆ ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ ಹನಿಯೆ ಅವರ ಮೂವರು ಮಕ್ಕಳು ಮತ್ತು ನಾಲ್ವರು ಮೊಮ್ಮಕ್ಕಳು ಮೃತಪಟ್ಟಿದ್ದರು.

‘ನಮ್ಮ ನಾಡನ್ನು ಸ್ವತಂತ್ರಗೊಳಿಸುವವರೆಗೂ ಶತ್ರುಗಳೊಂದಿಗೆ ಹೋರಾಡುತ್ತಲೇ ಇರುತ್ತೇವೆ’ ಎಂದು ಹನಿಯೆ ಇತ್ತೀಚೆಗೆ ಹೇಳಿದ್ದರು.

ಯಾರೀ ಹನಿಯೆ?

1963ರ ಜನವರಿ 29ರಂದು ಗಾಜಾದಲ್ಲಿ ಜನಿಸಿದ ಹನಿಯೆ ಅವರು 1987ರಲ್ಲಿ ಹಮಾಸ್ ಬಂಡುಕೋರ ಸಂಘಟನೆ ಸೇರಿದ್ದರು. ಸಂಸ್ಥಾಪಕ ಅಹ್ಮದ್ ಯಾಸಿನ್ ಅವರ ಸಹಾಯಕನಾಗಿ ಕೆಲಸ ಮಾಡಿದ್ದರು. ನಂತರ ಸಂಘಟನೆಯಲ್ಲಿ ವಿವಿಧ ಶ್ರೇಣಿಗಳಲ್ಲಿ ಕೆಲಸ ಮಾಡಿ 2017ರಲ್ಲಿ ಹಮಾಸ್‌ನ ಅತ್ಯುನ್ನತ ರಾಜಕೀಯ ನಾಯಕ ಹುದ್ದೆಗೇರಿದ್ದರು. ಆಸ್ತಿಕರಾಗಿದ್ದ ಹನಿಯೆ ಅತ್ಯುತ್ತಮ ವಾಗ್ಮಿಯೂ ಹೌದು. ಗಾಜಾದಲ್ಲಿ ಪ್ರಧಾನಮಂತ್ರಿಯಾಗಿದ್ದ ಸಂದರ್ಭದಲ್ಲಿ ಬೆಂಬಲಿಗರನ್ನು ಉದ್ದೇಶಿಸಿ ಸುದೀರ್ಘ ಭಾಷಣ ಮಾಡುತ್ತಿದ್ದರು.

2019ರಲ್ಲಿ ಗಾಜಾ ತೊರೆದು ಸ್ವಯಂಪ್ರೇರಿತರಾಗಿ ಗಡೀಪಾರಾಗಿ ಕತಾರ್‌ನಲ್ಲಿ ನೆಲೆಸಿದ್ದರು. ಜೀವ ಬೆದರಿಕೆಗಳು ಇದ್ದರೂ ಟರ್ಕಿ ಮತ್ತು ಇರಾನ್‌ಗೆ ಆಗಾಗ ಪ್ರಯಾಣಿಸುತ್ತಿದ್ದರು.

‘ಹಮಾಸ್ ಗುಂಪಿನ ವಿದೇಶಾಂಗ ನೀತಿ ಮತ್ತು ರಾಜತಾಂತ್ರಿಕತೆ ಕುರಿತ ನೀತಿ ರೂಪಿಸುವಲ್ಲಿ ಹನಿಯೆ ಮುಖ್ಯ ಪಾತ್ರ ವಹಿಸಿದ್ದರು’ ಎಂದು ಹಮಾಸ್ ತಜ್ಞ ಮೈಕೆಲ್ ಮಿಲ್‌ಶ್ಟೀನ್ ತಿಳಿಸಿದ್ದಾರೆ.

ಅಮೆರಿಕದಿಂದ ಪ್ರತಿಕ್ರಿಯೆ ಇಲ್ಲ: ಹನಿಯೆ ಅವರ ಹತ್ಯೆ ಬಗ್ಗೆ ಅಮೆರಿಕ ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಹಮಾಸ್ ಮತ್ತು ಇಸ್ರೇಲ್ ಮಧ್ಯೆ ತಾತ್ಕಾಲಿಕ ಕದನ ವಿರಾಮ ಮತ್ತು ಪರಸ್ಪರ ಒತ್ತೆಯಾಳುಗಳ ಬಿಡುಗಡೆಗಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ನೇತೃತ್ವದ ಸರ್ಕಾರ ಯತ್ನಿಸುತ್ತಿರುವ ಮಧ್ಯೆಯೇ ಈ ದಾಳಿ ನಡೆದಿದೆ.

ಹಮಾಸ್ ಗುಂಪಿನ ಅತ್ಯುನ್ನತ ನಾಯಕ ಯಹ್ಯಾ ಸಿನ್ವಾರ್. ಇವರೇ ಅಕ್ಟೋಬರ್ 7ರ ಇಸ್ರೇಲ್ ಮೇಲಿನ ದಾಳಿಯ ಮಾಸ್ಟರ್‌ಮೈಂಡ್ ಎಂದು ಹೇಳಲಾಗಿದೆ.

ಹಮಾಸ್ ವಿರುದ್ಧ ಇಸ್ರೇಲ್ ಯುದ್ಧ ಘೋಷಿಸಿದಾಗಿನಿಂದ ಈವರೆಗೆ 39,360 ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ ಮತ್ತು 90,900 ಮಂದಿ ಗಾಯಗೊಂಡಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವಾಲಯ ತಿಳಿಸಿದೆ.

ಚೀನಾ ಆತಂಕ: ಈ ಹತ್ಯೆ ಪ್ರಕರಣದಿಂದಾಗಿ ಮಧ್ಯಪ್ರಾಚ್ಯದಲ್ಲಿ ಸಮಸ್ಯೆ ಇನ್ನಷ್ಟು ಉಲ್ಬಣಿಸಲಿದೆ ಎಂದು ಚೀನಾ ಪ್ರತಿಕ್ರಿಯಿಸಿದೆ.

ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳು ಇಂದಿನಿಂದ • ರೇಸ್ ವಾಕ್‌ನಲ್ಲಿ ಭಾರತದ ಸವಾಲು

ನೀರಜ್ ಮೇಲೆ ನಿರೀಕ್ಷೆಯ ಭಾರ

29
ಅಥ್ಲೆಟಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ ಭಾರತದ ಕ್ರೀಡಾಪಟುಗಳು


ಪಾರುಲ್ ಚೌಧರಿ
ಅವಿನಾಶ್ ಸಾಬಳೆ
ನೀರಜ್ ಚೋಪ್ರಾ

ಪ್ಯಾರಿಸ್ (ಪಿಟಿಐ): ಭಾರತದ 'ಚಿನ್ನದ ಹುಡುಗ' ನೀರಜ್ ಚೋಪ್ರಾ ನಾಯಕತ್ವದ 29 ಅಥ್ಲೀಟ್‌ಗಳ ತಂಡವು ಗುರುವಾರ ಒಲಿಂಪಿಕ್ಸ್‌ನಲ್ಲಿ ಆರಂಭವಾಗಲಿರುವ ಅಥ್ಲೆಟಿಕ್ಸ್‌ನಲ್ಲಿ ಕಣಕ್ಕಿಳಿಯಲಿದೆ.

ಸತತ ಎರಡನೇ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸುವ ನಿರೀಕ್ಷೆಯಲ್ಲಿ ನೀರಜ್ ಇದ್ದಾರೆ. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು ಜಾವೆಲಿನ್ ಥ್ರೋನಲ್ಲಿ ಚಿನ್ನ ಜಯಿಸಿದ್ದರು. ಭಾರತದ ಕ್ರೀಡಾ ಇತಿಹಾಸದಲ್ಲಿಯೇ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಗೆದ್ದ ಮೊದಲ ಪದಕ ಅದಾಗಿತ್ತು. ಚೋಪ್ರಾ ಅವರು ಭಾಗವಹಿಸುವ ಜಾವೆಲಿನ್ ಥ್ರೋ ಸ್ಪರ್ಧೆಯ ಅರ್ಹತಾ ಸುತ್ತು ಆಗಸ್ಟ್ 6ರಂದು ನಡೆಯಲಿದೆ. 8ರಂದು ಪದಕ ಸುತ್ತಿನ ಸ್ಪರ್ಧೆ ನಡೆಯಲಿದೆ.

ಟೋಕಿಯೊದ ಸಾಧನೆಯ ನಂತರವೂ ನೀರಜ್ ಪ್ರಮುಖ ಚಾಂಪಿಯನ್‌ಷಿಪ್‌ಗಳಲ್ಲಿ ಉತ್ತಮ ಲಯದಲ್ಲಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಅವರು 15 ಪ್ರಮುಖ ಅಂತರರಾಷ್ಟ್ರೀಯ ಚಾಂಪಿಯನ್ ಷಿಪ್‌ಗಳಲ್ಲಿ ಸ್ಪರ್ಧಿಸಿದ್ದಾರೆ. ಇದರಲ್ಲಿ ಕೇವಲ ಎರಡು ಬಾರಿ ಮಾತ್ರ 85 ಮೀಟರ್ಸ್‌ಗಿಂತ ಕಡಿಮೆ ಅಂತರದ ಥ್ರೋ ದಾಖಲಿಸಿದ್ದಾರೆ. ಅವರು ವಿಶ್ವ ಚಾಂಪಿಯನ್ ಕೂಡ ಆಗಿದ್ದಾರೆ. ಇಲ್ಲಿ ಅವರು ಭಾರತದವರೇ ಆದ ಕಿಶೋರ್ ಜೇನಾ ಅವರಿಂದಲೂ ಸ್ಪರ್ಧೆ ಎದುರಿಸಲಿದ್ದಾರೆ.

ಗುರುವಾರ ಅಥ್ಲೆಟಿಕ್ಸ್‌ನಲ್ಲಿ ನಡೆಯಲಿರುವ ಮೊದಲ ಸ್ಪರ್ಧೆ 20 ಕಿ.ಮೀ ರೇಸ್ ವಾಕಿಂಗ್. ಈ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಆಕ್ಷದೀಪ್ ಸಿಂಗ್, ವಿಕಾಶ್ ಸಿಂಗ್ ಮತ್ತು ಪರಮಜೀತ್ ಸಿಂಗ್ ಬಿಷ್ಠ್ ಸ್ಪರ್ಧಿಸುವರು. ಮಹಿಳೆಯರ ವಿಭಾಗದಲ್ಲಿ ಪ್ರಿಯಾಂಕಾ ಗೋಸ್ವಾಮಿ ಅವರು ಕಣದಲ್ಲಿದ್ದಾರೆ.

ಪುರುಷರ 3000 ಮೀ ಸ್ಟೀಪಲ್‌ಚೇಸ್‌ನಲ್ಲಿ ಅವಿನಾಶ್ ಸಾಬಳೆ ಹಾಗೂ 4x400 ಮೀ ರಿಲೇ ತಂಡದ ಮೇಲೆ ನಿರೀಕ್ಷೆ ಇದೆ. ಈಚೆಗೆ ನಡೆದಿದ್ದ ಪ್ಯಾರಿಸ್ ಡೈಮಂಡ್ ಲೀಗ್‌ನಲ್ಲಿ ಸಾಬಳೆ 8 ನಿಮಿಷ, 9.91ಸೆಕೆಂಡುಗಳಲ್ಲಿ ಗುರಿ ಮುಟ್ಟಿ, ಆರನೇ ಸ್ಥಾನ ಪಡೆದಿದ್ದರು. ಈ ವಿಭಾಗದಲ್ಲಿ ಪದಕ ಜಯಿಸುವುದು ಕಠಿಣ ಸವಾಲಾಗಿದೆ. ಏಕೆಂದರೆ ವಿಶ್ವದಾಖಲೆ ಹೊಂದಿರುವ ಇಥಿಯೊಪಿಯಾದ ಲಮೇಚಾ ಗಿರ್ಮಾ, ಹಾಲಿ ವಿಶ್ವ ಮತ್ತು ಒಲಿಂಪಿಕ್ಸ್ ಚಾಂಪಿಯನ್ ಆಗಿರುವ ಮೊರಾಕೊದ ಸೂಫಿಯಾನ್ ಅಲ್ ಬಕಾಲಿ ಕಣದಲ್ಲಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಜ್ಯೋತಿ ಯರಾಜಿ (100 ಮೀ ಹರ್ಡಲ್ಸ್), ಪಾಲ್ ಚೌಧರಿ (3000 ಮೀ ಸ್ಟೀಪಲ್ ಚೇಸ್), ಅನುರಾಣಿ (ಜಾವೆಲಿನ್ ಥ್ರೋ) ಹಾಗೂ 4X400 ಮೀ ರಿಲೆ ತಂಡದವರು ಕಣದಲ್ಲಿದ್ದಾರೆ.

ಪುರುಷರ ಶಾಟ್‌ಪಟ್‌ನಲ್ಲಿ ತಜಿಂದರ್ ಪಾಲ್ ಸಿಂಗ್ ತೂರ್, ಟ್ರಿಪಲ್ ಜಂಪ್ ಅಥ್ಲೀಟ್ ಪ್ರವೀಣ್ ಚಿತ್ರವೇಲ್ ಮತ್ತು ಅಬುಲ್ಲಾ ಅಬೂಬಕ್ಕರ್ ಅವರು ಫೈನಲ್ ಸುತ್ತು ಪ್ರವೇಶಿಸುವ ನಿರೀಕ್ಷೆಯಲ್ಲಿದ್ದಾರೆ. ಈ ಮೊದಲು 30 ಅಥ್ಲೀಟ್‌ಗಳ ತಂಡವನ್ನು ಪ್ರಕಟಿಸಲಾಗಿತ್ತು. ಕೂಟಕ್ಕಿಂತ ಮೊದಲು ಪ್ರಕಟವಾದ ಅಂತಿಮ ಪಟ್ಟಿಯಲ್ಲಿ ಶಾಟ್‌ಪಟ್ ಸ್ಪರ್ಧಿ ಅಭಾ ಕಟುವಾ ಅವರ ಹೆಸರನ್ನು ಕೈಬಿಡಲಾಗಿತ್ತು. ಆದರೆ ಅದಕ್ಕೆ ಕಾರಣವನ್ನು ಇದುವರೆಗೂ ಬಹಿರಂಗಪಡಿಸಿಲ್ಲ.

ಶಕ್ಯಾರಿ, ಫ್ರೆಸರ್ ಮೇಲೆ ಕಣ್ಣು

ಪ್ಯಾರಿಸ್ (ಎಪಿ): ಒಲಿಂಪಿಕ್ಸ್‌ನಲ್ಲಿ ಈ ಬಾರಿ ವೇಗದ 'ರಾಜ' ಮತ್ತು 'ರಾಣಿ'ಯ ಪಟ್ಟಕ್ಕಾಗಿ ತುರುಸಿನ ಪೈಪೋಟಿ ಇದೆ.

ಪುರುಷರ 100 ಮೀ ಓಟದಲ್ಲಿ ಜಮೈಕಾದ ಉಸೇನ್ ಬೋಲ್ಟ್ ಅವರು ಈ ಹಿಂದೆ ಮಾಡಿರುವ ದಾಖಲೆಯನ್ನು ಅಳಿಸಿ ಹಾಕುವ ಅಥ್ಲೀಟ್ ಯಾರು ಎಂಬ ಕುತೂಹಲವೂ ಗರಿಗೆದರಿದೆ. ಪುರುಷರ ವಿಭಾಗದಲ್ಲಿ ಅಮೆರಿಕದ ನೊವಾ ಲೈಲ್ಸ್ ಮತ್ತು ಕೆನ್ಯಾದ ಫರ್ಡಿನೆಂಡ್ ಒಮ್ನಾಯಾಲಾ ಅವರಿಬ್ಬರಲ್ಲಿ ಹೆಚ್ಚು ಪೈಪೋಟಿ ಇದೆ.

ಈ ಸಲ ಮಹಿಳೆಯರ ವಿಭಾಗದ ಸ್ಪ್ರಿಂಟ್ ಸ್ಪರ್ಧೆಗಳು ಹೆಚ್ಚು ಕುತೂಹಲ ಕೆರಳಿಸಿವೆ. ಅದಕ್ಕೆ ಕಾರಣ ಜಮೈಕಾದ ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್ ಮತ್ತು ಅಮೆರಿಕದ ಶಕ್ಯಾರಿ ರಿಚರ್ಡ್ಸನ್ ಅವರ ಜಿದ್ದಾಜಿದ್ದಿ. ಶಕ್ಯಾರಿ ಅವರು ಹಾಲಿ ವಿಶ್ವ ಚಾಂಪಿಯನ್ ಆಗಿದ್ದಾರೆ.

ಶುಕ್ರವಾರ ಮಹಿಳೆಯರ 100 ಮೀ ಓಟದ ಮೊದಲ ಸುತ್ತಿನ ಸ್ಪರ್ಧೆ ನಡೆಯಲಿದೆ. ಹೋದ ಬಾರಿಯ ಚಾಂಪಿಯನ್ ಎಲೈನ್ ಥಾಂಪ್ಸನ್ ಹೆರಾ ಅವರು ಈ ಬಾರಿ ಕಣದಲ್ಲಿ ಇಲ್ಲ. ಆ್ಯನ್ ಫ್ರೇಸರ್ ಅವರು ತಮ್ಮ ಕ್ರೀಡಾಜೀವನದ ಐದನೇ ಮತ್ತು ಅಂತಿಮ ಒಲಿಂಪಿಕ್ಸ್‌ನಲ್ಲಿ ಕಣಕ್ಕಿಳಿಯುತ್ತಿದ್ದಾರೆ. 2008 ಮತ್ತು 2012ರಲ್ಲಿ ಅವರು 100 ಮೀ ಓಟದ ಚಿನ್ನದ ಪದಕ ಜಯಿಸಿದ್ದರು.

ಜಮೈಕಾದ ಶೆರಿಕಾ ಜಾಕ್ಸನ್ ಅವರು 100 ಮೀಟರ್ ಓಟದಿಂದ ಹಿಂದೆ ಸರಿದಿದ್ದಾರೆ. 200 ಮೀ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.

ರೆಪೆಷಾಜ್: ಓಟಕ್ಕೆ ಹೊಳಪು

'ವರ್ಲ್ಡ್ ಅಥ್ಲೆಟಿಕ್ಸ್'ನ ಹೊಸ ನಿಯಮ ಜಾರಿಗೆ ಕಾತರ

• ವಿಕ್ರಂ ಕಾಂತಿಕೆರೆ

ಮಂಗಳೂರು: ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಈ ಬಾರಿಯ ಒಲಿಂಪಿಕ್ಸ್‌ನ 200ರಿಂದ 1500 ಮೀಟರ್ಸ್ ವರೆಗಿನ ಓಟದ ಸ್ಪರ್ಧೆಯಲ್ಲಿ ರೆಪೆಷಾಜ್ ನಿಯಮ ಜಾರಿಗೆ ಬರಲಿದೆ. ಹೀಟ್ಸ್‌ನಲ್ಲಿ ಹಿಂದೆ ಉಳಿದ ಅಥ್ಲೀಟ್‌ಗಳಿಗೆ ಸಾಮರ್ಥ್ಯವನ್ನು ಮತ್ತೊಮ್ಮೆ ಒರೆಗೆ ಹಚ್ಚಲು ಇದು ನೆರವಾಗಲಿದೆ.

ಆಗಸ್ಟ್ ಒಂದರಿಂದ 11ರ ವರೆಗೆ ಪ್ಯಾರಿಸ್‌ನಲ್ಲಿ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳು ನಡೆಯಲಿದ್ದು ರೆಪೆಷಾಜ್ ಇರುವ ಮೊದಲ ಸ್ಪರ್ಧೆಗೆ ಸೇಂಟ್ ಡೆನಿಸ್‌ನಲ್ಲಿರುವ ಸ್ಟೇಡ್ ಡಿ ಫ್ರಾನ್ಸ್ ಕ್ರೀಡಾಂಗಣ ಆ.3ರಂದು ವೇದಿಕೆಯಾಗಲಿದೆ.


ಕುಸ್ತಿ, ಜೂಡೊ, ಟೇಕ್ವಾಂಡೊ, ರೋಯಿಂಗ್ ಮುಂತಾದ ಕ್ರೀಡೆಗಳಲ್ಲಿ ಸದ್ಯ ರೆಪೆಷಾಜ್ ನಿಯಮ ಬಳಸಲಾಗುತ್ತದೆ. ನಾಕೌಟ್ ಹಂತದ ಆರಂಭಿಕ ಸ್ಪರ್ಧೆಗಳಲ್ಲಿ ಸೋತವರಿಗೆ ಮತ್ತೊಂದು ಅವಕಾಶ ಸಿಗುವಂತೆ ಮಾಡುವುದು ಇದರ ಉದ್ದೇಶ. ಕುಸ್ತಿ, ಟೇಕ್ವಾಂಡೊ, ಜೂಡೊ ಮುಂತಾದ ಕ್ರೀಡೆಗಳಲ್ಲಿ ಪ್ರಬಲ ಎದುರಾಳಿ ಅಂದರೆ, ಫೈನಲ್ ಪ್ರವೇಶಿಸಿದವರ ವಿರುದ್ಧ ಸೋತವರಿಗೂ ಕಂಚಿನ ಪದಕಕ್ಕಾಗಿ ಸೆಣಸುವ ಅವಕಾಶವಿದೆ. ಹೀಗಾಗಿ ಈ ಕ್ರೀಡೆಗಳಲ್ಲಿ ಎರಡು ಕಂಚು ಸೇರಿದಂತೆ ನಾಲ್ಕು ಪದಕಗಳನ್ನು ನೀಡಲಾಗುತ್ತದೆ.

ಅಥ್ಲೆಟಿಕ್ಸ್‌ನ ವೈಯಕ್ತಿಕ ವಿಭಾಗಗಳ ಹೀಟ್ಸ್‌ನಲ್ಲಿ ಹಿಂದೆ ಉಳಿದವರ ನಡುವೆ ಮತ್ತೊಂದು ಹೀಟ್ಸ್ (ರೆಪೆಷಾಜ್ ಹೀಟ್ಸ್) ನಡೆಸಿ ಸೆಮಿಫೈನಲ್‌ಗೆ ಅರ್ಹತೆ ಪಡೆಯಲು ಅನುವು ಮಾಡಿಕೊಡುವುದಕ್ಕಾಗಿ ಅಥ್ಲೆಟಿಕ್ಸ್‌ನ ಜಾಗತಿಕ ಆಡಳಿತ ಸಂಸ್ಥೆ 'ವರ್ಲ್ಡ್ ಅಥ್ಲೆಟಿಕ್ಸ್' 2022ರಲ್ಲಿ ನಿರ್ಣಯ ಕೈಗೊಂಡಿತ್ತು.

ಟ್ರ್ಯಾಕ್ ಸ್ಪರ್ಧೆಗಳಲ್ಲಿ ಸದ್ಯ ಹೀಟ್ಸ್, ಸೆಮಿಫೈನಲ್ ಮತ್ತು ಫೈನಲ್ ಸುತ್ತುಗಳು ಇವೆ. ಆದರೆ ಪ್ಯಾರಿಸ್‌ನಲ್ಲಿ ನಾಲ್ಕು ಸುತ್ತುಗಳ ಸ್ಪರ್ಧೆ ನಡೆಯಲಿದೆ. ಹೀಗಾಗಿ ಪ್ರತಿ ಅಥ್ಲೀಟ್‌ಗೆ ಕನಿಷ್ಠ ಎರಡು ಸುತ್ತುಗಳಲ್ಲಿ ಓಡುವ ಅವಕಾಶ ಲಭಿಸಲಿದೆ. 100 ಮೀಟರ್ಸ್, 3,000 ಮೀಟರ್ಸ್ ಮತ್ತು ಅದಕ್ಕೂ ಹೆಚ್ಚಿನ ಅಂತರದ ಓಟಕ್ಕೆ ಇದು ಅನ್ವಯವಾಗುವುದಿಲ್ಲ.

ರೋಯಿಂಗ್ ನಿಯಮಕ್ಕೆ ಸಮಾನ: ರೋಯಿಂಗ್‌ನ ರೆಪೆಷಾಜ್ ಹಂತ ಭಿನ್ನ. ಕುಸ್ತಿ, ಟೇಕ್ವಾಂಡೊ ಹಾಗೂ ಜೂಡೊದಲ್ಲಿ ಇರುವಂತೆ ಎರಡು ಕಂಚಿನ ಪದಕದ ಪದ್ಧತಿ ರೋಯಿಂಗ್‌ನಲ್ಲಿ ಇಲ್ಲ. ಕ್ವಾರ್ಟರ್ ಫೈನಲ್ ಅಥವಾ ಸೆಮಿಫೈನಲ್‌ಗೆ ಅರ್ಹತೆ ಗಳಿಸುವುದಕ್ಕಾಗಿ ಮಾತ್ರ ಇದರಲ್ಲಿ ರೆಪೆಷಾಜ್ ಹಂತ ಇರುತ್ತದೆ. ಇದೇ ಮಾದರಿ ಅಥ್ಲೆಟಿಕ್ಸ್‌ಗೂ ಅನ್ವಯ ಆಗಲಿದೆ. ಇಲ್ಲಿ, ರೆಪೆಷಾಜ್ ಹೀಟ್ಸ್ ಮೂಲಕ ಸೆಮಿಫೈನಲ್ ಪ್ರವೇಶಿಸಲು ಅವಕಾಶ ಲಭಿಸುತ್ತದೆ.

ಸೆಮಿಫೈನಲ್ ಮತ್ತು ಫೈನಲ್‌ನಲ್ಲಿ ಈಗ ಇರುವ ನಿಯಮಗಳೇ ಬಳಕೆಯಾಗಲಿವೆ. ಪ್ಯಾರಿಸ್ ಟ್ರ್ಯಾಕ್‌ನಲ್ಲಿ ಭಾರತ ಒಟ್ಟು 12 ವೈಯಕ್ತಿಕ ಸ್ಪರ್ಧೆಗಳಲ್ಲಿ ಅಥ್ಲೀಟ್‌ಗಳನ್ನು ಕಣಕ್ಕೆ ಇಳಿಸಲಿದೆ. ಈ ಪೈಕಿ ಎರಡು ಸ್ಪರ್ಧೆಗಳಿಗೆ ಮಾತ್ರ ಇದು ಅನ್ವಯ ಆಗಲಿದೆ. ಮಹಿಳೆಯರ 400 ಮೀ. ಓಟದಲ್ಲಿ ಕಿರಣ್ ಪಹಲ್ ಮತ್ತು ಮಹಿಳೆಯರ 100 ಮೀ. ಹರ್ಡಲ್ಸ್‌ನಲ್ಲಿ ಜ್ಯೋತಿ ಯರ್ರಾಜಿ ಪಾಲ್ಗೊಳ್ಳುತ್ತಿದ್ದಾರೆ.


ಜಮೈಕಾದ ಶೆಲ್ಲಿ ಆ್ಯನ್ ಫ್ರೆಸರ್ ಪ್ರೈಸ್ –ಎಎಫ್‌ಪಿ ಚಿತ್ರ

ಮಿಶ್ರ ರೇಸ್ ವಾಕಿಂಗ್ ರಿಲೆ

ಈ ಬಾರಿ ಮಿಶ್ರ ರೇಸ್ ವಾಕಿಂಗ್ ರಿಲೆ ಕೂಡ ಒಲಿಂಪಿಕ್ಸ್‌ಗೆ ಪದಾರ್ಪಣೆ ಮಾಡಲಿದೆ. 'ಮ್ಯಾರಥಾನ್ ರೇಸ್ ವಾಕ್ ಮಿಕ್ಸಡ್ ರಿಲೆ' ಎಂಬ ಹೆಸರಿನ ಈ ಸ್ಪರ್ಧೆ 42.195 ಕಿಮೀ ಅಂತರ ಹೊಂದಿರಲಿದ್ದು ಪುರುಷ ಮತ್ತು ಮಹಿಳಾ ಅಥ್ಲೀಟ್‌ಗಳು ತಲಾ ಎರಡು 'ಲೆಗ್'ಗಳಲ್ಲಿ ನಡೆಯಲಿದ್ದಾರೆ.

ವೈಯಕ್ತಿಕ ವೇಗ ನಡಿಗೆ ಸ್ಪರ್ಧೆ ನಡೆಯಲಿರುವ ಸೆಂಟ್ರಲ್ ಪ್ಯಾರಿಸ್‌ನ ಈಫೆಲ್ ಗೋಪುರದ ಪದತಳದಲ್ಲಿ ಮಿಶ್ರ ರೇಸ್ ವಾಕಿಂಗ್ ನಡೆಯಲಿದ್ದು ಆಗಸ್ಟ್ 7ರಂದು ಮುಂಜಾನೆ 7.30ಕ್ಕೆ ಇದನ್ನು ನಿಗದಿ ಮಾಡಲಾಗಿದೆ. ಭಾರತದ ಸೂರಜ್ ಪನ್ವರ್ ಹಾಗೂ ಪ್ರಿಯಾಂಕ ಗೋಸ್ವಾಮಿ ಸ್ಪರ್ಧಿಸಲಿದ್ದಾರೆ.

ಒಲಿಂಪಿಕ್ಸ್ ಅಥ್ಲೆಟಿಕ್ಸ್‌ನಲ್ಲಿ ರಿಪೇಜ್

ದಿನಾಂಕ	ಸ್ಪರ್ಧೆಯ ವಿವರ	ಸಮಯ
ಆ.3	ಮಹಿಳೆಯರ 800ಮೀ	ಮ.2.30
ಆ.3	ಪುರುಷರ 1500 ಮೀ	ಮ.2.45
ಆ.5	ಮಹಿಳೆಯರ 400ಮೀ ಹರ್ಡಲ್ಸ್	ಮ. 2.20
ಆ.5	ಪುರುಷರ400ಮೀ	ಮ.2.50
ಆ.5	ಮಹಿಳೆಯರ 200	ಸಂ.4.20
ಆ.6	ಪುರುಷರ 110ಮೀ ಹರ್ಡಲ್ಸ್	ಮ.2.20
ಆ.6	ಮಹಿಳೆಯರ 400ಮೀ	ಮ.2.50
ಆ.6	ಪುರುಷರ 400ಮೀ ಹರ್ಡಲ್ಸ್	ಮ.3.30
ಆ.6	ಪುರುಷರ 200ಮೀ	ಸಂ.4.00
ಆ.7	ಮಹಿಳೆಯರ 1500ಮೀ	ಸಂ.4.15
ಆ.8	ಮಹಿಳೆಯರ 100 ಮೀ ಹರ್ಡಲ್ಸ್	ಮ.2.05
ಆ.8	ಪುರುಷರ 800ಮೀ	ಮ.3.30

ಓಟದ ಟ್ರ್ಯಾಕ್‌ನಲ್ಲಿ ನಿರ್ದಿಷ್ಟ ಕಾರಣಗಳಿಂದ ಪ್ರಮುಖ ಅಥ್ಲೀಟ್‌ಗಳು ಕೂಡ ಕೆಲವೊಮ್ಮೆ ಹಿನ್ನಡೆ ಸನುಭವಿಸುವುದುಂಟು. ರಿಪೇಜ್‌ನಿಂದ ಅವರು ಚೇತರಿಸಿಕೊಳ್ಳಬಹುದು

ಅಜಿತ್ ಕುಮಾರ್, ಅಥ್ಲೆಟಿಕ್ ಕೋಚ್

ದೀಪಿಕಾಗೆ ಜಯ: ತರುಣ್‌ದೀಪ್‌ಗೆ ನಿರಾಸೆ

ಪ್ಯಾರಿಸ್ (ಪಿಟಿಐ): ಭಾರತದ ಅನುಭವಿ ಬಿಲ್ಗಾರ್ತಿ ದೀಪಿಕಾ ಕುಮಾರಿ ಅವರು ಬುಧವಾರ ಒಲಿಂಪಿಕ್ಸ್‌ನ ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ನಾಲ್ಕನೇ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ ದೀಪಿಕಾ ಅವರು ತಂಡ ವಿಭಾಗದ ಸ್ಪರ್ಧೆಯಲ್ಲಿ ನಿರಾಸೆ ಮೂಡಿಸಿದ್ದರು. ಆದರೆ, ವೈಯಕ್ತಿಕ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿ, ಸತತ ಎರಡು ಪಂದ್ಯಗಳನ್ನು ಗೆದ್ದುಕೊಂಡರು.

ವಿಶ್ವದ ಮಾಜಿ ಅಗ್ರಮಾನ್ಯ ಬಿಲ್ಗಾರ್ತಿಯಾಗಿರುವ ದೀಪಿಕಾ 6-5ರಿಂದ ಎಸ್ಟೋನಿಯಾದ ರೀನಾ ಪರ್ನಾಟ್ ವಿರುದ್ಧ ಶುಭಾರಂಭ ಮಾಡಿದರು. ಎರಡನೇ ಪಂದ್ಯದಲ್ಲಿ ಅವರು 6–2ರಿಂದ ನೆದರ್ಲೆಂಡ್ಸ್‌ನ ಕ್ವಿಂಟಿ ರೋಫೆನ್ ಅವರನ್ನು ಮಣಿಸಿದರು. ಶನಿವಾರ ನಡೆಯಲಿರುವ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ದೀಪಿಕಾ ಅವರು ಜರ್ಮನಿಯ ಮಿಚೆಲ್ ಕ್ರೊಪ್ಪೆನ್ ಅವರನ್ನು ಎದುರಿಸಲಿದ್ದಾರೆ.

ಭಾರತದ ಆರ್ಚರಿಪಟು ತರುಣದೀಪ್ ರಾಯ್ ಅವರು ಪುರುಷರ ವೈಯಕ್ತಿಕ ರಿಕರ್ವ್ ವಿಭಾಗದ 32ರ ಸುತ್ತಿನಲ್ಲಿ ಸೋತರು. ಬುಧವಾರ ನಡೆದ ಸ್ಪರ್ಧೆಯಲ್ಲಿ ತರುಣದೀಪ್ 4–6ರಿಂದ ಬ್ರಿಟನ್‌ನ ಟಾಮ್ ಹಾಲ್ ಅವರ ಎದುರು ಮಣಿದರು.

ನಿಕಟ ಪೈಪೋಟಿ ಇದ್ದ ಸ್ಪರ್ಧೆಯಲ್ಲಿ ಮೊದಲ ಸೆಟ್ 27 ಪಾಯಿಂಟ್‌ಗಳಿಂದ ಟೈ ಆಯಿತು. ಎರಡನೇ ಸೆಟ್‌ನಲ್ಲಿ ಟಾಮ್ ಹಾಲ್ ಅವರು ಒಂದು ಪಾಯಿಂಟ್ ಅಂತರದಿಂದ ಗೆಲುವು ಒಲಿಸಿಕೊಂಡರು. ಮೂರನೇ ಸೆಟ್‌ನಲ್ಲಿ ಪುಟಿದೆದ್ದ ತರುಣದೀಪ್ 28–25ರ ಮುನ್ನಡೆ ಸಾಧಿಸಿದರು. ನಂತರದ ಸೆಟ್‌ನಲ್ಲಿ ಟಾಮ್ ಹಾಲ್ 29–28ರಿಂದ ಗೆದ್ದರು. ಐದನೇ ಮತ್ತು ನಿರ್ಣಾಯಕ ಸೆಟ್‌ನಲ್ಲಿ ಉಭಯ ಆರ್ಚರ್‌ಗಳು 29 ಅಂಕ ಗಳಿಸಿ, ಹಾಲ್ ಗೆದ್ದರು.


ಭಾರತದ ಆರ್ಚರಿಪಟು ತರುಣದೀಪ್ ರಾಯ್ ಅವರಿಂದ ಬಾಣ ಪ್ರಯೋಗ –ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್


ದೀಪಿಕಾ ಕುಮಾರಿ –ಎಎಫ್‌ಪಿ ಚಿತ್ರ

ಮಣಿಕಾ ಓಟಕ್ಕೆ ತಡೆ, ಜಪಾನ್‌ನ ಮಿಯು ವಿರುದ್ಧ ಸೋಲು

ಪ್ರಿ ಕ್ವಾರ್ಟರ್‌ಗೆ ಶ್ರೀಜಾ ಅಕುಲಾ

ಪ್ಯಾರಿಸ್ (ಪಿಟಿಐ): ಭಾರತದ ಟೇಬಲ್ ಟೆನಿಸ್ ತಾರೆ ಶ್ರೀಜಾ ಅಕುಲಾ ಬುಧವಾರ ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ತಲುಪಿದರು. ಇದರೊಂದಿಗೆ ಒಲಿಂಪಿಕ್ಸ್‌ನಲ್ಲಿ 16ರ ಘಟ್ಟ ತಲುಪಿದ ಭಾರತದ ಎರಡನೇ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾದರು.

26ನೇ ವರ್ಷದ ಜನ್ಮದಿನ ಸಂಭ್ರಮದಲ್ಲಿದ್ದ ಶ್ರೀ ಅವರು 32ರ ಘಟ್ಟದ ಪಂದ್ಯದಲ್ಲಿ 9-11, 12-10, 11-4, 11-5, 10-12, 12-10 (4–2)ರಿಂದ ಸಿಂಗಪುರದ ಜಿಯಾನ್ ಝೆಂಗ್ ಅವರನ್ನು ಹಿಮ್ಮೆಟ್ಟಿಸಿದರು. ಮಣಿಕಾ ಬಾತ್ರಾ ಅವರು ಸೋಮವಾರ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿ ದಾಖಲೆ ಬರೆದಿದ್ದರು. ಟೇಬಲ್ ಟೆನಿಸ್‌ನ ಇಬ್ಬರು ಆಟಗಾರ್ತಿಯರು 16ರ ಘಟ್ಟ ಪ್ರವೇಶಿಸಿರುವುದು ಭಾರತದ ಟೇಬಲ್ ಟೆನಿಸ್ ಇತಿಹಾಸದಲ್ಲಿ ಅಭೂತಪೂರ್ವ ಸಾಧನೆಯಾಗಿದೆ.

ಆರಂಭಿಕ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಶ್ರೀಜಾ ನಂತರ ಲಯ ಕಂಡುಕೊಂಡ ಅವರು ಸತತ ಮೂರು ಗೇಮ್‌ಗಳಲ್ಲಿ ಮೇಲುಗೈ ಸಾಧಿಸಿದರು. ಐದನೇ ಗೇಮ್‌ನಲ್ಲಿ ಮತ್ತೆ ಸಿಂಗಪುರದ ಆಟಗಾರ್ತಿ ತಿರುಗೇಟು ನೀಡಿದರೂ, ಆರನೇ ಗೇಮ್‌ನ ಭಾರತದ ಆಟಗಾರ್ತಿ ಹಿಡಿತ ಸಾಧಿಸಿ ಮುಂದಿನ ಸುತ್ತಿಗೆ ಲಗ್ಗೆ ಹಾಕಿದರು. ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಶ್ರೀಜಾ ಅವರು ವಿಶ್ವದ ಅಗ್ರಮಾನ್ಯ ಆಟಗಾರ್ತಿ ಸನ್ ಯಿಂಗ್ಶಾ (ಚೀನಾ) ವಿರುದ್ಧ ಸೆಣಸಲಿದ್ದಾರೆ.


ಶ್ರೀಜಾ ಕಳೆದ ತಿಂಗಳು ವಿಶ್ವ ರ್‍ಯಾಂಕಿಂಗ್‌ನಲ್ಲಿ 24ನೇ ಸ್ಥಾನಕ್ಕೆ ಏರಿದ್ದು, ಇದು ಅವರ ವೃತ್ತಿಜೀವನದ ಶ್ರೇಷ್ಠ ಸಾಧನೆಯಾಗಿದೆ. ಮಣಿಕಾ ವಿಶ್ವ ರ್‍ಯಾಂಕಿಂಗ್‌ನಲ್ಲಿ 28ನೇ ಸ್ಥಾನದಲ್ಲಿದ್ದಾರೆ.

ಎರಡು ಬಾರಿಯ ರಾಷ್ಟ್ರೀಯ ಚಾಂಪಿಯನ್ ಆಗಿರುವ ಶ್ರೀಜಾ ಕೆಲ ವಾರಗಳ ಹಿಂದೆ ಡಬ್ಲ್ಯುಟಿಟಿ ಕಂಟೆಂಡರ್‌ನಲ್ಲಿ ಸಿಂಗಲ್ಸ್ ಪ್ರಶಸ್ತಿ ಗೆದ್ದ ಭಾರತದ ಮೊದಲ ಆಟಗಾರ್ತಿ ಎಂಬ ಹಿರಿಮೆಗೆ ಪಾತ್ರರಾಗಿದ್ದರು.

ಮಣಿಕಾ ಬಾತ್ರಾಗೆ ನಿರಾಸೆ: ಮಹಿಳೆಯರ ಪ್ರಿ ಕ್ವಾರ್ಟರ್ ಫೈನಲ್ ಸುತ್ತಿನ ಪಂದ್ಯದಲ್ಲಿ ಭಾರತದ ಮಣಿಕಾ ಬಾತ್ರಾ ಅವರು ಜಪಾನ್‌ನ ಮಿಯು ಹಿರಾನೊ ವಿರುದ್ಧ ಸೋಲು ಕಂಡಿದ್ದಾರೆ.

47 ನಿಮಿಷ ನಡೆದ ಪಂದ್ಯದಲ್ಲಿ ಭಾರತದ ಆಟಗಾರ್ತಿ 6-11 9-11 11-9 14-12 8-11 6-11ರಿಂದ ಮಣಿದರು. ಸತತ ಎರಡು ಗೇಮ್‌ಗಳಲ್ಲಿ ಸೋತು ಮೂರನೇ ಸೆಟ್‌ನಲ್ಲಿ ಕಂಬ್ಯಾಕ್ ಮಾಡಿದ್ದ ಭಾರತದ ಆಟಗಾರ್ತಿ, ಆ ಬಳಿಕ ಸತತ ಎರಡು ಗೇಮ್‌ಗಳಲ್ಲಿ ಪರಾಭವಗೊಂಡು ಹೊರಬಿದ್ದರು.

ಕಾಮನ್‌ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತ ಮಣಿಕಾ, ಟೋಕಿಯೊ ಒಲಿಂಪಿಕ್ಸ್‌ನಲ್ಲಿ 32ರ ಘಟ್ಟವನ್ನು ತಲುಪಿದ್ದರು.


ಭಾರತದ ಶ್ರೀಜಾ ಅಕುಲಾ –ಎಪಿ/ ಪಿಟಿಐ ಚಿತ್ರ

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	8	6	2	16
ಜಪಾನ್	7	2	4	13
ಫ್ರಾನ್ಸ್	6	9	6	21
ಬ್ರಿಟನ್	6	6	5	17
ಆಸ್ಟ್ರೇಲಿಯಾ	6	4	3	13
ದ.ಕೊರಿಯಾ	5	3	3	11
ಅಮೆರಿಕ	4	11	12	27
ಇಟಲಿ	3	6	4	13
ಕೆನಡಾ	2	2	2	6
ಭಾರತ	0	0	2	2

ಪಟ್ಟಿಯಲ್ಲಿ ಭಾರತ 37ನೇ ಸ್ಥಾನದಲ್ಲಿದೆ

ಒಲಿಂಪಿಕ್ಸ್‌ನಲ್ಲಿ ಇಂದು
(ಭಾರತದ ಸ್ಪರ್ಧೆ)

ಗಾಲ್ಫ್
ಪುರುಷರ ವೈಯಕ್ತಿಕ ಫೈನಲ್: ಗಗನ್‌ಜೀತ್ ಭುಲ್ಲರ್, ಶುಭಂಕರ್ ಶರ್ಮಾ, ಮಧ್ಯಾಹ್ನ 12.30

ಶೂಟಿಂಗ್
ಪುರುಷರ 50 ಮೀ. ರೈಫಲ್ ತ್ರೀ ಪೊಸಿಶನ್ (ಪದಕ ಸುತ್ತು): ಸ್ವಪ್ನಿಲ್ ಕುಸಳೆ, ಮಧ್ಯಾಹ್ನ 1
ಮಹಿಳೆಯರ 50 ಮೀ. ರೈಫಲ್ ತ್ರೀ ಪೊಸಿಶನ್ (ಅರ್ಹತಾ ಸುತ್ತು): ಸಿಫ್ತ್ ಕೌರ್ ಸಮ್ರಾ, ಅಂಜುಮ್ ಮೌದ್ಗಿಲ್, ಮಧ್ಯಾಹ್ನ 3.30

ಅಥ್ಲೆಟಿಕ್ಸ್
ಮಹಿಳೆಯರ 20 ಕಿ.ಮೀ. ನಡಿಗೆ: ಪ್ರಿಯಾಂಕಾ ಗೋಸ್ವಾಮಿ ಮಧ್ಯಾಹ್ನ 12.50
ಪುರುಷರ 20 ಕಿ.ಮೀ. ನಡಿಗೆ: ಅಕ್ಷ್‌ದೀಪ್ ಸಿಂಗ್, ವಿಕಾಸ್ ಸಿಂಗ್, ಪರಮ್‌ಜೀತ್ ಸಿಂಗ್ ಬಿಷ್ತ್ ಬೆಳಿಗ್ಗೆ 11.00

ಪುರುಷರ ಹಾಕಿ (ಗುಂಪು ಹಂತ)
'ಬಿ' ಗುಂಪು: ಭಾರತ ವಿರುದ್ಧ ಬೆಲ್ಜಿಯಂ, ಮಧ್ಯಾಹ್ನ 1.30

ಬಾಕ್ಸಿಂಗ್
ಮಹಿಳೆಯರ ಫ್ಲೈವೇಟ್, ಪ್ರಿ ಕ್ವಾರ್ಟರ್ ಫೈನಲ್: ನಿಖತ್ ಜರೀನ್ ವಿರುದ್ಧ ಯು ವು (ಚೀನಾ), ಮಧ್ಯಾಹ್ನ 2.30

ಆರ್ಚರಿ
ಪುರುಷರ ವೈಯಕ್ತಿಕ ಎಲಿಮಿನೇಷನ್ ಸುತ್ತು(1/32): ಪ್ರವೀಣ್ ಜಾಧವ್ ವಿರುದ್ಧ ಕಾವೊ ವೆನ್ ಚಾವೊ (ಚೀನಾ), ಮಧ್ಯಾಹ್ನ 2.31
ಪುರುಷರ ವೈಯಕ್ತಿಕ ಎಲಿಮಿನೇಷನ್ ಸುತ್ತು(1/16): ಮಧ್ಯಾಹ್ನ 3.10ರಿಂದ

ಸೇಲಿಂಗ್
ಪುರುಷರ ಡಿಂಘಿ ರೇಸ್ 1: ವಿಷ್ಣು ಸರವಣನ್, ಮಧ್ಯಾಹ್ನ 3.45
ಮಹಿಳೆಯರ ಡಿಂಘಿ ರೇಸ್ 1: ನೇತ್ರಾ ಕುಮಾನನ್, ಸಂಜೆ 7.05

ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಹರ್ಮನ್‌ಪ್ರೀತ್ ಬಳಗಕ್ಕೆ ಬೆಲ್ಜಿಯಂ 'ಪರೀಕ್ಷೆ' ಇಂದು

ಪ್ಯಾರಿಸ್ (ಪಿಟಿಐ): ಈಗಾಗಲೇ ಕ್ವಾರ್ಟರ್‌ಫೈನಲ್ ಪ್ರವೇಶದ ಹಾದಿಯನ್ನು ಸುಗಮಗೊಳಿಸಿಕೊಂಡಿರುವ ಭಾರತ ಹಾಕಿ ತಂಡವು ಗುರುವಾರ ಬಲಿಷ್ಠ ಬೆಲ್ಜಿಯಂ ತಂಡವನ್ನು ಎದುರಿಸಲಿದೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಡೆಯಲಿರುವ ಬಿ ಗುಂಪಿನ ಈ ಪಂದ್ಯವು ಹರ್ಮನ್‌ಪ್ರೀತ್ ಸಿಂಗ್ ಬಳಗದ ಸಾಮರ್ಥ್ಯವನ್ನು ಒರೆಗೆ ಹಚ್ಚುವ ಸಾಧ್ಯತೆ ಇದೆ.

ಎರಡು ಗುಂಪುಗಳಿಂದ ತಲಾ ನಾಲ್ಕು ತಂಡಗಳು ಎಂಟರ ಘಟ್ಟಕ್ಕೆ ಪ್ರವೇಶಿಸಲಿವೆ. ಬಿ ಗುಂಪಿನಲ್ಲಿ ಏಳು ಅಂಕಗಳನ್ನು ಗಳಿಸಿರುವ ಭಾರತ ತಂಡವು ಎರಡನೇ ಸ್ಥಾನದಲ್ಲಿದೆ. ಈಗ ಆಡಿರುವ ಮೂರು ಪಂದ್ಯಗಳಲ್ಲಿ ಎರಡರಲ್ಲಿ ಜಯಿಸಿದೆ. ಒಂದು ಪಂದ್ಯ ಡ್ರಾ ಆಗಿದೆ. ಬೆಲ್ಜಿಯಂ ತಂಡವು ಆಡಿದ ಎಲ್ಲ ಮೂರು ಪಂದ್ಯಗಳಲ್ಲಿಯೂ ಗೆದ್ದು ಅಗ್ರಸ್ಥಾನದಲ್ಲಿದೆ.

ಆಸ್ಟ್ರೇಲಿಯಾ ತಂಡವು ಎರಡು ಪಂದ್ಯ ಗೆದ್ದು, ಒಂದರಲ್ಲಿ ಸೋತಿದೆ. ಮೂರನೇ ಸ್ಥಾನದಲ್ಲಿದೆ. ಅರ್ಜೆಂಟೀನಾ ತಂಡವು ಒಂದು ಗೆಲುವು, ಸೋಲು ಮತ್ತು ಡ್ರಾ ದೊಂದಿಗೆ ನಾಲ್ಕು ಅಂಕ ಗಳಿಸಿದೆ. ಈ ತಂಡವೂ ಕ್ವಾರ್ಟರ್‌ಫೈನಲ್ ಪ್ರವೇಶಿಸುವುದು ಬಹುತೇಕ ಖಚಿತವಾಗಿದೆ. ಆದರೆ ಇನ್ನುಳಿದ ನ್ಯೂಜಿಲೆಂಡ್ ಮತ್ತು ಐರ್ಲೆಂಡ್ ತಂಡಗಳು ಎಂಟರ ಘಟ್ಟದ ಹಾದಿಯಿಂದ ಹೊರಬಿದ್ದಿವೆ.

ಭಾರತ ತಂಡವು ಟೂರ್ನಿಯ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು 3–2ರಿಂದ ಪ್ರಯಾಸದ ಜಯ ಗಳಿಸಿತ್ತು. ಎರಡನೇಯದ್ದರಲ್ಲಿ ಅರ್ಜೆಂಟೀನಾ ಎದುರಿನ ಪಂದ್ಯ ಡ್ರಾ ಆಗಿತ್ತು. ಎರಡೂ ಪಂದ್ಯಗಳಲ್ಲಿ ಕೊನೆಯ ನಿಮಿಷದಲ್ಲಿ ಗೋಲು ಗಳಿಸಿದ್ದರಿಂದ ಭಾರತ ತಂಡದ ಸೋಲುಗಳು ತಪ್ಪಿದ್ದವು. ನಾಯಕ ಹರ್ಮನ್‌ಪ್ರೀತ್ ಅವರ ಚಾಕಚಕ್ಯತೆ ಆಟದಿಂದಾಗಿ ತಂಡವು ಇದುವರೆಗೆ ಉತ್ತಮ ಸ್ಥಿತಿಯಲ್ಲಿದೆ.


ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ –ಪಿಟಿಐ ಚಿತ್ರ

ಟಿಟಿ: ರ್‍ಯಾಕೆಟ್ ಮುರಿದ ಮರುದಿನವೇ ಆಘಾತ

ಅಗ್ರಮಾನ್ಯ ಆಟಗಾರನಿಗೆ ಸೋಲು

ಪ್ಯಾರಿಸ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಟೇಬಲ್ ಟೆನಿಸ್ ಆಟಗಾರ, ಚೀನಾದ ವಾಂಗ್ ಚುಖಿನ್ ಅವರ ರ್‍ಯಾಕೆಟ್ ಮಂಗಳವಾರ ನಡೆದ ಆಕಸ್ಮಿಕ ಘಟನೆಯಲ್ಲಿ ತುಂಡಾಗಿತ್ತು. ಇದಾದ ಮರುದಿನವೇ– ಬುಧವಾರ ಅವರು ಒಲಿಂಪಿಕ್ಸ್ ಸಿಂಗಲ್ಸ್‌ನಲ್ಲಿ ಆಘಾತಕಾರಿ ಸೋಲನುಭವಿಸಿದರು.

24 ವರ್ಷ ವಯಸ್ಸಿನ ವಾಂಗ್ ಅವರು ಮಿಶ್ರ ಡಬಲ್ಸ್ ಚಿನ್ನ ಗೆದ್ದ ನಂತರ ಸಂಭ್ರಮದಲ್ಲಿದ್ದರು. ಛಾಯಾಗ್ರಾಹಕರು ಚಿತ್ರಕ್ಕೆ ಮುಗಿಬೀಳುವ ಸಂದರ್ಭದಲ್ಲಿ ನೂಕುನುಗ್ಗಲಿನಲ್ಲಿ ಉಂಟಾಯಿತು. ಈ ವೇಳೆ ಅವರಲ್ಲೊಬ್ಬರು ಆಕಸ್ಮಿಕವಾಗಿ ವಾಂಗ್ ಕೈಲಿದ್ದ ರ್‍ಯಾಕೆಟ್‌ಗೆ ತಾಗಿದ್ದರಿಂದ ಅದು ತುಂಡಾಯಿತು. ಸಹಜವಾಗಿ ವಾಂಗ್ ಸಿಡಿಮಿಡಿಗೊಂಡಿದ್ದರು.

ಇದಾಗಿ 24 ಗಂಟೆಗಳ ಒಳಗೆ ಅವರು 32ರ ಸುತ್ತಿನ ಪಂದ್ಯದಲ್ಲಿ ಸ್ವೀಡನ್‌ನ ಟ್ರುಲ್ಸ್ ಮೋರ್ಗಾರ್ಡ್ ಅವರಿಗೆ 2-4 ರಲ್ಲಿ ಮಣಿದರು. ಈ ಅಚ್ಚರಿಯ ಫಲಿತಾಂಶ ನಂಬಲಾಗದ, 26 ವರ್ಷ ವಯಸ್ಸಿನ ಮೋರ್ಗಾರ್ಡ್ ಎರಡೂ ಕೈಗಳಿಂದ ತಲೆಯನ್ನು ಒತ್ತಿ ಕೆಲಕ್ಷಣ ಅಲ್ಲೇ ನೆಲಕ್ಕೆ ಒರಗಿದರು. ಅರೆನಾದ ಸುತ್ತ ಓಡಿ ಪ್ರೇಕ್ಷಕರ ಒಕ್ಕೊರಲ ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸಿದರು. ಸುನ್ ಯಿಂಗ್ಶಾ ಜೊತೆಗೂಡಿ ಉತ್ತರ ಕೊರಿಯಾದ ಜೋಡಿಯನ್ನು ಸೋಲಿಸಿ ಡಬಲ್ಸ್ ಚಿನ್ನ ಗೆದ್ದಿದ್ದ ವಾಂಗ್, ಬ್ಯಾಟ್ ಮುರಿದ ಘಟನೆ ನಂತರ 'ಭಾವನಾತ್ಮಕವಾಗಿ ಸ್ವಲ್ಪ ಕುಸಿದಿದ್ದೆ' ಎಂದು ಒಪ್ಪಿಕೊಂಡರು. ಮಾಮೂಲಾಗಿ ಬಳಸುವ ರ್‍ಯಾಕೆಟ್ ಹಾಗೂ ಅದರ ಗ್ರಿಪ್‌ಗೆ ಹೊಂದಿಕೊಳ್ಳುವ ಆಟಗಾರರಿಗೆ ಅದರ ಮಹತ್ವ ಗೊತ್ತಿರುತ್ತದೆ.

ಈ ಹಿಂದೆ ಎಂಟು ಬಾರಿಯ ಮುಖಾಮುಖಿಯಲ್ಲಿ ಒಮ್ಮೆಯೂ ವಾಂಗ್ ವಿರುದ್ಧ ಸ್ವೀಡನ್ ಆಟಗಾರ ಜಯಿಸಿರಲಿಲ್ಲ. 'ಈ ಬಾರಿ ನಾನು ಅವರನ್ನು ಸೋಲಿಸಬಲ್ಲೆ ಎಂಬ ಭಾವನೆ ಮೂಡಿತ್ತು' ಎಂದು 12–10, 11–7, 5-11, 7–11, 11–9, 11–6ರಲ್ಲಿ ಗೆದ್ದ ಮೋರ್ಗಾರ್ಡ್ ಹೇಳಿದರು.

ವಾಂಗ್ ಈ ಪಂದ್ಯ ಸೋತರೂ, ಚೀನಾ ಈ ಆಟದಲ್ಲಿ ಸೂಪರ್ ಪವರ್ ಎಂಬುದು ನಿರ್ವಿವಾದ. ಒಲಿಂಪಿಕ್ ಕ್ರೀಡೆಯಾದ ಮೇಲೆ ಟೇಬಲ್ ಟೆನಿಸ್ ಆಟದಲ್ಲಿ ನಿರ್ಧಾರವಾದ 37 ಚಿನ್ನಗಳಲ್ಲಿ 32 ಈ ದೇಶದ ಪಾಲಾಗಿದೆ.


ಸ್ವೀಡನ್‌ನ ಟ್ರುಲ್ಸ್ ಮೋರ್‌ಗಾರ್ಡ್ ಅವರು ಟೇಬಲ್ ಟೆನಿಸ್ ಪುರುಷರ ಸಿಂಗಲ್ಸ್ 32ರ ಸುತ್ತಿನ ಪಂದ್ಯದಲ್ಲಿ ಅಗ್ರಮಾನ್ಯ ಚೀನಾ ಆಟಗಾರ ವಾಂಗ್ ಚುಕಿನ್ ಅವರಿಗೆ ಪಂದ್ಯದ ನಂತರ ಹಸ್ತಲಾಘವ ನೀಡಿದರು –ಎಎಫ್‌ಪಿ ಚಿತ್ರ

ಹತ್ತನೇ ಬಾರಿ ಒಲಿಂಪಿಕ್ಸ್ ಕಣಕ್ಕಿಳಿದ ಜಾರ್ಜಿಯಾ ಮಹಿಳೆ

ಶಾತೊಹು (ಫ್ರಾನ್ಸ್), (ಪಿಟಿಐ): ನೀನೊ ಸಾಲುಕ್‌ವಾಡ್ಜ್ ಒಲಿಂಪಿಕ್ಸ್‌ನಲ್ಲಿ ಮೂರು ಪದಕಗಳನ್ನು ಗೆದ್ದ ಜಾರ್ಜಿಯಾದ ಶೂಟರ್. ಕಳೆದ ಬಾರಿ ಒಂಬತ್ತನೇ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಅವರು ವಿದಾಯ ಹೇಳಬಯಸಿದ್ದರು. ಆದರೆ ನಿಧನರಾದ ತಂದೆಯ ಅಂತಿಮ ಇಚ್ಛೆ ಈಡೇರಿಸಲು ಹತ್ತನೇ ಬಾರಿ ಒಲಿಂಪಿಕ್ಸ್‌ಗಳಲ್ಲಿ ಕಣಕ್ಕಿಳಿದಿದ್ದಾರೆ.

ಉದ್ಘಾಟನಾ ಸಮಾರಂಭದಲ್ಲಿ ಜಾರ್ಜಿಯಾದ ಧ್ವಜಧಾರಿಯಾಗಿದ್ದ ನೀನೊ, ಹತ್ತು ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ ಮೊದಲ ಮಹಿಳೆ. ಮತ್ತು ಒಟ್ಟಾರೆ ಎರಡನೇ ಸ್ಪರ್ಧಿ. ಈಕ್ವೆಸ್ಟ್ರಿಯನ್ ಶೊ ಜಂಪರ್ ಇಯಾನ್ ಮಿಲ್ಲರ್ ಮಾತ್ರ 10 ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದರು.

55 ವರ್ಷ ವಯಸ್ಸಿನ ನೀನೊ 1988ರ ಸೋಲ್ ಕ್ರೀಡೆಗಳಲ್ಲಿ 25 ಮೀ.ಪಿಸ್ತೂಲ್‌ನಲ್ಲಿ ಸ್ವರ್ಣ, 10 ಮೀ. ಏರ್‌ಪಿಸ್ತೂಲ್‌ನಲ್ಲಿ ಬೆಳ್ಳಿ ಗಳಿಸಿದ್ದರು. ಆ ಬಾರಿ ಅವರು ಅವಿಭಜಿತ ರಷ್ಯಾವನ್ನು ಪ್ರತಿನಿಧಿಸಿದ್ದರು. 20 ವರ್ಷ ಬಳಿಕ ಬೀಜಿಂಗ್ ಕ್ರೀಡೆಗಳಲ್ಲಿ ಜಾರ್ಜಿಯಾವನ್ನು ಪ್ರತಿನಿಧಿಸಿ ಕಂಚಿನ ಪದಕ ಕೊರಳಿಗೇರಿಸಿಕೊಂಡಿದ್ದರು.

'ನನ್ನ ತಂದೆ ವಕ್ತಾಂಗ್ ಸಾಲುಕ್‌ವಾಡ್ಜ್ ನನ್ನಿಂದ ಬೇರೇನನ್ನೂ ಕೇಳಲಿಲ್ಲ. ಒಲಿಂಪಿಕ್ಸ್‌ನಲ್ಲಿ ಇನ್ನೊಮ್ಮೆ ಪಾಲ್ಗೊಳ್ಳಬೇಕೆಂಬುದು ಅವರ ಕಡೆಯ ಆಸೆಯಾಗಿತ್ತು' ಎಂದು ಸ್ಮರಿಸಿದರು. 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಜೂನಿಯರ್ ವಿಶ್ವದಾಖಲೆ ಈಗಲೂ ಅವರ ಹೆಸರಿನಲ್ಲಿದೆ.

ನೀನೊ ಅವರು ಶುಕ್ರವಾರ 25 ಮೀ. ಪಿಸ್ತೂಲ್ ಕ್ವಾಲಿಫಿಕೇಷನ್ ಸುತ್ತಿನಲ್ಲಿ ಭಾಗವಹಿಸಲಿದ್ದಾರೆ. ಭಾರತದ ತಾರೆ ಮನು ಭಾಕರ್ ಅವರೂ ಇಲ್ಲಿ ಕಣಕ್ಕಿಳಿಯಲಿದ್ದಾರೆ.

ಅವರ ಮಗ ತ್ಸೊತ್ನೆ ಮಚಾವರಿಯಾನಿ ಕೂಡ ಪಿಸ್ತೂಲ್ ಶೂಟರ್ ಆಗಿದ್ದು ರಿಯೊ ಒಲಿಂಪಿಕ್ಸ್‌ನಲ್ಲಿ ಕಣಕ್ಕಿಳಿದಿದ್ದರು. ತಾಯಿ– ಮಗ ಇಬ್ಬರೂ ಭಾಗವಹಿಸಿದ್ದು ವಿಶೇಷ.


ನೀನೊ ಸಾಲುಕ್‌ವಾಡ್ಜ್ –ಎಕ್ಸ್ ಚಿತ್ರ

ಫೈನಲ್ ಸುತ್ತಿಗೆ ಸ್ವಪ್ನಿಲ್ ಕುಸಳೆ

ಶತೋಹು, ಫ್ರಾನ್ಸ್ (ಪಿಟಿಐ): ಭಾರತದ ಶೂಟರ್ ಸ್ವಪ್ನಿಲ್ ಕುಸಳೆ ಪುರುಷರ 50 ಮೀಟರ್ಸ್ ರೈಫಲ್ಸ್ ತ್ರಿ ಪೊಸಿಷನ್ಸ್ ವಿಭಾಗದ ಫೈನಲ್ ಪ್ರವೇಶಿಸಿದ್ದಾರೆ.

ಶತೋಹು ಶೂಟಿಂಗ್ ರೇಂಜ್‌ನಲ್ಲಿ ಬುಧವಾರ ನಡೆದ ಅರ್ಹತಾ ಸುತ್ತಿನ ಸ್ಪರ್ಧೆಯಲ್ಲಿ ಸ್ವಪ್ನಿಲ್ ಅವರು ಏಳನೇ ಸ್ಥಾನ ಗಳಿಸಿ ಫೈನಲ್ ಪ್ರವೇಶಿಸಿದರು. ಆದರೆ ಭಾರತದ ಇನ್ನೊಬ್ಬ ಶೂಟರ್ ಐಶ್ವರಿ ತೋಮರ್ ಅವರು 11ನೇ ಸ್ಥಾನ ಪಡೆದು ಹೊರಬಿದ್ದರು.

ಸ್ವಪ್ನಿಲ್ ಅವರು ನೀಲಿಂಗ್‌ನಲ್ಲಿ 198 (99, 99), ಪ್ರೊನ್ ನಲ್ಲಿ 197 (98, 99) ಮತ್ತು ಸ್ಟ್ಯಾಂಡಿಂಗ್‌ನಲ್ಲಿ 195 (98, 97) ಅಂಕಗಳನ್ನು ಗಳಿಸಿದರು. ಅರ್ಹತಾ ಸುತ್ತಿನಲ್ಲಿ ಒಟ್ಟು 44 ಸ್ಪರ್ಧಿಗಳು ಇದ್ದರು. ಸ್ವಪ್ನಿಲ್ ಒಟ್ಟು 590 (38x) ಮತ್ತು ತೋಮರ್ 589 (33x) ಸ್ಕೋರ್ ಗಳಿಸಿದರು.

ಚೀನಾ ಲಿಯು ಯುಕುನ್ (594) ಮೊದಲ, ನಾರ್ವೆಯ ಜಾನ್ ಹರ್ಮನ್ ಹೆಗ್ (593) ಎರಡನೇ ಹಾಗೂ ಉಕ್ರೇನ್‌ನ ಸರ್ಹಿಯಾ ಕುಲಿಶ್ (592) ಮೂರನೇ ಸ್ಥಾನ ಪಡೆದರು. ಆತಿಥೇಯ ಫ್ರಾನ್ಸ್‌ನ ಲೂಕಾಸ್ ಕ್ರೈಜ್ಸ್ (592), ಸರ್ಬಿಯಾದ ಲಝರ್ ಕೊವೆಸಿವಿಚ್ (592) ಮತ್ತು ಪೋಲೆಂಡ್‌ನ ಥಾಮಸ್ ಬಾರ್ಟ್ನಿಕ್ (590) ಕ್ರಮವಾಗಿ ನಾಲ್ಕು, ಐದು ಮತ್ತು ಆರನೇ ಸ್ಥಾನ ಪಡೆದರು. ಜೆಕ್ ಗಣರಾಜ್ಯದ ಜಿರಿ ಪ್ರಿವ್ರಾಸ್ಕಿ (590 –35X) ಎಂಟನೇ ಸ್ಥಾನ ಪಡೆದರು. ಸ್ವಪ್ನಿಲ್, ಕೊಲ್ಹಾಪುರದ ತೇಜಸ್ವಿನಿ ಸಾವಂತ್ ಬಳಿ ತರಬೇತಿ ಪಡೆದಿದ್ದಾರೆ. ಫೈನಲ್ ಸ್ಪರ್ಧೆ ಗುರುವಾರ ನಡೆಯಲಿದೆ.



ಭಾರತದ ಸ್ವಪ್ನಿಲ್ ಕುಸಳೆ –ಎಪಿ/ಪಿಟಿಐ ಚಿತ್ರ

ರೈಲ್ವೆ ಟಿಕೆಟ್ ಕಲೆಕ್ಟರ್ ಸ್ವಪ್ನಿಲ್

ಮಹಾರಾಷ್ಟ್ರದ ಕೊಲ್ಹಾಪುರದ ಕಂಬಳವಾಡಿ ಗ್ರಾಮದ ಸ್ವಪ್ನಿಲ್ ಕುಶಲೆ ಮತ್ತು ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ ಅವರಿಬ್ಬರಲ್ಲಿಯೂ ಕೆಲವು ಸಾಮ್ಯತೆಗಳಿವೆ.

ಸ್ವಪ್ನಿಲ್ ಅವರೂ ಧೋನಿಯಂತೆಯೇ ರೇಲ್ವೆ ಟಿಕೆಟ್ ನಿರೀಕ್ಷಕರಾಗಿ ಕಾರ್ಯನಿರ್ವಹಿಸಿದ್ದರು. ಆದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರಿಕೆಟಿಗನಾಗುವ ಗುರಿಯೊಂದಿಗೆ ಧೋನಿ ನೌಕರಿ ತ್ಯಜಿಸಿದರು. ಧೋನಿಯವರ ಬಯೋಪಿಕ್ ಅನ್ನು ಪದೇ ಪದೇ ವೀಕ್ಷಿಸಿದ ಸ್ವಪ್ನಿಲ್ ಕೂಡ ಪೂರ್ಣಪ್ರಮಾಣದಲ್ಲಿ ಶೂಟಿಂಗ್‌ಗೆ ಸಮರ್ಪಿಸಿಕೊಂಡರು. ಧೋನಿಯವರಂತೆ ಶಾಂತ ಮತ್ತು ಸಮಚಿತ್ತ ಇರುವ ಸ್ವಪ್ನಿಲ್ ಒಲಿಂಪಿಕ್ಸ್‌ನಲ್ಲಿ ಈಗ ಪದಕ ಜಯದ ಹೊಸ್ತಿಲಿಗೆ ಬಂದು ನಿಂತಿದ್ದಾರೆ.

‘ನನ್ನ ಮತ್ತು ಧೋನಿಯವರ ಜೀವನದಲ್ಲಿ ಸಾಮ್ಯತೆಗಳು ಇವೆ. ನಾನು ಅವರನ್ನು ಬಹಳಷ್ಟು ಇಷ್ಟಪಡುತ್ತೇನೆ. ಅವರಂತೆಯೇ ನನ್ನದೂ ಶಾಂತಚಿತ್ತ. ಶೂಟಿಂಗ್ ಕ್ರೀಡಾಪಟುವಿಗೆ ಅತ್ಯಗತ್ಯವಾಗಿ ಇರುವ ಗುಣ ಇದಾಗಿದೆ. ನಾನು ಕೂಡ ರೈಲ್ವೆ ಟಿಕೆಟ್ ಕಲೆಕ್ಟರ್ ಆಗಿದ್ದೇನೆ’ ಎಂದು ಸ್ವಪ್ನಿಲ್ ಹೇಳಿದ್ದಾರೆ.

ಅವರು 2015ರಿಂದ ಸೆಂಟ್ರಲ್ ರೈಲ್ವೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.





ಇಂಡೊನೇಷ್ಯಾದ ಜೊನಾಥನ್ ಕ್ರಿಸ್ಟಿ ವಿರುದ್ಧ ಬುಧವಾರ ನಡೆದ ಪಂದ್ಯದಲ್ಲಿ ಭಾರತದ ಲಕ್ಷ್ಯ ಸೇನ್ ಅವರು ರಿಟರ್ನ್ ಒಂದಕ್ಕೆ ಮುಂದಾದರು (ಎಡ). ಎಸ್ಟೋನಿಯಾದ ಕ್ರಿಸ್ಟಿನ್ ಕುಬಾ ವಿರುದ್ಧದ ಪಂದ್ಯದಲ್ಲಿ ಭಾರತದ ಪಿ.ವಿ. ಸಿಂಧು ಆಟದ ಸೊಬಗು –ಪ್ರಜಾವಾಣಿ ಚಿತ್ರಗಳು/ ಕೆ.ಎನ್. ಶಾಂತಕುಮಾರ್

ಭಾರತದ ಸ್ಪರ್ಧಿಗಳಿಗೆ ಒಲಿದ ಗೆಲುವು • ಮುಂದಿನ ಸುತ್ತಿನಲ್ಲಿ ಪ್ರಣಯ್– ಸೇನ್ ಎದುರಾಳಿ

16ರ ಘಟ್ಟಕ್ಕೆ ಲಕ್ಷ್ಯ, ಸಿಂಧು ಪ್ರವೇಶ

ಪ್ಯಾರಿಸ್ (ಪಿಟಿಐ): ಗುಂಪಿನ ಅಂತಿಮ ಲೀಗ್ ಪಂದ್ಯದಲ್ಲಿ ವಿಶ್ವದ ನಾಲ್ಕನೇ ಕ್ರಮಾಂಕದ ಆಟಗಾರ, ಇಂಡೊನೇಷ್ಯಾದ ಜೊನಾಥನ್ ಕ್ರಿಸ್ಟಿ ಅವರಿಗೆ ಬುಧವಾರ ಸೋಲಿನ ಆಘಾತ ನೀಡಿದ ಭಾರತದ ಲಕ್ಷ್ಯ ಸೇನ್ ಒಲಿಂಪಿಕ್ಸ್ ಬ್ಯಾಡ್ಮಿಂಟನ್ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಮೂರನೇ ಒಲಿಂಪಿಕ್ಸ್ ಪದಕದ ಪ್ರಯತ್ನದಲ್ಲಿರುವ ಪಿ.ವಿ.ಸಿಂಧು ಸಹ 16ರ ಸುತ್ತಿಗೆ ಸ್ಥಾನ ಕಾದಿರಿಸಿದರು.

ಅಲ್ಮೋರಾದ 22 ವರ್ಷ ವಯಸ್ಸಿನ ಆಟಗಾರ ಲಕ್ಷ್ಯ, ಪ್ರಬುದ್ಧತೆ ಮತ್ತು ತಂತ್ರಗಾರಿಕೆ ಪ್ರದರ್ಶಿಸಿ 21–18, 21–12 ರಿಂದ ಕ್ರಿಸ್ಟಿ ಅವರನ್ನು ಹಿಮ್ಮೆಟ್ಟಿಸಿದರು. ಹಾಲಿ ಆಲ್ ಇಂಗ್ಲೆಂಡ್ ಮತ್ತು ಏಷ್ಯನ್ ಚಾಂಪಿಯನ್ ಆಗಿರುವ ಕ್ರಿಸ್ಟಿ ನೇರ ಗೇಮ್‌ಗಳಲ್ಲಿ ಶರಣಾದರು.

2022ರ ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಸೆನ್ ಮೊದಲ ಪಂದ್ಯದಲ್ಲಿ ಕೆವಿನ್ ಕಾರ್ಡನ್ ಅವರನ್ನು ಸೋಲಿಸಿದ್ದರು. ಆದರೆ ಗ್ವಾಟೆಮಾಲಾದ ಆಟಗಾರ, ಮೊಣಗಂಟಿನ ನೋವಿನಿಂದ ಹಿಂದೆಸರಿದ ಕಾರಣ ಆ ಪಂದ್ಯವನ್ನು ‘ಡಿಲೀಟ್’ (ದಾಖಲೆಗಳಿಂದ ಅಳಿಸಿಹಾಕುವುದು) ಎಂದು ಪರಿಗಣಿಸಲಾಯಿತು. ಕ್ರಿಸ್ಟಿ ಅವರನ್ನು ಸೋಲಿಸುವ ಮೊದಲು ಸೆನ್ ಅವರು ಬೆಲ್ಜಿಯಂನ ಜೂಲಿಯನ್ ಕರಾಗಿ ಅರನ್ನು ಮಣಿಸಿದ್ದರು.

‘ಪಂದ್ಯ ಹೋರಾಟದಿಂದ ಕೂಡಿತ್ತು. ನಾನು ಆಡಿದ ರೀತಿ ಸಂತಸ ಮೂಡಿಸಿದೆ’ ಎಂದು ವಿಶ್ವದ 22ನೇ ಕ್ರಮಾಂಕದ ಆಟಗಾರ ಹೇಳಿದರು. ‘ನಿಜ, ಪದಕ ಒಲಿಯುವ ಹಂತದಲ್ಲಿದೆ. ಕಳೆದ ಕೆಲವು ತಿಂಗಳಿಂದ ಉತ್ತಮ ಲಯದಲ್ಲಿದ್ದೇನೆ’ ಎಂದೂ ಹೇಳಿದರು.

ಈ ಪಂದ್ಯಕ್ಕೆ ಮೊದಲು ಕ್ರಿಸ್ಟಿ, ಭಾರತದ ಆಟಗಾರನ ವಿರುದ್ಧ ಮುಖಾಮುಖಿಯಲ್ಲಿ 4–1 ಗೆಲುವಿನ ದಾಖಲೆ ಹೊಂದಿದ್ದರು. ಈ ಮೊದಲು ಲಕ್ಷ್ಯ ಅವರ ಏಕೈಕ ಗೆಲುವು ಬ್ಯಾಡ್ಮಿಂಟನ್ ಏಷ್ಯಾ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕು ವರ್ಷಗಳ ಮೊದಲು ದಾಖಲಾಗಿತ್ತು.

ಆಕ್ಸೆಲ್ಸನ್‌ಗೆ ಸುಲಭ ಗೆಲುವು: ಹಾಲಿ ಚಾಂಪಿಯನ್ ವಿಕ್ಟರ್ ಆಕ್ಸೆಲ್ಸನ್ ಅವರು ನಿಧಾನಗತಿಯ ಆರಂಭದ ನಂತರ ಮೇಲುಗೈ ಸಾಧಿಸಿ, ಐರ್ಲೆಂಡ್‌ನ ನಾಟ್ ಎನ್ಗುಯೆನ್ ಅವರನ್ನು ಸೋಲಿಸಿ ಒಲಿಂಪಿಕ್ಸ್ ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್ 16ರ ಸುತ್ತಿಗೆ ದಾಪುಗಾಲಿಟ್ಟರು.

ಡೆನ್ಮಾರ್ಕ್‌ನ ಆಕ್ಸೆಲ್ಸನ್ 21–13, 21–10ರಲ್ಲಿ ಜಯಗಳಿಸಿ ತಮ್ಮ ಗುಂಪಿನಲ್ಲಿ ಅಗ್ರಸ್ಥಾನ ಪಡೆದರು. ಈ ಪಂದ್ಯ ಸೋಲುತ್ತಿದ್ದರೆ ಅವರು ಹೊರಬೀಳುತ್ತಿದ್ದರು. ಆದರೆ ಆಡಿದ ಮೂರರಲ್ಲೂ ಗೆದ್ದರು. ಡೆನ್ಮಾರ್ಕ್‌ನ ಆಟಗಾರ ವಿಶ್ವ ರ್‍ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ.

ಅಗ್ರ ಕ್ರಮಾಂಕದ ಶಿ ಯುಕಿ 21–9, 21–10 ರಿಂದ ಇಟಲಿಯ ಗಿಯೊವನ್ನಿ ಟೋಟಿ ಅವರನ್ನು ಸೋಲಿಸಿ ಪ್ರಿಕ್ವಾರ್ಟರ್‌ಗೆ ಮುನ್ನಡೆದರು.

‘ಎಂ’ ಗುಂಪಿನಲ್ಲಿ ಅಗ್ರಸ್ಥಾನ ಪಡೆದ ಸಿಂಧು

ಸಿಂಧು ಮಹಿಳೆರ ವಿಭಾಗದ ‘ಎಂ’ ಗುಂಪಿನ ಲೀಗ್ ಪಂದ್ಯದಲ್ಲಿ ಎಸ್ಟೋನಿಯಾದ ಕ್ರಿಸ್ಟಿನ್ ಕುಬಾ ಅವರನ್ನು ಬುಧವಾರ 21–5, 21–10 ರಿಂದ ಸೋಲಿಸಿದರು.

ಸಿಂಧು ಅವರಿಗೆ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ 9ನೇ ಕ್ರಮಾಂಕದ ಆಟಗಾರ್ತಿ ಹೆ ಬಿಂಗ್‌ಜಿಯಾವೊ ಎದುರಾಳಿಯಾಗುವ ನಿರೀಕ್ಷೆಯಿದೆ. ಅವರ ಎದುರು ಸಿಂಧು 11 ಪಂದ್ಯಗಳಲ್ಲಿ ಸೋತಿದ್ದು, 9 ಬಾರಿ ಜಯಗಳಿಸಿದ್ದಾರೆ.

ಉಲ್ಲೇಖನೀಯ ವಿಷಯವೆಂದರೆ, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಸಿಂಧು, ಇದೇ ಎದುರಾಳಿಯನ್ನು ಮಣಿಸಿದ್ದರು.

ಸಿಂಧು, ಬುಧವಾರ ನಡೆದ ಗುಂಪಿನ ಕೊನೆಯ ಪಂದ್ಯದಲ್ಲಿ ಸಂಪೂರ್ಣ ಹತೋಟಿ ಹೊಂದಿದ್ದರು. ವಿಶ್ವ ಕ್ರಮಾಂಕದಲ್ಲಿ 73ನೇ ಸ್ಥಾನದಲ್ಲಿರುವ ಕುಬಾ ವಿರುದ್ಧ ಗೆಲ್ಲಲು 33 ನಿಮಿಷಗಳು ಸಾಕೆನಿಸಿದವು. ಗೆಲುವಿನೊಡನೆ ಅವರು ಗುಂಪಿನಲ್ಲಿ ಅಗ್ರಸ್ಥಾನ ಪಡೆದರು.

ಮೊದಲ ಗೇಮ್ ಗೆಲ್ಲಲು ಸಿಂಧು ತೆಗೆದುಕೊಂಡಿದ್ದು 14 ನಿಮಿಷಗಳನ್ನಷ್ಟೇ. 27 ವರ್ಷ ವಯಸ್ಸಿನ ಎದುರಾಳಿ ಎರಡನೇ ಗೇಮ್‌ನಲ್ಲಿ ಸ್ವಲ್ಪ ಹೋರಾಟ ತೋರಿದರಷ್ಟೇ.

ಪ್ರಣಯ್‌ಗೆ ಗೆಲುವು

ಪ್ಯಾರಿಸ್ (ಪಿಟಿಐ): ಭಾರತದ ಎಚ್.ಎಸ್. ಪ್ರಣಯ್ ಅವರು ಗುಂಪು ಹಂತದ ಅಂತಿಮ ಪಂದ್ಯದಲ್ಲಿ ವಿಯೆಟ್ನಾಂನ ಲಿ ಡುಕ್ ಫಟ್ ಅವರನ್ನು ಮಣಿಸಿ, ಪುರುಷರ ಸಿಂಗಲ್ಸ್ ಪ್ರಿ ಕ್ವಾರ್ಟರ್ ಫೈನಲ್ ತಲುಪಿದರು.

ಕೇರಳದ 32 ವರ್ಷ ವಯಸ್ಸಿನ ಪ್ರಣಯ್ 16-21 21-11 21-12ರಿಂದ ಗೆಲುವು ಸಾಧಿಸಿದರು. ಆರಂಭಿಕ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಭಾರತ ಆಟಗಾರ ಚೇತರಿಸಿಕೊಂಡು ನಂತರದ ಎರಡೂ ಗೇಮ್‌ನಲ್ಲಿ ಮೇಲುಗೈ ಸಾಧಿಸಿದರು.

ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ಪ್ರಣಯ್ ಅವರು ಪ್ರಿ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಲಕ್ಷ್ಯ ಸೇನ್ ಅವರನ್ನು ಎದುರಿಸಲಿದ್ದಾರೆ. ಸೇನ್ ‘ಎಲ್’ ಗುಂಪಿನಲ್ಲಿ ಅಗ್ರಸ್ಥಾನ ಪಡೆದಿದ್ದಾರೆ.

ಪ್ರಣಯ್ ಗುಂಪು ಹಂತದ ಮೊದಲ ಪಂದ್ಯದಲ್ಲಿ ಜರ್ಮನಿಯ ಫಾಬಿಯಾನ್ ರೊಥ್ ಅವರನ್ನು ಮಣಿಸಿದ್ದರು.

ಡುರಾಂಡ್ ಕಪ್: ಬಿಎಫ್‌ಸಿ ಶುಭಾರಂಭ

ಕೋಲ್ಕತ್ತ: ಮಾಜಿ ಚಾಂಪಿಯನ್ ಬೆಂಗಳೂರು ಎಫ್‌ಸಿ ತಂಡ, 133ನೇ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಬುಧವಾರ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ನಡೆದ ‘ಬಿ’ ಗುಂಪಿನ ಪಂದ್ಯದಲ್ಲಿ ಬೆಂಗಳೂರಿನ ತಂಡ 4–0 ಗೋಲುಗಳಿಂದ ಇಂಡಿಯನ್ ನೇವಿ ಎಫ್‌ಟಿ ತಂಡವನ್ನು ಮಣಿಸಿತು.

ಬಿಎಫ್‌ಸಿಯ ಹೊಸ ಕೋಚ್, ಸ್ಪೇನ್‌ನ ಜೆರಾರ್ಡ್ ಜಾರಗೋಝಾ ಅವರು ಶಿವಶಕ್ತಿ ನಾರಾಯಣನ್ ಮತ್ತು ಆಸ್ಟ್ರೇಲಿಯಾದ ರಯಾನ್ ವಿಲಿಯಮ್ ಅವರನ್ನು ಮುಂಚೂಣಿಯಲ್ಲಿ ಆಡಿಸಿದರು. ಸುನಿಲ್ ಚೆಟ್ರಿ ಮತ್ತು ಹೊಸದಾಗಿ ಸೇರಿದ ಜಾರ್ಗೆ ಪೆರಿರಾ ಡಯಾಝ್ ಅವರನ್ನು ಆರಂಭದಲ್ಲೇ ಕಣಕ್ಕಿಳಿಸಲಿಲ್ಲ.

ಭಾರತ ತಂಡದ ಆಟಗಾರ ರಾಹುಲ್ ಭೆಕೆ, ಬಿಎಫ್‌ಸಿ ಪರ 10ನೇ ನಿಮಿಷ ಮೊದಲ ಗೋಲು ಗಳಿಸಿದರು. ಆಲ್ಬರ್ಟೊ ನೊಗುವೆರಾ ಅವರ ಕಾರ್ನರ್‌ನಲ್ಲಿ ಅವರು ಎದುರಾಳಿ ತಂಡದ ಗೋಲ್‌ಕೀಪರ್ ವಿಷ್ಣು ಅವರನ್ನು ವಂಚಿಸಿ ಚೆಂಡನ್ನು ಹೆಡ್ ಮಾಡಿದರು.

ಜಾರಗೋಝಾ ಅವರು ಮೊದಲ ಬದಲಾವಣೆ ಆಗಿ ಚೆಟ್ರಿ ಅವರನ್ನು ಕಣಕ್ಕಿಳಿಸಿದರು. ವಿರಾಮಕ್ಕೆ ಮೂರು ನಿಮಿಷಗಳಿರುವಾಗ ನವಜೋತ್ ಅವರ ಫೌಲ್‌ನಿಂದಾಗಿ ದೊರೆತ ‘ಪೆನಾಲ್ಟಿ’ ಅವಕಾಶವನ್ನು ಚೆಟ್ರಿ ಗೋಲಾಗಿ ಪರಿವರ್ತಿಸಿದರು. ಉತ್ತರಾರ್ಧದಲ್ಲೂ ಬೆಂಗಳೂರು ಮೇಲುಗೈ ವಹಿಸಿತು. ಪೆರೀರಾ ಡಯಾಜ್ 80ನೇ ನಿಮಿಷ ಅಂತರ ಹೆಚ್ಚಿಸಿದರು. ಇಂಜುರಿ ಅವಧಿಯಲ್ಲಿ (90 + 1) ಅವರು ಮತ್ತೊಂದು ಗೋಲನ್ನು ಗಳಿಸಿದರು.



ಭಾರತ ಕ್ರಿಕೆಟ್ ತಂಡವು ಕೊಲಂಬೊದ ಆರ್. ಪ್ರೇಮದಾಸ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬುಧವಾರ ಅಭ್ಯಾಸ ನಡೆಸಿದ ವೇಳೆ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಮುಖ್ಯ ಕೋಚ್ ಗೌತಮ್ ಗಂಭೀರ್ ಮಾತುಕತೆ ನಡೆಸಿದರು. ಶ್ರೀಲಂಕಾ ವಿರುದ್ಧ ಮೊದಲ ಏಕದಿನ ಪಂದ್ಯ ಶುಕ್ರವಾರ ನಡೆಯಲಿದೆ –ಎಎಫ್‌ಪಿ ಚಿತ್ರ

ಈಕ್ವೆಸ್ಟ್ರಿಯನ್ ಡ್ರೆಸಾಜ್ ಹೊರಬಿದ್ದ ಅಗರವಾಲ್

ಪ್ಯಾರಿಸ್ (ಪಿಟಿಐ): ಏಷ್ಯನ್ ಗೇಮ್ಸ್ ಪದಕ ವಿಜೇತ ಅನುಷ್ ಅಗರವಾಲ್ ಒಲಿಂಪಿಕ್ಸ್‌ನಿಂದ ಹೊರಬಿದ್ದಿದ್ದಾರೆ. ಬುಧವಾರ ನಡೆದ ವೈಯಕ್ತಿಕ ಡ್ರೆಸೇಜ್ ಸ್ಪರ್ಧೆಯ ತಮ್ಮ ಗುಂಪಿನಲ್ಲಿ ಒಂಬತ್ತನೇ ಸ್ಥಾನ ಪಡೆದು ನಿರಾಸೆ ಮೂಡಿಸಿದರು.

ಅಗರವಾಲ್ ಅವರು ಹಾಂಗ್‌ಝೌ ನಲ್ಲಿ ನಡೆದಿದ್ದ 2022ರ ಏಷ್ಯನ್ ಗೇಮ್ಸ್‌ನಲ್ಲಿ ಗುಂಪು ಮತ್ತು ವೈಯಕ್ತಿಕ ವಿಭಾಗದಲ್ಲಿ ಚಿನ್ನ ಮತ್ತು ಕಂಚು ಗೆದ್ದಿದ್ದ ಅಗರವಾಲ್ ಇಲ್ಲಿ ತಮ್ಮ ಕುದುರೆ ಸರ್ ಕಾರಮೆಲ್ಲೊ ಓಲ್ಡ್‌ನೊಂದಿಗೆ 66.444 ಅಂಕ ಗಳಿಸಿದರು. ಆದರೆ ಅದು ಪದಕ ಸುತ್ತಿಗೆ ಅರ್ಹತೆ ಪಡೆಯಲು ಸಾಕಾಗಲಿಲ್ಲ.

ಟ್ರಯಥ್ಲಾನ್: ಅಲೆಕ್ಸ್‌ಗೆ ಚಿನ್ನ

ಪ್ಯಾರಿಸ್ (ಪಿಟಿಐ): ಬ್ರಿಟನ್‌ನ ಅಲೆಕ್ಸ್ ಯೀ ಅವರು ಪ್ಯಾರಿಸ್ ಒಲಿಂಪಿಕ್ಸ್ ಟ್ರಯಥ್ಲಾನ್ ಕ್ರೀಡೆಯಲ್ಲಿ ಬುಧವಾರ ಚಿನ್ನದ ಪದಕ ತಮ್ಮ ಮುಡಿಗೇರಿಸಿಕೊಂಡರು. ತಡವಾಗಿ ನಡೆದ ಈ ಸ್ಪರ್ಧೆಯಲ್ಲಿ ಅವರು ನ್ಯೂಜಿಲೆಂಡ್‌ನ ಹೇಡನ್ ವಿಲ್ಡ್ ಅವರನ್ನು ಅಂತಿಮ ಹಂತವಿರುವಾಗ ಹಿಂದೆ ಹಾಕಿ ನಾಟಕೀಯವಾಗಿ ಅಗ್ರಸ್ಥಾನ ತಲುಪಿದರು.



ಅಲೆಕ್ಸ್ ಯಿ

ಮೂರು ವರ್ಷಗಳ ಹಿಂದೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದ ಸಾಧನೆಯನ್ನು ಉತ್ತಮಪಡಿಸಿಕೊಂಡ ಯೀ, ಪ್ರಬಲ ಎದುರಾಳಿ ವಿಲ್ಡ್ ಅವರನ್ನು 10 ಕಿ.ಮಿ. ಓಟದ ಮುಕ್ತಾಯದ ಹಂತದಲ್ಲಿ ಹಿಮ್ಮೆಟ್ಟಿಸಿದರು. ಆತಿಥೇಯ ಫ್ರಾನ್ಸ್‌ನ ಲಿಯೊ ಬೆರ್ಜೆರ್ ಕಂಚಿನ ಪದಕ ಗೆದ್ದರು.

ಕಳೆದ ಕೆಲವು ದಿನಗಳಿಂದ ಸೇನ್ ನದಿಯು ಮಾಲಿನ್ಯ ಪರೀಕ್ಷೆಯ ಫಲಿತಾಂಶ ನಕಾರಾತ್ಮಕವಾಗಿದ್ದರಿಂದ ಆಯೋಜಕರಿಗೆ ತಲೆನೋವು ತಂದಿತ್ತು. ಆದರೆ ನೀರಿನ ಗುಣಮಟ್ಟ ಸುಧಾರಿಸಿ, ಮೊದಲು ನಡೆದ ಮಹಿಳೆಯರ ವಿಭಾಗದ ಸ್ಪರ್ಧೆ ಯಶಸ್ವಿಯಾಗಿದ್ದು ಆಯೋಜಕರು ನಿಟ್ಟುಸಿರು ಬಿಡುವಂತೆ ಮಾಡಿತು. ಮಹಿಳೆಯರ ವಿಭಾಗದಲ್ಲಿ ಆತಿಥೇಯ ದೇಶದ ಕೆಸಾಂಡ್ರಾ ಬುಗ್ರಾಂಡ್ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಬ್ರಿಟನ್‌ನ ಬೆಥ್ ಪಾಟರ್ ಕಂಚು ಗೆದ್ದರು.

2012ರ ಲಂಡನ್ ಮತ್ತು ರಿಯೋ ಒಲಿಂಪಿಕ್ಸ್‌ಗಳಲ್ಲಿ ಅಲಿಸ್ಟರ್ ಬ್ರೌನ್ಲಿ ಅವರು ಪುರುಷರ ಟ್ರಯಥ್ಲಾನ್ ಪದಕ ಗೆದ್ದ ಬ್ರಿಟನ್ ಶ್ರೀಮಂತ ಪರಂಪರೆಯನ್ನು ಅಲೆಕ್ಸ್ ಯಿ ಅನುಸರಿಸಿದರು. ಒಲಿಂಪಿಕ್ ಟ್ರಯಥ್ಲಾನ್‌ನಲ್ಲಿ ಬ್ರಿಟನ್‌ನ ಶ್ರೀಮಂತ ಪರಂಪರೆಯನ್ನು ಅಲೆಕ್ಸ್ ಯೀ ಮುಂದುವರಿಸಿದರು. ಇದೇ ದೇಶದ ಅಲಿಸ್ಟರ್ ಬ್ರೌನ್ಲಿ ಅವರು 2012ರ ಲಂಡನ್ ಕ್ರೀಡೆಗಳಲ್ಲಿ, 2016ರ ರಿಯೊ ಕ್ರೀಡೆಗಳಲ್ಲಿ ಚಿನ್ನ ಗೆದ್ದಿದ್ದರು.

ದೀರ್ಘಕಾಲದಿಂದ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿದ್ದ ಮಾಜಿ ಕ್ರಿಕೆಟಿಗ

ಅಂಶುಮಾನ್ ಗಾಯಕವಾಡ್ ಇನ್ನಿಲ್ಲ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಅಂಶುಮಾನ್ ಗಾಯಕವಾಡ್ (71) ಬುಧವಾರ ನಿಧನರಾದರು. ಅವರು ದೀರ್ಘಕಾಲದಿಂದ ರಕ್ತದ ಕ್ಯಾನ್ಸರ್‌ನಿಂದ ಬಳಲಿದ್ದರು.

ಲಂಡನ್‌ನ ಕಿಂಗ್ಸ್ ಕಾಲೇಜ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಹೋದ ತಿಂಗಳು ಭಾರತಕ್ಕೆ ಮರಳಿದ್ದರು. ಅವರ ಚಿಕಿತ್ಸೆಗಾಗಿ ಈಚೆಗಷ್ಟೇ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ₹ 1 ಕೋಟಿ ನೆರವು ನೀಡಿತ್ತು.

ಬಲಗೈ ಬ್ಯಾಟರ್ ಆಗಿದ್ದ ಗಾಯಕವಾಡ್ ಅವರು ಭಾರತ ತಂಡದಲ್ಲಿ 40 ಟೆಸ್ಟ್ ಮತ್ತು 15 ಏಕದಿನ ಪಂದ್ಯಗಳಲ್ಲಿ ಆಡಿದ್ದರು. 206 ಪ್ರಥಮ ದರ್ಜೆ ಪಂದ್ಯಗಳಲ್ಲಿಯೂ ಆಡಿದ್ದರು. 1975 ರಿಂದ 1987ರ ಅವಧಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು.

ಅಂಶುಮನ್ ಅವರು ಭಾರತ ತಂಡದ ಕೋಚ್ ಆಗಿಯೂ ಕಾರ್ಯನಿರ್ವಹಿಸಿದ್ದರು. ಶಾರ್ಜಾದಲ್ಲಿ 1998ರಲ್ಲಿ ನಡೆದಿದ್ದ ಟೂರ್ನಿ ಮತ್ತು 1999ರಲ್ಲಿ ದೆಹಲಿಯಲ್ಲಿ ಅನಿಲ್ ಕುಂಬ್ಳೆ 10 ವಿಕೆಟ್ ಗಳಿಸಿದ್ದ ಟೆಸ್ಟ್ ಪಂದ್ಯದ ಸಂದರ್ಭದಲ್ಲಿ ಅಂಶುಮಾನ್ ಕೋಚ್ ಆಗಿದ್ದರು. ಅವರ ಅವಧಿಯಲ್ಲಿ ಆಫ್‌ಸ್ಪಿನ್ನರ್ ಹರಭಜನ್ ಸಿಂಗ್ ಅವರೂ ಪದಾರ್ಪಣೆ ಮಾಡಿದ್ದರು.



ಅಂಶುಮಾನ್ ಗಾಯಕವಾಡ್

ದಿಟ್ಟ ಬ್ಯಾಟರ್: ಕ್ರಿಕೆಟ್‌ನಲ್ಲಿ ಬ್ಯಾಟರ್ ಗಳಿಗೆ ಹೆಲ್ಮೆಟ್ ಕಡ್ಡಾಯವಾಗುವ ಮುಂಚಿನ ಕಾಲಘಟ್ಟದಲ್ಲಿ ದಿಟ್ಟ ಆರಂಭಿಕ ಆಟಗಾರನಾಗಿ ಗುರುತಿಸಿಕೊಂಡಿದ್ದರು. ಅವರು ಸುನಿಲ್ ಗಾವಸ್ಕರ್ ಜೊತೆಗೆ ಇನಿಂಗ್ಸ್ ಆರಂಭಿಸುತ್ತಿದ್ದರು. ಆರಂಭಿಕ ಬ್ಯಾಟರ್ ಸ್ಥಾನಕ್ಕಾಗಿ ಅವರು ಚೇತನ್ ಚೌಹಾಣ್ ಅವರೊಂದಿಗಿನ ಪೈಪೋಟಿ ಕ್ರಿಕೆಟ್ ವಲಯದಲ್ಲಿ ಈಗಲೂ ಚರ್ಚೆಯ ವಿಷಯವಾಗಿದೆ. ಜಲಂಧರ್‌ನಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ಅವರು ಇಮ್ರಾನ್ ಖಾನ್ ನಾಯಕತ್ವದ ಪಾಕಿಸ್ತಾನದ ಎದುರು ದ್ವಿಶತಕ ಗಳಿಸಿದ್ದರು. ಆ ಸಮಯದಲ್ಲಿ ಅತಿ ನಿಧಾನಗತಿಯ ದ್ವಿಶತಕವೆಂದು ದಾಖಲಾಗಿತ್ತು.

1976ರಲ್ಲಿ ಜಮೈಕಾದ ಸಬಿನಾ ಪಾರ್ಕ್‌ನಲ್ಲಿ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್‌ನಲ್ಲಿ ದೈತ್ಯ ಬೌಲರ್ ಮೈಕೆಲ್ ಹೋಲ್ಡಿಂಗ್ ಅವರ ಬೌನ್ಸರ್ ಗಾಯಕವಾಡ್ ಅವರ ಕಿವಿಗೆ ತಗುಲಿ ಗಾಯವಾಗಿತ್ತು. ಅವರ ಕಿವಿಯಿಂದ ರಕ್ತ ಒಸರಿತ್ತು. ಪಂದ್ಯದ ನೋಡಲು ಬಂದಿದ್ದ ಸ್ಥಳೀಯ ಅಭಿಮಾನಿಗಳು, ‘ಕಿಲ್ ಹಿಮ್ ಮಾನ್.. ಕಿಲ್ ಹಿಮ್ ಮೈಕಿ ಎಂದು ಕೂಗಿದ್ದರು ’ ಎಂದು ಗಾವಸ್ಕರ್ ಕೆಲವು ಕಾರ್ಯಕ್ರಮಗಳಲ್ಲಿ ನೆನಪಿಸಿಕೊಂಡಿದ್ದಾರೆ.

ಅಂಶುಮನ್ ಅವರು ರಾಷ್ಟ್ರೀಯ ತಂಡದ ಆಯ್ಕೆಗಾರರಾಗಿ, ಬರೋಡಾ ಕ್ರಿಕೆಟ್ ಸಂಸ್ಥೆಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಸದಸ್ಯರಾಗಿದ್ದರು.



ಭಾರತದ ಲವ್ಲಿನಾ ಬೊರ್ಗೊಹೈನ್ ಅವರು ನಾರ್ವೆಯ ಎದುರಾಳಿ ಸುನಿವಾ ಹೊಫ್‌ಸ್ಟಾಡ್ ಅವರಿಗೆ ಪಂಚ್ ನೀಡುತ್ತಿರುವುದು –ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್

ಕ್ವಾರ್ಟರ್ ಫೈನಲ್‌ಗೆ ಲವ್ಲಿನಾ

ಇನ್ನೊಂದು ಪಂದ್ಯ ಗೆದ್ದರೆ ಅಸ್ಸಾಂ ಬಾಕ್ಸರ್‌ಗೆ ಪದಕ ಖಚಿತ

ಪ್ಯಾರಿಸ್ (ಪಿಟಿಐ): ಸತತ ಎರಡನೇ ಪದಕ ಗೆಲ್ಲುವ ಗುರಿಯಲ್ಲಿರುವ ಲವ್ಲಿನಾ ಬೊರ್ಗೊಹೈನ್ ಅವರು ಒಲಿಂಪಿಕ್ಸ್ ಬಾಕ್ಸಿಂಗ್ ಅಭಿಯಾನವನ್ನು ಆತ್ಮವಿಶ್ವಾಸದಿಂದ ಆರಂಭಿಸಿ ಕ್ವಾರ್ಟರ್‌ಫೈನಲ್ ತಲುಪಿದರು. ಬುಧವಾರ ನಡೆದ 75 ಕೆ.ಜಿ ವಿಭಾಗದ ಸ್ಪರ್ಧೆಯಲ್ಲಿ ಅವರು, ನಾರ್ವೆಯ ಎದುರಾಳಿ ಸುನಿವಾ ಹೊಫ್‌ಸ್ಟಾಡ್ ಅವರನ್ನು ಪಂಚ್‌ಗಳಿಂದ ಕಂಗೆಡಿಸಿದರು.

ಬೊರ್ಗೊಹೈನ್ ಈ ಸೆಣಸಾಟವನ್ನು 5–0 ಯಿಂದ ಗೆದ್ದರು. ಅವರು ಇನ್ನೊಂದು ಸೆಣಸಾಟ ಗೆದ್ದರೆ ಎರಡನೇ ಪದಕ ಗೆಲ್ಲುವುದು ಖಚಿತವಾಗಲಿದೆ. ಭಾರತದ ಬಾಕ್ಸಿಂಗ್‌ನಲ್ಲಿ ಈ ಹಿಂದೆ ಇಂಥ ಸಾಧನೆಯಾಗಿಲ್ಲ. 2020ರ ಟೋಕಿಯೊ ಕ್ರೀಡೆಗಳಲ್ಲಿ ಅಸ್ಸಾಮಿನ ಬಾಕ್ಸರ್ 69 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿ ಕಂಚಿನ ಪದಕ ಗೆದ್ದಿದ್ದರು. ಆದರೆ ಲವ್ಲಿನಾ ಮುಂದಿನ ಹಾದಿ ಕಠಿಣವಾಗಿದೆ. ಅವರು ಆಗಸ್ಟ್ 4ರಂದು ನಡೆಯುವ ಎಂಟರ ಘಟ್ಟದ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ, ಚೀನಾ ಎದುರಾಳಿ ಲಿ ಕಿಯಾನ್ ಅವರನ್ನು ಎದುರಿಸಲಿದ್ದಾರೆ. ಈ ಪಂದ್ಯ ಗೆದ್ದರೆ ಕಡೇಪಕ್ಷ ಕಂಚಿನ ಪದಕ ಗ್ಯಾರಂಟಿಯಾಗಲಿದೆ.

ಬುಧವಾರ ಅವರ ಪ್ರದರ್ಶನ ಭರವಸೆಯಿಂದ ಕೂಡಿತ್ತು. ಅವರ ಎದುರಾಳಿ ಅವರನ್ನು ಮುಂದೆ ಬರಲು ಪ್ರಚೋದಿಸಿ ಪ್ರಹಾರಕ್ಕೆ ಗುರಿಮಾಡಲು ಪ್ರಯತ್ನಿಸಿದರು. ಆದರೆ ಏಕಾಗ್ರತೆ ಉಳಿಸಿಕೊಂಡ ಬೊರ್ಗೊಹೈನ್ ಈ ಬಲೆಗೆ ಬೀಳದೇ ಸ್ವಲ್ಪ ಅಂತರವಿಟ್ಟುಕೊಂಡು ಪ್ರಹಾರಗಳಿಗೆ ಮುಂದಾದರು.

ಆರಂಭದಲ್ಲಿ ಸುನಿವಾ ಅವರೇ ದಾಳಿಗೆ ಹೆಚ್ಚು ಒಲವು ತೋರಿದಂತೆ ಕಂಡುಬಂತು. ಆದರೆ ಅಸ್ಸಾಮಿನ ಬಾಕ್ಸರ್ ಸಾವರಿಸಿಕೊಂಡು ಎದುರಾಳಿಯ ಮೇಲೆ ಕರಾರುವಾಕ್ ಪಂಚ್‌ಗಳನ್ನು ಮಾಡಿ ಮೇಲುಗೈ ಸಾಧಿಸಿದರು.

ಬೊರ್ಗೊಹೈನ್ ಅವರಿಗೆ ಇಲ್ಲೂ ಕಠಿಣ ಮುಖಾಮುಖಿ ‘ಡ್ರಾ’ ಎದುರಾಗಿದೆ. ಆದರೆ ಈ ಹಿಂದೆ ಇಂಥ ಪ್ರಬಲ ಸ್ಪರ್ಧಿಗಳನ್ನು ಅವರು ಯಶಸ್ವಿ ಆಗಿ ಎದುರಿಸಿದ್ದಾರೆ. ಟೋಕಿಯೊ ಕ್ರೀಡೆಗಳ ಕ್ವಾರ್ಟರ್‌ಫೈನಲ್‌ನಲ್ಲಿ ವಿಶ್ವ ಚಾಂಪಿಯನ್ ಚೆನ್ ನೀನ್‌–ಚಿನ್ ಅವರನ್ನು ಮಣಿಸಿದ್ದು ಅವರಿಗೆ ಕಂಚಿನ ಪದಕ ತಂದುಕೊಟ್ಟಿತ್ತು.

ಮುಂದಿನ ಭಾನುವಾರ ಅವರ ಎದುರಾಳಿ ಆಗಿರುವ ಕಿಯಾನ್ ಅವರು ಮಿಡ್ಲ್ ವೇಟ್ (75 ಕೆ.ಜಿ.) ವಿಭಾಗದಲ್ಲಿ ಬೆಳ್ಳಿ ಗೆದ್ದಿದ್ದರು. 2016ರ ರಿಯೊ ಕ್ರೀಡೆಗಳಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು. ಜೊತೆಗೆ 2022ರ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಸ್ವರ್ಣ ಕೊರಳಿಗೇರಿಸಿಕೊಂಡಿದ್ದರು.

ಬಾಕ್ಸಿಂಗ್‌ನಲ್ಲಿ ಭಾರತ ಈ ಬಾರಿಯ ಕ್ರೀಡೆಗಳಲ್ಲಿ ಮಿಶ್ರಫಲ ಕಂಡಿದೆ. ಆರರಲ್ಲಿ ಮೂವರು ಬಾಕ್ಸರ್‌ಗಳು ಈಗಾಗಲೇ ಹೊರಬಿದ್ದಿದ್ದಾರೆ. ಏಷ್ಯನ್ ಗೇಮ್ಸ್ ಮಾಜಿ ಚಾಂಪಿಯನ್ ಅಮಿತ್ ಪಂಘಲ್ (51 ಕೆ.ಜಿ), ಪ್ರೀತಿ ಪವಾರ್ (54 ಕೆ.ಜಿ) ಮತ್ತು ಜೈಸ್ಮಿನ್ ಲಂಬೋರಿಯಾ (57 ಕೆ.ಜಿ)– ಬೇಗನೇ ಹೊರಬಿದ್ದವರು.

ಬೊರ್ಗೊಹೈನ್ ಜೊತೆ ಮೊದಲ ಒಲಿಂಪಿಕ್ಸ್ ಕಾಣುತ್ತಿರುವ ನಿಖತ್ ಝರೀನ್ (ಮಹಿಳೆಯರ 50 ಕೆ.ಜಿ) ಮತ್ತು ನಿಶಾಂತ್ ದೇವ್ (ಪುರುಷರ 71 ಕೆ.ಜಿ) ಸವಾಲು ಉಳಿಸಿಕೊಂಡಿದ್ದಾರೆ.